Regd. No. M 3618.

ವಾರ್ಷಿಕ ಚಂದಾ ರೂ. 4—8—0 ಬಿಡಿ ಸಂಚಿಕೆ 0—1—6

Estd. 1921 ಸ್ಥಾಪನೆ.

ದಿ ಜುಪಿಟರ್
ಜನರಲ್ ಇನ್ಶ್ಯೂರೆನ್ಸ್
ಕಂಪೆನಿ. ಲಿ., ಬೊಂಬಾಯಿ
ವಿಮೆಯಿಳಿಸ ಬೇಕೆ?
ವಿಜಂಟರಾಗುವಿರಾ?
-ಹಾಗಾದರೆ ಕೂಡಲೆ-
ಪಿ ಡಿ ನಾನಯ್ಯ, ಉಡುಪಿ.
ದಕ್ಷಿಣ ಕನ್ನಡದ ಚೀಫ್ ಏಜೆಂಟ್.
-ಇವರಿಗೆ ಬರೆಯಿರಿ-
1 ಕೋಟಿಗೆ ಮಿಕ್ಕಿ ವ್ಯವಹಾರ
ಈ ವರುಷವೇ ರಜತೋತ್ಸವ!
The Jupiter General
Insurance Company Ltd



ವರ್ಷ ೨೪ ವಾರ ೧೭ ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ Vol. 24 No. 17

Founder SRIA. P. SHETTY.

ಉಡುಪಿ • 4—1—1945 • ಮಂಗಳೂರು.

ಅಂತರಂಗ
ಉಡುಪಿ
ಅಖಿಲ ಕರ್ನಾಟಕದ ಹೊಸ
ಮಾದರಿಯ ಸಚಿತ್ರ
ವಿನೋದ ವಾರ ಪತ್ರಿಕೆ.
ವಾರ್ಷಿಕ ಚಂದಾ ರೂ 4—8—0
ಬಿಡಿ ಪ್ರತಿಗೆ ರೂ. 0—1—6

Transact with
The Vijaya Bank Ltd.
H. O. MANGALORE
Branches all over the District
and in Bombay city,
For all kinds of Banking business
ದಿ ವಿಜಯ ಬೇಂಕ್
ಲಿಮಿಟೆಡ್,
ಹೆಡ್ ಆಫೀಸು: ಮಂಗಳೂರು.
ಜಿಲ್ಲೆಯ ಎಲ್ಲಾ ಕಡೆಗಳಲ್ಲಿ ಮತ್ತು
ಮುಂಬಾಯಿ ನಗರದಲ್ಲಿ ನಮ್ಮ ಶಾಖೆಗಳು
ಎಲ್ಲಾ ತರದ ಬೇಂಕಿಂಗ್ ವ್ಯವಹಾರ
ಗಳು ನಡೆಸಲ್ಪಡುವುದು
"We are glad to announce
that the Canara Bank Ltd,
are our Clearing agents at
Bombay"
ದಿ ಕೆನರಾ ಬ್ಯಾಂಕ್ ಲಿಮಿಟೆಡ್‌ಯವರು
ನಮ್ಮ ನಿಜವೂ ಬ್ಯಾಂಕಿನ ಕ್ಲೆಯರಿಂಗ್
ವಿಜಂಟರಾಗಿರುತ್ತಾರೆಂದು ತಿಳಿಸಲು ಸಂತೋ
ಷಪಡುತ್ತೇವೆ
M. M Bhandary,
Agent Bombay Branch

THE
Canara Mutual Assurance Co., Ltd.,
UDIPI.
Good Wishes
We thank all our policy-holders,
Agents, Medical Examiners and
Well-wishers for all their co-
operation and wish them a happy,
peaceful and prosperous life in
the NEW YEAR.
B Vaikunta Baliga,
Chairman
BOARD OF DIRECTORS

ಅಮೃತಾಂಜನ
ತಲೆನೋವಿನೆ, ಶಿರೋ
ವೇದನೆ, ಉಳುಕು,
ಉತ್ತಿಗೆ, ಭುಜ,
ಹಲ್ಲು ನೋವಿನಗಳಿ
ಗೂ ಎದೆನೋವು,
ನ್ಯಾಯಗಳು ಬಾತು
ಕೊಳ್ಳುವಿದು, ಚೇಳು
ನಿಜವಂತಾದ ಬಿಸಿ,
ಸಕ್ಕವಾತ, ನೆಗಿದಿನು
ಮೊದಲಾದ ಎಲ್ಲಾ
REGD ರೋಗಗಳಿಗೂ ಸಿದ್ಧೌ
ಷಧಿಯಾಗಿದ್ದು ಮದ್ದು ಸಕ ನವ್ಯರಿ ಸಿಕ್ಕುತ್ತದೆ.
ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

ಹೊಸವರ್ಷ ದ ಅಭಿನಂದನೆ
ನಮ್ಮ ಎಲ್ಲಾ ಪಾಲಿಸಿದಾರರಿಗೂ, ವಿಜಂಟರಿಗೂ,
ಕಂಪೆನಿಯ ವೈದ್ಯರಿಗೂ, ಹಿತಚಿಂತಕರಿಗೂ
ನವ ವರ್ಷವು
ಆನಂದದಾಯಕವಾಗಿಯೂ ಅಭಿವೃದ್ಧಿಕರವಾಗಿಯೂ
ಪರಿಣಮಿಸಲೆಂದು
ನಾವು
ಹೃತ್ಪೂರ್ವಕವಾಗಿ ಹಾರೈಸುತ್ತೇವೆ.
ಕೊಚ್ಚಿನ್ ಕಾರ್ ಪ್ರದರ್ಸ್ ಲಿಮಿಟೆಡ್
ದಕ್ಷಿಣ ಹಿಂದೂಸ್ಥಾನದ ಪ್ರಾಮುಖ್ಯ ವಿಜಂಟರು
ಬಾಂಬೆ ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.
ಉಡುಪಿ, ಮಲ್ಪೆ, ಬೆಂಗಳೂರು, ಟ್ರಿವೆಂಡ್ರಂ, ಮಂಗಳೂರು,
ಕಲ್ಲಿಕೋಟಿ, ಬೊಂಬಾಯಿ, ಮಧುರಾ.

ದಿ ಮೂಲ್ಕಿ ಬೇಂಕ್
ಲಿಮಿಟೆಡ್.
ಗ್ರಾಮಸ್ವರ ನಡುವೆ ಸ್ಥಾಪಿತವಾಗಿ
15 ವರ್ಷಗಳಿಂದ ಡಿಪೋಜಿಟುಗಳಿಗೆ
ಉತ್ತಮ ದರದ ಬಡ್ಡಿಯನ್ನೂ ಸಾಲಗ
ಳನ್ನು ಕಡಮೆ ದರದ ಬಡ್ಡಿಯಿಂದಲೂ
ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿ
ವಾಟುಗಳಿಂದ ಅವರ ವ್ಯವಹಾರವನ್ನು
ನಾಭಿಸುತ್ತಿರುವುದು.
The Moolky Bank Ltd.,
Moolky, S K

ಕ್ರೌನ್
ರಬ್ಬರ್ ಸ್ಟ್ಯಾಂಪ್ ಕಂಪೆನಿ
18 ಬಲ್ಮಠ ರಸ್ತೆ, ಮಂಗಳೂರು
ರಬ್ಬರ್ ಮೊಹರು ಸೈನ್ ಬೋರ್ಡ್
ತೃಪ್ತಿಕರವಾಗಿ ಮಾಡಿಕೊಡಲ್ಪಡುವವು
Crown Rubber Stamp Co.
81 Balmat Road, MANGALORE
Approved firm by the Govt of Mysore
Certified by the Agent of the Govt of
India in Ceylon Estd 1906

ಹೊಸ ವರುಷದ ಶುಭಾಶಂಸೆ
ನನ್ನ ತಂದೆಯವರಿಗೂ, ಗೆಳೆಯರಿಗೂ ಹೊಸ ವರುಷವು
ಆನಂದ ನನ್ಮಂಗಳನ್ನು ತರಲೆಂದು ಕೋರುವಾಗ, ಅವರಿಗೆ ಸತ್ಪೇಷೆ
ಸಲಿಸಲನುವಾದ ತನು ಸಹಕಾರ ಮತ್ತು ಸ್ನೇಹಮಯ ಸತ್ಸಹಾಯ
ಕ್ಕಾಗಿ ಅವರಿಗೆ ಅಭಿನಂದನೆಗಳನ್ನು ಸಲಿಸುವೆವು
ಮುಂಬರುವ ವರುಷದಲ್ಲಿ ನಮ್ಮೊಂದಿಗಿನ ಸಂಬಂಧವು ಇನ್ನೂ ಬಲ
ಗೊಂಡು ಇಂದಿನ ಸಂಬಂಧವು ಅಖಂಡವಾಗುವಂತಹ ಹೆಚ್ಚಿನ ಸಂಬ
ಭ್ರಗಳನ್ನಿದಿರು ನೋಡುತ್ತಿರುವೆವು
ಸ್ಥಾಪಿತ 1906
ಕೆನರಾ ಬೇಂಕ್ ಲಿ.ಟೆಡ್.
Canara Bank Ltd.
(Incorporated in British India
Liability of members limited.)

ಮುಟ್ಟಾಗುವಿಕೆ
ಹಲವಿಂಗಳಿಂದ ಕಟ್ಟುಗಿದ್ದರೂ, ಕಪ್ಪವ
ಗರ್ಭಧಾರಣೆ ಆಥವಾ ಇನ್ನಾವ ಕಾರಣವಿ
ದ್ದರೂ—'ಕುಮಾರಿ' (Govt Regd)
ನಿಶ್ಚಿತ ನಿರುಪದ್ರವಿ—ಹಿಂದಿನಂತೆಯೇ,
ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ
ಹರಿಯಗೊಡುವುದು; ಶೀಘ್ರವಾಗಿ ಗರ್ಭ
ಧಾರಣೆಯನ್ನು ನಿಲ್ಲಿಸುವುದು, ಸಾವಿರಾರು
ಮಂದಿ ತೃಪ್ತರಾಗಿದ್ದಾರೆ! ಬೆಲೆ ರೂ 3।-
ಕೈಮೊದಿಂದ ಕೇಸುಗಳಿಗೆ ರೂ.5,(ವಿ.ಪಿ.12
ಆಣೆ ಆಲಾಯಿದ)Mrs P. DEVEE,
1. D. S (N) Tollygunge, Calcutta
ಸ್ಪೆಷಲಿಸ್ಟ್, ಪೊಪ್ಯುಲರ್ ಸ್ಟೋರ್ಸ್,
ಮಂಗಳೂರು

ವಿದ್ಯಾವಿನಯಾಳಿಕ ಪ್ರಮುಖ ಮಾಸಪತ್ರಿಕೆ
ಬಾಲಚಂದ್ರ
ಇದೀಗ ಮೂರನೇ ಸಂಪುಟಾರಂಭವಾಗಿದೆ
ವಿದ್ಯಾಭ್ಯಾಸಕ್ಕೆ ಸಂಬಂಧಿಸಿದ
ಸಕ್ಯೂಲಾರುಗಳೂ ಪ್ರಕಟ
ವಾಗುತ್ತವೆ
ವಾರ್ಷಿಕ ಚಂದಾ
ರೂ 1—8—0 ಮಾತ್ರ
ಹೆಚ್ಚಿನ ವಿಚಾರಕ್ಕೆ ಬರೆಯಿರಿ
ಬಾಲಚಂದ್ರ, ಉಡುಪಿ.

Decorate your home with
Life-like Oil Painting
of those dear and near to you
M. S Shirale,
MODERN STUDIO,
UDIPI

CHAMPAE'S
Snow & Lastrex
Sole Distributers for (India.)
Sukhananda Stores
Santhekatte, UDIPI, S. K.

ಗತವೈಭವಗಳ
ದಬ್ಬೆ ತಾಮ್ರ,
ಹಿತ್ತಾಳೆ, ಕಂಚಿ.
ಮೂಡಲಾವಿವುಗಳ
ಪಿನಿಷಾತ್ಮೆ
ಗಳೂ ಸುಪಾಸ್ಟಿ
ಗಳೂ ರಮಿಂ ಆಗಿ
ಯೂ ಚೆಲ್ಲರೇಯಾಗಿಯೂ ದೊರೆಯುತ್ತವೆ.
ಕಲ್ಕಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ವಿಚಾರವೇದಿಕೆ

ದ. ಕ. ಜಿಲ್ಲೆಯ ಸ್ಥಾನ ಸಮಸ್ಯೆ

(ಓರ್ವ ಸ್ವಪ್ನವಾದಿ ವಿಮರ್ಶಕನಿಂದ).

ದಕ್ಷಿಣ ಕನ್ನಡ ಜಿಲ್ಲೆಯು ಕನ್ನಡ ನಾಡಿನ ನಿಜವಾದ ಕೀಲಲ್ಲ, ಪರಗಾಲ–ಒಂದು ಅಂಗವಲ್ಲ, ಉಪಾಂಗವೆಂಬುದನ್ನು ಕೇಳುವ ಸಂದರ್ಭ ಈಗಲೂ ಈ ಮೊದಲೂ ಬಂದಿದೆ. ದಶಂಬರ ಕೊನೆಯ ವಾರದಲ್ಲಿ ಧಾರವಾಡದಲ್ಲಿ ಸೇರಿದ್ದ ೧೯ನೇ ಅಖಿಲ ಕರ್ನಾಟಕ ಏಕೀಕರಣ ವಿಚಿಷತ್ಕಿನ ಅಧ್ಯಕ್ಷರ ಭಾಷಣದ ಮುಖ್ಯ ಭಾಗವಾಗಿ ಇಂತಹ ಸ್ಪರ್ಧೆಗೆ ಸ್ಪಷ್ಟ ಉತ್ತರ ಬಂದಿದ್ದಿತು. ಆದ ಸ್ಥಿತಿವಾದಗಳು ವಸ್ತುಸ್ಥಿತಿಯನ್ನು ಬದಲಾಯಿಸಲಾರವೆಂಬುದು ನಿಜ ಸ್ಥಿತಿ ಬದಲಾವಣೆಯೆ ಮಾತು ಹಾಗಿರಲಿ-ಪ್ರತಿ ಬದಲಾವಣೆಯಾದರೂ ಯಾ ಕಾಗಬೇಕು? ದಕ್ಷಿಣ ಕನ್ನಡ ಜಿಲ್ಲೆಯು ಕನ್ನಡ ನಾಡಲ್ಲ ಎಂದು ಹೇಳಲು ಯಾರಾದರೂ ಎದೆಗೊಳ್ಳುವದು ಹೇಗೆ? ಹೀಗೆ ಹೆಸರಿಡುವವರ ಬಾಯಿಗೆ ಬಡೆದು ಬಿಡುತ್ತೇವೆ ಎಂಬುದು ಆ ಮೇಲಿನ ಪ್ರಶ್ನೆ. ಹೆಸರಿಡುವುದೇ ಅನಾಧ್ಯವಾಗುವಂತಹ ಪರಿಸ್ಥಿತಿಯಿದ್ದರೇನೇ ನೆಮ್ಮದಿ. ಮಲೆಯಾಳಿಗಳು ದಕ್ಷಿಣ ಕನ್ನಡವು ತಮ್ಮದೆಂದು ಹೇಳುವಂತೆ ಮೈಸೂರಿನ್ನು ಹೇಳಲು ಸಾಧ್ಯವೆ? ಮಂಜರರು ಬೆಳಗಾಂವಿ ತಮ್ಮದೆನ್ನುವಂತೆ ಧಾರವಾಡವನ್ನೂ ಹೇಳಬಲ್ಲರೆ? ಆಂದಮೇಲೆ ಅನ್ಯರ ದುರಾಶೆಗಾಸ್ಪದವಾಗಬಲ್ಲಂತಹ ದುಸ್ಥಿತಿಯೊಂದು ನಮ್ಮಲ್ಲಿದ್ದಿರಬೇಕು. ಅದನ್ನು, ಎಂಬುದರ ವಿಚಾರಣೆಯಿದು. ವರ್ತಮಾನ ಕಾಲದ ಸ್ಥಿತಿಯ ಕಡೆಗಿನ ವ್ಯಮಹಾ ದೃಷ್ಟಿಯು ನೋಟವಿದು. ಇಂತಹ ಪರಿಶೀಲನೆ ನಡೆಸುವವರು ಶಿಲಾ ಶಾಸನಗಳು, ಚರಿತ್ರಕಾರರ ಬೆಂಬಲ ಪಡೆದೇ ಮುಂದೊತ್ತುವ ಸಂಪ್ರದಾಯ. ಅವುಗಳಿಲ್ಲ ಒಂದು ಕಡೆಗಿದ್ದುಕೊಳ್ಳಲಿ ಯಾಕಂದರೆ ಈ ಕಾಲದಲ್ಲಿ ಗತ ನೈಭವಗಳ ಸ್ಮರಣೆಯು ಕಾಯಕಲ್ಪ ಚಿಕಿತ್ಸೆಯಾಗಬಲ್ಲದು. ಹೊರತು ನಿಜ ಯೌವನವಾಗುವಂತಿಲ್ಲ. ನೇಲಾಗಿ ಇಂದಿನ ಕನ್ನಡಿಗರ ವೀರ ಮಾಣಿಗಳೆಲ್ಲಾ ಶಿಲಾಶಾಸನಗಳೇ–ಶಾಶ್ವತ ಮತ್ತು ಸ್ಥಾವರವಾಗಿವೆ; ಕಾರ್ಯಕ್ಷೇತ್ರದ ಕಡೆಗೆ ಚಲಿಸುತ್ತಿಲ್ಲ! ಇಲ್ಲೀಗ ಸದ್ಯಸ್ಥಿತಿಯನ್ನು ವ್ಯವಹಾರ ದೃಷ್ಟಿಯಿಂದಲೇ ಪರ್ಯಾಲೋಚಿಸೋಣ.

ಮಲೆಯಾಳಿಯೊಬ್ಬ ಕೂಗಬಾರದೇಕೆ?

ಕಲ್ಲಕೋಟೆಯ ವಕೀಲ ಶ್ರೀ. ಕೃಷ್ಣ ನಾಯರೆಂಬವರು ಈ ಕಾಲದ ಸುದೈವೀ ಲೇಖಕರಲ್ಲೊಬ್ಬರು. ಅವರ ಪುಸ್ತಕ 'ಪಶ್ಚಿಮ ಕರಾವಳಿ ಪ್ರಾಂತ್ಯ' ಅಥವಾ 'ಕೇರಳ ಪ್ರಾಂತ್ಯ' ಎಂಬುದು. ನಮ್ಮ ಏಕೀಕರಣ ಪರಿಷತ್ತಿನ ಅಧ್ಯಕ್ಷ ಶ್ರೀ. ಕೆ. ಬಿ ಜಿನರಾಜ ಹೆಗ್ಡೆ ಎಂ. ಎಲ್. ಎ. (ಕೇಂದ್ರ) ಇವರಿಂದ ಪ್ರಕಾಶಕ್ಕೆ ಬಂತು. ಅಧ್ಯಕ್ಷ ಭಾಷಣದ ಮುಖ್ಯ ಭಾಗವಾಗಿ ಪುಸ್ತಕ ವಿಮರ್ಶೆ ಬಂದಿದೆ. ತನ್ನ ಅಧಿಕ ಪ್ರಸಂಗಕ್ಕೆ ಇಂತಹ ಅಸ್ತಿತ್ವ ದೊರಕಬಹುದೆಂದು ಪ್ರಾಯಶಃ ನಾಯರೇ ನಿರೀಕ್ಷಿಸಿರಲಾರರು ಖಚಿತ್ಯಂದು ಮುಖ್ಯತೆ ಪಡೆಯಲು ಆ ಪುಸ್ತಕದಲ್ಲದ್ದ ಲಕ್ಷಣವೆಂದರೆ 'ಮದರ್ ಇಂಡಿಯಾ'ದ್ದು; ನಾಯರರಲ್ಲಿದ್ದ ಗುಣವೆಂದರೆ ಮಿಸ್. ಮೇಯೋನದು ಆದರೆ 'ಮದರ್ ಇಂಡಿಯಾ' ವಿಮರ್ಶೆಯನ್ನು ಆ ವರುಷದ ಕಾಂಗ್ರೆಸ್ ಅಧ್ಯಕ್ಷರೆ ಭಾಷಿಂಲಿಲ್ಲ. ನವ್ಮಕ ಏ ಸಮ್ಮೇಲನಾಧ್ಯಕ್ಷರಾದರೂ 'ಕರಾವಳಿ ಪ್ರಾಂತ್ಯ'ದ ಕೆಲ ಮುಖಲಮು ವಿಮರ್ಶೆಗೆ ಹೋಗಬಾರದಿತ್ತೆಂದು ನನಗನ್ನಿಸುತ್ತದೆ. ಶ್ರೀ. ನಾಯರರದು ಅಧಿಕಾರಬದ್ಧ ದಾಖಲೆಯಾಗಿ–ಕೇರಳವ ವಂದಿಯಾಗಿ–ಕೊಂಬಿದ್ದಿಲ್ಲ. ಅದಕ್ಕೆ ಕೊಡಬಹುದಾದ ಅತಿದೊಡ್ಡ ಬಿರುದೆಂದರೆ 'ನಾಯರ್ ನಾಣ್ಣುಡಿ' ಎಂದು. ಇದನ್ನು ಉತ್ಪರಿಸಲು ಶ್ರೀ. ಹೆಗ್ಡೆಯವರು ಮಂಗಳೂರಿನಿಂದಲೇ ಒಂದು ಪುಸ್ತಕ ಪ್ರಕಟಿಸುತ್ತಿದ್ದರೆ ಸಾಕಾಗುತಿತ್ತು. ಆಗ ಆದು 'ನಾಯರ್–ಹೆಗ್ಡೆ ವಿವಾದ' ಅಥವಾ 'ಕೇರಳಾಭಿಮಾನ–ಕನ್ನಡಾಭಿಮಾನದ ಘರ್ಷಣೆ' ಆಗ್ನಿಸುತಿತ್ತು. ಬದಲಿಗೆ ಈ ಏಸಮ್ಮೇಲನಾಧ್ಯಕ್ಷ ಭಾಷಣದ ತಿರುಳಾಗಿ ಅದು ಬಂದುದರಿಂದ 'ಕನ್ನಡ–ಕೇರಳದ ಗಡಿ ವಿವಾದ' ಎಂಬ ಮಹತ್ವ ಅದಕ್ಕೆ ಜೊರೆತಿದೆ. ಸತ್ಯಾರ್ಧ ಪ್ರಕಾಶದ 14ನೇ ಅಧ್ಯಾಯಕ್ಕೆಂತ ಹೆಚ್ಚಾಗಿ ಮುಸಲ್ಮಾನ್ ಹಳೇ ಧಾರ್ಮಿಕಭಾವನೆಯನ್ನು ನೋಯಿಸುವ ಬರೆಹಗಳು ಬೇರೆ ಇರಬಹುದು, ಆದರೆ ಆಪಾಪುದಕ್ಕೂ ಬೀಳದ್ದಸಿಂಧ್‌ಸರಕಾರದ ಬಹಿಷ್ಕಾರವು ಸತ್ಯಾರ್ಧ ಪ್ರಕಾಶಕೆ-ಮಾತ್ರವೇಕೆ ಬಂತು? ಅದು ಹಿಂದುಗಳ ಒಂದು ಆಧಾರಗ್ರಂಥವಾಗಿರುವುದಕ್ಕಾಗಿ ನಾಯರರ ಪುಸ್ತಕವು ಕೇರಳದ ಮಟ್ಟಿಗಾದರೂ ಅಂತಹ ಅಧಿಕಾರಬದ್ಧ ಗ್ರಂಥವಲ್ಲ ಅಧ್ಯಕ್ಷ ಸ್ಥಾನದಿಂದ ಆಕ್ಷೇಪಿಸಲ್ಪಡುವಂಥದು. ಕಾರ್ಯಕ್ಕೆ ತಕ್ಕ ಮಹತ್ವವಿರಬೇಕು ಇಲ್ಲವಾದರೆ ಆಕ್ಷೇಪವೇ ಅವಕ್ಕಿದ್ದ ಬೆಲೆಯನ್ನು ಕೊಡುತ್ತದೆ. ಶ್ರೀ. ಹೆಗ್ಡೆಯವರು ಅದನ್ನೇ ಮಾಡಿದರೆಂದು ನನಗನ್ನಿಸುತ್ತದೆ ಅವರಿಗೂ ಹಾಗನ್ನಿಸಿದೆ "ಈ ಹೇಳಿಕೆಗಳಿಗೆ ನನು ಗಮನ ಕೊಡಬಾರದಿತ್ತು ಆದರೆ ಅದರ ಕರ್ತೃಗಳು ನನ್ನ ಕಸುಬಿಗೆ ಸೇರಿದ ಓರ್ವ ವಿದ್ವಾಂಸರು"–ಎಂದು ಕೊನೆಮುಲ್ಲಿ ಹೆಗ್ಡೆಯವರಂದಿದ್ದಾರೆ ಅರ್ಥಾತ್ ಆ ಕಡೆಯ ವಕೀಲರು ಸುಳ್ಳು 'ಕೈಫೆತು ನಕಲು' ತಯಾರಿಸಿದರೆಂದು ನಮ್ಮ ವಕೀಲರು 'ಪ್ರತಿವಾದ' ಆಣಿಮಾಡಿದ್ದಾರೆ. ಆದರೆ ಮೂಲ ವಾದಕ್ಕೆ 'ಕೋರ್ಟಿನ ಫೈಲ್'ಗೆ ಸೇರುವ ಯೋಗ್ಯತೆಯೇ ಇಲ್ಲದಿರುವಾಗ, ಆ ಮೊದಲೇ 'ಉದಾಹರಣೆ' ದಾಖಲಾಡುವ ಅವಸರ ಬೇಡವಿದ್ದಿತು. ಆದರಿಂದು ವಕೀಲೀ ನ್ಯಾಯ!

ದ. ಕನ್ನಡಿಗರದು ಮಲೆಯಾಳಿ ನೈಶಿಷ್ಯನೆ?

ಕ. ಏ ಸಮ್ಮೇಲನಾಧ್ಯಕ್ಷರೆಂಬುದನ್ನು ತತ್ಕಾಲಕ್ಕೆ ಮರೆತರೆ, ವಕೀಲ್ ಹೆಗ್ಡೆಯವರ ವಾದವು ವಕೀಲ್ ನಾಯರರ ವಾದವನ್ನು ಮೆಟ್ಟಿ ನಿಂತು ನವ್ಮ ಧ್ವಜವನ್ನು ಹಾರಾಡಿಸಿತೆಂಬುದಕ್ಕಾಗಿ ಅವರನ್ನು ಅಭಿನಂದಿಸಬೇಕು. 'ದಕ್ಷಿಣ ಕನ್ನಡಿಗರ ಮುಖ ಚರ್ಚಿಯೂ ಮಲೆಯಾಳಿಗಳದೇ' ಎಂಬ ಡಾರ್ವಿನ್ ನೀತಿ, ಮತ್ತು 'ಬ್ರಿಟಿಷ್' ನೌಕರರಂತೆಯಲ್ಲಿ ಕನ್ನಡಿಗರು ನೌಕರರಾಗಿ ಸೇರಿ ದಕ್ಷಿಣ ಕನ್ನಡದಲ್ಲಿಯೂ ಕೊಡಗಿನಲ್ಲಿಯೂ ಅನ್ಯಾಭಾವಿಕವಾಗಿ ಕನ್ನಡವನ್ನು ವ್ಯವಹಾರಿಕ ಭಾಷೆಯಾಗಿ ಮಾಡಿಕೊಂಡರು" ಎಂಬ ಮೇಯೋ ವರ್ಣನೆ—ಶ್ರೀ ನಾಯರರದು. ಆವರ ವಾದದಲ್ಲಿ ಗೋಕರ್ಣದ ವರೆಗೂ ಕೇರಳ ಹೋಗಿದೆ ಇದನ್ನು ವಿಲಕ್ಷಣ, ವಿಚಿತ್ರವೆನ್ನಬೇಕು—ನೊಂಡಿಲಿದ್ದ ಮನುವ್ಯನನ್ನು ನೋಡವಂತೆ ಕೌತುಕಕ್ಕಾಗಿ ನೋಡಬೇಕು ಅಂದ ಮೇಲೆ ಆ ವಾದದ ಸವಿವರ ವಿಮರ್ಶ ಮಾಡುವದಾದರೂ—ಆ ನೊಂಡಿಲಿನ ರೀತಿ, ತುಪ್ಪಿ, ಬಡ, ಅದರಲ್ಲಿರುವ ವರೋಮಗಳನ್ನು ಕೂಡಾ ಪರಿಶ್ಲಿಸಿ ನೋಡುವಂತೆ—ಕೇವಲ ಕೌತುಕಕ್ಕಾಗಿ ಒಲ್ಲ ಹಾಗೆ ನೋಡುವಾಗ ಕಾಣಿಸಿಗುವ ಒಂದಂಶ 'ದ ಕ. ಜಿಲ್ಲೆಯಲ್ಲಿ ಕನ್ನಡಿಗರಿಗಿಂತ ಮಲೆಯಾಳಿಗಳೇ ಅಧಿಕ ಸಂಖ್ಯೆಯಲ್ಲಿದ್ದಾರೆ' ಎಂಬುದು. ಕನ್ನಡಿಗರಿಗಿಂತ ಅಧಿಕ ಸಂಖ್ಯೆಯಲ್ಲಲ್ಲವಾದರೂ ದಕ್ಷಿಣ ಕನ್ನಡದಲ್ಲಿ ಮಲೆಯಾಳೀ ನೆರೆಯೇರಿರುವದು ನಿಜ. ಜೋಯಿಸರಾಗಿ, ಪಂಡಿತರಾಗಿ, ಕಸಬುದಾರರಾಗಿ, ಕೂಲಿಗಳಾಗಿ ಇವರು ಜಿಲ್ಲೆಯಲ್ಲೆಲ್ಲಾ ತುಂಬಿ ಹೋಗಿದ್ದಾರೆ. ಕಾಸರಗೋಡು ತಾಲೂಕಿನ ದಕ್ಷಿಣ ಭಾಗವಂತೂ ಸಂಪೂರ್ಣ ಮಲೆಯಾಳಿ. ಬೊಂಬಾಯಿ ತುಂಬುತ್ತಿರುವ ಕನ್ನಡಿಗರು, ದ. ಕ. ತುಂಬುತ್ತಿರುವ ಮಲೆಯಾಳಿಗಳಿಗೆ ಬಾಗಿಲು ಮುಚ್ಚುವೆನೆಂದರಾಗದು. ಜನಸಂಖ್ಯೆಯ ಅಧಿಕ್ಯದಿಂದ—ವ್ಯವಹಾರಕೌಶಲ್ಯಗಳಿಂದ-ಸಹಜವಾಗಿ ಉಂಟಾಗಿರುವ ಸಮ್ಮೇಲನವಿದೆ.. ಆದರೆ ತನ್ಮೊಂದಿಗೆ ತಮ್ಮ ನಾಡನ್ನೂ ಒಯ್ದಿದ್ದೇನೆಂದು ದಕ್ಷಿಣ ಕನ್ನಡಕ್ಕೆ ಬಂದ ಮಲೆಯಾಳಿಗಳಾಗಲೀ, ಉತ್ತರ ಹಿಂದುಸ್ಥಾನಕ್ಕೆ ಹೋದ ಕನ್ನಡಿಗರಾಗಲೀ ಭಾವಿಸಿದರಾಗದು ಮುಖಚರ್ಯೆಯ ಮಟ್ಟಿಗೆ ಚೀನೀಯರು ಜಾಪಾನರಿಗೆ ಸಮಾನರು. ಆದರೆ ಜಾಪಾನು ಕೂಡ ಚೀನಾಕ್ರಮಣಕ್ಕೆ ಈ ವಾದವನ್ನು ಮುಂದೊಡ್ಡಿಲ್ಲ. ಕಾರಣ, ನಾಯರರಂಥವರ 'ವಿಚಿತ್ರ ಮೆದುಳು' ಜಾಪಾನರಿಗಿಲ್ಲ ಜನರ ಮುಖ, ಕೈಗೂಟಗಳನ್ನೇ ಒಂದು ಪ್ರಾಂತ್ಯದ ಗಡಿಕಾಲುಗಳೆಂದು ಹೇಳುವಂತಹ ಹುಚ್ಚಾಟವು ಈ ಕಾಲದ ಜಾತಿವಾದು ಸೀಟು, ಧರ್ಮವಾರು ರಾಜ್ಯ ಮುಂತಾದ ಕ್ಷುದ್ರಾವೇಶಗಳ ಪರಮಾವಧಿ. ರೋಗಕ್ಕೆ ಶಮನ ಹೊರತು ಇದರೊಡನೆ ಸಂಧಾನ ಹೇಗಿಲ್ಲಪ್ಪೋ, ಹಾಗೆಯೆ (ರೋಗವಾಗಿ ರೂಪುಗೊಂಡಿದ್ದರ ಮಾತ್ರ) ಇಂತಹ ಉದ್ರೇಕಗಳನ್ನು ನಿವಾರಿಸುವದೊಂದೇ ಹಾದಿ. ಗೋಕರ್ಣದ ವರೆಗೆ ಕೇರಳ ಪ್ರಾಂತ್ಯವಾಗುತ್ತವಾದರೆ, ಕಲ್ಕತ್ತದ ವರೆಗೆ ಬಿಹಾರ್ ಪ್ರಾಂತ್ಯವಾದೀತು! ಆ ಸಾತು ಒತ್ತಿಗಿರಲಿ ಆದರ ಕಾನರಗೋಡು ತಾಲೂಕು ಮಾತ್ರ ನಿಜಕ್ಕೂ ಸಿಕ್ಕುಗಟ್ಟಿದೆ. ಮಲಬಾರಿಗೊತ್ತಾಗಿರುವ ಆದರ ದಕ್ಷಿಣ ಭಾಗವಂತೂ ಮಲೆಯಾಳಿಮಯವಾಗಿದೆ. ಅಲ್ಲಿಯ ಸ್ಥಳಪುರಾಣ ಇದಕ್ಕೆ ವಿರುದ್ಧವಿದೆ; ಕನ್ನಡಿಗರ ಅಭಿಮಾನವು ಇನ್ನೂ ಅಷ್ಟಗಟ್ಟುತ್ತಿದೆ; ಆದರೆ ಅದು ಸತ್ಯಕ್ಕೂ ಮಲೆಯಾಳಿಯಾಗಿದೆ! ಕಾಸರಗೋಡಿನ ದಕ್ಷಿಣಮೂಲೆಯ ತುಂಡನ್ನು ಕನ್ನಡಿಗರು ಉಳಿಸಿಕೊಳ್ಳಬಹುದಾದ ಕಾಲವೊಂದಿತ್ತು; ಇನ್ನದನ್ನು ಗಳಿಸಿಕೊಳ್ಳಬೇಕಾಗಿ ಬಂದಿದೆ ಹಾಗೆ ಮರುಸಂಪಾದನೆ ಮಾಡಿಕೊಳ್ಳುವದಕ್ಕಲ್ಲ, ಇಂದು ನಾವು ಹೆಸರೆತ್ತದಎಷ್ಟೋ ಭಾಗಗಳು ಕನ್ನಡ ನಾಡಿಗೆಸೇರಲು ಬಾಧ್ಯವಿವೆ. ಆದರೆ ಸದ್ಯಸ್ಥಿತಿಯಲ್ಲಿ ಇದು ಸಾಧ್ಯವೆ? 'ಕರ್ನಾಟಕ ಪ್ರಾಂತ್ಯ' ಎಂಬ ಹೆಸರನ್ನು ಇನ್ನೂ ನಾವು ಆ ಭಾಗಕ್ಕುಂಟಿಸಬಲ್ಲೆವು; ಆದರೆ ಅಲ್ಲೀಗ ಕನ್ನಡಿಗರನ್ನು ಕಾಣಲಾರೆವು ಆದ್ದರಿಂದ ವ್ಯವಹಾರಜಾಣ್ಮೆ ಪ್ರದರ್ಶಿಸಿ 'ಎಂಜಲು ಮಾಡಿಬಿಟ್ಟೆ; ಇನ್ನಿದನ್ನು

(೧೧ನೇ ಪುಟ ನೋಡಿರಿ.)

ನಮ್ಮ ಮಿತ್ರರಿಗೆಲ್ಲಾ

ಹೊಸ ವರ್ಷವು

ಆನಂದ ಮತ್ತು ಅಭಿವೈದ್ಧಿದಾಯಕವಾಗಲೆಂದು ಹಾರೈಸುತ್ತೇವೆ.

ಕೇರಳ ಸೋಪು ಇನ್ಸ್ಟಿಟ್ಯೂಟ್,
ಕಲ್ಲಿಕೋಟೆ.

Kerala Soap Institute, Calicut.

WANTED.

Estate Writers and Labour Suppliers with from 30 to 100 labourers.

Apply, G. V. R FREND
Karadukhan Estate,
Sangameswarpet P. O.
Kadur District

ಮದ್ರಾಸ್ ಪ್ರಾಂತದ ಯುದ್ಧೋತ್ತರ ರಚನೆಗಳು.

ಸ್ತ್ರೀ ಕೆಲಸಗಾರರಿಗೆ ಸೌಕರ್ಯ—ವಿದ್ಯುಚ್ಛಕ್ತಿಯ ಪ್ರಸಾರ—ಅಕ್ಕಿಯ ಮಟ್ಟಿಗೆ ಪೂರ್ಣ ಸ್ವಾವಲಂಬನೆ—ಪೂರ್ವ ಕರಾವಳಿಯಲ್ಲೂ ಮೀನು ವ್ಯವಸಾಯ—ಅರಣ್ಯಗಳ ಆಧಿಕ್ಯ—ತಾಲೂಕಿಗೊಂದು ಜಾನುವಾರು ಆಸ್ಪತ್ರೆ-ನೀರು ಸರಬರಾಯಿ-ಸಾರ್ವತ್ರಿಕ ವಿದ್ಯಾಭ್ಯಾಸ-ಹಳ್ಳೀ ಅಭಿವೃದ್ಧಿ.

ಮದ್ರಾಸ್ ಪ್ರಾಂತ್ಯದ ಯುದ್ಧಾನಂತರದ ಪುನರ್ರಚನೆಯ ಮಹಾಸಮಿತಿ (The General Committee of PostWar Reconstruction)ಯು ಕಳದ ದಶಂಬರ್ ತಾ. 28ರಲ್ಲಿ ಮಾನ್ಯ ಗವರ್ನರರ ಅಧ್ಯಕ್ಷತೆಯಲ್ಲಿ ಸೇರಿ, ಬೇರೆ ಬೇರೆ ವಿಭಾಗಗಳಿಗಾಗಿ ತಾನು ನೇಮಿಸಿದ್ದ ಉಪಸಮಿತಿಗಳ ವರದಿಗಳನ್ನು ಪರ್ಯಾಲೋಚಿಸಿ ನಿರ್ಧಾರಮಾಡಿದೆ. ಒಯ್ಯೋಣ ಸಂಬಂಧದ (Transport), ಮಹಿಳಾ ಸಂಬಂಧದ (Women's) ಉದ್ಯಮ (Industries), ಬೇಸಾಯ, Agriculture) ಮೀನವ್ಯವಸಾಯ (Fisheries), ಅರಣ್ಯ (Forests), ಪಶು ವೈದ್ಯಕೀಯ ಮತ್ತು ಪಶು ಸಂಪತ್ತು (Veterinary &Livestock), ನೀರಾವರಿ (Irrigation), ಸಂಚಾರ (Communications), ಸಾರ್ವಜನಿಕ ಆರೋಗ್ಯ (Public Health), ವಿದ್ಯಾಭ್ಯಾಸ (Education)—ಈ ಉಪಸಮಿತಿಗಳ ವರದಿಗಳು ಅನುಕ್ರಮವಾಗಿ ವಿಮರ್ಶಿಸಲ್ಪಟ್ಟು ನಿರ್ಧಾರಗಳಾಗಿವೆ. ಇವೆಲ್ಲಾ ಮದ್ರಾಸ್ಕ್ ಪ್ರಾಂತ್ಯದ ಭವಿಷ್ಯದ ರೂಪರೇಖೆಗಳಂತಿರುವದರಿಂದ ಪ್ರಾಮುಖ್ಯವಿವೆ.

ಟ್ರಾನ್ಸ್‌ಪೋರ್ಟ್ ಉಪಸಮಿತಿಯ ಮುಖ್ಯರಕ್ಕೆ ಮಹಾಸಮಿತಿಯ ಪ್ರಹಾರ!

ಬಸ್ ಸರ್ವೀಸುಗಳನ್ನು ಸರಕಾರ ಇಲ್ಲವಾ ಸ್ಥಳೀಯ ಸಂಸ್ಥೆಗಳೇ ನಡೆಸಬೇಕೆಂದು ನಿರ್ಧಾರಮಾಡಿ, ಅದಕ್ಕನುಗುಣವಾದ ಮತ್ತೊಂದು ವರದಿಯೊಪ್ಪಿಸಬೇಕೆಂದು ನವಂಬರಾಂತ್ಯದಲ್ಲಿ ಸೇರಿದ ಮಹಾಸಮಿತಿಯು ಉಪಸಮಿತಿಯ ವರದಿಯನ್ನು ಹಿಂದಿರುಗಿಸಿದ ವಾರ್ತೆಯನ್ನು ಆ ಬಾರಿಯೇ ಕೊಟ್ಟಿದ್ದೆವು. ಸಬ್ ಕಮಿಟಿಯು ಎರಡನೇ ವರದಿಯಲ್ಲಾದರೂ ಈ ತಿದ್ದುಪಡಿಯನ್ನು 'ಅಂಗೀಕರಿಸಿಕೊಳ್ಳದೆ ಬಸ್ ಸರ್ವಿಸನ್ನು ಸರಕಾರವು ನಡೆಸುವದು ಆ ವ್ಯವಹಾರ್ಯವೆಂಬ ಅಭಿಪ್ರಾಯದೊಡನೆ ಖಾಸಗೀ ಆಡಳಿತೆಯನ್ನೇ ಪ್ರೋತ್ಸಾಹಿಸಿದ್ದಿತೀಯ ವರದಿಯೊಪ್ಪಿಸಿದ್ದಿತು. ಈ ಕುರಿತು ಮಹಾಸಭೆಯಲ್ಲಿ ಗಂಭೀರ ಚರ್ಚೆ ನಡೆದು "ಬಸ್ ಸರ್ವೀಸುಗಳ ಅಧಿಕಾರ ಮತ್ತು ಆಡಳಿತೆ ಸರಕಾರ ಅಥವಾ ಸ್ಥಳೀಯ ಸಂಸ್ಥೆಗಳದಾಗಬೇಕು. ಈ ಕುರಿತು ಸರಕಾರವು ಕ್ಷಿಪ್ರದಲ್ಲಿಯೇ ಆಗತ್ಯವುಳ್ಳ ವ್ಯವಸ್ಥೆಗಳನ್ನು ಕೈಕೊಳ್ಳಬೇಕು" ಎಂಬ ಸ್ಪಷ್ಟ ನಿರ್ಧಾರಕ್ಕೆ ಬಹುಮತ ದೊರೆಯಿತು.

ಮಹಿಳಾ ಸಮಿತಿಯ ಶಿಫಾರಸುಗಳು

ಮಹಿಳೆಯರ ವಿದ್ಯಾಭ್ಯಾಸದ ಅನುಕೂಲತೆ ಮತ್ತು ಸುಧಾರಣೆಗಳ ಕುರಿತು ಉಪಯುಕ್ತ ಸೂಚನೆಗಳು ಈ ಸಮಿತಿಯ ವರದಿಯಲ್ಲಿವೆ. ಎರಡು ಗಣ್ಯ ಸಲಹೆಗಳೆಂದರೆ ಸ್ತ್ರೀ ಕೆಲಸಗಾರರಿಗೆ ದೊರೆಯುವ ಹಿರಿಗೆ ಸಂಬಂಧದ ರಜೆಯನ್ನು 4 ವಾರದಿಂದ ಆರು ವಾರಗಳಿಗೆ (೧೨ಪಟೆಕು. ಕಾರ್ಖಾನೆಗಳ ಆಡಳಿತೆಯವರು ಶಿಶು ಸಂಗೋಪನಾಲಯಗಳನ್ನು ಆಗತ್ಯವಾಗಿ ಏರ್ಪಡಿಸಿಕೊಳ್ಳಬೇಕು-ಎಂಬುದು. ಈ ವರದಿಯು ಸಭೆಯ ಅಂಗೀಕಾರ ಪಡೆದಿದೆ.

ಔದ್ಯೋಗಿಕ (ಇಂಡಸ್ಟ್ರೀಸ್) ಸಮಿತಿಯ ಸಲಹೆಗಳು.

ಔದ್ಯೋಗಿಕ ಉಪ ಸಮಿತಿಯು ತನ್ನ ಅಂಗಗಳಾಗಿ ಬೇರೆ ಬೇರೆ ಉದ್ಯೋಗಗಳ ಕುರಿತು ಪ್ರತ್ಯೇಕ ಸಮಿತಿಗಳನ್ನು ರಚಿಸಿಕೊಂಡಿದ್ದಿತು. ಅವೆಲ್ಲವುಗಳನ್ನೊಳಗೊಂಡ ಮೂಲ ವರದಿಯು ಪರ್ಯಾಲೋಚಿಸಲ್ಪಟ್ಟಿತು. ಪ್ರಾಂತ್ಯದ ನಪೋದ್ಯಮಗಳ ಅಭಿವೃದ್ಧಿಗಾಗಿ ಮುಖ್ಯವಾಗಿ ವಿದ್ಯುಚ್ಛಕ್ತಿಯ ಸರಬರಾಯಿ. ಹಚ್ಚ ಬೇಕಾಗಿದೆ. ಅದಕ್ಕಾಗಿ ಮದ್ರಾಸ್ ಮತ್ತು ಮೆಟ್ಟೂಪುರುಗಳೊಳಗೆ ಸಂಬಂಧ ನಿರ್ಮಾಣ, ಪೈಕರ ಮತ್ತು ಪಾಪನಾಶಮುಗಳ ಬಿಲ. ಶಕ್ತಿ ನಿರ್ಮಾಣದ ವಿಸ್ತಾರ,ತುಂಗಭದ್ರ ಮತ್ತು ಮುಚುಕುಂದ್ ವಿದ್ಯುಚ್ಛಕ್ತಿ ಸಂಗ್ರಹಾಲಯಗಳ ಆಭಿವೃದ್ಧಿ ಮದುರಾ ಜಿಲ್ಲೆಯ ಹೊಸ ಸಂಯೋಜನೆ, ಮೊದಲಾದ ಹಲವು ಯೋಜನೆಗಳನ್ನದು ಶಿಫಾರಸುಮಾಡಿದೆ. ರಸಾಯನ ವಸ್ತುಗಳು, ಯಾಂತ್ರಿಕೋಪಕರಣಗಳು, ಗ್ರಾನೋದ್ಯೋಗಿಗಳು ಖನಿಜಗಳು ಹಾಗೂ ನೇಯ್ಗೆ ಸಂಬಂಧದ ಸುಧಾರಣೆ ಮತ್ತು ಪೋಷಣೆಗಳ ಕುರಿತು ಸರಕಾರಕ್ಕೆ ಹಲವು ಶಿಫಾರಸುಗಳನ್ನು ಮಾಡಲಾಗಿದೆ. ಚರ್ಚೆಯ ವೇಳೆ ನೇಯ್ಗೆಯು ಸರಕಾರದ ಆಡಳಿತೆಗೊಪ್ಪಿಸಬೇಕೆಂಬ ಸೂಚನೆಯೂ ಬಂದಿತ್ತು. ಎಲ್ಲಾ ಉಪಸೂಚನೆಗಳನ್ನೂ ಪರ್ಯಾಲೋಚಿಸಲಾಗುವದೆಂಬ ಆಶ್ವಾಸನೆ ದೊರೆಯಿತು. ವರದಿ ಅಂಗೀಕರಿಸಲ್ಪಟ್ಟಿದೆ.

ಬೇಸಾಯ ಸಮಿತಿಯ ಸೂಚನೆಗಳು

ಆಕ್ಕಿಯುತ್ಪತ್ತಿಯಲ್ಲಿ ಮದ್ರಾಸ್ ಪ್ರಾಂತ್ಯವು ಸ್ವಾವಲಂಬಿಯಾಗಬೇಕು. ಪ್ರಾಂತ್ಯಕ್ಕೆ ಸಾಕಾಗುವಷ್ಟು ಉತ್ಪತ್ತಿ ಪ್ರಾಂತ್ಯದಲ್ಲಿ ಆಗಲೇಬೇಕು. ಅದಕ್ಕಾಗಿ ಗೋದಾವರಿ, ಕೃಷ್ಣಾ, ಮತ್ತು ತುಂಗಭದ್ರ ಹೊಳೆಗಳ ನೀರನ್ನು ಉಪಯೋಗಿಸುವ ವಿಧಾನಮಾಡಬೇಕು. ಸರಕಾರವೇ ಅಕ್ಕಿಗೆ ಯೋಗ್ಯ ದರ ನಿರ್ಧರಿಸಿ ಜಾಮೀನಿಯ ಲ್ಲಿಡಬೇಕು, ಎಂದೆಲ್ಲಾ ಶಿಫಾರಸುಗಳಾಗಿವೆ ನೀರಾವರಿ ಸೌಕರ್ಯಗಳ ವಿಸ್ತಾರದು; ಆಕ್ಕಿಯ ಬೆಳೆಯ ಅಭಿವೃದ್ಧಿಯಂತೆಯೇ ಹತ್ತಿ, ಗೆಣಸು, ಕಬ್ಬು, ಹೊಗೆಸೊಪ್ಪು-ಇತ್ಯಾದಿಗಳ ಉತ್ಪತ್ತಿಯನ್ನೂ ಹೆಚ್ಚಿಸುವ ಸಲಹೆಗಳಿವೆ. ಅಕ್ಕಿಸಂಗ್ರಹ ಮತ್ತು ವಿತರಣೆಗಾಗಿ ಕೋಪರೇಟಿವ್ ಸ್ಟೋರ್ಸ್‌ಗಳನ್ನು ಉಪಯೋಗಿಸಿಕೊಳ್ಳುವಂತೆ ಅವುಗಳ ರಿಜಿಸ್ಟ್ರಾರ್. ತಯಾರಿಸಿರುವ ಯೋಜನೆಯನ್ನು ಒಪ್ಪಿಕೊಳ್ಳಲಾಗಿದೆ. ಯುದ್ಧಾನಂತರವೂ ಈ ಉತ್ಪನ್ನೋಪಾಯನೇ ಇರಬೇಕು ಇವೆಲ್ಲಾ ಉದ್ದೇಶ ಸಾಧನೆಗಾಗಿ ಮುಂದಿನ ೨ ವರುಷಗಳಿಗೆ 12 ಕೋಟಿ ರೂಪಾಯಿ ನೆಚ್ಚ ತಗಬಹುದು. ವರದಿಯು ಚರ್ಚೆಗಿಡಲ್ಪಟ್ಟಾಗ, ವೈದ್ಯ ಸಾಯೋಪ್ಪತ್ತಿಗಳ ಧಾರಣೆ ಮತ್ತು ವೈದ್ಯ ಸ್ಥಳಗಳನ್ನು ಸುಗಮಗೊಳಿಸುವಂತೆ ಭಾರತೀಯ ವೈದ್ಯವಸಾಯ ಸರ್ವಿಸನ್ನು ಪುನರಾ ನರ್ತನೆಗೊಳಿಸಬೇಕೆಂದು ಕೇಂದ್ರ ಸರಕಾರಕ್ಕೆ ಶಿಫಾರಸು ಮಾಡಲಾಯಿತು. ಬೇಯಾನಾರಿ ಸಲಹೆಗಳಲ್ಲಿ ಮತ್ತು ಅನ್ನಕೊಲವಾಗಿ ಸಾಲಕೊಡುವಂತಹ 'ಬೇಸಾಯ ಬೇಂಕು' ಸ್ಥಾಪಿಸುವ ಸೂಚನೆ ಬಂದು ಆ ಕುರಿತು ಪರ್ಯಾಲೋಚಿಸಲಾಗುವದೆಂಬ ಆಶ್ವಾಸನೆ ದೊರೆಯಿತು. ವರದಿ ಅಂಗೀಕರಿಸಲ್ಪಟ್ಟಿದೆ.

ಮೀನು ವ್ಯವಹಾಯ ಸಮಿತಿಯ ಸಲಹೆಗಳೇನು?

ಮೀನು ಬೇಸಾಯಾಧಿಕಾರಿಗಳಿಗೆ ನಿಯಮಬದ್ಧ ತರಬೇತಿ ಮತ್ತು ಸಾರ್ವಜನಿಕರಿಗೆ ಅಲ್ಪಾವಧಿಯ ತರಬೇತಿಯೂ ಅಯವಸಾಯದಲ್ಲಿ ಸಂಶೋಧನೆ ನಡೆಸುವ ಹಂಚಿಕೆಗಳೂ ಇವೆ. ಇದುವರೆಗೆ ಮೀನು ವ್ಯವಸಾಯ ಸಂಬಂಧವಾಗಿ ಪಶ್ಚಿಮ ಕರಾವಳಿಯಂತೆ ಪೂರ್ವ ಕರಾವಳಿಗೂ ಲಕ್ಷ್ಯಕೊಡಲಾಗಿಲ್ಲ. ಇನ್ನು ಮುಂದೆ ಅಲ್ಲಿಗೂ ಗಮನಕೊಡಲಾಗುವದು. ಶಾಸನ ಮೂಲಕ ಈ ಉದ್ಯೋಗಕ್ಕೆ ರಕ್ಷಣೆ ದೊರಕಿಸಿಕೊಳ್ಳುವ ಸಲಹೆಗಳೂ ಇವೆ.

ಅರಣ್ಯ ಸುಧಾರಣೆ ಹೇಗೆ?

ಯುದ್ಧ ವರುಷಗಳಲ್ಲಿ ಕಾಡುಮರಗಳು ಬಹಳ ನಾಶವಾಗಿವೆ. ಇನ್ನು ಮುಂದೆ ಅರಣ್ಯಾಭಿವೃದ್ಧಿಮಾಡಬೇಕು. ಆದಕ್ಕಾಗಿ ಖಾಸಗೀ ಕಾಡುಗಳನ್ನೂ ಬೆಳೆಸಿ, ಅವುಗಳ ಆಡಳಿತೆಯನ್ನು ಸರಕಾರವು ಸಹಿಸುವಂತಹ ಶಾಸನಗಳಾಗಬೇಕು. ನೇಕಡಾ 20 ರಿಂದ 25 ವರೆಗೆ ಪ್ರಾಂತ್ಯದ ಕಾಡುಗಳೂ, ಕಟ್ಟಿಗೆ, ಗೊಬ್ಬರ, ಇತ್ಯಾದಿಗಳಿಗಾಗುವ ಹಳ್ಳೀ ಕಾಡುಗಳೂ ಹೆಚ್ಚಬೇಕು. ಅಂತೆಯೇ ಉತ್ತಮ ವರ್ಗದ ತರಬೇತಿಯೀಯುವ ಫೋರೆಸ್ಟ್ ಕಾಲೇಜನ್ನೂ ಪುನಃ ತೆರೆಯಬೇಕು ಎಂದು ನಿರ್ಧಾರವಾಗಿದೆ.

ಜಾನುವಾರು ಸಂಬಂಧ ಸಮಿತಿಯ ಶಿಫಾರಸುಗಳು

ಯುದ್ಧದಿಂದಾಗಿ ವ್ಯಾಲತ್ಯದ ಬಹಳ ಜಾನುವಾರುಗಳ ನಾಶವಾಗಿದೆ. ಹೀಗೆ ನಾಶವಾದ ಜಾನುವಾರುಗಳ ಸ್ಥಾನವನ್ನು ಉತ್ತಮ ವರ್ಗದವುಗಳು ತುಂಬಬೇಕು. ಆದಕ್ಕಾಗಿ ಜಿಲ್ಲೆಗೊಂದರಂತಾದರೂ ಬೀಜದ ಹೋರಿಗಳ ಸಂಗ್ರಹಾಲಯಗಳಿರಬೇಕು ಅಂತೆಯೇ ಖಾಸಗೀ ಬೀಜದೆತ್ತುಗಳಿದ್ದವರಿಗೂ ಸೌಸ್ಯಾಟಿಗಳಿಗೂ ಸಹಾಯ ಸಲ್ಲಬೇಕು. ಪಶುವೈದ್ಯದ ಅನುಕೂಲತೆ ಹೆಚ್ಚಬೇಕಾದ್ದರಿಂದ ಅಗತ್ಯವುಳ್ಳ ಸಹಾಯಕರೊಂದಿಗೆ ಒಬ್ಬ ನಿರ್ದಿಷ್ಟ ನನ್ನೊಳಗೊಂಡು ತಾಲೂಕಿಗೊಂದರಂತಾದರೂ ಜಾನುವಾರು ಆಸ್ಪತ್ರೆಗಳಿರಬೇಕು. ಮದ್ರಾಸಿನ ವೆಟರ್ನರಿ ಕಾಲೇಜಿನ ಅಭಿವೃದ್ಧಿ, ಮದ್ರಾಸ್ ನಗರದಿಂದ ಜಾನುವಾರುಗಳನ್ನು ಖಾಲಿಪಡಿಸಿ ಹೊರಗಿನಿಂದ ಹಾಲು ಸರಬರಾಯಿ ಮಾಡುವ ವ್ಯವಸ್ಥೆ ಇತ್ಯಾದಿ ಸೂಚನೆಗಳೂ ಇವೆ.

ನೀರಾವರೀ ಸಂಬಂಧದ ಸಲಹೆಗಳು

ವ್ಯವಸಾಯಕ್ಕಾಗಿ [illegible] ಭವಿಷ್ಯತ್ತಿನ ಅತಿದೊಡ್ಡ ಯೋಜನೆಗಳಲ್ಲೊಂದಾದ ಗೋದಾವರಿ ಜಲಸಂಗ್ರಹಣಾಗಬೇಕು. ಇದಕ್ಕೆ 40ರಿಂದ 50 ಕೋಟಿ ರೂ.ಗಳ ತನಕ ಖರ್ಚು ತಗಬಹುದು ಸೇಲಮ್ ಮತ್ತು ಕೊಯಮತ್ತೂರಿನ ಸುಮಾರು 10 ಸಾವಿರ ಎಕ್ರೆ ಸ್ಥಳಗಳಿಗೆ ಪಂಪು ನೀರನ್ನು

(ಉಳಿದ ೫ನೆ ಪುಟದಲ್ಲಿ ನೋಡಿರಿ.)

Greetings

We wish a happy and prosperous

NEW YEAR 1945

to

all our share-holders, customers & well-wishers.

Navayuga Enterprise Ltd., Udipi

Proprietors for

NAVAYUGA PRESS.

ಬಿಡಿನುಡಿ

ಭಾಷಾವಾರು ಪ್ರಾಂತ್ಯರಚನೆಯಿಲ್ಲದ, ಆರ್ಥಾತ್ ಕರ್ನಾಟಕಪ್ರಾಂತ್ಯ ನಿರ್ಮಾಣಮಾಡಿಕೊಡದ ಯಾವ ನೂತನ ರಾಜ್ಯ ಘಟನೆಯನ್ನೂ ಒಪ್ಪಬಾರದು, ಎಂದು ಧಾರವಾಡದಲ್ಲಿ ಸೇರಿದ ಕರ್ನಾಟಕ ಏಕೀಕರಣ ಸಮ್ಮೇಲನದ ನಿರ್ಧಾರ.

'ಸತ್ಯಾರ್ಗ್ರಹಕ್ಕೆ ಸಾವಿರ ವಿಘ್ನ' ಎಂಬ ಗಾದೆಯು ಮಿ. ಅಮೆರಿಯವರ ಅನುಭವಕ್ಕೆ ಬರುವಂತಾಯಿತು.

ಹಿಂದುಸ್ಥಾನಕ್ಕೊಂದು ನವರಾಜ್ಯ ಘಟನೆ ಕೊಟ್ಟುಬಿಡಬೇಕೆಂಬ ಆಮೆರಿ ಆತುರ ಅಷ್ಟಿಷ್ಟಲ್ಲ.

ಆದರೆ ಹಿಂದೂ ಮುಸ್ಲಿಮರೊಟ್ಟಾಗಲು ಕೇಳುವದಿಲ್ಲ.

ಅನ್ಯತ ರಾಜರು ತಮ್ಮ ಹಕ್ಕು ಬಾಧ್ಯತೆ ಬಿಟ್ಟುಕೊಡಲೊಪ್ಪುವದಿಲ್ಲ.

ತಾವು ಬಿಟ್ಟು ಹೋದ ಮೇಲೆ ದಲಿತ ವರ್ಗದವರಿಗೆ ದಯೆ ತೋರಿಸುವವರಾರು ಎಂಬ ನಿಶ್ಚಯವಿಲ್ಲ.

ಈಗ ನೋಡುವಾಗ ಕನ್ನಡಿಗರೂ ನವರಾಜ್ಯ ಘಟನೆಯನ್ನು ಒಪ್ಪಿಕೊಳ್ಳುವದಿಲ್ಲ!!

ಹೀಗೆ ಎಲ್ಲರೂ ತಲೆಯಲ್ಲಾಡಿಸುತ್ತಿರುವಾಗ ಮಿ. ಅಮೆರಿ ತನ್ನ ಹೆಗಲ ಮೇಲಿನ ಹೊಣೆಯನ್ನು ಯಾರಾ ತಲೆಗೆ ಹೇರಬೇಕು?

ಭೂಮಿಯನ್ನು ಸಾವಿರ ಹೆಡೆಯ ಆದಿಶೇಷ ಹೊತ್ತಿದ್ದಾನೆಂದು ನಂಬಿರುವ ಹಿಂದುಗಳು 'ಆದನ್ನು ನೆಲಕ್ಕೊಗೆದು ಹೋಗಿ' ಎಂದು ಹೇಳಬಹುದು.

ಆದರೆ ಸಾವಿರ ನಾಲಿಗೆಯವರೂ ಸಾವಿರ ಹೆಡೆಯವನಿಗೆ ಸಮಾನ.

ಇವ ಹೊದುನಷ್ಟನ್ನು ಅವರೂ ಹೊರಬಲ್ಲರು.

ಆದ್ದರಿಂದ ಬ್ರಿಟಿಷರು ಹೊರಲಾರದೆ ಹೊತ್ತು ಹಾಕಿಹೋಗುವ ಪ್ರಶ್ನೆಯೇ ಇಲ್ಲ.

× × ×

'ಸೀಯಾಳ ಮಾರಕೂಡನೆಂಬ ನಿಯಂತ್ರಣ ಬಂದಿದೆ' ಎಂದೊಮ್ಮೆ ಸುದ್ದಿ ಹರಡಿತು.

ಗೋಧಿ ತಿಂದು ಉಣ್ಣವಾದವರಿಗೆ ಎಳನೀರ ತಂಪೂ ಇಲ್ಲದಂತಾಯಿತೆ?

ಸಿಡುಕಿನಿಂದ ಕುಡಿಯುವ ಅಧಿಕಾರಿಗಳಿಗೆ ಸೀಯಾಳ ಕುಡಿಸಿ ತಣಿಸುವದಕ್ಕೂ ಭಂಗ ಬಂತೆ?

ಎಳನೀರ ಅಭಿಷೇಕವಿಲ್ಲದೆ ನಾಗದೇವತಾ ಪುಸುಗುಟ್ಟಲಾರಂಭಿಸಿದರೆ?—

ಎಳನೀರಲ್ಲವೇ, ಎಂದು ತಾಳಿಯ ಗಣಗಳು ಊರವರ ರಕ್ತದಿಂದ ಬಾಯಾರಿಕೆ ಕಳಕೊಳ್ಳಲು ಹೊರಟರೆ—

'ಸೀಯಾಳ ನಿಯಂತ್ರಣ'ದ ವಾರ್ತೆಯೇ ಸುಳ್ಳು ಎಂದೀಗ ಪ್ರಕಟವಾಗಿದೆ.

ಕಲ್ಪವೃಕ್ಷದ ರಸಗಳಿಗೆ ಕಾನೂನು ಮಾಡಿದರೆ ಅಯುಷ್ಯಕ್ಕೆ ಹಾನಿ.

ಹಿಂದೊಮ್ಮೆ ಕಳ್ಳು ನಿಷೇಧವನ್ನು ಜ್ಯಾರಿಗೆ ತಂದ ಕೂಡಲೇ ಕಾಂಗ್ರೆಸ್ ಸರಕಾರಗಳು ರಾಜಿಕೊಡಬೇಕಾಗಿ ಬಂತು.

ಈಗಿನ ಜೀವನ್ಮರಣ ಹೋರಾಟ ಸ್ಥಿತಿಯಲ್ಲಿ ಇಂದಿನ ಸರಕಾರವು ಸಾವನ್ನು ಸಮೀಪ ತರುವ ಅಂತಹದೇನನ್ನೂ ಮಾಡುವಂತಿಲ್ಲ.

ಕಲ್ಪವೃಕ್ಷದ ಮೇಲೆ ಕೈಮಾಡಿ ಆಯುಷ್ಯ ಕಡಿದುಕೊಳ್ಳುವಂತಿಲ್ಲ

ಧೂಪದ ಮಂಗಳವೆಯೋ?—ಅವುಗಳನ್ನಾದರೆ ನೋಡೋಣ.

× × ×

ಉಡುಪಿ ಮುನಿಸಿಪಾಲಿಟಿಯೊಳಗಡೆ ಆಹಾರ ವ್ಯವಸ್ಥೆಯ ನೂತನ ಹಂಚಿಕೆಯೊಂದು ಜ್ಯಾರಿಗೆ ಬಂವಿರಬಹುದೇ ಎಂದು ನನಗೆ ಸಂದೇಹ.

ಬಾಯಿ ತುಂಬಾ ಕೂಳು ದೊರೆಯದ ಕಾಲದಲ್ಲಿ ಮೂಗು ತುಂಬಾ ಧೂಳು—ಎಂಬುದೇ ಆ ಹೊಸ ವ್ಯವಸ್ಥೆ.

ಪಟ್ಟಣದ ಗಡಿಯೊಳಗೆ ಚಕ್ರವೂರಿದ ಯಾವ ಲೋರಿಯಾದರೂ ಪೋಲಿಸ್ ಸ್ಟೇಶನಿಗೆ ಬಂದು ಹೋಗಲೇಬೇಕು.

ಸ್ಟೇಶನಿನಲ್ಲಿ ಸರ್ವ ಸಾಧಾರಣ 10ಮಿ ನಿಟಿನಿಂದ 30 ಮಿನಿಟಿನ ವರೆಗೆ ನಿಂತು ಆ ಮೇಲೆ ಪುನಃ ಬಂದ ಹಾದಿ ಹಿಡಿಯಬೇಕು.

ಹೋಗುವಾಗ ಲೋರಿಯು ಎಬ್ಬಿಸಿ ಹೋದ ಧೂಳು ಅದು ಹಿಂದೆ ಬರುವ ವರೆಗೂ ಹಾರಾಡಿಕೊಂಡಿರುತ್ತದೆ.

ಹಿಂದೆ ಬಂದ ಲೋರಿ ಪುನಃ ಎಬ್ಬಿಸಿದ ಧೂಳು ಮತ್ತೊಂದು ಅರ್ಧ ಘಂಟೆಯಾರುತ್ತದೆ.

ಹೀಗೆ ಒಂದು ಲೋರಿ ಸ್ಟೇಶನಿಗೆ ಹೋಗಿ ಬಂದರೆ ಒಂದು ಘಂಟೆ ಆಯುಷ್ಯದ ಧೂಳ ಮೋಡವನ್ನು ನಿರ್ಮಿಸಿತೆಂದು ಭಾವಿಸಬೇಕು.

ದಿನದ 24ಘಂಟೆಗಳಲ್ಲೂ ಲೋರಿಗಳ ಓಡಾಟವಿದೆಯಾದ್ದರಿಂದ ಧೂಳ ಮೋಡಗಳು ಚಿರಂಜೀವಿಗಳಾಗಿವೆ.

ಒಮ್ಮೆ ರಸ್ತೆಬಿಟ್ಟೆದ್ದ ಧೂಳು ಆ ಮೇಲೆ ಪುನಃ ಕುಳಿತುಕೊಳ್ಳುವದೆಂದರೆ ಹಾದಿ ಹೋಕರ ಕಣ್ಣು ಮೂಗು ಬಾಯಿಯೊಳಗೆ.

ತೂಕ ಮಾಡಿದರೆ ಉಡುಪಿ ನಾಗರೀಕರು ರೇಶನ್ ಕಾಳುಗಳಿಗಿಂತ ಹೆಚ್ಚಾಗಿ ರಸ್ತೆ ಧೂಳನ್ನು ಪಡೆಯುತಿದ್ದಾರೆ.

ಅದೂ ಧರ್ಮಾರ್ಥವಾಗಿ!

ಉಡುಪಿ ಮುನಿಸಿಪಾಲಿಟಿಯ ಗಮನ ಕ್ಕಿದು ಬಂದಿಲ್ಲವೆ?

'ಧೂಳ ತೆರಿಗೆ'ಯನ್ನಾದರೂ ಹೊರಿಸಿ ನಾಗರಿಕರಿಂದ ಅದರ ಪ್ರತಿಫಲ ಪಡೆಯಬೇಕು

ಅಥವಾ ಧೂಳನ್ನುಣ್ಣದಂತೆ ನಗರ ಸಭೆಯ ನಿಯಂತ್ರಣ ಬೀಳಬೇಕು.

ಅದಕ್ಕಾಗಿ ಮುಖವಾಡ (ಗ್ಯಾಸ್‌ಮಾಸ್ಕ್)ಗಳನ್ನಾದರೂ ತರಿಸಿ ಉಡುಪಿ ನಾಗರಿಕರ ಮುಖ ಮುಚ್ಚಿಸಬೇಕು.

ನಗರ ಸಭೆಯು ಇವೆರಡರಲ್ಲೊಂದನ್ನು ಮಾಡದಿದ್ದರೆ ಧೂಳಿನ ಆಘಾತವುಂಟಾದೀತು-ಜಾಗ್ರತೆ!

—ಬೀದಿವಾಲ

ಮೈಸೂರು ಶ್ರೀಮನ್ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ ಖಾಸ್ ವೈದ್ಯ ಅಂಬಳೆ ನರಸಿಂಹ ಪಂಡಿತರ ಮನೆತನದ

ಸಂತಾನ ಸಿಂಧೂರ

ತೋಷನವಾಗಿ ಎಷ್ಟು ವರ್ಷವಾದರೇನು? ಬಹಿಷ್ಟ ಸಂಬಂಧದ ಹೊಟ್ಟೆ ನೋವು ಪೂರ್ಣ ಗುಣವಾಗದ ಹೊರತು ಬಂಡಿತ ಸಂತಾನವಾಗುವುದಿಲ್ಲ. ಮೂರು ದಿವಸದಲ್ಲಿ ಗುಣವಾಗಿ, ಜಾಗ್ರತೆ ಸಂತಾನ ಫಲ ಬೇಕಾದರೆ, ಈ ವರ್ಷಗಳಿಂದ ಪ್ರಖ್ಯಾತವಾದ ಮೇಲ್ಕಂಡ ಸಿದ್ಧೌಷಧ ಒಂದು ಸೆಟ್ ಸೇವಿಸಿರಿ, ಸಾಕು. ಕೋಷನವಾದ ೧೫ ೧೬ ವರ್ಷ ಮಕ್ಕಳೆಲ್ಲದವರಿಗೂ ಮಕ್ಕಳಾಗಿವೆ. ಇಂಗ್ಲಿಷ್, ಆಯುರ್ವೇದಿಕ್ ಡಾಕ್ಟರರುಗಳ ಶಿಫಾರಸನ್ನೂ ಅನೇಕ ಪ್ರಶಂಸಾ ಪತ್ರಗಳನ್ನೂ ಪಡೆದಿವೆ.

ಕ್ರಯ: -೧ ಸೆಟ್ 2 ರೂ. ಪ್ಯಾಕಿಂಗ್ ಮತ್ತು ಟಪ್ಪಾಲು ಖರ್ಚು ೧೦ ಆಣೆ ರೂ. ೨ ೧೦.೦ ಮನಿಯಾರ್ಡರ್ ಮಾಡಿರಿ. ಕೂಡಲೇ ರಿಜಿಸ್ಟರ್ ಪಾರ್ಸೆಲ್ ರವಾನೆ. ಹೆ. ವಿ. ಪಿಲ್ಲ ಕಮೀಷನ್ ಏಜೆಂಟರು ಬೇಕಿಲ್ಲ. ಪತ್ರವ್ಯವಹಾರ ಗುಪ್ತ. ಕ್ಯಾಟ್ಲಾಗ್ ಉಚಿತ. ಅಸುಪಾನ ಪತ್ರ ಔಷಧಿ ಸಂಗಡ.

A. Ramaswami Aiyar,
Ambley, Yelandur P. O
(MYSORE Dt.)

ಎ. ರಾಮಸ್ವಾಮಿ ಅಯ್ಯರ್,
ಅಂಬಳೆ, ಯಳಂದೂರು ಪೋಸ್ಟು,
(ಮೈಸೂರು ಡಿಸ್ಟ್ರಿಕ್ಟ್)

ಉಡುಪಿ ಮಧ್ವಮತ

ಶಿವಳ್ಳಿ ಬ್ರಾಹ್ಮಣರ

ಧರ್ಮ ಛತ್ರ

ಇದೇ ತಾ. 8-10-44ರಿಂದ

ರಾಮೇಶ್ವರ ದೇವಸ್ಥಾನದ ಬಡಗು ಬೀದಿಯಲ್ಲಿ ತೆರೆಯಲ್ಪಟ್ಟಿದೆ.

ಎಲ್. ನರಸಿಂಗ ರಾವ್, ಪ್ರೊಪ್ರೈಟರ್.

ಉಡುಪಿ ಬೋರ್ಡಿಂಗ್ ಎಂಡ್ ಲಾಜಿಂಗ್, ಮಧುರ.

Navabharat Book Depot, Udipi South India. Navabharat Book Depot, Udipi South India

ನೋಡಿದರೆ ಬಿಡದಿರುವ ಕೆಲವು ಪುಸ್ತಕಗಳು.

	ರೂ. ಆ.		ರೂ. ಆ.
ಸುಲಭದಲ್ಲಿ ಇಂಗ್ಲಿಷ್ 1-4		ಮೂರು ಪ್ರಹಸನಗಳು	0-14
ಯುವಕರಿಗೆ ಮತ್ತು ವಯಸ್ಕರಿಗೆ		ಸ್ವತಂತ್ರ ಜೀವನೋಪಾಯ	0-3
ಸುಲಭವಾಗಿ ಇಂಗ್ಲಿಷನ್ನು ಅನ್ಯ		ಹೆಂಡತಿ ಗಂಡನಾದರೆ	0-4
ಸಹಾಯವಿಲ್ಲದೆ ಕಲಿಸುವ ಇಂಗ್ಲಿ		● ಕವಿತೆಗಳು	
ಷ್ ಸ್ವಯಂಬೋಧಿನಿ.		ನಗೆನೋಟಗಳು	0-14
●ನಾಟಕಗಳು		ಅನ್ನದೇವರು	
ಪ್ರೇಮವಿಜಯ	0-12	ಮತ್ತು ಇತರ ಕಥೆಗಳು	1-0
ವೇಶಳ್ಳಕ್ಕ	1-4	ಭಾರತೀಯ ಕತೆಗಳು	0-14
ನೃಭಚಾರಿಣಿ ಯಾರು	0-12	ನಂದಾದೀಪ	0-10
ಕುಶಲವ	0-5	ನಾರದಕತೆಗಳು	0-3
ಸಂಶಯ ಪಿಶಾಚಿ	0-8	ಕಂಡೂಕಾಣದ ನೋವಿಗಳು	0-8
ರಂಗಭೂಮಿ	0-8	ನಾರೀಹೃದಯ	0-14
ಪ್ರಕಾಶ	1-12	ಅಂತರಂಗದ ಕತೆಗಳು	0-10
ಧರ್ಮಸಂಗಡಿ	0-4	ಪ್ರೇಮಪ್ರವಾಹ	0-6
ಆರೋಗ್ಯ ಪ್ರತಾಪ	0-12	ಆಹುತಿ ಇತ್ಯಾದಿ ಕತೆಗಳು	0-12
ಪಲ್ಲವಿತ	0-6	ಲೇಪಾಮುದ್ರೆ	0-6
ಪ್ರತೀಕಾರ	0-6	● ಕಾಡಬರಿಗಳು	
ಸೇವಾಪಥ	0-8	ಸನ್ಯಾಸಿಯು ಸೇರಿಗನಿದ್ದಿ	0-8
ಮೂರು ಪ್ರಹಸನಗಳು	0-14	ವೀರಭೂಮಿ	0-2
ಸ್ವತಂತ್ರ ಜೀವನೋಪಾಯ	0-3	ನಪ್ಪಲಾ	0-8
ಹೆಂಡತಿ ಗಂಡನಾದರೆ	0-4	● ಕವಿತೆಗಳು	
● ಕವಿತೆಗಳು		ಕಾವ್ಯಸಾಮ್ರಾಜ್ಯ	0-12
ನಗೆನೋಟಗಳು	0-14	ಮುಗ್ಧಳು	0-3
ಅನ್ನದೇವರು		ಶ್ರೀಮುಖ	1-0
ಮತ್ತು ಇತರ ಕಥೆಗಳು	1-0	ಪುರಂದರದಾಸರ ಕೀರ್ತನೆ	1-0
ಭಾರತೀಯ ಕತೆಗಳು	0-14	ಭಗವದ್ಗೀತಾ (ಮೂಲ-ಸಿಲ್ಕ್ ಬೈಂಡು)	1-4
ನಂದಾದೀಪ	0-10	● ಇತರ ಪುಸ್ತಕಗಳು	
ನಾರದಕತೆಗಳು	0-3	ಮುಂದಿನ ದೇವರು	0-3
ಕಂಡೂಕಾಣದ ನೋವಿಗಳು	0-8	ರಾಷ್ಟ್ರಸಭೆಯ ಇತಿಹಾಸ	2 8
ನಾರೀಹೃದಯ	0-14	ಬಾಲವಾಙ್ಮಯ	0-3
ಅಂತರಂಗದ ಕತೆಗಳು	0-10	ಮಿತಸಂತತಿ	0-8
ಪ್ರೇಮಪ್ರವಾಹ	0-6	ನಿಶ್ಚಿಂತಜ್ಞಾನ	0-8
ಆಹುತಿ ಇತ್ಯಾದಿ ಕತೆಗಳು	0-12	ಪಾಪಪೂರಿತ ಪಟ್ಟಣಗಳು	1-8
ಲೇಪಾಮುದ್ರೆ	0-6	ಚಿಗರು	0-6
● ಕಾಡಬರಿಗಳು		ಗೀತೆಯ ಕೈಗನ್ನಡಿ	0-12
ಸನ್ಯಾಸಿಯು ಸೇರಿಗನಿದ್ದಿ	0-8		

ನವಭಾರತ ಪುಸ್ತಕ ಭಂಡಾರ, ರಿಜಿಸ್ಟರ್ಡ್ ಪಬ್ಲಿಷರ್ಸ್, ಉಡುಪಿ. ದ. ಕ.

ಕೌನ್ಸಿಲ್ ಓಫ್ ಸ್ಟೇಟಿನ : ಚುನಾವಣೆ :

ಪೂರ್ವ ಗೋದಾವರಿಯ ಕೋಕನಾಡಿನ ಶ್ರೀ. ಎಮ್. ತಿರುಮಲರಾಯರನ್ನು ಕೌನ್ಸಿಲ್ ಓಫ್ ಸ್ಟೇಟ್ ಚುನಾವಣೆಗೆ ಕಾಂಗ್ರೆಸ್ ಉಮೇದ್ವಾರಿಯಾಗಿ ನಿಲ್ಲಿಸಲಾಗಿದೆ. ಈ ಜಿಲ್ಲೆಯ ಸರ್ವ ಮತದಾರರೂ ತಮ್ಮ ಮೊದಲನೇ 'ವೋಟು'ಗಳನ್ನು ಅವರಿಗೇನೇ ಕೊಡಬೇಕೆಂದು ವಿಜ್ಞಾಪನೆ. ಮತದಾನ ಪತ್ರಿಕೆಗಳು (Voting-papers) ಇದೇ ಜನವರಿ ತಾ. 20ರ ಸುಮಾರಿಗೆ ಟಪ್ಪಾಲು ದ್ವಾರಾ ಬರಬಹುದೆಂಬ ನಿರೀಕ್ಷೆಯಿದೆ. ಶ್ರೀ. ತಿರುಮಲರಾಯರು ಕೇಂದ್ರ ನ್ಯಾಯವಿಧಾಯಕ ಸಭೆಯ (Central Legislative Assembly) ಸದಸ್ಯರಾಗಿದ್ದು, ರಾಜಕೀಯ ಕಾರಣಗಳಿಂದಾಗಿ ಜೈಲುವಾಸ ಕ್ಕೊಳಗಾದುದರಿಂದ ಅದನ್ನು ಕಳಕೊಂಡಿದ್ದರು ಸಾರ್ವಜನಿಕ ಸೇವೆಯ ಉತ್ತಮ ಪಾಖಲೆಗಳುಳ್ಳ ಶ್ರೀ. ರಾಯರು ನಮ್ಮೆಲ್ಲರ ಪ್ರೋತ್ಸಾಹಕ್ಕರ್ಹರಿದ್ದಾರೆ.

ಎ. ಬಿ. ಶೆಟ್ಟಿ.

ನ್ಯೂಸ್ ವಿಜಂಟರ ಅಕಾಲ ನಿಧನ

ನವಯುಗ, ಅಂತರಂಗ ಮೊದಲಾದ ವಾರ ಪತ್ರಿಕೆಗಳ ಹಾಗೂ ದೈನಂದಿನ, ವಾಕ್ಯೆಕ, ವಾಸ ಪತ್ರಿಕೆಗಳ ತರುಣ ವಿಜಂಟರಾದ ಶ್ರೀ ಸಗ್ರೀ ಗೋಪಾಲ ನಾಯ್ಕರು ಕರುಳ ಕುಳ್ಳವಾರ ಸಡಲು ರೋಗಕ್ಕೆ ತುತ್ತಾಗಿ ಅಕಾಲ ನಿಧನಕ್ಕೆ ಬಲಿಯಾದುದು ತೀಂಬಾ ವಿಷಾದವೆನಿಸುತ್ತದೆ. ಉಡುಪಿಯ ಜನತೆಯಲ್ಲಿ ನ್ಯೂಸ್ ಪೇಪರ್ ವಾಚನಾಭಿರುಚಿಯನ್ನುಂಟು ಮಾಡಿದವರಲ್ಲಿ ಶ್ರೀ ನಾಯ್ಕರು ಪ್ರಥವ: ಶ್ರೇಣಿಗೆ ಸೇರಿದವರು. ಮೃತರ ಆತ್ಮಕ್ಕೆ ಚಿರ ಶಾಂತಿಯುಂಟಾಗಲೆಂದು ಭಗವಂತನನ್ನು ಪ್ರಾರ್ಥಿಸುವೆವು.

'ಹಿಕ್‌ಮತ್' ಯಾವ ಭಾಷೆ, ಯಾವುದರ ಸರಿಯಾದ ಹೆಸರು, ಎಂಬ ಪದ ಸಂಶೋಧನೆಗೆ ನಾನಿಲ್ಲಿ ಹೋಗುವದಿಲ್ಲ ನಸ್ಸ ಅಂದಾಜಿನಂತೆ ಅದು ಸಣ್ಣ ಪುಟ್ಟ ಯುಕ್ತಿಗಳ ನಾಮಧೇಯ. ಶಬ್ದಕೋಶದಲ್ಲಿ ಏನಿದ್ದರೂ ಊರಲ್ಲಿ ಅದಕ್ಕಿರುವ ಅರ್ಥ ಇಷ್ಟೆ. ಆದ್ದರಿಂದಲೇ ನಮ್ಮೂರ ಹಿರಿಯನನ್ನು ಎಲ್ಲರೂ 'ಹಿಕ್‌ಮತ್ ಹಿರಿಯ' ಎನ್ನುತ್ತಾರೆ.

ಎಲ್ಲರಲ್ಲೂ ಹಿಕ್‌ಮತ್ ಇರುವದಿಲ್ಲ. ಆ ಪೈಕಿ ಕೆಲವರಿಗದು ಗೊತ್ತಿರುವದಿಲ್ಲ; ಇನ್ನು ಕೆಲವರಿಗದರ ಪ್ರಯೋಗದ ಇಚ್ಛೆ ಇಲ್ಲ. ಆದರೆ ಈ ಕಾಲದಲ್ಲಿ ಆಷ್ಟು ಅಮೂಲ್ಯವಾದ ಒಂದು ಗುಣ, ಇಲ್ಲವೇ ಉಪಕರಣ ಬೇರೊಂದಿಲ್ಲವೆಂದು ನನ್ನ ಅಭಿಪ್ರಾಯ. ಹಿಕ್‌ಮತ್ ಒಂದಿದ್ದರೆ ನಿಮ್ಮ ಬೆನ್ನ ಹಿಂದೆ ನೂರು ಜನರಿದ್ದಂತೆ; ಹಿಕ್‌ಮತ್ ತುಂಬಿದ್ದರೆ ನಿಮ್ಮ ಜೊಕ್ಕೆಸವೇ ತುಂಬಿದ್ದಂತೆ; ಆರ್ಥಾತ್ ಹಿಕ್‌ಮತ್ ಇದ್ದರೆ ನೀವೂ 'ಹಿರಿಯ'ರೇ.

ಜೈ ಪ್ರಕಾಶ್ ನಾರಾಯಣರೇ ಆದಿಯಾಗಿ ಕೆಲವು ಕಾಂಗ್ರೆಸಿಗರು ಜೈಲಿನಿಂದ ತಪ್ಪಿಸಿಕೊಂಡಿದ್ದರು. ಅವರನ್ನು ಜೈಲಿನೊಳಗೆ ಸೇರಿಸಿದುದು ಧೈರ್ಯ, ದರ್ಪ, ಅಭಿಮಾನ ಇತ್ಯಾದಿ ಗುಣಗಳಾಗಿರಬೇಕು. ಆದರೆ ಜೈಲಿನಿಂದ ತಪ್ಪಿಸಿದುದು ಅವರ ಹಿಕ್‌ಮತ್. ಲೋಕಪ್ರಿಯನಲ್ಲದ್ದ ಕೈದಿಯೊಬ್ಬನು, ಪೋಲಿಸ್ ಪಹರೆಯಿಂದ ಮುಖ ಪ್ರಕ್ಷಾಳನಕ್ಕಾಗಿ ಹೊರತರಲ್ಪಟ್ಟಾಗಲೇ ಕಾಣೆಯಾಗಿದ್ದ-ಹಿಕ್‌ಮತಿನಿಂದ. ಹೆಚ್ಚೇಕೆ, ಐಶ್ವರ್ಯವೂ ಆವಘಡದಂತೆ ಅಕಸ್ಮಾತ್ ಒಬ್ಬನಿಗೊಮಗಿದ್ದರೆ ಅದು ಹಿಕ್‌ಮತಿನಿಂದ. ಆಡಾಯವಾಗುವದು, ಅಪಾಯ ಹೋಗುವದು, ಆಲೋಚನೆ ಸಾಗುವದು-ಎಲ್ಲವೂ ಹಿಕ್‌ಮತಿನಿಂದಲೇ.

ಹಿಕ್‌ಮತಿನಿಂದ ಹೀಗಾಗುವದು ಸುಲಭ; ಆದರೆ ಹಿಕ್‌ಮತ್‌ವಾಲರಾಗುವದು ಸುಲಭವಲ್ಲ. ಸಾಲದುದಕ್ಕೆ ಹಿಕ್‌ಮತಿಗೆ ಪ್ರತಿವಿರುದ್ಧ ಗುಣವಾದ ದುರಭಿಮಾನವಿ

ಮನುಷ್ಯ—ಮರ್ಜಿ
ಸ್ವಭಾವ ಚಿತ್ರಗಳು

೭. ಹಿಕ್‌ಮತ್ ಹಿರಿಯ

(ಚಿತ್ರಿಸುವವರು.—ಮಟ್ಟಿಬರ್).

ದ್ದವರ ಸಂಖ್ಯೆಯೇ ನಮ್ಮಲ್ಲಿ ಅಧಿಕ ದುರಭಿಮಾನವಿದ್ದಲ್ಲಿ ಜನ ಜಂಘಪಿರಬೇಕು; ಮಾತು ಕೃತಿಗಳಿಗೆ ಕೃತಕಾಲಂಕಾರವಿರಬೇಕು ಹಿಕ್‌ಮತ್ ಇದ್ದಲ್ಲಿ ವಿನಯ (ಖಂಡಿತ ಅಧವಾ ಕಪಟ) ವಿದೆ; ವಿಧೇಯತ್ವವೂ ಇದೆ ಮೊದಲನೇ ವರ್ಗದ ಆತಿ ಗರ್ವಿಗಳಿಗೆ ಇವೆಲ್ಲಾ ಅಲ್ಪ ಗುಣಗಳಾಗಿ ಕಾಣುತ್ತವೆ. ಆದ್ದರಿಂದಲೇ ಸ್ಥಿತಿಯೊಂದು ಕ್ಷೋತ್ರವೆಲ್ಲಿಯೂ ಅಭಿಮಾನಕ್ಕೂ ಹಿಕ್ ಮತಿಗೂ ಖಿಡಾಮುಡಿ; ಸ್ಪರ್ಧೆಯೊಂದರಲ್ಲೂ ಹಿಕ್‌ಮತೇ ಗೆಲ್ಲುತ್ತದ. ಆದರೆ ಸೋತಂತೆ ನಟಿಸಿ ಗೆಲ್ಲುತ್ತದಾದ್ದರಿಂದ ಅದರ ವಿಜಯದಲ್ಲಿ ಆಕರ್ಷಣೆಯಿರುವದಿಲ್ಲ. ಆಕರ್ಷಣೆಯೂ ಜಂಭ, ಅಬ್ಬರಗಳ ಸಾಲಿನದಾದುದರಿಂದ ಹಿಕ್‌ಮತ್‌ವಾಲನಿಗದು ಬೇಕಾಗಿಲ್ಲ ಆದ್ದರಿಂದ ಇದಿರುವಾದಿಗಳ ದೃಷ್ಟಿಯಲ್ಲಿ ಹಿಕ್‌ಮತ್‌ವಾಲನು ಕಡಿಮೆಯವನೇ-ಆದರೆ ಸದಾ ವಿಜಯಿ ಅವನೊಬ್ಬನೇ. ಹಿಕ್‌ಮತ್‌ವಾಲರಲ್ಲಿ ಅಭಿಮಾನವಿದೆ--ಅಭಿಮಾನಿಗಳಲ್ಲಿ ಹಿಕ್‌ಮತ್ ಇದೆ—ಒಟ್ಟಾರ್ಥ ಆಗಿ ಕ್ಷೇತ್ರದಲ್ಲಿ ಉಪಯೋಗಿಸಲ್ಪಡುವದು ಅಭಿಮಾನಿಯ ಅಭಿಮಾನ; ಹಿಕ್‌ಮತ್‌ವಾಲನ ಹಿಕ್‌ಮತ್ ಮಾತ್ರ! ಅಭಿಮಾನಿಯು "ಏ! ಇಲ್ಲಿ ಬಾರೋ" ಎಂದಾನು; "ಇಲ್ಲಿ ಬಾವ್ವ" ಎನ್ನುತ್ತಾನೆ ಹಿಕ್‌ಮತ್‌ವಾಲಾ. ಈ ಪೈಕಿ ಆಜ್ಞಾಪಿಸಿದವನು ತನ್ನ ಬೆಲೆಯನ್ನು ಹೆಚ್ಚಿಸಿಕೊಂಡುದರಿಂದ ತಾನು ಕರೆದವನಿಗೆ ಅದಕ್ಕನುಗುಣವಾದ ಪ್ರತಿಫಲವನ್ನೇ ಕೊಡಬೇಕಾಗುತ್ತದೆ. ವಿಜ್ಞಾಪಿಸಿ ಕರೆದವನು ವಿನಂತಿ ರೂಪದಲ್ಲೇ ತ್ರಾಸು ಪ್ರತಿಫಲ ನಲ್ಲಿಸಿದ್ದರಿಂದ ಉಳಿದಂಶವನ್ನೇ ಕೊಟ್ಟರಾಯಿತು ಸಜ್ಜು ದೊಡ್ಡ ಎಲ್ಲಾ ಕಾರ್ಯಗಳಲ್ಲೂ ಅಭಿಮಾನಿಯ ನೋಲು-ಹಿಕ್‌ಮತ್‌ವಾಲನ ಗೇಲು ಎಂದರೆ ಹೀಗೆಯೇ.

ಹಿಕ್‌ಮತ್ ಒಂದು ಸ್ವಭಾವವೋ ಕಲೆಯೋ? ಅದು ರವೀಂದ್ರರ ಕವಿತಾ ಶಕ್ತಿಯಂತೆ, ರವಿವರ್ಮನ ಚಿತ್ರಕಲೆಯಂತೆ, ಹುಟ್ಟು ಕಲೆಯೆಂಬುವಕ್ಕೆ ಹಿಕ್‌ಮತ್ ಹಿರಿಯನೊಂದು ನಿದರ್ಶನ. ಧೈರ್ಯ ಸ್ಥೈರ್ಯ, ಅಭಿಮಾನ, ಆಡಂಬರಗಳನ್ನು ನಿಜ ಮತ್ತು ಕೃತಕ ಎಂಬ ವರ್ಗ ಭೇದಗಳಿಲ್ಲ. ಆದರೆ ಹಿಕ್‌ಮತಿಗೆ ಸ್ಪಷ್ಟತೆ ಒಂದು ಬೆಲೆಯೆಂಬುದಿಲ್ಲವಾದ್ದರಿಂದ ಅದರ ಸುಳ್ಳು ಪ್ರದರ್ಶನವೆಂಬುದಿಲ್ಲವೇ ಇಲ್ಲ. ಅದು ಸಹಜ ಗುಣ ಅಥವಾ ಹುಟ್ಟುಕಲೆಯಾಗಿದೆ, ನಮ್ಮ ಹಿಕ್‌ಮತ್ ಹಿರಿಯ ಅಂತಹ ಕಲಾವಿದ ಸೂಕ್ಷ್ಮ ಬುದ್ಧಿಯವರು-ಒಂದು ಕಾರ್ಯ ಮಾಡಬೇಕಾದರೆ ನಾಲ್ಕೂ ನಿಟ್ಟನ್ನು ನೋಡಿಕೊಳ್ಳತಕ್ಕವರು-ಕಾರ್ಯ ಚತುರರು—ತಾವೂ ಹಿಕ್‌ಮತ್‌ವಾಲರೆಂದು ಹಗ್ಗಜಾರದು ನೀವು ಬೇರೆ-ಹಿಕ್‌ಮತ್ ಹಿರಿಯನ ವರ್ಗವೇರೆ.

× × ×

ನಮ್ಮೂರ ಗೌತ ಜೆಂಕಯ ಚೆಂತಿನೆಂತಹ ಮನುಷ್ಯ ಅವನ ಹೆಸರು ಹೇಳಿ ನಮ್ಮೂರವರು 'ಕಡ್ಡಿಹಾಕು'ವದಿದೆ ಅಂತಹ ಕಾರ್ಬಾರಿಯು, ಹಿರಿಯನು ಕೂಡಲೇ ಬರತಕ್ಕುದ್ದೆಂಬ ಅಪ್ಪಣೆಯೊತನೆ ಉಗ್ರಾಣಿಯನ್ನು ಕಳುಹಿಸಿಕೊಟ್ಟಿದ್ದ. ಉಗ್ರಾಣಿ ಮನೆಗೆ ಬರುವಾಗ ಹಿಕ್‌ಮತ್ ಹಿರಿಯ ತನ್ನ ಹೊಸ ನೆಂಟರೊಡನೆ ಮಾತಾಡುತ್ತಿದ್ದ. ಗೌಡನ ಉಗ್ರಾಣಿಗೆ ಗೌಜಿ ಜಾಸ್ತಿ. "ಏ! ಗೌಡರ ಅಪ್ಪನಯಾಗಿದೆ-ಸೀನು ಗಲೇ ಬಂದು ಅವರನ್ನು ಕಾಣಬೇಕಂತೆ" ಎಂದ. "ಗೌಡರ ಮನೆಗೂಡು" ಎಂದು ಅವನ ಅಂತರ್ವಾಣಿ ಕೂಗುತ್ತಿತ್ತು. ಅವನನ್ನಾರೋ ಹಿಡಿದೆಬ್ಬಿಸಿದಂತಾಗಿತ್ತು. ಆದರೆ ಹೊಸನೆಂಟರ ನಡುವೆ ಕುಳಿತಿದ್ದಾನೆ; ತನ್ನನ್ನೀತಿ ಅಜ್ಞಾಪಿಸುವ ಜನರು ಊರಲ್ಲಿದ್ದಾರೆ ಎಂಬುದು ಅವರಿಗೆ ತಿಳಿಯುವಂತಾಯಿತು; ತ[illegible] ಸ್ವಾಭಿಮಾನ ಹಿರಿಯನಲ್ಲಿ ಮೂಡತು. ಅವನ ಮಾನವುಳಿಸಿಕೊಡುವ ಹಿಕ್‌ಮತ್ ಮುಂದೆ ಬಂತು. "ನೀನೀಗ ಎಲ್ಲಿ ಹೊರಟವ" ಎಂದು ಉಗ್ರಾಣಿಯನ್ನು ಮೊದ

(ಉಳಿದ ಭಾಗ ನೋಡಿರಿ)



A vigorous programme of expansion has been planned throughout Madras Presidency and it will pay those who desire to take Life Insurance as a career to write to

M SUNDERRAM SHETTY Esq., Agency Manager, Warden House Sir Pherozshah Mehta Road, Fort, Bombay

or to

M Rama Rao Esq B A B L
Branch Manager
Post Box No 1525
79 A-B Sembudoss St.
G T Madras

B Sachidanand Hegde Esq.,
Branch Secretary,
Hampankatta,
Mangalore

N 50

ಜಾಹೀರ ನೋಟೀಸು

ಕಾಪು ಕೆನರಾ ಜನರಲ್ ಪ್ರೊವಿಜನ್ ಸ್ಟೋರಿನ ಮ್ಹಾಲಕರಾದ ಕಾಪು ಮಂಜುನಾಥ ಮುದ್ದಗಿರಿ ಶ್ಯಾನುಭಾಗ 1 ಮತ್ತು ಉಳಿಯಾರಗೋಳಿ ಗ್ರಾಮದ ಮಾಧವ ಚರ್ಡಪ್ಪ ಪ್ರಭು ಕೊಡಾ 2 ಜನರಿಗೆ—

ಉಳಿಯಾರಗೋಳಿ ಗ್ರಾಮದ ಶೀನ ಶೆಟ್ಟಿಯು ತಿಳಿಯಪಡಿಸುವದೇನಂದ್ರೆ—

ಇವೇ ಕಳಿದ ತಾರೀಕು 27-12-44ರಲ್ಲು ಓಪುಬರಹ ಗೊತ್ತಿಲ್ಲದ ನನ್ನ ಮಾವ ಬಾಡ ಶೆಟ್ಟಿಯು ಕೆರ್ಸನೆಜ್ಜ ಕೊಂಡುಹೋಗುವರೆ ಬಂದಾಗ ನೀವು ಒಂದು ಖಾಲಿ ಕಾಗದದ ಮೇಲೆ ಸಧ್ರಿಯವನ ಹೆಬ್ಬೆಟ್ಟನ್ನು ಬಲತ್ಕಾರದಿಂದ ಪಡೆದಿದ್ದೀರಾಗಿ ನನ್ನತಿಳಂವಳಿಕೆಗೆ ಬಂದುದರಿಂದ ನೀವು ಯಾವುದೊಂದು ಮರುದ್ದೇಶದಿಂದ ಸದ್ರಿ ಹೆಬ್ಬೆಟ್ಟಿನ ಉಪಯೋಗಮಾಡಿಕೊಂಡು ತೊಂದ್ರೆಕೊಡಲು ಇಚ್ಛಿಸಿದಲ್ಲಿ ಯಾವ ವಿಧದಲ್ಲಿಯೂ ನಮಗೆ ಸಿಂಧುವಾಗತಕ್ಕದಲ್ಲವೆಂದೂ ನೀವು ಏನಾಪರೂ ಈ ಕುರಿತು ಮುಂದ್ರುವಲ್ಲಿ ಆದು ನನಗೆ ಬಾಧಿಸತಕ್ಕದಲ್ಲವೆಂದೂ ನಿಮಗೆ ಈ ಮೂಲಕ ತಿಳಿಸೋಣಾಗಿಯದೆ. ಇತ್ತಲಾಗೆ 2 ವರ್ಷ ಆಗ್ಯಾತು ಯೆಂತೆ ಕೊಂಡುಹೋಗುವಾಗ ಈ ಪ್ರಕಾರ ಹೆಬ್ಬೆಟ್ಟು ಕೊಟ್ಟವ್ವಾಗಲೀ ಕಡವ ಪ್ಪಾಗಲೀ ಇರುವದಿಲ್ಲ. ನಮಗೆ ನಿಮ್ಮ ಸ್ಟೋರಿನಲ್ಲಿ ಕಡ ವಹಿವಾಟಾಗಲೀ ಇರುವದಿಲ್ಲ ಎಂಬ ಸುದ್ದಿ ಈ ಮೂಲಕ ತಿಳಿಸಿರುತ್ತೇನೆ.

ಶೀನ ಶೆಟ್ಟಿ ರುಜು.

ಕರ್ನಾಟಕದ ಪ್ರತಿಭಾಗದಲ್ಲಿಯೂ, ಮದ್ರಾಸು, ಬೊಂಬಾಯಿ ಮೊದಲಾದ ನಗರಗಳಲ್ಲಿಯೂ ಅಭಿನಯಿಸಲ್ಪಟ್ಟು ಜನಮೆಚ್ಚಿಗೆ ಪಡೆದ

ಸಭಾವಿಜಯ

ಶ್ರೀ ಕೆ ಕೆ ಶೆಟ್ಟರಿಂದ ರಚಿಸಲ್ಪಟ್ಟ ಅತ್ಯಾಧುನಿಕ ಸಾಮಾಜಿಕ ನಾಟಕ.

ಕೆಲವೇ ಪ್ರತಿಗಳು ಉಳಿದಿವೆ ... . ಬೆಲೆ 0—12—0

0—11—0 ಸ್ಟ್ಯಾಂಪು ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಲಾಗುವುದು

ಪ್ರತಿಗಳು ಸಿಗುವ ಸ್ಥಳ,—

ನವಭಾರತ ಪುಸ್ತಕ ಭಂಡಾರ, ಉಡುಪಿ.

To Greet You:
For the past
REMEMBRANCE
For the present
KIND THOUGHTS
For the future
GOOD WISHES
From
The Canara Banking Corporation, Ltd.
(Incorporated in British India with Limited Liability)
ESTD 1906
HEAD OFFICE UDIPI.

ಉಡುಪಿ, ಗುರುವಾರ ೪-೧-೧೯೪೨

ಕನ್ನಡ ಸಮ್ಮೇಲನಗಳು

ಕನ್ನಡಿಗರ ಸ್ವಭಾವಸಿದ್ಧ ಜಡತ್ವವನ್ನು ದಶಂಬರಾಂತ್ಯದಲ್ಲಿ ಸೇರಿದ ಸಮ್ಮೇಲನಗಳ ಕನ್ನಡದುಂದುಭಿಯು ಒಮ್ಮೆಗೆ ನಿವಾರಿಸಿತೆನ್ನಬೇಕು ಕೇಂದ್ರ ಎಸೆಂಬ್ಲಿ ಸದಸ್ಯರಾದ ಶ್ರೀ ಕೆ ಬಿ ಜಿನರಾಜ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಧಾರವಾಡದಲ್ಲಿ ಸೇರಿದ್ದ ೧೯ನೇ ಕರ್ನಾಟಕ ಏಕೀಕರಣ ಪರಿಷತ್ತು ಪ್ರಾಂತ್ಯರಚನೆಯ ಶಪಥ ಧರಿಸಿಯೇ ಜದರಿದೆ. ಪ್ರೊ ಕೆ ಬಿ ಬಸವನಾಳರ ಅಧ್ಯಕ್ಷತೆಯಲ್ಲಿ ರಬಕವಿಯಲ್ಲಿ ಸೇರಿದ್ದ ೩೮ನೇ ಕನ್ನಡ ಸಾಹಿತ್ಯ ಸಮ್ಮೇಲನವು ಕನ್ನಡಕ್ಕೆ ತಾಗಿರುವ ಕಂಟಕಗಳ ಮೇಲೆ ನಿರ್ದಾಕ್ಷಿಣ್ಯವಾಗಿ ಕೈಮಾಡಿದೆ. ಎರಡು ಸಮ್ಮೇಲನಗಳೂ ಕನ್ನಡ ನಾಡಿನ ಮತ್ತು ಕನ್ನಡ ಭಾಷೆಯ ಅಭಿವೃದ್ಧಿಯನ್ನು ಸಾಧಿಸುವ ಕಾಲಯೋಗ್ಯವಾದ ಮತ್ತು ಕಾರ್ಯಕಾರಿಯಾಗಬಲ್ಲ ಗೊತ್ತುವಳಿಗಳನ್ನು ಮಾಡಿನೆಯೆಂದು ಅಭಿಮಾನದೊಡನೆ ಹೇಳಬಹುದು ಅಧ್ಯಕ್ಷರಿಬ್ಬರೂ ಆಯಾಯ ಸ್ಥಾನಕ್ಕರ್ಹರೇ ಕನ್ನಡ ಏಕೀಕರಣವನ್ನು ತತ್ವತಃ ವಿರೋಧಿಸುವವರಾರೂ ಇಲ್ಲ. ಭಾಷಾವಾರು ಪ್ರಾಂತ್ಯರಚನೆಯಾಗಕೂಡದಂದು ಹೇಳಿಬವರೇ ಇಲ್ಲ ಆದ್ದರಿಂದ ಆದೀಗ ತರ್ಕಾಸ್ಪದ ವಿಷಯವಾಗಿಲ್ಲ ಆದರೆ ಅದು ಹೇಗಾಗಿ ನಿರ್ಮಾಣಗಳ್ಳಬೇಕಾದ್ದರಿಂದ ಹೊಸ ಹುಗುಪು ತೋರಬೇಕು. ಹೊಸ ಸಹಸ ನಡೆಯಬೇಕು. ಇಂತಹ ನಿರ್ಣತೆಯು ನಮ್ಮ ಇಂದಿನ ಆಡಳಿತದ ಸ್ವಭಾವಕ್ಕೆ ವಿರುದ್ಧವಾದ್ದರಿಂದ ಅದು ತಾನಾಗಿ ಪ್ರಾಂತ್ಯರಚನೆ ಮಾಡಿಕೊಡುವಂತಿಲ್ಲ ಅದನ್ನು ಮಾಡಿಸಿಕೊಳ್ಳುವ ಆತುರೋತ್ಸಾಹ ಕನ್ನಡಿಗರಲ್ಲೀಗ ಬೇಕಾಗಿದ ಇಂದಿನ ಅಧ್ಯಕ್ಷರು ಅಂತಹ ಕಾರ್ಯೋತ್ಸಾಹಿಗಳು; ಅವರು ಕನ್ನಡಿಗರನ್ನು ಹುಂದುಂಬಿಸಬಲ್ಲರು ಮೇಲಾಗಿ ಪ್ರಾಂತ್ಯವನ್ನು ಕನಸಗಳ ಮೂಲಕ ಕಟ್ಟುವ ಕಾಲವೀಗ ಕಳೆದಿದೆ, ಕಾರ್ಯರೂಪವೇ ಬೇಕಾಗಿದೆ ಕಾರ್ಯಕ್ಷೇತ್ರದ ಕೈಯಾಗಿ ಮುಂಭಾಗದಲ್ಲಿರುವ ಶ್ರೀ ಹೆಗ್ಡೆಯವರು ಕಾರ್ಯಕಾರೀ ಮಂಡಲಿಯ ನೆರವಿನಿಂದ, ಕನ್ನಡಿಗರೆಲ್ಲರ ಬೆಂಬಲ ಪಡೆದು ಏಕೀಕರಣ ಚಳವಳಕ್ಕಿಂತಹ ಆಕಾರ ಕೊಡಬಲ್ಲರೆಂದು ಆಶಿಸಬಹುದು ಸಾಹಿತ್ಯ ಕ್ಷಿಸಮ್ಮೇಲನಾಧ್ಯಕ್ಷ ಪ್ರೊ. ಬಸವನಾಳ್ ಪಾಂಡಿತ್ಯವನ್ನು ಅವರ ಅಧ್ಯಕ್ಷ ಭಾಷಣವೂ ಪ್ರದರ್ಶಿಸಿದೆ ಸಾಹಿತ್ಯದ ಸರ್ವಾಂಗಗಳನ್ನು ಅವರು ವಿದ್ವತ್ಪೂರ್ವಕ ವಿಶದೀಕರಿಸಿ ಉಪಯುಕ್ತ ಸಲಹೆಗಳನ್ನು ತ್ತಿದ್ದಾರೆ. ಏಕೀಕರಣ ಸಂಘಕ್ಕೆ ಬಡೆದಿದ್ದ ಅಲಸ್ಯ ಸಾಹಿತ್ಯ ಸಮ್ಮೇಲನಕ್ಕೆ ತಾಗಿರಲಿಲ್ಲ ನವರಾಜ್ಯ ಪಟನಯೇ ಜೀವವಮ್ಮಿ ಪ್ರಶ್ನೆಯಾಗಿದ್ದ ಅವಧಿಯಲ್ಲಿ ವರುಷಕ್ಕೊಮ್ಮೆ ಸೇರುವದಕ್ಕೂ ಸಂಘಕ್ಕ ಮಸ್ಕಾರ ಎಚ್ಚರಗೊಂಡುದಿಲ್ಲ ಸಾಹಿತ್ಯ ಸಮ್ಮೇಲನವು ಅಂತಹ ತಪ್ಪನ್ನು ಮಾಡಿಲ್ಲ ಸದ್ಯ ಸ್ಥಿತಿಯಲ್ಲಿ ಹೆಚ್ಚಿನ ಹೊಣೆಯಿರುವುದು ಏಕೀಕರಣ ಸಂಘದ ಹೆಗಲನೇಲೆ ಎಂದು ನಮ್ಮ ಅಭಿಪ್ರಾಯ. ಸ್ವತ್ಯೇಕ ಪ್ರಾಂತ್ಯರಚನೆಯ ಪ್ರಶ್ನೆ ಎಲ್ಲಕ್ಕಿಂತ ಮುಖ್ಯವಾದುದು ಆ ಕುರಿತು ನಡೆಯಬೇಕಾದ ಪ್ರಯತ್ನಕ್ಕಾಂತೂ, ನವ ರಾಜ್ಯ ಘಟನೆಗೆ ನವಸೂಸ ತುಂಬಿದಂತಿರುವ ಈ ಕಾಲವೇ ಸುಸಂದರ್ಭ. ಆದ್ದರಿಂದ ಏಕೀಕರಣ ಸಂಘವು ಧಾರವಾಡದಲ್ಲಿ ತನ್ನದೊಂದು ಉತ್ಸವ ನಡೆಸಿ ಮುಗಿಸಿದಂತಾಗಬಾರದು, ತನ್ನ ಉದ್ಯೋಗವಾರಂಭಿಸಿತೆಂದಾಗಬೇಕು. ಏಕೀಕರಣದ ಪತತ ಪ್ರಯತ್ನ ನಡೆಯಬೇಕು ಅಂತಹ ಪ್ರಯತ್ನವು ಪ್ರಪಹಿಸುವ ಕಾಲವೆಗಳ ನಿರ್ಮಾಣ ಪರಿಷತ್ತಿನ ಲ್ಲಾಗಿದೆ-ಕಾರ್ಯಕಾರೀ ಗೊತ್ತುವಳಿಗಳವೆ ಆದರೆ ಗೊತ್ತುವಳಿ ನಿರ್ಮಾಣವು ಬುದ್ಧಿಶಕ್ತಿಯ ಕೆಲಸ, ಆವುಗಳನ್ನು ಉಪಯೋಗಕ್ಕೆ ಹಚ್ಚಬೇಕು ಕಾರ್ಯಶಕ್ತಿಯಿಂದಲೇ ಕನ್ನಡಿಗರಲ್ಲಿ ಆ ಕಾರ್ಯಶಕ್ತಿಯನ್ನು-ಕಾದುಟೆದ ಶಕ್ತಿಯನ್ನು-ಕಾಣುವಂತಾಗಬೇಕು. ಏಕೀಕರಣ ಸಂಘವು ಆ ಶಕ್ತಿ ನಿರ್ಮಾಣಮಾಡಬೇಕೆಂದು ಈ ಸಂದರ್ಭದಲ್ಲಿ ಒತ್ತಿ ಹೇಳಬೇಕಾಗಿದೆ ಕರ್ನಾಟಕ ಪ್ರಾಂತ್ಯ ರಚನೆಯನ್ನೊಪ್ಪದ ಯಾವ ನವ ರಾಜ್ಯಘಟನೆಯನ್ನೂ ಅಂಗೀಕರಿಸುವಂತಿಲ್ಲ ಎಂಬ ಕಠಿಣ ನಿರ್ಧಾರವೂ, ಅಂಧ್ರ ಮಹಾರಾಷ್ಟ್ರ ವಿಶ್ವವಿದ್ಯಾಲಯಗಳು ಕನ್ನಡ ಭಾಗಗಳನ್ನೂ ತಮ್ಮೊಳಗೆ ಸೇರಿಸಿಕೊಂಡಿರುವದನ್ನು ಖಂಡಿಸುವ ಕ ಸಾ ಸಮ್ಮೇಲನದ ಪ್ರಮುಖ ಗೊತ್ತುವಳಿಯೂ ಕಾಲೋಚಿತವಿವೆ. ಕೊನೆಯದಾಗಿ ಒಂದು ಮಾತು ದೂರದೂರದಲ್ಲಿ ಹರಿ ಹಂಚಾಗಿ ಬಿದ್ದಿರುವ ಕನ್ನಡಿಗರಲ್ಲಿ ಅಖಿಲ ಕರ್ನಾಟಕ ಭಾವನೆಯೆಂದರೂ ಹೂಳೆಯವದು ಇಂತಹ ವಾರ್ಷಿಕೋತ್ಸವ ಸಂದರ್ಭಗಳಲ್ಲಿ ಮಾತ್ರ 'ನಾವೆಲ್ಲಾ ಒಂದೇ ಎನ್ನುವ ಸಂದರ್ಭಗಳು ವರುಷದಲ್ಲಿ ಎರಡ ಬಾರಿ ಬರುವ ಸಂಪ್ರದಾಯವಿಲ್ಲ ಅಖಿಲ ಕರ್ನಾಟಕ ಸ್ವರೂಪವಿದ್ದು, ಸಂದುಮೂಲೆಗಳವರನ್ನೂ ಆಕರ್ಷಿಸುವ ಸಭೆ ಸಮಾರಂಭಗಳನ್ನು ಆಗಾಗ ನಡೆಸ ವದು ಅಸಾಧ್ಯವೆ? ಸಾಮೂಹಿಕವಾಗಿ ಅಲ್ಲವಾದರೂ ಪ್ರತಿನಿಧ್ಯ ರೂಪದಲ್ಲಾ ಒಂದಲ್ಲೊಂದು ಉತ್ಸವವು ಆಗಾಗ ಅಲ್ಲಲ್ಲಿ ನಡೆಯುವದು ಸಾಧ್ಯ ಮತ್ತು ಅಗತ್ಯ. ಇದಕ್ಕೆ ಕನ್ನಡ ಸಾಹಿತ್ಯ ಪರಿಷತ್ತು ಮನಸ್ಸು ಮಾಡಬೇಕು

ಮಂಗಳೂರು

ಪಾಂಡಿ—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಹಾತ್ಮಾ ಗಾಂಧಿಯವರ ಪಾದಿ ಮತ್ತು ರ ಜನಾತ್ಮಕ ಕಾರ್ಯಗಳ ಹೊಸ ಕೇಂದ್ರೀಕರಣ ಯೋಜನೆಯ ಪ್ರಚಾರಕ್ಕಾಗಿ ಪ್ರವಾಸ ಮಾಡಿದ ಕರ್ನಾಟಕ ಚರಖಾ ಸಂಘದ ಕಾರ್ಯವರ್ಶಿಗಳಾದ ಶ್ರೀ ಕೆ ಎ ವೆಂಕಟ್ಟಿ ಮಯ್ಯನವರು ಕಳೆದ ತಾ ೨೩ರಲ್ಲು ಮಂಗಳೂರಿಗ ಬಂದು ಮರುದಿನ ಪಾಂಡಿಶ್ರೇಷ್ಠಿಗಳ ಸಭೆ ಕೂಡಿಸಿ ಭಾಷಣ ಮಾಡಿದರು ಬಂಟ್ವಾಳ ಪಾಂಡಿ ಕೇಂದ್ರವು ಸುಂದರವಾದ ಕೆಲಸವನ್ನು ನಸಸುತ್ತಿದಯೆಂಬ ಸಪಭಿಪ್ರಾಯವನ್ನು ತ್ತರು ದ ಕ ಜಿಲ್ಲೆಗೆ ಶ್ರೀ ಎಜ್ ನಾರಾಯಣ ರಾಯರು ಪಾಂಡಿ ಪ್ರಚಾರಕರಾಗಿ ಸೇವಿಸಲ್ಪಟ್ಟರುವರೆಂದು ತಿಳಿದು ಬರುತ್ತದೆ

ಎಸ್ ಆರ್ ಮಂಗಳೂರು ಎಸ್, ಹೋಮಿನ ಹಳೆ ನಿವಾಸಿಕರ ಸಭೆ—ಯು ತಾ ೩೧ರಲ್ಲಿ ಶ್ರೀ ರಂಗನಾಥ ಪೂಂಜರ ಅಧ್ಯಕ್ಷತೆಯಲ್ಲಿ ಜರಗಿದ ನರ್ಷದ ಆಯವ್ಯಯದ ಮಂಜೂರಾತಿ ಮೊದಲಾದ ಕಾರ್ಯ ಕ್ರಮಗಳು ನೆರವೇರಿದವು

ವಿಜಯಾ ಬ್ಯಾಂಕಿನ ಮಹಾ ಸಭೆಯು—ತಾ ೩೧ರಲ್ಲಿ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಶ್ರೀ ಬಿ ಮಂಜಯ್ಯ ಹೆಗ್ಡೇರ ಅಧ್ಯಕ್ಷತೆಯಲ್ಲಿ ಜರಗಿ ಲೆಕ್ಕ ಪತ್ರ ಮಂಜೂರು ಮಾಡಲ್ಪಟ್ಟು ಶೇಕಡಾ 7ರಂತೆ ಲಾಭಾಂಶ ಹಂಚಬೇಕೆಂದಾಯಿತು ಪ್ರೆರೆಕ್ಟರಂ ಸಂಖ್ಯೆಯನ್ನು ಕಡಿಮ ಮಾಡಬೇಕೆಂದು ಶ್ರೀ ಕೆ ಸಜಾನಂದ ಹೆಗ್ಡೇರು ಮಂಡಿಸಿದ ಸೂಚನೆಯ ಕುರಿತು ಚರ್ಚೆ ನಡೆದು ಕಡೆಗೆ ಅದು ಮಂಜೂರಾಗಿ ಈ ವಾರಿ ನಿವೃತ್ತರಾಗಿ ಹೋಲಿದ್ದ 6 ಪ್ರೆರೆಕ್ಟರಂ ಸ್ಥಾನಕ್ಕೆ ಶ್ರೀಗಳಾದ ಬಿ ಸಂಜಯ್ಯ ಹೆಗ್ಡೆ, ಕೆ ಮಹಾಬಲ ಹೆಗ್ಡೆ, ದಾಸಡ್ಕಾಳ್ಳ ಈ 3 ಜನರು ಆರಿಸಲ್ಪಟ್ಟರು

ಉಡುಪಿ

ಶ್ರೀ ಕಲ್ಕುಂಜೆ ವ್ಯಾಸಾಚಾರ್ಯರು—ಉಡುಪಿಯಿಬ್ಬಿ ಬೆಳ್ಳಿ ಹಿಟ್ಟುಳ್ಳಿ, ತಾವ್ಸು ಸಾಮಗ್ರಿಗಳ ಭಂಡಾರವೊಂದನ್ನು ತೆರೆದು ಈದಿ ತಾ 31ಕ್ಕೆ ಇಪ್ಪತ್ತೈದು ವರುಷಗಳಾದ ಪ್ರಯುಕ್ತ ತನ್ನ ಉದ್ಯೋಗದ ರಜತೋತ್ಸವ ಕಳ ಸಾರ್ಥಕ ಗಿ ತಾವು ವಿದ್ಯಾರ್ಥಿಸಂಗಮಾಡಿದ ಸ್ಥಳೀಯ ಸಂಸ್ಕೃತ ಕಾಲೇಜಿನ ವಿದ್ಯಾರ್ಥಿನಿಧಿಗೆ ಒಂದು ಸಾವಿರ ರೂಪಾಯಿಗಳ ಸಹಾಯ ಧನ ವಾಗಿ ನ ಮಾಡಿ ಪ್ರಥಮ ಕಂತಾಗಿ ರೂಪಾಯಿ ಇನ್ನೂರ ಏ ವಕ್ಕನ್ನು ಆಂದೇ ಕೊಟ್ಟರು.

ಕೆಪ್ಟನ್ ಕಾಲ್ಡರ್‌ವುಡ್ ರಿಕ್ರೂಟಿಂಗ್ ಆಫೀಸರರು ಕಳದ ಶನಿವಾರ ತೂಲೂಕು ಕಚೇರಿಯಲ್ಲಿ ತಾಲೂಕಿನ ಎಂ' ಕಮಿಟಿಯ ಆಧ್ಯಯಲ್ಲಿ ಯುದ್ಧದ ಪರಿಸ್ಥಿತಿಯನ್ನು ನಿರೂಪಿ ಯ ದ್ಧಸಿ ನಿಗೆ ಕೂಲಿಗಾರರ ಆವಶ್ಯಕತೆಯಿದೆಯೆಂದು ಂದ ಈ ಜಿಲ್ಲೆಯಿಂದ ಬಹಳ ಸಂಖ್ಯೆ ಕೂಲಿಗಾರರು ಸಗುವಂತಾಗಬೇಕೆಂದು ಒತ್ತಿ ಜೇ ದರು.

ಹೊಸ ವರ್ಷದ ಅಭಿವಂದನೆ—ಜನರಲ್ ಇನ್ಸೆಸ್ಟ್‌ಮೆಂಟ್ ಎಂಡ್ ಕಮರ್ಶಿಯಲ್ ಕೋರ್ಪರೇಶನವರು ವರ್ಷಂಪ್ರತಿ ನು ದಾಗಿ ಸಾರ್ವಜನಿಕ ಕೆಲಸಗಾರ್ನ್ನು ಅಭಿನಂದಿಸುವಂತೆ, ಈ ಬಾರಿ ಕ್ರೈಸ್ತಿಯನ್ ಹೈಸ್ಕೂಲ್ ನಿವೃತ್ತ ಹೆಡ್ಮಾಸ್ಟರ್ ವಿ ಸಾಲೀಕರನ್ನು ಅಭಿನಂದಿಸಿರು. ಈ ಸಮಾರಂಭವು ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಶ್ರೀ ಎಲ್ ಎಚ್ ಪ್ರಭು, ಪ್ರೀಡೆಂ, ಹೊ ನ್ನವರ ಇವರ ಅಧ್ಯಕ್ಷತೆಯಲ್ಲಿ ಇದೇ ತಾ 1ರಲ್ಲು ಜರಗಿತು. ಮೀಪರ್ಟಿ ಸಕ್ಕಾರಿಂದ ಬಳಕ ಶ್ರೀಗ ಳಾದ ಕೆ. ಸಂಜೀವ ಕಾಮತ್, ಎಡ್ವೋಕೇಟ್ ಮದ್ರಾಸ್, ಎಚ್. ಎಸ್. ಹುಸ್ಕೇನ್ ಸಾಹೇಬ್, ಬಿ ಶ್ಯಾಮ ರಾಯ ಸಟ್ಟಿ ಮತ್ತು ಕೊರ್ಡಲ್ ಶ್ರೀ ನಿವಾಸರಾಯರು ಸಂದರ್ಭೋಚಿತ ಮಾತುಗಳನ್ನಾಡಿದರು.

ಹೊಡೆತ—ಮಂಗಳೂರಿನ ವಕೀಲ್ ಶ್ರೀ ಕೃಷ್ಣ ಸೆಟ್ಟರು ಯಾವುದೋ ಒಂದು ಆಸ್ತಿ ಸ್ವಾಧೀನತೆಯ ಸಲುವಾಗಿ ಕೆಳದ್ದಾರಿಗೆ ಹೋಗಿದ್ದಾಗ ಅವರಿಗೆ ಯಾರೋ ಹೊಡೆದುದರಿಂದ ಅವರು ಸ್ಥಳೀಯ ಸರಕಾರೀ ಆಸ್ಪತ್ರೆಗೆ ತಂದಲ್ಪಟ್ಟ ಚಿಕಿತ್ಸೆ ಹೊಂದುತ್ತಲಿದ್ದಾರೆ ಇವರ ಕಡೆಯ ಒಂದು ಜನವು ಕೊಲೆ ಮಾಡಲ್ಪಟ್ಟಿದೆಯೋ ಅಥವಾ ಪಲಾಯನ ಮಾಡಿತ್ತೋ ಎಂಬ ಸಂದೇಹಕರ ಸುದ್ದಿ ಹುಟ್ಟಿತ್ತು. ಆದರೆ ಇತ್ತೀಚೆಗೆ ಆ ಜನದ ಹೆಜ್ಜೆ ಕೆಳಕ್ಕೆರು ಸವಿಷಯ ಒಂದು ಕಾಡಿನಲ್ಲಿ ಸಿಕ್ಕಿರುವುದೆಂದೂ ಅದನ್ನು ಇಲ್ಲಿಯ ಆಸ್ಪತ್ರೆಗೆ ತಂದಲಾಗಿದೆಯೆಂದೂ ಸುದ್ದಿ.

ತಾ 28-12-41ರಲ್ಲು ಸೇರಿದ ಜಿಲ್ಲಾ-ಆಹಾರ ಸಮಿತಿಯ ಸಭೆ

ಕೋಪರೇಟಿವ್ ಡಿಪಾರ್ಟಮೆಂಟಿಗೆ ಅಕ್ಕಿಯನ್ನೊಪ್ಪಿಸುವ ಬಗೆ—ಆದ 2ನೇ ಮತ್ತು 3ನೇ ತಂಡಗಳ ವಾಯಿದೆಯು ಅನುಕ್ರಮವಾಗಿ ಜನವರಿ ಅಖೈರಿ ಮತ್ತು ಫೆಬ್ರವರಿ ಆಖೈರಿ ವರೆಗೆ ವಿಂದುವರಿಸಲ್ಪಟ್ಟಿತು ಇಷ್ಟರ ವರೆಗೆ ತಂಡ ಮೂಲಕವೇ ಪಡೆಯುತ್ತಿದ್ದ ಅಕ್ಕಿಯ ಬಡಿಯು ಥರೀಯ ದೆಯೋ ಎಂಬುದನ್ನು ಇನ್ನು ಮುಂದೆ ಆಲತೆಯ ವಿಲಳವೇ ನೋಡಲಾಗ ವದು ರೇಶನಲ್ಲದ ಕ್ಷೇತ್ರಗಳಲ್ಲಿ ಪ್ರಾಯಸ್ಥರಿಗೆ ಒಂದು ದಿನಕ್ಕೆ ಥರ್ ಆಗಿ ನಿರ್ಧರಿಸಲ್ಪಟ್ಟ ಯೂ 2ರಿಂದ 12 ವರುಷಗಳೊಳಗಿನ ಮಕ್ಕಳಿಗೆ ಕಾಲು ಸೇರಿನಂತೆಯೂ ರೇಶನ್ ಪರಿಮಾಣ ದೊರೆಯುವಲಿದೆ. ಆಳಕಾಯದ ಅಕ್ಕಿಯೆಷ್ಟೆಂಬುದನ್ನು ನಿರ್ಧರಿಸುವಾಗ ವಕ್ಕಲುಗಳಿಗೆ ವಿಂದಿನ ಎಣೆಲ್ಲೆಯ ಸಾಗ ವಕ್ಕಿ ಪರ್ಮಿಟ್‌ಗಳಾ ಕೊಡುವ ಮಾವಲ್ ಅಕ್ಕಿ ಸಾಲವನ್ನು ಕೊಡಲಾಗುವಂತೆ ಆ ಆಂಧ್ರವನ್ನು ವಿಡಲುಗುವದ ಎಷ್ಟಂಕ ಥರ್ತವನ್ನು ಆವಲಕ್ಕೆಯಾಗಿ ಉಪಯೋಗಿಸಬಹುದು ಎಂಬುದನ್ನು ಆಹಾರ ಸಮಿತಿಯಂದಾರ್‌ಸಲ್ಪಟ್ಟ ಉಪಸಮಿತಿಯೋದ ಸರ್ಕಾರಿಲಕ್ಕಿದೆ ಆವಲಕ್ಕೆ ಬೀಳಕಾದವರು ತಮ್ಮ ರೇಶನಿನಲ್ಲೇ ಒಂದಂಶವಾಗಿ ಅದನ್ನು ಪಡೆದುಕೊಳ್ಳಬೇಕಾಗಿದೆ. ಸಾಗುವಳ್ಳದಾರರು ಅಕ್ಕಿ ಥರ್ತಗಳನ್ನು ತಮ್ಮ ವ ಸೆಯಿಂದ ಧಾನ್ಯ ಳಲ್ಲಿಗುಗಲೀ ಕೋಪರೇಟಿವ್ ಡಿಪೋಗಳಿಗಾಗಲೀ ಒಯ್ಯುವಂಥ ಯಾವುದೇ ವಿಲಾವಣೆಗಾದರೂ ಈ ಮೊದಲೇ ಅಜ್ಜಾಪಿಸಲ್ಪಟ್ಟಿರುವಂತೆ ಊರ ಪರೇಲರಿಂದ ಸರ್ಮಿಟ್ ಪಡೆದುಕೊಳ್ಳುವದು ಆಗಕ್ಕ ಪರ್ಮಿಟ್ ಕೊಡಬೇಕಾದರೇ ಯುದ್ಧ ನಿಧಿಗೆ ಸಹಾಯ ಮಾಡಬೇಕು ಆಥವ ಸೇವಿಂಗ್ಸ್ ಸರ್ಟಿಫಿಕೇಟು ಪದಕೊಳ್ಳಬೇಕೆಂಬ ಶರ್ತವನ್ನು ಪರೇಲರುಗಳು ಹಾಕಕೂಡದೆ. ಜಿಲ್ಲಾ ಆಹಾರ ಸಮಿತಿಗಳ್ತಿ ಉಡುಪಿ ಮತ್ತು ಕುಂದುಪುರ ತಾಲೂಕುಗಳಿಗೆ ಸಂಬಂಧಿಸಿದ ಪ್ರತಿನಿಧಿಗಳನ್ನಾಯ ಪರೀಕ್ಷೆಯಿದೆ. ಅಧಿಕಾರಿ ವೆಲಿಸರಿ ಚಳವಳಕ್ಕೆ ಸಹಾಯಕವಾಗಿರುವ ಸಣ್ಣ ಪುಟ್ಟ ನಿರ್ದಾವರಿ ಕಾರ್ಯ ಸೂಚನೆಗಳ ಕುರಿತು ಪರ್ಯಾಲೋಚಿಸಲು ಒಂದು ಉಪಸಮಿತಿಯನ್ನು ರಚಿಸಲಾಗಿದೆ

ಕೋವಿ ಲೈಸೆನ್ಸುಗಳು—ಕಾಡ ವ್ಯಗಳಲ್ಲಿ ಹಾವಳಿಯು ಈ ಜಿಲ್ಲೆಯಲ್ಲಿ ಹೆಚ್ಚಿರುವದನ್ನು ಅವಗಾಹನೆಗೆ ತಂದು, ಕೋವಿ ಲೈಸೆನ್ಸುಗಳನ್ನು ಹೆಚ್ಚಿಚ್ಚಾಗಿ ಕೊಡತಕ್ಕದ್ದೆಂದು ಮದ್ರಾಸ್ ಸರಕಾರವು ಜಿಲ್ಲೆಯ ಅಧಿಕಾರಿಗಳಿಗೆ ಸೂಚಿಸಿದೆ ಈ ವಿಷಯ ಲೈಸನ್ಸು ನಿರಾಕರಿಸಲ್ಪಟ್ಟವರೂ, ಶಿಕ್ಷಾರಿಗಾಗಿ ಕೋವಿ ಬೇಕೆಂದು ಬಯಸುವ ಇತರರೂ ಈಗ ಅರ್ಜಿ ಮಾಡಬಹುದು.

ರೇಶನ್ ಕಾರ್ಡುಗಳು—ತಮ್ಮ ಮನೆ ಖರ್ಚಿಗೆ ಸಾಕಾಗುವಷ್ಟು ಅಕ್ಕಿ ಸಂಗ್ರಹವಿಲ್ಲದ ಹಳ್ಳಿಯ ಸುತ್ತ ಬೆಸಾಯುಗಾರರ ಸಮೇತ ಅಕ್ಕಿ ಬೇಕಾಗುವ ಎಲ್ಲರಿಗೂ ಜನವರಿಯಿಂದ ರೇಶನ್ ಕಾರ್ಡುಗಳನ್ನು ಕೊಡಲಾಗ ವದೆಂದು ತೀರ್ಮಾನವಾಗಿದೆ ಕಾರ್ಡುಗಳನ್ನು ಅದಕ್ಕಾಗಿಯೇ ನೇಮಕಗೊಂಡಿರುವ ಸ್ಪೆಕ್ಟರ್ ರವಿಷ್ಯ ಇನ್ಸ್‌ಪೆಕ್ಟರುಗಳು ಮುಖಾಂತರ ಹಂಚಲಾಗುವದು.

ಎ. ಬಿ. ಕೆಟ್ಟಿ.

ರುಂಡ್‌ಸ್ಟೆಡ್ ಧಾಳಿಯ ಮೊನೆ ಮುರಿಯಿತು!

'ಇನ್ನಾರು ತಿಂಗಳೊಳಗೆ ವಿಜಯಿಯಾಗುವೆ'—ಹಿಟ್ಲರ್

ಪಶ್ಚಿಮರಂಗದಲ್ಲಿ.

ಫೀಲ್ಡ್ ಮಾರ್ಶಲ್ ರುಂಡ್‌ಸ್ಟೆಡ್ ನು ರೋಮಾಂಚಕಾರೀ ಧಾಳಿಹೂಡುತ್ತಾ ಮುಂದೊತ್ತಲಾರಂಭಿಸಿ ಇಂದಿಗೆ ಮೂರು ದಿನ ಕಡಿಮೆ ಮೂರು ವಾರಗಳಾದವು. ಈ ಪೈಕಿ ಮೊದಲಿನ 12 ದಿನಗಳು ಅವನಿಗೆ ತ್ಯನುಕೂಲವಾಗಿದ್ದವು, ಆ ನೇಲಿನವು ಪ್ರತಿಕೂಲವಾಗಿವೆ. ಈಗೀಗ ಬರುತ್ತಿರುವ ವಾರ್ತೇಗಳ ಆಧಾರದಿಂದ ಅದು ಜರ್ಮನರ ಜೂಜುಗಾರಿಕೆಯೇನೂ ಅಲ್ಲ. ವಿತ್ರರ ದುರ್ಬಲ ಭಾಗವೊಂದು ದೊರೆತುದಂ ಸದುಪಯೋಗ ಮಾಡಿಕೊಂಡ ಹೊಡೆತ ಮಾತ್ರವೆಂದು ಹೇಳಬಹುದು. ಒಮ್ಮೆಗೇ ದಿಗಿಲುಗೊಂಡ ಮಿತ್ರ ಪಾಳಯದ ವಾರ್ತಾದಾಯಕರು ಅದನ್ನು ಭೀಕರವಾಗಿ ಚಿತ್ರಿಸಿದ್ದರು. ಈಗ ಮಿತ್ರರ ಪ್ರತಿಧಾಳಿಗಳನ್ನು ಜರ್ಮನರು ಆತ್ಯುಕ್ತಿಯೊಡನೆ ವರ್ಣಿಸುತಿದ್ದಾರೆ.

೪ನೆಯ ದಿನ 12 ದಿನಗಳಲ್ಲಿ—

ರುಂಡ್‌ಸ್ಟೆಡನು ಬೆಲ್ಜಿಯಮ್ ಲಕ್ಸೆಂಬರ್ಗುಗಳಲ್ಲಿ ಹೂಡಿದ ಧಾಳಿಯಲ್ಲಿ 2 ನಾವಿರ ಚಚ್ರ್ಾಕ ಮೈಲುಷ್ಟು ಸ್ಥಳವನ್ನು ಗೆದ್ದಿದ್ದಾನೆ, 58 ಮೈಲಿಷ್ಟು ಮುಂಗಡೆಗೆ ಬಂದಿದ್ದಾನೆ ಹವಾಮಾನವು ಬಹಳ ಕೆಟ್ಟದ್ದಾಗ ಗುಡ್ಡಗಾಡುಗಳನ್ನು ಹಾದು ಬರುತ್ತಿರುವ ನಾಜೀ ಸೇನೆಗಳನ್ನು ನೆಲ ಮತ್ತು ಆಕಾಶ ಮಾರ್ಗ ಇದಿರಿಸುವದು ಮಿತ್ರರಿಗಸಾಧ್ಯವಾಯಿತು ಕೊನೆಕೊನೆಗೆ ಮಿತ್ರ ಸೇನೆಗಳು ಸುಧಾರಿಸಿಕೊಂಡವು ಜರ್ಮನ್ ಧಾಳಿ ಸೇನೆಯ ಅಕ್ಕ ಪಕ್ಕದಿಂದ ಈಗ ಪ್ರತಿಧಾಳಿ ಹೂಡುತ್ತಿವೆ ಜರ್ಮನರುತಡೆ ಗಟ್ಟಲ್ಪಟ್ಟಿದ್ದಾರೆ. ಕೆಲವೆಡೆ ಹಿಂಜರಿದಿದ್ದಾರೆ. ಆವರ ಆಕ್ರಮಣ ಶಕ್ತಿ ಮುರಿಯಲ್ಪಟ್ಟಿದೆ.

ಮುಂದೇನು?

ರುಂಡ್‌ಸ್ಟೆಡನ ನವಧಾಳಿ ನಿಷ್ಫಲವಾಗಿದೆಯೆಂದಾಗಲೀ, ಅವನು ಪೂರ್ತಿ ಸೋತಿದ್ದಾನೆಂದಾಗಲೀ ಭಾವಿಸಬಾರದು. ಇದು ವರೆಗೆ ಮುಂದೊತ್ತುತ್ತಿದ್ದ ನಾಜೀ ಸೇನೆಗೆ ಮುಖ್ಯವಾಗಿ ಅದರ ದಕ್ಷಿಣ ಪಕ್ಕದಿಂದ ಪ್ರಬಲ ಪ್ರತಿಹೊಡೆತವನ್ನು ಅಮೇರಿಕನ್ ಮೂರನೇ ಸೇನೆ ಕೊಡಹತ್ತಿದುದರಿಂದ ಜರ್ಮನರು ಮುಂದೊತ್ತದಂತಾಗಿದೆ. ರುಂಡ್‌ಸ್ಟೆಡನು ಸೇನಾ ಸಂಬಂಧವಿ ಮಾಡಿಕೊಂಡು ಪುನಃ ಮುಂದೂತ್ತುವನೋ, ತಾನು ಆಕ್ರಮಿಸಿದ ಸ್ಥಳವನ್ನು ರಕ್ಷಿಸಿಕೊಂಡು ನಿಲ್ಲುವನೋ, ಅಥವಾ ತಾನು ಹೊರಟಲ್ಲಿಗೇನೇ ಹಿಂದ ಬಂದು ನಿಲ್ಲುವ ಅಪಮಾನಕ್ಕೆ ಗುರಿಯಾಗುವನೋ ಎಂಬುದನ್ನು ಇನ್ನು ನೋಡಬೇಕು ಮಿತ್ರರು ಪ್ರತಿಧಾಳಿಗಳನ್ನು ಹೆಚ್ಚಿಸಹತ್ತಿದ್ದಾರೆ.

ಪ್ರಯಾದಗಳಾಗಿರಬಹುದೆ?

ರುಂಡ್‌ಸ್ಟೆಡನಿಗೆ ಧಾಳಿ ಹೂಡಲು ಅವಕಾಶ ದೊರೆತುದಕ್ಕೆ ಕೆಲವು ಅಮೇರಿಕನ್ ಸೇನಾನಿಗಳ ಅಜಾತಾರ್ಯವೇ ಕಾರಣವಿರಬಹುದೆಂಬ ಅನುಮಾನವೆದ್ದಿದೆ. ಅಮೇರಿಕ ಸರಕಾರವು ಜನರಲ್ ಈಸೆನೋವರನ್ನು ಈ ಕುರಿತು ಪ್ರಶ್ನಿಸಿದೆ. ಇಟೆಲಿಯಲ್ಲೂ ಇದೇ ಸಮಯದಲ್ಲಿ ಮಾರ್ಶಲ್ ಕೆಸರ್‌ಲಿಂಗನು ಉಗ್ರ ಪ್ರತಿಘಟನೆಕೊಡ ಹತ್ತಿದ್ದಾನೆ ಉತ್ತರ ಇಟೆಲಿಯನ್ನು ಸರ್ವಕ್ಕಿಯಿಂದ ಉಳಿಸಿಕೊಳ್ಳುವ ಹಂಚಿಕೆಯಲ್ಲಿ ಜರ್ಮನರಿದ್ದಾರೆ ಬೆಲ್ಜಿಯಮಿನ ಮಿತ್ರ ವಿಮಾನ ಸಿಲ್ದಾಣದ ಮೇಲೆ ನಾಜೀ ವಿಮಾನಗಳು ತಾ 28ರಲ್ಲಿ ಭೀಕರ ಧಾಳಿ ನಡೆಸಿದುವು ಜರ್ಮನಿಯ ಮಖ್ಯ ಕೇಂದ್ರಗಳ ಮೇಲೆ ಮಿತ್ರರ ಬೋಂಬು ದಾಳಿಯೂ ನಡೆಯಿತು

ರಶ್ಯಾನರು

ಹಂಗೇರಿಯ ರಾಜಧಾನಿ ಬುದಾಪೆಸ್ಟಿನೊಳಗೆ ನುಗ್ಗಿ ಜರ್ಮನ್ ಬೀದಿಬೀದಿ, ಮನೆ ಮನೆ, ಕೈಮೈ ಹೋರಾಟಗಳು ಅತಿ ಭೀಕರವಾಗಿ ನಡೆಯುತ್ತಿವೆ ಜರ್ಮನರು ನುಸುಳಕೂಗದಂತೆ ಎಲ್ಲಾ ಪಾದಿಗಳನ್ನೂ ರಶ್ಯಾನರು ಅಡ್ಡಗಟ್ಟಿ ನಿಂತಿದ್ದಾರೆ ವೈದಾ ರಕ್ತಪಾತವಾಗುವದನ್ನು ತಪ್ಪಿಸಲಿಕ್ಕಾಗಿ ರಶ್ಯನ್ ಸೇನಾ ನಿಗಳು ಬುದಾಪೆಸ್ಟಿನ್ನು ಬಿಟ್ಟುಕೊಡುವಂತೆ 'ಅಲ್ಟಿಮೇಟಮ್' ಸಮೇತ ನಾಜೀ ಸೇನಾ ಮುಂಛಾಗ್ರಾ ಇಬ್ಬರು ರಾಯಭಾರಿಗಳನ್ನು ಕಳುಹಿದ್ದರು. ಅವರು ಬಿಳಿದ್ವಜ ಧಾರಿಗಳಾಗಿ ಹೋಗಿದ್ದೂ ಜರ್ಮನರು ನ್ಯಾಯವಿರುದ್ಧವಾಗಿ ಅವರನ್ನು ಕೊಂದು ಹಾಕಿದ್ದಾರೆ ಒಂದು ಪೆಸ್ಟನ್ನು ಬೇಗನೆ ಮುಗಿಸಿ ಉಸ್ತುವಾರಿಗೆ ನುಗ್ಗುವ ಇರಾದೆ ರಶ್ಯಾನರದು

ಶಾಂತಸಮುದ್ರದಲ್ಲಿ

ಗಣನೀಯ ಯುದ್ಧ ಘಟನೆಗಳೇನೂ ನಡೆದಿಲ್ಲ ಫಿಲಿಪ್ಪೀಯಿನ್ಸಿನ ಲೀಟೆ ಮತ್ತು ಮಿಂಡೋರೋ ದ್ವೀಪಗಳಲ್ಲಿಗೆ ಜಪಾನೀ ಪ್ರತಿಘಟನೆ ಸೂರ್ಣ ಸಿಂತಿಪ. ಆಮೇರಿಕಾನ್ ಮುಂದಿನ ಗುರಿಯು ಪಾಮುಖ್ಯ ದ್ವೀಪ ಮನಿಲವೆಂದ ಕಾಣುತ್ತದೆ ಅದರ ಮೇಲೆ ಆಕಾಶ ದಾಳಿಗಳು ನಡೆದಿವೆ ಅದರ ಜವಾನರು ಅಲ್ಲಿ ಉಗ್ರ ಪ್ರತಿಘಟನೆ ಕೊಡುವ ಸೂಚನೆಯಿದೆ. ಜರ್ಮ, ಜೀನ್, ಫಿಲಿಪ್ಪೀನ್ಸ್ ಮತ್ತು ಜಪಾನೀ ಸರಹದ್ದುಗಳ ಯುದ್ಧವನ್ನು ದೂರ ಜಪಾನರ ಹೃದಯಕ್ಕೆ ತಾಗುವಷ್ಟು ನಡೆದಿಲ್ಲವೆಂದೂ ಜಪಾನರ ಶಕ್ತಿ ನನ್ನು ನಿರೀಕ್ಷೆಗಿಂತ ಅಧಿಕವಿದಯೆಂದೂ ಹೇನ್ಸ್ ಬಾಲ್ಡ್‌ವಿನರಂತಹ ಮಿತ್ರ ಯುದ್ಧತಜ್ಞರೇ ಹೇಳಹತ್ತಿದ್ದಾರೆ

ಗ್ರೀಸ್ ದುರಂತ

ಪ್ರಧಾನಿ ಮಿ. ಚರ್ಚಿಲ್ಲರೂ, ವಿದೇಶ ಮಂತ್ರಿ ಮಿ ಈಡೆನರೂ ಅಥೆನ್ಸಿಗೆ ಧಾವಿಸಿ, ಅಲ್ಲಿಯ ಸರ್ವಸಂತ್ರಸ್ತ ಸಶ್ಯೋಲಿಸ್ಟ ನೆರೆಯಿಸಿ ಸಂಧಾನಕ್ಕಾಗಿ ರತಪ್ರಯತ್ನ ನಾಡಿ ಸಿಪ್ಪಲರಾಗಿ ಹಿಂದಿರುಗಿದ ನೆಪ್ರಧಾನಿ ಪಾನೇಂದ್ರನರು ರಾಜೀನ ಮೆಯುತ್ತಿದ್ದಾರೆ ಲಂಡನ್ನಿನಲ್ಲಿರುವ ಗ್ರೀಕ್ ಅರಸರು ಎಥೆನ್ಸಿನ ಆರ್ಚ್ ಬಿಶಪ್ರನನ್ನು ಗ್ರೀಸ್ ರೀಜೆಂಟರಾಗಿ ನೇಮಿಸಿದ್ದಾರೆ. ಸರ್ವಪಕ್ಷೀಯ ಸರಕಾರವೊಂದು ಸ್ಥಾಪಿಸಲ್ಪಡುವ ಪ್ರಯತ್ನ ನಡೆದಿದೆ ತಾ 20ಲ್ಲಿ ಅಂತಕದೊಂದು ಸರಕಾರ ಗ್ರೀಕೆನಲ್ಲಿ ಸ್ಥಾಪನೆಯಾಯಿತೆಂಬ ವರ್ತಮಾನ ದೊರೆತಿದೆ. ಈ ನಡುವೆ ಜನರಲ್ ಸ್ಕೋಬಿ ಮತ್ತು 'ಎಲಾಸ್' ಪ್ರಮುಖರೊಳಗೆ ಸಂಧಾನ ವ್ಯವಹಾರಗಳು ನಡೆದಿವೆ

ಹಿಟ್ಲರನ ನವವರ್ಷದ ಭಾಷಣ

"1914ನೇ ಆಗೋಸ್ಟಿನಲ್ಲಿ ತಾವು ವಿಜಯವನ್ನು ಸಮೀಪಿಸಿರುವೆನೆಂದು ಮಿತ್ರರಾಷ್ಟ್ರಗಳು ನೆನೆಸಿದಂತೆ ಬೇರಾವಾಗಲೂ ನೆನೆಸಿರಲಿಲ್ಲ ಜರ್ಮನಿಯು ಎಂದೂ ಶರಣಾಗುವಂತಿಲ್ಲವಾದ್ದರಿಂದ, ಜರ್ಮನಿಯು ವಿಜಯ ಸಂಪಾದಿಸಿದ್ದಲ್ಲಿ 1946ರೊಳಗ ಯುದ್ಧಮುಗಿಯುವಂತಿಲ್ಲ" ಎಂದು ದಶಂಬರ್ ತಾ 31 ಕಳೆದು ಜನವರಿ 1 ಹಿಡಿಯುವ ಹೊಸ ವರುಷದ ಸುಮುಹೂರ್ತವಾದ ಮಧ್ಯರಾತ್ರಿಯಲ್ಲಿ ಹಿಟ್ಲರ್ ತನ್ನ ಜನರಿಗ ಆಕಾಶವಾಣಿ ಭಾಷಣವಿತ್ತಿದ್ದಾನ ಮುಂದಿನ ಆರು ತಿಂಗಳೊಳಗೆ ನಿಮಗೆ ವಿಜಯ ದೊರಕಿಸಿಕೊಡುವೆನೆಂದು ಜರ್ಮನರಿಗೆ ಹಿಟ್ಲರನ ಆಶ್ವಾಸನೆ

ಮಿತ್ರರ ಸುಳ್ಳು ಪ್ರಚಾರ

"ಮಿತ್ರರ ಒಳ ಪ್ರಚಾರವು ದ್ವಿದಳವಾಗಿತ್ತು" ಎಂದಿದ್ದಾನೆ ಹಿಟ್ಲರ್. "ನೋದಲ ನೆಯದಾಗಿ ಅವರು ನಮ್ಮ ಪತನಕ್ಕೆ ಒಂದರ ಒಳಕೊಂದರಂತೆ ದಿನ ನಿಶ್ಚಯ ಮಾಡುತ್ತಾ ಬಂದರು ಎರಡನೆಯದಾಗಿ ಯುದ್ಧಾನಂತರದ ರಾಜಕೀಯ ಸಮಸ್ಯೆಗಳಿಗೆ ತೀರ್ಮಾನ ಹುಡುಕ ಹತ್ತಿದರು ಏನೋಂದೂ ಗುಟ್ಟು ತಿಳಿಯದ ಪ್ರಜಾಪ್ರಭುತ್ವ ರಾಷ್ಟ್ರಗಳ ಪ್ರಜೆಗಳು ಇಂತಹ ಪ್ರಚಾರಗಳಿಗೆ ಪ್ರಾಯಶಃ ಮರುಳಾಗಿರಬೇಕು. ಆದರೆ ಇದು ಕೇವಲ ನಾಟಕನೆಂಬ ಜ್ಞಾನೋದಯವು ಜಿಲ್ಲೆಯವರಿಗೆ ಕೂಡಾ ಒಂದೆರ್ಲೊಂದು ದಿನ ಆಗಲಿದೆ. ಜರ್ಮನರು ಯುರೋಪಿನ ಮತ್ತು ಲೋಕದ ನಿಣಾಯಕರ್ತರಾಗಿ ಚರಿತ್ರೆಯಲ್ಲುಳಿದ್ದಾರೆ ಮುಂದಕ್ಕೂ ಹಾಗೇನೇ ಉಳಿಯುವರು." ಎನ್ನುತ್ತಾನೆ ಹಿಟ್ಲರ್.

ಜರ್ಮನಿ ಅಜೇಯವಾದುದು

ಹಿಟ್ಲರನ ಮಾತುಗಳು—'ರಾಷ್ಟ್ರೀಯ ಸಮತಾವಾದಿ ಜರ್ಮನಿಯು ಅಜೇಯವಾದುದು. ತಮ್ಮ ಪ್ರಾಮುಖ್ಯತೆಯನ್ನರಿಯದೆ ಜಗತ್ತನ್ನು ಪಂಚಿಸಿ ಸ್ವದ್ರೋಹ ಸಾಧಿಸಿಕೊಳ್ಳುವ ರಾಜಕೀಯ ಪುರುಷರು ತಥಾ ಸೇನಾನಿಗಳು ಸಮ್ಮಲ್ಲಿಲ್ಲ. ಜೊಲ್ಶೆವಿಸ್ಟರಿಗೆ ಮತ್ತು ಅಂತರಾಷ್ಟ್ರೀಯ ಯೆಹೂದ್ಯರಿಗೆ ಸಾಧ್ಯವಾದಲ್ಲಿ ಜರ್ಮನಿಗವರೇನನ್ನೆಲ್ಲಾ ಮಾಡಲಿರುವರೆಂದು ನಮಗೆ ಗೊತ್ತಿದೆ. ಜರ್ಮನರು ಯುದ್ಧ ಕಳಕೊಳ್ಳುವಂತಿಲ್ಲ, ಆವವನ್ನು ಗೆಲ್ಲುತ್ತಾರೆ. ಇಂದಿಹಾಳಾಗುತ್ತಿರುವದನ್ನು ಪುನರ್ನಿರ್ಮಾಣ ಮಾಡಿಕೊಳ್ಳುವರರಲ್ಲಿ ಮುಂದಿನ ವರುಷಗಳಲ್ಲಿ ಜರ್ಮನರು ನಿರತರಾಗುವರು. ವಿಜಯವು ಯೋಗ್ಯರಿಗೆ ಮಾತ್ರ ದೊರೆಯುಬಲ್ಲದಾದ್ದರಿಂದ ಜರ್ಮನರು ಹೊಸ ವರುಷದಲ್ಲೂ ತಮ್ಮ ಕರ್ತವ್ಯ ಮಾಡುವರೆಂದು ಭಗವಂತನಿದಿರು ಪ್ರಾರ್ಥಿಸೋಣ' ಎಂದು ಹಿಟ್ಲರ್ ಹೇಳಿದ್ದಾನೆ.

ಆಧ್ಯರ ಅವಘಡಗಳು

ಚರ್ಚಿಲ್ಲರಿಗೆ ಗುಂಡು!

ಬ್ರಿಟಿಷ್ ಹೆಗ್ಗಳಿಕೆಗೆ ಕಳಂಕಪ್ರಾಯವಾಗಿರುವ ಗ್ರೀಕ್ ಅಂತರ್ಯುದ್ಧವನ್ನು ನಿವಾರಿಸಬೇಕೆಂದು ಮಿ. ಚರ್ಚಿಲ್ಲರು ಮಿ. ಈಡನರೊಂದಿಗೆ ಎಥೆನ್ಸಿಗೆ ಧಾವಿಸಿ ಸಂಧಾನ ಪ್ರಯತ್ನ ನಡೆಸಿದ್ದರು ಅದು ನಿರ್ಧಾರಕವಾಗಿ ಈಗ ಮರಳಿದ್ದಾರೆ ಅದರೆ ಹಾಗೆ ಮರಳಿದುದೇ ಅವರ ಪಾಲಿಸ ವಿಜಯವೆನ್ನಬೇಕು ಯಾಕೆಂದರೆ ಅಥೆನ್ಸಿನಲ್ಲಿ ರುವಾಗ ಅವರು ನ್ಯಾಷನಲ್ ಸಹಕಾರಕ್ಕಾಗಿ ಮೂರು ಬಾರಿ ಪ್ರಯತ್ನ ನಡೆದಿದ್ದಾತಂತೆ ಒಂದು ಬಾರಿ ಹೊಡೆದ ಗುಂಡು ಗುರಿತಪ್ಪಿ 200 ಗಜ ದೂರದಲ್ಲಿದ್ದ ಯುವತಿಯೊಬ್ಬಳನ್ನು ಜಖಂಗೊಳಿಸಿದ್ದಿತು ಚರ್ಚಿಲ್ಲರ ಆಯಷ್ಯ ಒಲಿದುದು ಉಳಿದದು.

ಕೆಲವಾದರ ಕೈದು

ಸುಪ್ರಸಿದ್ಧ ತಮಿಳು ಗಾಯಕ ಮತ್ತು ನಟ ತ್ಯಾಗರಾಜ ಭಾಗವತರ ಹೆಸರು ಕೇವಲ ಹಿಂದೀಯನಿಲ್ಲ. ಇಂತೆಯೇ 'ಅವನಿಲ್ಲದ ಚಿತ್ರ ನೋಡುವುದೇಕೆ' ಎಂದು ತಮಿಳಗನ್ನುತ್ತಿರುವ ಹಾಸ್ಯನಟ ಎನ್ ಎಸ್. ಕೃಷ್ಣನ್ ಕೂಡಾ ಸ್ರಸಿದ್ಧ ಸಿ ಎನ್ ಎಕ್ಸ್‌ಪ್ರೀಕಾಂತನ್ ಎಂಬವರು ನವಂಬರ್ ೧೯ಕ್ಕೆ ರಿಪ್ಪನ್‌ವಲ್ಲಿ ಹೋಗುತ್ತಿದ್ದಾಗ ಚೂರಿಯಿಂದ ತಿವಿಯಲ್ಪಟ್ಟು ಆಸ್ಪತ್ರೆಯಲ್ಲಿ ಮರಣಹೊಂದಿದ ಸಂಬಂಧವಾಗಿ ಇವರಿಬ್ಬರ ದಸ್ತಗಿರಿಯಾಗಿದೆ. ಪೋಲೀಸ್ ಕಮಿಶನರ್ "ಇಂಡಿಯನ್ ಪೀನಲ್ ಕೋಡಿನ ಪ್ರಕಾರ ಪೋಲೀಸ್ ಅಧಿಕಾರಿಯೊಬ್ಬರ ದಸ್ತಗಿರಿಯಾಗಿದೆ. ಪೋಲೀಸ್ ಕಮಿಶನರ" ಇಂಡಿಯನ್ ಪೀನಲ್ ಕೋಡಿನ ಪ್ರಕಾರ ಪೋಲೀಸ್ ಅಧಿಕಾರಿಯೊಬ್ಬರ ದುವರಿಂದ ಹ್ಯಾಕ್ಕೋರ್ಟಿನಲ್ಲಿ ಪ್ರಸಿದ್ಧ ವಕೀಲರಾದ ಜೆಂಂಲದಿಂದ ಈಗ 10 ಸಾವಿರ ರೂಗಳ ಎರಡೆರಡು ಜಾಮೀನುಗಳ ಮೇಲೆ ಬಿಡುಗಡೆ ಪಡೆದಿದ್ದಾರೆ. ಈ ಪೊಕದ್ದಮೆಯ ವಿಚಾರಣೆಯಾರಂಭದವರೆಗೆ ಅವರು ಮದ್ರಾಸನ್ನು ಬಿಟ್ಟರಬೇಕೆಂದೂ ಆಜ್ಞೆಯಾಗಿದೆ

ಪ್ರಧಾನಿಪುತ್ರ—ಪ್ರವೇಶವಿಲ್ಲ

ಪಂಜಾಬಿನ ಪ್ರಧಾನ ಮಂತ್ರಿ ಮಾಲಿಕ್ ಖಿಝಾರ್ ಹಯಾತ್‌ಖಾನರು ತನ್ನಪುತ್ರನೊಂದಿಗೆ ಪಂಜಾಬ್ ಯುನಿವರ್ಸಿಟಿಯ ಖದವೀದಾನ ಸಮಾರಂಭಕ್ಕೆ ಹೋಗಿದ್ದರು. ಬಾಗಿಲಲ್ಲಿ ರಕ್ಷಕರಿಗೆ ನಿಂತಿದ್ದ ಪೋಲೀಸರು ಯುನಿವರ್ಸಿಟಿಯ 'ಪಾಸ್'ಇಲ್ಲದೆ ಪ್ರಧಾನಿ ಪುತ್ರನನ್ನು ಒಳಗೆ ಪ್ರವೇಶಿಸಲು ಬಿಡಲಿಲ್ಲ ಪ್ರಧಾನಿಗಳು ಸ್ವತಃ ವಾದಿಸಿದರೂ ಕಾವಲಿಗೆ [illegible] ಇನ್ಸ್‌ಪೆಕ್ಟರರು ಕೇಳಲಿಲ್ಲ ಕೊನೆಗೆ ಪ್ರಧಾನಿ ಪುತ್ರನಿಗೊಂದು 'ಪಾಸ್' ಬಂದು, ಆದಿನ್ನು ತೋರಿಸಿಯೇ ಅವರು ಸಭಾಭವನವನ್ನು ಪ್ರವೇಶಿಸಬೇಕಾಯಿತು. ಈ ಗುಟ್ಟನ್ನು 'ಇಂಡಿಯನ್ ಸ್ಟೇಂಡರ್ಡ್' ಪತ್ರಿಕೆ ಬಹಿರಂಗ ಪಡಿಸಿದೆ.

ಹಿಕ್‌ಮತ್ ಹಿರಿಯ

(ಜಸೇ ಫಟದಿಂದ ಮುಂದುವರಿದುದು.)

ಲಾಗಿ ಪ್ರಶ್ನಿಸಿಕೊಂಡ. ಉಗ್ರಾಣಿಗೆ ಬೇ ಯವರನ್ನೂ ಕರೆಯುವ ಕೆಲಸವಿದ್ದುದರಿಂದ ಅಪರಾಹ್ನದೊಳಗೆ ಗೌಡರ ಮನೆಗೆ ಹಿಂದಿರುಗಲಾರನೆಂಬುದನ್ನು ಖಾತ್ರಿಮಾಡಿಕೊಂಡ. "ಏನು, ಈಗಲೇ ಗೌಡನಲ್ಲಿಗೆ ಓಡಬೇಕಂತೆಯೋ? ನಾನೇನು ಅವನ ಒಕ್ಕಲಿನಲ್ಲಿದ್ದೇನೆಯೆ? ನಿನ್ನ ಗೌಡನನ್ನೊಂದ ಹರಕು ಚಾಪೆಯೆಳೆದು ಮಲಗಲಿಕ್ಕೆ ಹೇಳು! ತೇಂಕಂದ್! ಬರಲಿಕ್ಕಾಗುವದಿಲ್ಲ ಎಂದು ಹಿರಿಯಯ್ಯ ಹೇಳಿದರು ಎಂದಾವನಿಗೆ ತಿಳಿಸಿಬಿಡು. "ಆಷರಿಗೇನೂ ನಿನ್ನಲ್ಲಿ ಕೆಲಸವಿಲ್ಲವಂತೆ; ನಿನಗೇನಾದರೂ ಅವರ ಲ್ಲಿ ಕೆಲಸವಿದ್ದರೆ ನೀನೇ ಅಲ್ಲಿಗೆ ಹೋಗ ಬೇಕಂತೆ"-ಎಂದವನಿಗೆ ಹೇಳ ಬಿಡು" ಎನ್ನುತ್ತಾ ನಿಸೆಯ ಮೇಲೆ ಬೆರಳಾಡಿಸಿ ನೆಂಟರ ಮುಖ ನೋಡಿದ. ಇವನ ನೆಂಟ ಸ್ತಿಕೆ ಗಳಿಸಿ ತಮ್ಮ ಸಂತಾನ ಪರಂಪರೆ ಧನ್ಯನಾಯಿತು ಎಂಬಂತೆ ಆ ನೆಂಟರು ಹಿಗ್ಗಿದರು. ಉಗ್ರಾಣಿಗೆ 'ಇದು ಹಗಲೋ ರಾತ್ರಿಯೋ' ಎಂಬುದೇ ಗೊತ್ತಾಗಲಿಲ್ಲ. ಈ ದಿನ ಮಾಡಿದ ಸೂರ್ಯ ಕಂತುವದರೊಳಗೆ ಹಿರಿಯಸ ಸೊಂಟದ ಕೀಲು ಕಳಚುವದು ಖಂಡಿತ-ಇವನಿಗೇನು ಹುಚ್ಚು ಹಿಡಿಯಿತೋ ಎಂದು ಉಗ್ರಾಣಿ ಕಾಲ್ತೆಗೆದ ಇತ್ತ ಹಿರಿಯ ಮನೆಯಾಳನ್ನು ಕರೆದು, ನೆಂಟರಿಗೆ ಊಟಕ್ಕೆ ನೀರು ಕೊಡುವಂತೆ ಅಜ್ಞಾಪಿಸಿ "ಈಗ ಬಂದೆ" ಎಂದು ಎದ್ದ. ಒಳಗೆ ಹೋಗಿ ನಾಜೂಕಾಗಿ ಒಣಗಿಸಿಟ್ಟ ಆರು ಸೇರು ಮೆಣಸನ್ನು ವಸ್ತ್ರದಲ್ಲಿ ಸುತ್ತಿ ಕಂಕುಳಲ್ಲಿಟ್ಟುಕೊಂಡು ಗೌಡರ ಮನೆಯ ಹಾದಿ ಹಿಡಿದ. ಗೌಡರು ವೀಳ್ಯ ಜಗಿಯುತ್ತಾ ಅಪ್ಪಣೆ ಪಡೆದು ಹೊರಟ.

ಸಂಜೆ ಮನೆಗೆ ಮರಳಿದಉಗ್ರಾಣಿ ಗೌಡರಿಗೇನೆಂದು ವರದಿಯೊಪ್ಪಿಸಿದನೋ.ಗೌಡರಿಂಸ ಯಾವ ಪ್ರತೀಕ್ಷೆಯ ಉಡುಗೊರೆ ಪದೆದನೋ-ಊಹಿಸಿ ತಿಳಿಯಬಹುದು!

× × ×

ಹಿರಿಯನ ಹಿಕ್‌ಮತ್ ಮಾದರಿ ಹೀಗೆ ಅವರಾಲಿಗೆ ಹೋದವನೇ ಅಲ್ಲ ಆದರೆ ಊರವರಿಗೆ ಪರಊರಲ್ಲಿ ಸಂಪಾದನೆಗೆ ಹೋಗಿದ್ದ ಮುಕ್ಕಳಂದ ಬರುವ ಕಾಗದ ಗಳನ್ನು ಓದಿ ಹೇಳುವದು ಅವನೇ. ಇದ್ದುದನ್ನು ಇದ್ದಂತೆ ಓದಿ (ಕಥವಾ ಬಲ್ಲೆ) ಹೇಳುತ್ತಾನೆ. ಅವನಿಗೆ ಓದಲು ಬಾರದೆಂದು ಹೇಳುವವರ ಮೇಲೆ ಊರವರು ದಂಗೆಯೆದ್ದಾರು!

ದ. ಕ. ಜಿಲ್ಲಾ ಬಂಟರ ಯಾನಾಡವರ ಸಂಘದ ಮಹಾಸಭೆ:— ತಾ- 31-12-44ರಲ್ಲು ಪೂರ್ವಾಹ್ನ ಘಂಟೆ 10 ಕ್ಕೆ ಮಂಗಳೂರು ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ 36ನೇ ವಾರ್ಷಿಕ ಮಹಾಸಭೆಯು ಶ್ರೀ ಮೂಲ್ಕಿ ರಾಮಕೃಷ್ಣ ಪೂಂಜರ ಅಧ್ಯಕ್ಷತೆಯಲ್ಲಿ ಜರಗಿತ- ಶ್ರಧಾಂತಃ ಅಧ್ಯಕ್ಷರು ಸೂಚಿಸಿದ ಮೇರೆಗೆ ಸಂಘದ ನಿಂಬಾರಾಗಿದ್ದು ಮರಣಹೊಂದಿರುವ ಸುಬ್ಬಣ್ಣು ಶೆಟ್ಟಿ, ಯಜ್ಞ- ರಾಮಯನ್ನಾಳ್ವರ, ಮಂಚಿ ಟ್ಟು ತಿಮ್ಮಪ್ಪಹೆಗ್ಗಡೆರ ಮತ್ತು ವೆರ್ಣ ದೊಮ್ಮಾಲ್ವರ ನಿಧನದ ಕಂಠಿತ ದುಃಖ ಸೂಚನೆಯ ಠರಾವನ್ನು ಸಭೆಯ ಎಲ್ಲ ನಿಂಬರರೂ ಎದ್ದು ನಿಂತು ವಂ ಜೂರು ಮಾಡಲಾಯಿತು.

ನಂತರ ಸಂಘದ ಕಾರ್ಯದರ್ಶಿಯ, ಕೋಶಾಧಿ ಕಾರಿಯ, ಬಡ ವಿದ್ಯಾರ್ಥಿ ಫಂಡಿನ, ವಂಗಳ್ಳೂರು ಶ್ರೀ ರಾಮಕೃಷ್ಣ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿ ಭವನಗಳ, ಉಪ ವಿದ್ಯಾರ್ಥಿ ಭವನಗಳ ವಾರ್ಷಿಕ ವರದಿಗಳು- ಜಮಾಖರ್ಚು ಸ್ಟೇಟ್‌ಮೆಂಟುಗಳು. ಆಡಿಟರರ ರಿಪೋರ್ಟು ಸನದ ಇದ್ದು ಮಂಜೂರು ಮಾಡಲ್ಪಟ್ಟಿತು. ಮತ್ತು 1945ನೇ ಇಸ್ವಿ ವರ್ಷಕ್ಕೆ ಸಂಘದ ಅಧಿಕಾರಿಗಳಾಗಿ ರಾವ್ ಬಹದೂರು ಕೆ. ಟಿ. ಅಳ್ವರು ಅಧ್ಯಕ್ಷರಾಗಿಯೂ, ರಾವ್‌ಸಾಹೇಬ್ ಪಿ. ಆರ್. ರಂಗನಾಥ ಶೆಣೈರು ಉಪಾಧ್ಯಕ್ಷರಾಗಿಯೂ, ಕೆ. ಸದಾನಂದ ಹೆಗ್ಗಡೆಯವರು ಕಾರ್ಯದರ್ಶಿಯವರಾಗಿಯೂ, ಆತ್ತಾವರ ವಿರಲ ಪೂಂಜರು ಕೋಶಾಧಿಕಾರಿಯಾಗಿಯೂ ಮತ್ತು ಕಾರ್ಯಂ ಮೆಂಬರರಲ್ಲದೆ ಕಾರ್ಯನಿರ್ವಾಹಕ ಕಮಿಟಿಗೆ 15 ಮೆಂಬರರನ್ನೂ ಆರಿಸಲ್ಪಟ್ಟರು.

ಮಹಾಸಭೆಯಲ್ಲಿ ಅಧ್ಯಕ್ಷರ ಅನುಮತಿಯಿಂದ ಪಾಸಾದ ನಿರ್ಣಯಗಳು.

(1) ಈ ಜಿಲ್ಲೆಯ ವ್ಯವಸಾಯ ಮತ್ತು ಕೈಗಾರಿಕೆ ಅಭಿವೃದ್ಧಿಸುವದಕ್ಕೋಸ್ಕರ ಮೈಸೂರು ಸಂಸ್ಥಾನದ ಗೆಸೊಪ್ಪೆಯ ವಿದ್ಯಾಸು ಪ್ರಾಂತ್ಯದ ಪೈಕಾರ ಇಲೆಕ್ಟ್ರಿಸಿಟಿ ಸಪ್ಲೈ ಸ್ಕೀಮನ್ನಾಗಲಿಂದ ಸುಲಭದರದಲ್ಲಿ ವಿದ್ಯುಚ್ಛಕ್ತಿಯನ್ನು ನಮ್ಮ ಜಲ್ಲೆಗೆ ಒದಗಿಸಿ ಕೊಡುವಂತೆ ಸರಕಾರದವರು ಕೂಡಲೆ ಶಕ್ತ ನ್ಯೆವಸ್ಥೆಯನ್ನು ಮಾಡುವುದು ಅಗತ್ಯ-(2) ಈಗ ಜಲ್ಲೆಯಲ್ಲಿ ಆಹಾರದ ಧ್ಯೆರ ಗಳನ್ನು ಹೆಚ್ಚಾಗಿ ಬೆಳೆಯಿಸುವದು ಅಗತ್ಯವಿರುವದರಿಂದ ಸರಕಾರದವರು ಈ ಜಿಲ್ಲೆಯಲ್ಲಿರುವ ಎಲ್ಲಾ ಕಣ್ಣು ನೀರಾವರಿ ವಿಸಾಹಕ ಗಳನ್ನು ಕೂಡಲೇ ರಿಪೇರಿ ಮಾಡಬೇಕಾಗಿ ಕೇ

ಹಿಕ್‌ಮತ್ ಇರುವದರಿಂದಲೇ ಹಿರಿಯನಿದ್ದಾನೆ. ಹಿರಿಯನ ಈ ಹಿರಿಮೆ ಚರ್ಚಿಲ್-ಹಿಟ್ಲರರ ಪೈಕಿ ಯಾವನಾದರೊಬ್ಬನಿಗಿರುತ್ತಿದ್ದರೆ ಇಂದಿನ ಲೋಕಯುದ್ಧವೇ ಇರುತ್ತಿರಲಿಲ್ಲ. ಯುದ್ಧಾರಂಭವಾದ ಮೇಲೆ ಯಾವ ಕಡೆಯವರನ್ನಾದರೂ ಅದು ಸೇರುತಿದ್ದರೆ, ನಂ. 1ನೇ ಗುಪ್ತಾಸ್ತ್ರವಾಗಿ ವಿಜಯ ದೊರಕಿಸಿಕೊಡುತ್ತಿತ್ತು. ಆದರೇನು ಮಾಡಲಿ-ಹಿಕ್‌ಮತ್ ಅಭಾವದಿಂದಾಗಿ ಎಲ್ಲವೂ ಹಿಂದುಮುಂದಾಗಿವೆ!

ಒರುವ ವಾರ— **ಸುಧಾರಕ ಸುಶೀಲ.**

ತಾ. 5—1—45 ರಿಂದ

ರಮಣೀಕ ಪ್ರೊಡಕ್ಷನ್ಸ್‌ನವರ

ದುರ್ಗಾ

ಸಾಹು ನೋಡಿಕ್, ಯಶೋಧರಾ ಖಾಟ್ಸು, ಮಾಯಾ ಬೆನರ್ಜಿ, ರಾಮಕುಕ್ಲ ನೊದಲಾದವರು.

ಬರುವ ಚಿತ್ರ: ಭಕ್ತಚೇತ, ಗೋರಕುಂಬರ್, ಪೃಥ್ವೀವಲ್ಲಭ್, ಶುಕ್ರಿಯಾ.

ಶ್ರೀ ರಾಮಕೃಷ್ಣ ಥಿಯೇಟರ್, ಲಿಮಿಟೆಡ್, ಉಡ್ಡಿ.

ಳಿಕೊಳ್ಳತಕ್ಕದ್ದು- ಈ ಮೇಲಿನ ನಿರ್ಣಯಗಳನ್ನು ಮದ್ರಾಸು ಗವರ್ನಮೆಂಟಿಗೂ, ಜಲ್ಲಾ ಕಲೆಕ್ಟರರಿಗೂ ಕಳುಹಿಸಬೇಕಾಗಿ ನಿಶ್ಚಯಿಸಲ್ಪಟ್ಟಿತು- (3) ನಮ್ಮ ಸಮಾಜದ ವಿದ್ಯಾ ಮತ್ತು ಆರ್ಥಿಕ ಸ್ಥಿತಿಯನ್ನು ಸ್ವತಂತ್ರಗೊಳಿಸುವ ಒಂದು ಯೋಜನೆಯನ್ನು ತಯಾರಿಸಿ ಅಗತ್ಯವುಳ್ಳ ಕಾರ್ಯವನ್ನು ಕೈಕೊಂಡು ಮುಂದರಿಸುವ ಅಧಿಕಾರವಿದ್ದ ಈ ಕೆಳಗಿನ ಮೆಂಬರರುಳ್ಳ ಕಮಿಟಿಯು ನೇಮಿಸಲ್ಪಟ್ಟಿತು- 1 ರಾವ್ ಬಹದೂರು ಕೆ. ಟಿ. ಅಳ್ವ, 2 ಎ. ಬಿ. ಶೆಟ್ಟಿ, 3 ರಾವ್‌ಸಾಹೇಬ್ ಪಿ. ಆರ್. ರಂಗನಾಥ ಪೂಂಜ 4 ಬಿ. ಮಂಜಯಹೆಗ್ಡೆ 5 ಯನ್. ರಾಮ್ಯ ಕೃಷ್ಣ ಪೂಂಜ, 6 ಪಿ. ಮಹಾಬಲಹೆಗ್ಡೆ, 7 ಕೆ. ಸದಾನಂದಹೆಗ್ಡೆ (Convener) (4) ಈ ಕೆಳಗಿನ ತಾಲೂಕು ಕಮಿಟಿಗಳು ನೇಮಿಸಲ್ಪಟ್ಟಿತು- ಸದ್ರಿ ತಾಲೂಕು ಕಮಿಟಿಗಳಿಗೆ ಆಯಾಯ ತಾಲೂಕಿನಲ್ಲಿರುವ ಉಪಭವನಗಳ ಆಡಳಿತೆಯನ್ನು ಸರಿಯಾಗಿ ನಡಿಸುವ ವ್ಯವಸ್ಥೆ, ಭವನದ ಕಟ್ಟಡಗಳ ದುರಸ್ತಿ ಮತ್ತು ತಾಗಾಕಿಗೆ ಸಮ್ಮಂಧಿಸಿದ ಇತರ ಅಭಿವೃದ್ಧಿ ಕೆಲಸವನ್ನು ಮಾಡಿಸುವದಕ್ಕೆ ಸಹಾ ಅಧಿಕಾರ ಕೊಡಲ್ಪಟ್ಟಿದೆ- ಕುಂದಾಪುರ ಕಮಿಟಿಯವರು ಉಪಭವನಕ್ಕೆ ಸ್ಥಂಡ ಕಟ್ಟಡ ಕಟ್ಟಿಸುವ ಕಾರ್ಯವನ್ನು ಕೂಡಲೆ ಅಲೋಚಿಸಬೇಕಾಗಿ ಮಾಹಾಸಭೆಯು ಅಪೇಕ್ಷಿಸುತ್ತದೆ- ಮಿಟ್ಟಿಗೆ ಹೆಚ್ಚಿನ ಖರ್ಚು ಬೇಕಾದರೆ ಸದ್ರಿ ತಾಲೂಕಿನಲ್ಲಿಯೇ ಸಂಗ್ರಹಿಸುವದು ಅಗತ್ಯ- ಕಾರಣೀಡು ಕಮಿಟಿಯವರು ಉಪ ವಿದ್ಯಾರ್ಥಿ ಭವನವನ್ನು ತರೆಯುವ ಮತ್ತು ಕಟ್ಟೋಡುವನ್ನು ಕಟ್ಟಿಸುವ ಕೆಲಸವನ್ನು ಕೂಡಾ ಕೈಕೊಳ್ಳಬೇಕಾಗಿ ನಿರ್ಣಯಿಸಲ್ಪಟ್ಟಿತು. ಕಮಿಟಿಯವರು ಆಗತ್ಯ ವಿದ್ದಲ್ಲಿ ಆಯಾಯ ತಾಲೂಕಿಗೆ ಳ ಬೇರೆ ಮೆಂಬರರನ್ನು ಒಟ್ಟಿಗೆ 10ಕ್ಕೆ ಮೀರದಂತೆ ಸೇರಿಸಿಕೊಳ್ಳಬಹುದು.

ಕುಂದಾಪುರ ತಾಲೂಕು—1 ಕೆ. ವೆಂಕಪ್ಪ ಶೆಟ್ರು- 2 ಬಿ. ಶಿವರಾವಶೆಟ್ರು, 3 ಸೌಕೂರು ಅಂಕಣ್ಣಶೆಟ್ರು, 4 ಎಚ್ಚರ ಮಂಜಯಶೆಟ್ರು, (Convener) 5 ಬಸ್ರೂರು ತೇಜಪ್ಪಶೆಟ್ರು

ಉಡುಪಿ ತಾಲೂಕು—ಶ್ರೀಯುತರು 1 ಕೆ. ಜಗನ್ನಾಥ ಬಲ್ಲಾಳರು- 2 ಬಿ. ಶಿನಪ್ಪಹೆಗ್ಗಡೆರು 3 ಕವಿರಾಜ ಯನ್- ಮಾಹಾಬಲ ಶೆಟ್ರು 4 ಎ. ಯಮ್- ನಾಗಣ್ಣಹೆಗ್ಗಡೆರು, 5 ಬೇರಂಬಳ್ಳಿ ಕೃಷ್ಣಯ್ಯಹೆಗ್ಗಡೆರು, 6 ಟಿ- ನಾರಾಯಣಶೆಟ್ರು (Convener)

ಕಾರ್ಕಳ ತಾಲೂಕು —ಶ್ರೀಯುತರು 1 ಜಾ ಕಳ ನಾಗಣ್ಣಹೆಗ್ಗಡೆರು, 2 ಡಾ! ನಿಟ್ಟೆ ಮಹಾಬಲಅಧ್ಯಂತಾಯರು, 3 ಯನ್- ವೀಣಾಪಾಣಿ ಅಧ್ಯಂತಾಯರು, 4 ಪಿ- ಶಾಂಬಶೆಟ್ರು, 5 ಕೆ. ಮಹಾಬಲಹೆಗ್ಗಡೆರು (Convener)

ಪುತ್ತೂರು ತಾಲೂಕು—ಶ್ರೀಯುತರು 1 ಬಿ. ದಾಸಪ್ಪಗೌಡರು, 2 ಡಾ! ಕೆ. ಶಿನಪ್ಪಭಂಡಾರಿ, 3 ಕುಳ ರಾಮಣ್ಣರೈ, 4 ಯಟ್. ಸಂಜೀವಶೆಟ್ಟಿ, 5 ಕೆ- ನಾರಾಯಣರೈ, 6 ಯಮ್- ಅತ್ತಪ್ಪರೈ, 7 ಯಸ್- ಮಹಾಬಲರೈ (Convener)

ಕಾಸರಗೋಡು ತಾಲೂಕು—ಶ್ರೀಯುತರು 1 ಕೆ- ರಾಮಶೆಟ್ರು, 2 ಡಾ! ಪಿ. ವಿಠಲಭಂಡಾರಿ, 3 ಬಂಬ್ರಾಣ ನಾರಾಯಣರೈ, 4 ಯವಮ್- ಜಿ- ಗಣೇಶ ನಾರಾಯಣರೈ, 5 ಡಾ! ಚಕ್ಕೆಪ್ಪ ಅಳ್ವ, 6 ಕೆ- ಸುಂದರರಾವಶೆಟ್ಟಿ, (Convener)

(5) ಕಳದ ಮಹಾಸಭೆಯಲ್ಲಿ 'ಹುಡುಗಿಯರ ವಿದ್ಯಾರ್ಥಿನಿ ಭವನ ಕಟ್ಟೋಣ ಫಂಡಿಗೆ'-ಹಣ ಸಂಗ್ರಹಿಸುವದಕ್ಕೋಸ್ಕರ ನೇಮಿಂದಲ್ಪಟ್ಟ ಕಮಿಟಿಯ ವೆಂಬರಾದ ಶ್ರೀ ಸೌಕೂರು ಅಂಕಣ್ಣಶೆಟ್ರು, ಜಾಕಳ್ಳ ನಾಗಣ್ಣ ಹೆಗ್ಗಡೆರು ಮತ್ತು ಮಲ್ಲಿ ದಾವಿಕೃಷ್ಣ ಪೂಂಜರು ಇವರು ಶ್ರೀಯುತರೆಲ್ಲ ಮುಂಬೈ ಅತ್ತ ಕಡೆ ಹೋಗಿ ಸುಮಾರು ರೂ. 7000ಕ್ಕಿಂತ ಮಿಕ್ಕ ಧನ ಸಂಗ್ರಹಿಸಿದುದಕ್ಕಾಗಿ ಮಾಹಾಸಭೆಯು ಸದ್ರಿ ಮಹಾನುಭಾವರನ್ನು ಅಭಿನಂದಿಸುತ್ತದೆ- ಮತ್ತು ವಸೂಲಿ ಕೊಟ್ಟ ಮತ್ತು ಧಾರಾಳವಾ ದಾಯಿ ಅಲ್ಲಿಯ ನನ್ನು ಸಮಾಜ ಬಂಧುಗಳು ಇತರ ಮಹಾನುಭಾವರಿಗೆ ಸಂಭವಿಸಿ ಕೈಕಜ್ಜತೆಯನ್ನು ವ್ಯಕ್ತಪಡಿಸುತ್ತದೆ. ಸದ್ರಿ ಕಮಿಟಿಗೆ ಇನ್ನು ಮುಂದಕ್ಕೂ ಕಟ್ಟೋಣ ಫಂಡಿಗೆ ಹಣ ಸಂಗ್ರಹಿಸುವ ಅಧಿಕಾರ ಕೊಡಲಾಯಿತು.

ಕೊನೆಗೆ ಅಧ್ಯಕ್ಷರ ಸ್ವಾರ್ಥಿದಾಯಕ ತುಳು ಭಾಷಣ, ಶ್ರೀ ಕೆ. ಟಿ ಅಳ್ವರ ಧನ್ಯವಾದ ಸಮರ್ಪಣೆಯನಂತರ ಸಭಾಂತ್ಯವಾಯಿತು. ಸಭೆಯಲ್ಲಿ ಹಳೆ ವಿದ್ಯಾರ್ಥಿ ಸಂಘದವರು ಫಲಾಹಾರವನ್ನು ಸತ್ಕರಿಸಿದರು.

ದಕ್ಷಿಣ ಕನ್ನಡ,
ಮಂಗಳೂರು

ಡ್ರಗ್ಸ್ ಕಂಟ್ರೋಲ್ ಲೈಸನ್ಸುಗಳು-1943 ನೇ ಯಸವಿ ಡ್ರಗ್ಸ್ ಕಂಟ್ರೋಲ್ ಆರ್ಡರಿನಸ್ವಯ ಬರುವ ಎಲ್ಲಾ ಲೈಸನ್ಸುಗಳು 1945ನೆ ಯಸವಿ ಫೆಬ್ರುವರಿ ತಾ. 15ರ ತನಕ ಸಿಂಧುವಾಗಿನೆ. ಮುಂದಿನ ವರ್ಷಕ್ಕೆ ಲೈಸನ್ಸು ಬೇಕಾದವರು ಅವಿಗಳನ್ನು ಪುನಶ್ಚರಿನಿಷ್ಕೀ ವಾಡುವುದು ಆಗತ್ಯವಿದೆ. ಹಾಗೆ ರಿನ್ಯೂ (Renew) ಮಾಡಲ ಪೇಕ್ಷಿಸುವವರು ತಾ. 15—2—45ರೊಳಗಾಗಿ ಅವುಗಳನ್ನು ವಾಡಿಸಿ ಕೊಳ್ಳತಕ್ಕದ್ದೆಂಬುದಾಗಿ ಜಿಲ್ಲಾ ಕಮರ್ಶಿಯಲ್ ಟೇಕ್ಸ್ ಆಫೀಸರ ಎ ತಮ್ಮ ಒಂದು ಪ್ರಕಟಣೆಯಲ್ಲಿ ಜಾಹೀರು ಪಡಿಸಿರುತ್ತಾರೆ.

ಜಿಲ್ಲಾ ಪುಡ್ ಕೌನ್ಸಿಲ್
ಅಕ್ಕಿ ಒಪ್ಪಿಸುವ ಅವಧಿ ಮತ್ತೂ ಮುಂದುವರಿಸಲಾಯಿತು.

ತಾ. ೫ರಂದು ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಸೇರಿದ ಫುಡ್ ಕೌನ್ಸಿಲ್ ಸಭೆಯಲ್ಲಿ ಅಕ್ಕಿಯನ್ನು ಸಂಕ್ರಮಿಸುವ ಅನಂತರವು ತಯಾರಿಸುವ ಕ್ರಮ ಎಂದು ಹಲವರು ವಾದಿಸಲು, ಅಕ್ಕಿಯನ್ನು ಸ್ಟೋರುಗಳಗೆಹಿಸ್ಪಿಸುವ ಎಡೆ ಮತ್ತು ವಿಧಾನಿಯ ಕಂತುಗಳನ್ನು ಮುಂದುವರಿಸುವ ನಿರ್ಣಯವನ್ನು ಕೈಕೊಳ್ಳಲಾಯಿತು ಈ ನಿರ್ಣಯದಂತೆ ಜನವರಿ ತಾ. ೧೫ರಂದು ಒಪ್ಪಿಸಬೇಕಾಗಿದ್ದ ೬/೫ ಅಂಶದ ಎರಡನೆಯ ಕಂತನ್ನು ಜನವರಿ ತಾ ೩೧ರೊಳಗೂ; ಜನವರಿ ತಾ. ೩೧ಕ್ಕೆ ಒಪ್ಪಿಸಬೇಕಾಗಿದ್ದ ಕೊನೆಯ ಕಂಪೆ ತನ್ನ ಮಹಿ ಅಂತ್ಯದೊಳಗೂ ಮುಟ್ಟಿಸಬಹುದೆಂದಾಯಿತು. ಅವಸರದಿಂದ ಅಕ್ಕಿಯನ್ನು ಹೊಳಮಾಡಿ ತಂದೆಪ್ಪಿಸಬಾರದೆಂದೇ ಈ ರೀತಿಯಾಯಿತು ಉದ್ದೇಶ.

ಕುಂದಾಪುರ ಉದುಪಿಗಳಲ್ಲಿ ಭತ್ತವನ್ನು ಅಲ್ಲುಗಳಿಗೆ ಕೊಟ್ಟು ಅಕ್ಕಿ ವಾಡಿಸಿ ಕೊಂಡೊಯ್ಯುವ ಕ್ರಮವಿದೆ. ಇನ್ನು ಮುಂದೆ ಸ್ವಂತ ಖರ್ಚಿನ ಅಕ್ಕಿಯನ್ನು ಮಿಲ್ಲಿನಿಂದ ಕೊಂಡೊಯ್ಯುವಾಗ ಸ್ಥಳೀಯ ತಹಶೀಲ್ದಾರರಿಂದ ಪರ್ಮಿಟು ಮಾಡಿಸಿಕೊಳ್ಳಬೇಕೆಂದಾಯತು.

ಅನಲಕ್ಕಿಯು ಹಸಿ ಗೆ ಪದಾರ್ಥವೆಂದು ಪರಿಗಣಿಸಲ್ಪಟ್ಟ ಬಳಿಕ ಅದರ ಮೀಲಿನ ನಿರ್ಬಂಧದಿಂದ ಆ ಕೈಗಾರಿಕೆಯ ಕೆಲಸಗಾರರಿಗೂ ಅವಲಕ್ಕಿಯನ್ನು ಉಪಯೋಗಿಸುವವರಿಗೂ ದೊಡ್ಡ ನಷ್ಟವುಂಟಾಗುವುದೆಂದು, ಅವಲಕ್ಕಿಯ ಕುಟ್ಟುವವರಿಗೆ ಒಕ್ಕವನ್ನು ಕೊಟ್ಟು, ಅವರು ಅದನ್ನು ಬೇರೆ ವಿಧದಿಂದ ದುರುಪಯೋಗಪಡಿಸದೆ, ಅವಲಕ್ಕಿಯನ್ನೇ ಸಿದ್ಧಗೊಳಿಸುವಂತೆ, ಯೋಜನೆಯೊಂದನ್ನು ಸಿದ್ಧಗೊಳಿಸಲು ಶ್ರೀ ನೊಳಹಳ್ಳಿ ಶಿವರಾಯರ ಅಧ್ಯಕ್ಷತೆಯಲ್ಲಿ ಸಮಿತಿಯೊಂದು ನೇಮಿಸಲ್ಪಟ್ಟಿತು.

ಉಳಿಕಾಯ್ಕ ರಿಕ್ವಿಸಿಶನ್ ಕ್ರಮ-ಗಳ ವಿಚಾರವಾಗಿ ಜನತೆಯಲ್ಲಾಗಿರುವ ಸಂದೇಹಗಳ ಸ್ಪಷ್ಟೀಕರಣಕ್ಕಾಗಿ ಶ್ರೀಗಳಾದ ಜನರಾಜ ಹೆಗ್ಡೆ, ಮೊಳಹಳ್ಳಿ ಶಿವರಾವ್, ರಂಗನಾಥ ಪೂಂಜ ಮತ್ತು ಕೆ. ಟಿ ಆಳ್ವರನ್ನೊಳಗೊಂಡ ಸಮಿತಿಯೊಂದು ಸ್ಥಾಪಿಸಲ್ಪಟ್ಟಿತು.

ನೀರಾವರಿ ಹಾಗೂ ಅಧಿಕ ಆದಾಯ ಬೆಳೆಸುವ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ಸಲುವಾಗಿ ಶ್ರೀಗಳಾದ ಎ ಬಿ ಸೆಟ್ಟಿ, ರಂಗನಾಥ ಪೂಂಜ, ಕೆ ಟಿ ಆಳ್ವ ಮತ್ತು ಆರ್ ಎಸ್ ಸಪೂರನ್ನೊಳಗೊಂಡ ಸಮಿತಿಯೊಂದು ಸ್ಥಾಪಿತವಾಯಿತು. ಕೋವಿ ಲೈಸನ್ಸುಗಳನ್ನು ಹೆಚ್ಚಿಸಬೇಕೆಂಬ ಸಾಡಿಕೆಗೆ ಕಲೆಕ್ಟರರು ಒಪ್ಪಿಗೆ ಇತ್ತರು

ಹೆಚ್ಚು ಚಿಲ್ಲರೆ—ಇತ್ತೆಂಬ ಕಾರಣದಿಂದ ಮಾರ್ಕೇಟಿನ ಹಣ್ಣು ವ್ಯಾಪಾರಿಯೊಬ್ಬನಿಗೆ ರೂ. ೪೦೦ ಜುರುಮಾನೆ ವಿಧಿಸಲಾಯಿತು.

ಪ್ರಿನ್ಸಿಪಲ್ ಸಬ್ ಜಡ್ಜರಾಗಿ—ಮಂಗಳೂರಿಗೆ ಶ್ರೀ ಎ. ಪರಮೇಶ್ವರ ಅಯ್ಯರರು ಬರಲಿದ್ದಾರೆಂದು.

ಸೀಯಾಳಗಳನ್ನು ಅಂಗಡಿಗಳಲ್ಲಿ ವಾರ ಕೊಡದೆಂಬ ನಿರ್ಬಂಧ ಹಾಕಿಲಾಗಿದ್ದುವು ಎಂದು ಅಲ್ಲಲ್ಲಿ ಹರಡಿದ್ದ ವಾರ್ತೆ ನಿರಾಧಾರವಾನುದೆಂದು ತಿಳಿದು ಬಂದಿದೆ.

ದುರ್ಮರಣ:—ಕೊಡಿಯೂರು ಗುತ್ತು ಹತ್ತಿರ ಕೆರೆಯೊಂದರಲ್ಲಿ ತಾ. ೨೭ರಂದು ಬೆತ್ತಿ ಬಿಯಲು ಬಂದಿದ್ದ ಯುವತಿಯೋರ್ವಳು ಕಾಲು ಜಾರಿ ಕೆರೆಗೆ ಬಿದ್ದು ಪ್ರಾಣಬಿಳಿಕೊಂಡಳು.

ಗಾನ ಕಲಾ ಮಂಡಲಿಯವರು ಏರ್ಪಡಿಸಿದ ಸಂಗೀತ ಸ್ಪರ್ಧೆಯಲ್ಲಿ ೧೨ ಮಂದಿ ಹುಡುಗಿಯರು ಭಾಗವಹಿಸಿದ್ದರು. ಬಹುಮಾನಗಳು ಅನುಕ್ರಮವಾಗಿ ಕುಮಾರಿಯರು ನಿ. ವಾಲತಿ, ಎಚ್. ನಾಗಮ್ಮ, ಎಸ್. ಸರಸ್ವತಿ ಮತ್ತು ಕೆ. ಸರೋಜಿನಿ ಇವರಿಗೆ ದೊರೆತಿವೆ.

ದಿ| ಎಸ್. ಎನ್. ಕಾಮತರ ತೈಲಚಿತ್ರ ಅನಾವರಣೋತ್ಸವವು ತಾ. ೨೫ರಂದು ಕೆನರಾ ಹೈಸ್ಕೂಲಿನ ಭುವನೇಂದ್ರ ಸಭಾ ಭವನದಲ್ಲಿ ಶ್ರೀ| ಅಮ್ಮೆಂಬಳ ಶ್ರೀನಿವಾಸಸ್ಯೆಗಳವರಿಂದ ನೆರವೇರಿಸಲ್ಪಟ್ಟಿತ.

ಕೆನರಾ ಹೈಸ್ಕೂಲಿನ ಪರ್ಯಂತ್ಯೋತ್ಸವವು ತಾ ೨೫ರಂದು ನಗರ ಸಭಾಧ್ಯಕ್ಷರಾದ ಜಿ. ಪುತ್ತು ರು ಹುಸೇನ್ ಸಾಹೇಬರ ಅಧ್ಯಕ್ಷತೆಯಲ್ಲಿ ಜರಗಿತು. ವಾರ್ಷಿಕ ಶ್ರೇಯಃ ಬ್ಯಾಧ್ಯಸಾ ಭಾಷಣವನ್ನು ರಾ| ಬ| ಶ್ರೀ| ಕೆ. ಟಿ. ಆಳ್ವರಿತ್ತರು. ಈ ಸಂಸ್ಥೆಯು ಮತ್ತು ಉರ್ವದಲ್ಲಿಗೆ ಹೊಸಶಾಲಾ ಸ್ಥಾಪಿಸಿಸುವ ಇರಾದೆಯು ವರ್ತಮಿಗಳನ್ನು ಆಯೂ ತಿಳಿಗಳ ಮುಖ್ಯೋಪಾಧ್ಯಾಯರು ಓದಿದರು.

ಕೆನರಾ ಹೆಮ್ಮಕ್ಕಳ ತಾಲೆಯ ಸುವರ್ಣೋತ್ಸವ ಸಮಾರಂಭದ ಉದ್ಘಾಟನೆಯ ನ್ನು ಶ್ರೀಮತಿ ಸರಸ್ವತಿ ಬಾ ಕೇಶವ ಪೈ ಆವರು ತಾ. ೨೫ರಂದು ನೆರವೇರಿಸಿದರು, ಹಳೇ ವಿದ್ಯಾರ್ಥಿನಿಯರ ದಿನಾಚರಣೆಯು ತಾ. ೨೬ರಂದು ಶ್ರೀಮತಿ ತಾಂಭವಿ ಆರ್. ಪೂಂಜ ಅವರ ಅಧ್ಯಕ್ಷತೆಯಲ್ಲಿ ಜರಗಿತು.

ಸಿಡುಬು ತಾ. ೨೯ರ ತನಕ ಲಿ ಮಂದಿಗೆ ತಗಲಿ ೧೪ ಮಂದಿ ಮಡಿದರು.

ಕೋವಿ ಲ್ಯಾಸೆನ್ಸುಗಳು

ಕೋವಿ ಲ್ಯಾಸೆನ್ಸುಗಳನ್ನು ರಿನ್ಯೂ (Renew) ಮಾಡಿ ಸ್ಯರ್ಯಮಿ ಕೋವಿದಾರರಿಗೆ ತಹಶೀಲ್ದಾರರ ಮುಖಲಕ ಕಳುಹಿಸುವ ಕ ರ್ಯವನ್ನು ಶೀಘ್ರವೆ ಕೈಕೊಳ್ಳಲಾಗಿಯಿದೆ. ಆಯಾಯ ತಾಲೂಕಿನ ತಹಶೀಲ್ದಾರರಿಂದ ಲ್ಯಾಸೆನ್ಸುಗಳನ್ನ ಅದಷ್ಟು ಬೇಗನೆ ಪಡೆಯಬೇಕಾಗಿ ಸಾರ್ವಜನಿಕರಿಗೆ ತಿಳಿಸಲಾಗುತ್ತದೆ ಇದೇ ತಾ. 15ರ ತನಕ ಕೋವಿಗಳನ್ನು ರಿಪೊಜಿಟ್ ಮಾಡಬೇಕಾದ ಆವಶ್ಯಕತೆಯಿಲ್ಲ. ಆದರೆ ರಿನ್ಯೂ ಮಾಡಿದ ಲ್ಯಾಸೆನ್ಸುಗಳನ್ನ ಪಡೆಯುವುದು ನಾತ್ರ ಕೋವಿದಾರರ ಜವಾಬ್ದಾರಿಯಾಗಿದೆ ಎಂದು ಜಿಲ್ಲಾ ಕಲೆಕ್ಟರರ ಪ್ರಕಟಣೆ ಸಾರಿದೆ.

ಪ್ರತಿವಾದಿರು ಪಾದಿರಿಗೆ ಬರಕೊಟ್ಟ ದಾವಾ ಪ್ರೊ. ನೋಟು ಪ್ರಕಾರವೂ 1ನೇ ಪ್ರತಿವಾದಿ ಯು ಪಾದಿರಿಗೆ ಬರಕೊಟ್ಟ ಕರಾರು ಪ್ರಕಾರ ಎಡ್‌ವಾನ್ಸು ಪಡೆದ ಲೃವಜಿನ ಬಗ್ಗೂ ಕೂ ಡಾ 1ನೇ ಪ್ರತಿವಾದಿಯಿಂದ ರೂವ್ಯಾ98-6-0 + 2ನೇ ಪ್ರತಿವಾದಿಯಿಂದ ರೂ. 52-11-8 ಕೂಡಾ ರೂಪ್ಯಾ 151-1-8ನ್ನು ಬರಮಾಡಿ ಕೊಳ್ಳುವದೆ ದಾಕ್ಲು ಮಾಡಿದ ಮೇಲ್ಕಂಡ ವ್ಯಾಜ್ಯದಲ್ಲಿ 2ನೇ ಪ್ರತಿವಾದಿಗೆ ಆಗತಕ್ಕ ಸಂ ಮ್ಮನ್ಸು S. I. A. no. 7/45ನೇ ಆರ್ಡರ್ ಪ್ರಕಾರ ನಬಸ್ಸಿಟ್ಯುಟೆಡ್ ಸರ್ವಿಸ್ ಮೇರೆಗೆ ಜ್ಯಾರಿ ಆಗಬೇಕಾಗಿ ಹ್ಯಾಂ ಆಗಿ ವ್ಯಾ ಜ್ಯವು ತಾರೀಕು 31—1—1945ಕ್ಕೆ ಪ್ರಥಮ ಪನ್ಕೆ ಬರ್ಗೈಯಿಟ್ಟರುವದೆಂದೂ ಆ ದಿನ್ನ 2ನೇ ಪ್ರತಿವಾದಿಯು ಹಾಜರಾಗದಿದ್ರೆ ಎಕ್ಸ್‌ಪಾರ್ಟಿ ಯಾಗಿ ತೀರ್ಮಾನಿಸಲ್ಪಡುವದೆಂದೂ ಈ ನೂಲ್ಕ ತಿಳಿಸೋಣವಾಗುತ್ತದೆ.

By order of the Court.

Mangalore 15—1—45 } L. C. Pais, B A B.L. Vakil for Plffs.

ದಕ್ಷಿಣ ಕನ್ನಡ,
ಮಂಗಳೂರು

ಬೀಡಿ ಕೆಲಸಗಾರರ ಸಂಘದ ವಾರ್ಷಿಕ ಸಮ್ಮೇಳನವು ರವಿವಾರ ಸಂಜೆ ಕೇಂದ್ರ ಮೈದಾನದಲ್ಲಿ ಕಲ್ಲಡ್ಕೋಟೆಯ ಜನಾಬ್ ಎ. ಮಹಮ್ಮದ್ ಕೋಯಾ ಅವರ ಅಧ್ಯಕ್ಷತೆಯಲ್ಲಿ ಆಯೋಜಿಸಲ್ಪಟ್ಟಿತು. ಹಬ್ಬಲ್ಯದ ಶ್ರೀ ಎನ್. ಕೆ. ಉಪಾಧ್ಯಾಯರು ಸಮ್ಮೇಳನದ ಉದ್ಘಾಟನೆಮಾಡಿದರು. ಶ್ರೀ ಬಿ.ವಿ. ಕಕ್ಕಿಲ್ಲಾಯರು ಕೆಂಪು ಧ್ವಜವನ್ನು ಹಾರಿಸಿದರು. ಬೀಡಿ ಕೆಲಸಗಾರರ ಕೇಣಿಕೆಗಳನ್ನು ಮುಂದಿಡುವ ಶ್ರೀ ಎಸ್. ಎನ್. ಹೊಳ್ಳರ ಬಿಡುಗಡೆಯಾಗಬೇಕೆನ್ನುವ, ಕಾಂಗ್ರೆಸ್ ಲೀಗ್ ವಿತ್ತವನ್ನು ಆಕ್ಷೇಪಿಸುವ, ಕಾಂಗ್ರೆಸಿನ ಇಲ್ಲಿನ ಜಾತೀಯ ಹೆಸರನ್ನು ದುರುಪಯೋಗ ಮಾಡಿ ಪ್ರತಿಸ್ಪರ್ಧಿಯೂನಿಯನುಗಳನ್ನು ರಚಿಸುವವರನ್ನು ಎಚ್ಚರಿಸುವ ಕೆಂಪುಪಡೆ ಮತ್ತು ಸೋವಿಯೆಟ್ ಜನತೆಗೆ ವಂದನೆ ಸಲ್ಲಿಸುವ ಮಿತ್ತಿಕರ ನಿರ್ಣಯಗಳು ಸ್ವೀಕೃತವಾಗಲ್ಪಟ್ಟವು.

ಅಕ್ಕಿ ಮತ್ತು ಜಿಮ್ಮೂರುಗಳ್ಳಿ ಅಗಸ್ಟ್ ಗಲಭೆಯ ಸಮಯದಲ್ಲಿ ಬಂಧಿಸಲ್ಪಟ್ಟು ಮರಣ ದಂಡನೆಗೆ ಗುರಿಯಾದವರನ್ನು ಗಲ್ಲಿಗೇರಿಸಬಾರದೆಂದು, ಕೇಳುವ ನಿರ್ಣಯವು ಬೀಡಿ ಕೆಲಸಗಾರರ ಸಮ್ಮೇಳನದಲ್ಲಿ ಸ್ವೀಕೃತವಾಗಿದ್ದು ಅದನ್ನು ಕಳುಹುವ ಮೆಚ್ಚಕ್ಕಾಗಿ ಹಣವು ಸಭೆಯಲ್ಲೇ ಸಂಗ್ರಹಿಸಲ್ಪಟ್ಟಿತು.

ತ್ಯಾಗರಾಜ ಮಹೋತ್ಸವ ಗಾನ ಕಲಾ ಮಂಡಳಿಯವರ ಆಶ್ರಯದಲ್ಲಿ ವಿದ್ಯಾಧಿಕಾರಿ ಶ್ರೀ ಎನ್. ಸುಬ್ಬರಾವ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಆನಂದಾಚಾರ್ಯರಿಂದ ಸ್ವಾಗತವಾದ ಬಳಿಕ ಶ್ರೀ ಎಚ್. ಎಸ್. ಉಡುಪರು ಎಲ್ಲರನ್ನೂ ಸ್ವಾಗತಿಸಿದರು. ಶ್ರೀಯುತರು ಮುಳಿಯ ತಿಮ್ಮಪ್ಪಯ್ಯ, ಪಾತೇಶ್ವರ ರಾಜ್ಞಿ, ಚರಂಜಿ ಹಳ್ಳಿ ಇವರು ತ್ಯಾಗರಾಜರ ಕುರಿತು ಮಾತನಾಡಿದರು. ಸಂಗೀತ ಸ್ಪರ್ಧೆಯಲ್ಲಿಗೆದ್ದವರಿಗೆ ಸಾರಿತೋಷಕಗಳು ಕೊಡಲ್ಪಟ್ಟುವು. ಕೊನೆಯಲ್ಲಿ ಶ್ರೀ ಚೆನ್ನಬಸಪ್ಪ ಸಂಗಡಿಗರ ಮತ್ತು ಶ್ರೀ ಎನ್. ವಾರ್ತಿಯವರ ಗಾಯನ ನಡೆಯಿತ್ತು.

ಜಿಲ್ಲೆಯ ವಿದ್ಯಾ ಸಮ್ಮೇಳನವನ್ನು ವಾರ್ಷಿಕ ಪಾ. ೧೫ರಂದು ಜರಗಿಸಬೇಕೆಂದು ಜಿಲ್ಲಾ ಟೀಚರ್ಸ್ ಗಿಲ್ಡ್ ಕೌನ್ಸಿಲಿನವರು ತಾ ೭ರಂದು ಶ್ರೀ ಎಂ.ಎನ್. ಏಕಾಂಬರರಾಯರ ಅಧ್ಯಕ್ಷತೆಯಲ್ಲಿ ಸಭೆ ಸೇರಿದಾಗ ನಿರ್ಧರಿಸಲಾಯಿತು. ಮೈಂತಿಕ ವಿದ್ಯಾಧಿಕಾರಿ ಸರ್. ಸ್ಯಾಥಮರ ನಿಧನಕ್ಕಾಗಿ ಸಭೆಯು ಸಂತಾಪ ವ್ಯಕ್ತಪಡಿಸಿತು.

ಹಿಂದೂಸ್ಥಾನ್ ಸ್ಕೌಟ್ ಎಸೋಸಿಯೇಶನ್ನಿನ ಕಾರ್ಯಕಾರಿ ಮಂಡಲದ ಸಭೆಯು ತಾ. ೫ರಂದು ಡಾ| ಕೇಶವಪ್ಪ ಅವರ ಅಧ್ಯಕ್ಷತೆಯಲ್ಲಿ ಜರಗಿ ಸುರತ್ಕಲ್ ಸ್ಕೌಟ್ ಸಮ್ಮೇಳನವನ್ನು ಸ್ವೀಕೃತವಾಗಿದ್ದ ನಿರ್ಣಯಗಳನ್ನು ಮಂಜೂರುಮಾಡಿತು. ತಾ. ೨೬ರಂದು ಸಂಘದ ವಾರ್ಷಿಕ ಸಭೆ ಜರಗುವುದು.

ರಾವು ಕೃಷ್ಣಾ ವಿದ್ಯಾರ್ಥಿ ಭವನದ ವಾರ್ಷಿಕ ದಿನಾಚರಣೆಯು ಇದೇ ತಾ ೨೬ರಂದು ಜರಗಲಿದ್ದುದನ್ನು ತಾ. ೨೭ಕ್ಕೆ ಮುಂದುವರಿಸಲಾಗಿದೆ ಎಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ಪಟೇಲಿಕೆ ರದ್ದತಿ—ಮಂಗಳೂರು ತಾಲೂಕಿನ ಫಜೀರ್ ಗ್ರಾಮದ ಬಂಟ್ ಆಳ್ವ ಎಂಬ ಪಟೇಲರು ಕಳ್ಳತಂತೆಯಲ್ಲಿ ಆಕ್ಷೇ ಮಾಡಿದ ಆರೋಪಕ್ಕೆ ಗುರಿಯಾಗಿ ಅವರ ಪಟೇಲಿಕೆ ರದ್ದು ಮಾಡಲ್ಪಟ್ಟಿದೆ.

ಸಜೆಯ ಬದಲು ಜಾಸ್ತಿ ಜುಲ್ಮಾನೆ—ಶ್ರೀಕೃಷ್ಣ ಭವನದ ಮಾಲಕ ಶ್ರೀ ವೆಂಕಟರಮಣ ಭಟ್ಟರಿಗೆ ಮತ್ತು ತಾಜಮಹಲ್ ಹೋಟೆಲಿನ ಮಾಲಕ ಶ್ರೀ ಕೆ. ಗೋಪಾಲಕೃಷ್ಣ ರೈಯವರಿಗೆ ರೇಶನಿಂಗ್ ಕಾನೂನನ್ನು ವಿರುದ್ಧ ಆರೋಪದ ಸಲುವಾಗಿ ವಿಧಿಸಲ್ಪಟ್ಟ ಎರಡೆರಡು ತಿಂಗಳು ಸಜೆಯು ಆಫೀಲಿನಲ್ಲಿ ರದ್ದತಿಯಾಗಿ ಪ್ರತಿಯೊಬ್ಬರಿಗೂ ಒಂದೊಂದು ಸಾವಿರ ರೂಪಾಯಿ ಜುಲ್ಮಾನೆ ವಿಧಿಸಲಾಯಿತು.

ಜುಲ್ಮಾನೆ—ಉಡುಪಿ ತಾಲೂಕಿನ ದೇಮುಸ್ಟು ಕೊಡಾ ಇಬ್ಬರು ಆಹಾರ ಧಾನ್ಯಗಳ ಕಾನೂನನ್ನು ವಿರುದ್ಧರೆಂಬ ಆರೋಪಕ್ಕೆ ಒಳಬ್ಬರಿಗೂ ರೂಪಾಯಿ 300-ರಂತೆ ಮಂಗಳೂರು ಸಿ ಡಿ ವಿ ಜಿಸ್ಟ್ರೇಟರಿಂದ ಜುಲ್ಮಾನೆ ವಿಧಿಸಲಾಯಿತು.

ಕಳ್ಳಸಂತೆಯ ಪತ್ತೆ ಹಿಡಿದವರಿಗೆ ಉದಾರ ಇನಾಮು—ಜನಜೀವನಕ್ಕೆ ಸಂಬಂಧಪಟ್ಟ ಅತ್ಯಾವಶ್ಯಕ ಆಹಾರ ಸಾಮಗ್ರಿಗಳನ್ನು ಗುಪ್ತವಾಗಿರಿಸುವವರಿಂದ ಅಧಿಕ ಕ್ರಯದಿಂದ ಕಳ್ಳ ಸಂತೆಯಲ್ಲಿ ಮಾರಾಟ ಮಾಡುವವರ ಪತ್ತೆಯನ್ನು ಹಿಡಿದುಕೊಡುವ ಸಾರ್ವಜನಿಕ ಹಾಗೂ ಗ್ರಾಮ ಪತ್ತೇದಾರಿಗಳಿಗೆ ಉದಾರ ಇನಾಮುಗಳನ್ನು ಕೊಡಲಾಗುವುದೆಂದು ಜಿಲ್ಲಾ ಕಲೆಕ್ಟರರ ಪ್ರಕಟಣೆಯೊಂದು ತಿಳಿಸಿದೆ.

ಜಿಲ್ಲಾ ಕಮರ್ಶಿಯಲ್ ಟೀಕ್ಸ್ ಆಫೀಸರರ ಪ್ರಕಟಣೆ

1944ನೆ ಇಸವಿಯ ಕನ್ಸೂಮರ್ ಗುಡ್ಸ್ (Consumer Goods) ಆರ್ಡರಿನ 8ನೆ ಕ್ಲಾಜಿನಂತೆ ಕೆಡ್ಡಾಲ್ ಸಾಮಾನುಗಳ ಕುರಿತು ಪ್ರತಿ ತಿಂಗಳು ತಾ 15ರೊಳಗಾಗಿ ಸಾಮಾನುಗಳ ವಿವರ, ಉತ್ಪತ್ತಿಯ ವಿಷಿ, ಅದನ್ನು ತಯಾರಿಸುವರೆ ತಗುಲುವ ಖರ್ಚು ಇತ್ಯಾದಿ ವಿವರಿತಿಯನ್ನು ಕೆಲವರು ಸಂಬಂಧಪಟ್ಟ ಅಧಿಕಾರಿಗಳಿಗೆ ಕೊಡುವುದಿಲ್ಲವಾಗಿ ಸಿವಿಲ್ ಸಪ್ಲೈಸ್ ಕಂಟ್ರೋಲರ್ ಜನರಲ್ ರವರ ಆದೇಶಾನುಸಾರ ಬಂದಿರಿ ಪ್ರತಿತಿಂಗಳ ತಾ. 15ರೊಳಗಾಗಿ ಹಿಂದಿನ ತಿಂಗಳ ವಿವರ ಸಲ್ಲಿಸುವುದನ್ನು ಕೊಡದಿದ್ದ ಪಕ್ಷಕ್ಕೆ ಶಿಕ್ಷೆಗೆ ಗುರಿಪಡಿಸಲಾದೀತು ಎಂದು ಮುಂಜಾಗ್ರತೆಯನ್ನೀಯಲಾಗಿದೆ.

ಉಡುಪಿ

ಕೊನ್ಸ್ಟೊಕೇಶನ್—ಎಕಡೆವಿ ಪ್ರೆಫ್ ಜನರಲ್ ಎಜ್ ಕೇಶನ್, ಮೈಸೂರು ಇವರ ಮಾನ್ಯತೆ ಕೊನ್ಸ್ಟೊಕೇಶನ್ ಫಲಾಂಭವ ತಾ. 13ನೆ ಸಂಜೆ ಟೌನ್ ಹಾಲ್ ಹೈಸ್ಕೂಲಿನ ಪಿಸ್ಟಲ್ಸ್ ಹೋಲ್ ನಲ್ಲಿ ವಿಜೃಂಭಣೆಯಿಂದ ಜರಗಿತು. ಆನ್ನೆವರಿಯು ಯುನಿವರ್ಸಿಟಿಯ ಪ್ರೈಸ್ ಚಾನ್ಸಲರ್ ದಿವಾನ್ ಬಹದ್ದೂರ್ ಎಂ ರತ್ನಸ್ವಾಮಿ, ಎಂ ಎ, ಬಿ ಇ ಬಾರ್ ಎಟ್ ಲಾ, ಕೆ. ಸಿ. ಎಸ್. ಐ. ಯವರು ಕೆಂಪೊಕೇಶನ್ ಭಾಷಣವನ್ನು ಮಾಡಿದರು. ಡಾ| ಮಾಧವ ಪೈಗಳು ಧನ್ಯವಾದಗಳನ್ನರ್ಪಿಸಿದರು.

ಕೆನರಾ ಮ್ಯೂಚುವಲ್ ಎಕ್ಸ್ಚಾರಿನ್ ಕಂಪೆನಿಯವರು ಶಿವಳ್ಳಿ ದಿವಾನ್ ಬಹದ್ದೂರ್ ಎಂ. ರತ್ನಸ್ವಾಮಿ ಯವರಿಗೆ ಒಂದು ಉಪಾಹಾರ ಕೂಟವನ್ನೇರ್ಪಡಿಸಿದ್ದರು. ಶ್ರೀ. ಬಿ. ನ್ಕಿಕಾರ ಬಾಳಿಗ. ಆತಿಥಿಗಳ ಪರಿಚಯ ಮಾಡಿಕೊಟ್ಟರು. ಡಾ| ಮಾಧವ ಪೈಗಳು ಕೆನರಾ ವ್ಯಾಪಿಬೆಳೆಸಿ ಮತ್ತಿತರ ತಮ್ಮ ಸಂಸ್ಥೆಗಳ ಪರಿಚಯ ಭಾಷಣವಿತ್ತರು. ಶ್ರೀ ಆರಾರ ಲಕ್ಷ್ಮೀನಾರಾಯಣ ರಾಯರು ಉಡುಪಿ ನಾಗರಿಕರ ಪರವಾಗಿ ಎರಡು ಮಾತುಗಳನ್ನಾಡಿದರು. ಶ್ರೀ ರತ್ನಸ್ವಾಮಿಯವರು ಸಂಪರ್ಕೋಚಿತವಾಗಿ ಚಿಕ್ಕ ಭಾಷಣ ಮಾಡಿದರು. ಶ್ರೀ ರತ್ನಸ್ವಾಮಿಯವರಿಗೆ ಆನಂತರ ಸ್ಥಳೀಯ ಬಾರ್ ಎಸೋಸಿಯೇಶನವರು ಉಪಹಾರವಿತ್ತು, ಸತ್ಕರಿಸಿದರು. ರಾತ್ರಿ ಕೆನರಾ ಬ್ಯಾಂಕಿಂಗ್ ಕೊರ್ಸರೇಶನವರು ಔಪಚಾರಿಕ ಸಭೆಯನ್ನಿತ್ತರು. ಆತಿಥಿಗಳು ಡಿ ಮಾಸ್ಟಿಕ್ ಸಿ. ಸೆಕ್ರೆಟರಿಸ್ಟರ ಆತಿಥಿಗಳಾಗಿದ್ದರು.

ನಗರ ಸಭೆಯು ಇತ್ತೀಚೆಗೆಯರ್ ನೇಮ್ ಶ್ರೀ ಎ ಲಕ್ಷ್ಮೀನಾರಾಯ ಜರಾಯರ ಅಧ್ಯಕ್ಷತೆಯಲ್ಲಿ ಜರಗಿ 1944-45ನೆ ವರುಷದ ರಿವ್ಯಾಸ್ಡ್ ಮತ್ತು 1945-46ರ ಅಂದಾಜು ಬಜೆಟು ಸ್ವೀಕರಿಸಲಾಯಿತ. ಮದ್ರಾಸ್ ಸರಕಾರದಿಂದಿಂದ ರೂಪಾ 15,000- ಸಾಲವನ್ನು ತೆರಿಸಿ ರಸ್ತೆಗಳಿಗೆ ನೀರು ಹುಯ್ಯುವ ವಾಟರ್ ಲೋರಿಯೊಂದನ್ನು ಕೊಂಡು ಕೊಳ್ಳಬೇಕಾಗಿಯೂ ಬಸ್ ಸ್ಟಾಂಡಿನ ವಿಸ್ತರಣ ಸಲುವಾಗಿ ಲಗ್ತಿಯಿರುವ ಪಡು ಭಾಗವನ್ನು ಕ್ರಯಕ್ಕೆ ಪಡಕೊಳ್ಳಬೇಕಾಗಿಯೂ ಸಂಬಂಧಿಸಿದವರ್ಕಿಟ್ಟಿಲಿ ಕೆಡ್ಡುಗಳನ್ನು ಕಟ್ಟಿಸಬೇಕಾಗಿಯೂ ನಿರ್ಣಯವಾಯಿತು.

ಪುತ್ತೂರು—ತಾ 7ನೇ ರಾತ್ರಿ ಕೊಬ್ಬು ರಸ್ತೆಯಲ್ಲಿ ಹೋಗುತ್ತಿದ್ದ ಓರ್ವ ಬ್ರಾಹ್ಮಣನನ್ನು ಯಾರೋ ಕಡಿದು ಕೊಲೆಮಾಡಿ ಪರಾರಿಯಾಗಿರುವ ದಾಗಿಯೂ ಮಾರುದಿನ ಒಬ್ಬ ವ್ಯಕ್ತಿಯನ್ನು ಬಂಧಿಸಲಾಗಿದೆಯೆಂಬ ಸುದ್ದಿ.

ಮೂಲ್ಕಿ ಪುತ್ತೂರು—ಮಾಮೂಲು ಪ್ರಕಾರ ಜಂಗಮಕ್ಕೆ ಪುತ್ತೂರು ಭಾವದ ತಂಬಳವು ತಾ 19-1-45ನೇ ಶಕ್ರವಾರ ಜಗಳ ಮಾಡಿ, ಹಲಗೆಯಲ್ಲಿ ಮಿಗಿಲಾದ ಕೇಣಾಗಳಿಗೆ ಬಂಗಾರದ ಪದಕವೂ ಹಗ್ಗದಲ್ಲಿ ಮಿಗಿಲಾದ ಕೋಣಗಳಿಗೆ ಬೆಳ್ಳಿಯ ಪದಕವೂ ಬಹುಮಾನ ಕೊಡಲ್ಪಡುವುದು ಎಂದು ಪುತ್ತೂರು ಭಾವದ ದಿಗ್ಗತ್ತಿಕಾರಿಗಳು ತಿಳಿಸಿದ್ದಾರೆ.

ಬೈಲೂರು—ತಾ. 10-1-45ರಲ್ಲಿ ಶ್ರೀ ಬೆ. ನಾಗಣ್ಣ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಸ್ಥಳೀಯ ಉಪಾಧ್ಯಾಯರ ಸಂಘದ ಪರವಾಗಿ ನೀರೆ ಬ್ರೌಂಡ್ ಬೋರ್ಡ್ ಹೈಲೆಯಲ್ಲಿ ಅಧ್ಯಾಪಕ ಅಧ್ಯಾಪಕಿಯರ ಹಾಗೂ ಊರ ಮಹಾಜನ ಸಭೆ ನೀರಿ ಕಾರ್ಯಕ್ರಮ ಬಳಿಕ ನೆರೆದ ಸಭಿಕರಲ್ಲಿ ಶ್ರೀಮಾನ್ ಪಿ ಡಿ. ಡಿ ಅರಾಲ್ಯು, ಕೆ ನಾರಾಯಣ ಶೆಟ್ಟಿಯವರು, ಎಂ ಅಪ್ಪರಾಯರು, ಎನ್ ಸಂಜೀವಶೆಟ್ಟಿ ಮಾನ್ಯ ಡಿ ಇನ್ಸ್‌ಪೆಕ್ಟರವರ ಗುಣಕಥನ ಮಾಡಿದ ಬಳಿಕ ಉತ್ತರವಾಗಿ ರಾಯರು 'ಉಪಾಧ್ಯಾಯರು ಹೊಗಳುವಂತಹ ಗುಣಗಳು ತನ್ನಲ್ಲಿಲ್ಲವೆಂದೂ ಉಪಾಧ್ಯಾಯರನ್ನು ದಯೆಯಿಂದ ನಡಿಸಲು ತಾವು ಸಾಹಿತ್ಯದಲ್ಲಿ ಕೀಲಿಟ್ಟಿದ್ದೇ ಕಾರಣವೆಂದೂ ಹೇಳಿದ ನಂತರ ಅಧ್ಯಕ್ಷರು ಕಾಲೋಚಿತ ಭಾಷಣ ಮಾಡಿದ ಒಳಿಕ ಸೆಕ್ರೆಟರಿಯವರ ವಂದನಾರ್ಪಣೆಯೊಡನೆ ಸಭೆ ಸಮಾಪ್ತಿಯಾಯಿತು.

ಕಾಸರಗೋಡು—ತಾಲೂಕಿನ ಕೆಲವು ಗ್ರಾಮಗಳಲ್ಲಿ ಉಷ್ಣ ಹೊಡೆತಕೆಯು ಹರಡಿರುವುದಾಗಿಯೂ ವೆಗವೇ ಕೇಂದ್ರದಲ್ಲಿ ಸಿಡುಬು ಹಾಕಿಸುವುದಾಗಿಯೂ ವಾರ್ತೆ. ಸಾಧಾರಣ 20 ಮಂದಿ ಮಡಿದಿರುವರೆಂದು ತಿಳಿದು ಬರುತ್ತದೆ.

ಹೊಸ ವರುಷದ ಶುಭಾಶಂಸೆ

ನಮ್ಮ ಆಶ್ರಯದಾತರಿಗೂ, ಗೆಳೆಯರಿಗೂ ಹೊಸ ವರುಷವು ಜನಿಸಿ ನಮ್ಮ ಬೃದ್ಧಿಗಳನ್ನು ತರಬೇಕೆಂದು ಕೋರುವಾಗ, ಅವರಿಗೆ ಸತ್ಕೀರ್ತಿ ಸಲಿಸಲನುವಾದ ನಿಮ್ಮ ಸಹಕಾರ ಮತ್ತು ಸ್ನೇಹಮಯ ಸತ್ಸಹಾಯ ಕಾಪ್ಯಾಗಿ ನಿಮಗೆ ಎಷ್ಟೆಂತಹ ನಮನಗಳನ್ನು ಸಲಿಸುವೆವು

ನುಡಿಯಿನ ಮನುಷ್ಯನ ನಮ್ಮೊಗಿನ ಸಂಬಂಧವು ಇನ್ನೂ ಬಲಗೊಂದು ಇಂದಿನ ಸಂಬಂಧವು ಎಂದಿನಂತಾಗುವಂತಹ ಹೆಚ್ಚಿನ ಸಂದರ್ಭಗಳನ್ನಿದಿರು ನೋಡುತ್ತಿರುವೆವು

ಸ್ಥಾಪಿತ 1906

ಕೆನರಾ ಬ್ಯಾಂಕ್ ಲಿಮಿಟೆಡ್.

Canara Bank Ltd.

(Incorporated in British India Liability of members limited.)

ENGLISH MADE EASY

ಇಂಗ್ಲಿಷ್ ಏನೂ ತಿಳಿಯದವರು 'ಸುಲಭದಲ್ಲಿ ಇಂಗ್ಲಿಷ್' ಪುಸ್ತಕದಿಂದ ಸುಲಭವಾಗಿ ತಮ್ಮಷ್ಟಕ್ಕೆ ತಾವೇ ಕಲಿತುಕೊಳ್ಳಬಹುದು.

ಇಂಗ್ಲಿಷ್ ತಿಳಿದವರು ಚೆನ್ನಾಗಿ ಕಲಿತುಕೊಳ್ಳಬಹುದು

ಸುಲಭದಲ್ಲಿ ಇಂಗ್ಲಿಷ್

ಕೊರತ್ತಿಲ್ಲರ ಇಂಗ್ಲಿಷ್ ಸ್ವಯಂಬೋಧಿನಿ.

ವಯಸ್ಕರಿಗೂ ವಿದ್ಯಾರ್ಥಿಗಳಿಗೂ ಅತ್ಯಂತ ಪ್ರಯೋಜನಕಾರಿ

ಬೆಲೆ ಬರೇ ರೂ. 1-4-0. ರೂ 1-3-0ನ್ನು ಮನಿಯಾರ್ಡರು ಮಾಡಿದರೆ 1 ಪ್ರತಿ ಕಳಿಸಲ್ಪಡುತ್ತೆ.

ನವಭಾರತ ಪುಸ್ತಕ ಭಂಡಾರ,

ರಿಜಿಸ್ಟರ್ಡ್ ಪಬ್ಲಿಷರ್ಸ್ ಎಂಡ್ ಬುಕ್ ಸೆಲ್ಲರ್ಸ್,

ಉಡುಪಿ, ದ. ಕ

ನೋಟೀಸು

ನಾಗಾಪುರ ನಿಷ್ಕ್ ಮುನ್ಸಿಫ್ ಕೋರ್ಟಿನಲ್ಲಿ

R. I. A. 1819/1941

R. I. A 1850/1941

O. S. 611/1940

ವಾದಿ ತಿಮ್ಮಪ್ಪನಾಯ್ಕ ಪರವಾಗಿ ನಾರಿಸುವಾರರು ವಕೀಲರಾದರು. ಸುಗ ಭದ್ರಯ್ಯನಾಯ್ಕನ ಜನರಲ್ ಪವರ್ ಆಫ್ ಎಟೆರ್ನಿಯ ಹೊಲ್ಡರ್ ರಾಮಪ್ಪನಾಯ್ಕ

ಪ್ರತಿವಾದಿರು ಕಾರ್ಕಳಿಜೆಂಗ್ಸು (ಪಾತ್ರ) ಕೂಡಾ

2ನೇ ಪ್ರತಿವಾದಿ— ಸಾರಾಯಣ ಸೇರಿಗಾರ ಸಾಗಪ್ಪ ಸೇರಿಗಾರನವನು- ಕುಂದಾಪ್ರ ತಾಲೂಕು ಕುಂದಾಪುರ ಕ್ಷಜಾಗ್ರಾಮ

ಸದ್ರಿ ಆರ್ಜದಾರನು ಮೃತನಾದಿಯ ತಾ ಸುವಾರವಮನೆಯಿಂದ ಸದ್ರಿ ಪ್ರತಿವಾದಿಯನ್ನು ಕ್ರಿಯೆ ಫ್ಯಾನಲ್‌ದಿಕ್ಕೆ ಕೊಡಿಸುವರೆಯಿಸ್ಸಿನೆತ್ತು ತನ್ನನ್ನು ಮೃತನ ಪಾಠಿಸುವಾರನೆಸ್ಸಾಗಿ ನೇರಿಸಿಕೊಳ್ಳುವಂತೆಯೂ ಸರ್ಕಾ ಹೇಳ್ವಂದ ಎರಡುಆರ್ಜಿಗಳನ್ನುವಾಲಿಸುಮಾಡಿರುತ್ತಾನೆ ಆ ಕುರಿತು ಏನಾದರೂ ಆಕ್ಷೇಪಣೆಯಿದ್ದಲ್ಲಿ ತಾರೀಖು 31 1 45ನೇ ದಿವಸ ಹೇಳ್ವಂದ ಕೋರ್ಟಿಗೆ ಹಾಜರಾಗಲು 11 ಗಂಟೆಗೆ ಸ್ವಯ ಆಕೀಲರ ಮುಖಾಂತರ ವ್ಯಾಜ್ಯ ಸಾಗಿಸಿಕೊಳ್ಳುವಂತೆ ತಪ್ಪಿದರೆ ನಿಮ್ಮ ಗೈರು ಹಾಜರಾತಿಯಲ್ಲಿಯೂ ವಿನೆ ಕ್ರಮ ನಡೆಸಲಾಗುವುದೆಂದು ಸಂತಿ ಸದ್ರಿ 2ನೇ ಪ್ರತಿವಾದಿಗೆ ಕೊರ್ಟಿನ ಮುಕಾಂತ್ರಕಾರಿ ತಿಳಿಸಲಾಗುತ್ತದೆ

K Raghunath Shenai, B
Pleader for Petitioner

ಕುಂದಾಪುರ, 15-1-1945

— ರಾಷ್ಟ್ರೀಯ ಸೇವಾಶ್ರಮ ಮೈಸೂರು —

ದೇಶ ಮತ್ತು ಧರ್ಮಾಭಿವೃದ್ಧಿಗಾಗಿಯೇ-ಸತ್ಯಸೇವಾ ತನ ಹಿಂದೂ ಧರ್ಮ ಸಾಹಿತ್ಯ ಸಂಸ್ಕೃತಿಗಳು ನಮ್ಮೀ ಭರತಖಂಡದಲ್ಲಿ ಕಳೆದ ಐದು ಆರುಸಾವಿರ ವರ್ಷಗಳಿಂದಲೂ ದೇದಿಪ್ಯಮಾನವಾಗಿ ವಿರಾಜಿಸುತ್ತಾ ಭಾರತೀಯರ ಅಸ್ತಿತ್ವಕ್ಕೂ ಘನತೆಗೂ ಆಧಾರ ಆಶ್ರಯಗಳಾಗಿರುವುದು ಭಾರತೀಯರಿಗೆ ಹಿಗಮೆ ಯಾದುದಲ್ಲವೆ?

ದಾನಗಳೆಂದೂ ಧನಕರೆಂದೂ ಹೇಳಿಸಿಕೊಳ್ಳುತ್ತಿರುವ ನೂರಾರು, ಇಲ್ಲವೇ ಸಾವಿರಾರು ಮಹಾಸೇಯರು ಅನಾಥಾಲಯ, ವಿದ್ಯಾರ್ಥಿನಿಲಯ, ವೈದ್ಯಾಲಯ, ದೇವಾಲಯ, ಭಗ್ನಜೀರ್ಣೋದ್ಧಾರ ಕಾರ್ಯ ವೋದಲಾದ ವಿವಿಧ ಸಂಸ್ಥೆಗಳ ಸ್ಥಾಪನೆಗೆ ಅಪಾರವಾದ ಧನವನ್ನು ದಾನ ಮಾಡಿಯೂ ಮಾಸುತ್ತಲೂ ಬರುತ್ತಿರುವರೆಂಬ ಸಮಾಚಾರಗಳನ್ನು ನಾವು ಆಗಿಂದಾಗ್ಗೆ ವರ್ತಮಾನಪತ್ರಿಕೆಗಳ ಮೂಲಕ ಕೇಳುತ್ತಿರುತ್ತೇವೆ. ಆದರೆ ಇವುಗಳಿಗೆ ಭಾಸಮ್ಮಡಿ ಹಿರಿದಾದ, ತಮ್ಮ ಆಸ್ತಿತ್ವಕ್ಕೂ ಘನತೆಗೂ ಕೀರ್ತಿಗೂ ಜನಾಂಗಕ್ಕೂ ಆಧಾರವೂ ಆಶ್ರಯವೂ ಆದ ಹಿಂದೂಧರ್ಮ ಸಾಹಿತ್ಯ ಸಂಸ್ಕೃತಿ ಮತ್ತು ಮಾತೃಶಕ್ತಿಗಳ ನೆಲೆಮನ್ನೇ ಇಲ್ಲದಂತೆ ಮಾಡಲು ಅಸಾಧು ಬಂಡವಾಳದ ಆಶ್ರಯದಿಂದ ಸುಸಜ್ಜಿತರಾದ ಕೆಲಸಗಾರರಿಂದ ಕೃಮಿಸುತ್ತಿರುವ ವಿಧರ್ಮಿಯರ ಪ್ರಚಾರ ಕಾರ್ಯಗಳನ್ನು ಸುವ್ಯವಸ್ಥೆಯಿಂದ ಪ್ರತಿಸರೋಧಿಸುವ ಯಾವುದಾದರೂ ಒಂದು ಸಂಸ್ಥೆಯನ್ನು ಯಾರೊಬ್ಬ ಧನಕರಾಗಲಿ, ಯಾರೊಬ್ಬ ದಾನಿಗಳಾಗಲಿ, ಯಾರೊಬ್ಬ ಶ್ರೀಮಂತರಾಗಲೀ ಮಾಡಿದಿರುವುದನ್ನು ಕಂಡು ನಿಜವಾದ ದೇಶಾಭಿಮಾನಿಗಳಾಗಿ ಹಾಗೂ ಹಿಂದೂ ಧರ್ಮಾಭಿಮಾನಿಗಳ ಹೃದಯವು ಅನಿರ್ವಚನೀಯ ವೇದನೆಗೆ ಗುರಿಯಾಗದಿರುವುದೇ? ವಿಧರ್ಮಿಯರ ವಿವಿಧ ಪ್ರಚಾರ ಕಾರ್ಯಗಳನ್ನು ನ್ಯಾಯಪೂರ್ವಾಗಿ ಶಾಂತ ರೀತಿಯಿಂದ ಪ್ರತಿರೋಧಿಸಲು ನಮ್ಮ ದೇಶದ ದಾನಿಗಳ, ಧನಿಕರ, ಶ್ರೀಮಂತರ ಸಹಾಯ ಸಹಕಾರಗಳು ಈಗಲಾದರೂ ಹರಿದೆಯಬೇಕಾಗಿದೆ. ದೊರೆಯದಿರುವುದಾದರೆ ಅದು ದೇಶದ ದೌರ್ಭಾಗ್ಯ'

ಇಂತಹ ಸನ್ನಿವೇಶದಲ್ಲಿ ವಿಧರ್ಮಿಯರ ಸಮಸ್ತ ಬಗೆಯ ಪ್ರಚಾರ ಕಾರ್ಯಗಳನ್ನು ಸುವ್ಯವಸ್ಥೆಯಿಂದ ಪ್ರತಿರೋಧಿಸಲು ಅತ್ಯಗತ್ಯವಾದ ಸಂಸ್ಥೆಯೊಂದನ್ನು ಸ್ಥಾಪಿಸಬೇಕೆಂಬ ಹಂಬಲವಾರ ವರುಷಗಳ ಸರೀಕ್ಷಿತ ಸಂಕಲ್ಪವಾಗಿತ್ತು. 28-12-1933ರಲ್ಲಿ ಮೈಸೂರಿನಲ್ಲಿ 'ರಾಷ್ಟ್ರೀಯ ಸೇವಾಶ್ರಮ'ವೆಂಬ ಸಂಸ್ಥೆಯನ್ನು ಸ್ಥಾಪಿಸಲಾಯಿತು. ಆಯಾ ಕಾಲವನುಗುಣವಾಗಿ ಏಳಬಹುದಾದ ಮತ್ತು ಜನಜೀವನಕ್ಕೆ ನಿಕಟ ಸಂಬಂಧವನ್ನು ಹೊಂದಿರುವ ಧಾರ್ಮಿಕ ಸಾಮಾಜಿಕ, ರಾಜಕೀಯ ಸಮಸ್ಯೆಗಳನ್ನು ದೇಶದ ಹಿತದೃಷ್ಟಿಯಿಂದ ಬಗೆಹರಿಸುವ ಹಾಗೂ ಹಿಂದೂ ಧರ್ಮಸಾಹಿತ್ಯ ಸಂಸ್ಕೃತಿಗಳನ್ನು ಯಾವುದೇ ರೀತಿಯಿಂದಲಾದರೂ ವಿಧರ್ಮಿಯರು ವಿನಾಶ ಮಾಡದ ಸಮಸ್ತ ಕಾರ್ಯಗಳನ್ನೂ ಸುವ್ಯವಸ್ಥೆಯಿಂದ ನಿರೋಧಿಸುವ ಪ್ರಧಾನೋದ್ದೇಶಗಳಿಂದ ಈ ಆಶ್ರಮವು ಸ್ಥಾಪಿಸಲ್ಪಟ್ಟಿತು. ಆಶ್ರಮದ ಧ್ಯೇಯ ಸಾಧನೆಗಳನ್ನು ದೇಶದಲ್ಲಿ ಪ್ರಚಾರ ಮಾಡುವ ಪ್ರಕಟನೆ, ಕರಪತ್ರ, ಹಸ್ತಪತ್ರ, ಗ್ರಂಥ ಮೊದಲಾದವುಗಳನ್ನು ಪ್ರಸಿದ್ಧಿಮಾಡುವ ಸಲುವಾಗಿ ಈಗ್ಗೆ ಆರುವರ್ಷಗಳ ಹಿಂದೆ 'ರಾಷ್ಟ್ರೀಯ ಸೇವಾ ಸಾಹಿತ್ಯ ಭಂಡಾರ' ವೆಂಬ ಪ್ರಕಟನಾ ಶಾಖೆಯನ್ನು ಸ್ಥಾಪಿಸಲಾಯಿತು.

ಪ್ರಕಟನಾ ಶಾಖೆಯ ವಿಮೋಲಕ ಈ ವರೆವಿಗೆ ಮುದ್ರಿಕವಾಗಿ ಜನರ ಕೈಗೆ ಸೇರಿರುವ ವಿವಿಧ ಪ್ರಕಟನೆ—ಕರಪತ್ರ—ಪತ್ರಿಕೆ—ಪುಸ್ತಕ ಮೊದಲಾದ ವುಗಳು ನಲವತ್ತು ಸಾವಿರಕ್ಕೆರುವವು. ಪ್ರಕಟನಾ ಕಾರ್ಯಗಳಿಗಾಗಿ ಸಾವಿರದ ಐದುನೂರ ರೂಪಾಯಿಗಳೂ, ಪ್ರಚಾರ ಕಾರ್ಯಗಳಿಗಾಗಿ ಸಾವಿರದ ಐದುನೂರು ರೂಪಾಯಿಗಳು ವ್ಯಯವಾಗಿವೆ.

ಕಳೆದ ಹನ್ನೆರಡು ವರ್ಷಗಳಿಂದಲೂ ನಡೆಯುತ್ತಾ ಬಂದಿರುವ ಕೆಲಸ ಕಾರ್ಯಗಳನ್ನೂ ಈಗ ಸಂಪೂರ್ಣವಾಗಿ ನ್ಯವಸ್ಥೆಗೊಳಿಸುವ, ಮತ್ತು ರಚ್ಸಿರಾದ ಕೆಲಸಗಾರರಿಂದ ಆಶ್ರಮದ ಕೆಲಸಗಳನ್ನು ಸಾರೋದ್ಧಾರವಾಗಿ ನಡೆಸುವ ಸಲುವಾಗಿ ಸುಮಾರು ಐವತ್ತು ಸಾವಿರ ರೂಪಾಯಿಗಳ ಸ್ಥಿರನಿಧಿಯನ್ನು ಸಂಗ್ರಹಿಸಿದ್ದಿದ್ದಲ್ಲಿ ಆಶ್ರಮದ ಕಾರ್ಯಗಳ್ನೆ ನಿರ್ಭಾರವಾದ ಕಾರ್ಯಕ್ರಮಗಳಿಂದ ಮುಂದುವರಿಯುವುದು ಅಸಾಧ್ಯವಾಗಿರುವುದು. ಈ ಮಹಾ ಪ್ರಯತ್ನಕ್ಕೆ ಮೆಚ್ಚುವ ಮತ್ತು ಬೆಂಬಲ ಕೊಡುವ ದೇಶಾಭಿಮಾನಿಗಳಿಗೆ ಹಾಗೂ ಹಿಂದೂ ಧರ್ಮಾಭಿಮಾನಿಗಳ ಸಹಾಯ ಸಹಕಾರಕ್ಕಾಗಿ ಈ ವಿನಂತಿ

ಮಾಡಲಾಗಿದೆ ಸಹಾಯ ದ್ರವ್ಯವನ್ನು ಪ್ರಧಾನ ನ್ಯವಸ್ಥಾಪಕರ ಏಳಾಕ್ಕೆ ಕಳುಹಿಸಬೇಕಾಗಿ ವಿನಂತಿ.

[ವಿ. ಸೂ. —ಒಂದು ಸಾವಿರ ರೂಪಾಯಿಗಳನ್ನು ಒಂದೇ ಸಾರಿ ದಾನ ಮಾಡುವ ಮಹಾಶಯರು ಈ ಆಶ್ರಮದ ಆಜೀವ ಸದಸ್ಯರಾಗಿಯೂ ಒಂದೇ ಸಾರಿ ಏಭು ನೂರು ರೂಪಾಯಿಗಳನ್ನು ದಾನ ಮಾಡುವವರು ಆಶ್ರಮದ ಪ್ರಧಾನ ಪೋಷಕರಾಗಿಯೂ ಪರಿಗಣಿಸಲ್ಪಡುವರ —ಇವರ ಭಾವಚಿತ್ರಗಳನ್ನು ಆಶ್ರಮದಲ್ಲಿ ಆರ್ಹರಿಗಳನ್ನಾಗಿರಿಸಲಾಗುವುದು. ಇತರ ಯಾವುದೇ ರೀತಿ ಸಹಾಯ ಮಾಡಿದವರೆಲ್ಲರೂ ಆಶ್ರಮಕ್ಕೆ ಹಿತೈಷಿಗಳಾಗಿರುವರು] ಹೆಚ್ಚಿನ ವಿವರಗಳು ಬಾರ್ಸಿಕೆ ಮಾಡಿದಲ್ಲಿ ಪ್ರಕಟಿಸಲ್ಪಡುವವು.

ಬಿ. ಸ್ವಾಮಿದಾಸ್, ಪ್ರಧಾನ ನ್ಯವಸ್ಥಾಪಕ,
'ರಾಷ್ಟ್ರೀಯ ಸೇವಾಶ್ರಮ' ಮೈಸೂರು.

ಪ್ರಕಟನೆ

ಕಾರ್ಕಳ ತಾಲೂಕು ಸೂಡ ಗ್ರಾಮದ ನುಡಿಯೋಗಿ ಮುರದಲ್ಲಿರುವ ಸುಂಜಯ ಜೋಗಿ ಮಗ ಕೊರಗ ಜೋಗಿಯು ತಿಳಿಸುವುದೇನೆಂದ್ರೆ—ನಾನು ಕಳದ ತಾರೀಕು 7 1 1945ರಲ್ಲಿ ನನ್ನ ಮನೋಗತ ಕ್ರಿಕಾರ ನನ್ನ ತಂಗಿ ಈರಮ್ಮನ ಮಗ ಬಚ್ಚನ ಹೆಸರಿಗೆ ಒಂದು ರಿಜಿಸ್ತ್ರಿ ತಿಜ್ಯಾ ನೀರ್ಲಾಮೆ ಬರೆದಿಬ್ಬುತ್ತೇನೆ. ನಾನು ಈ ಮುಂಚೆ ಬೇರೆ ನೀಲು ಮಾಡಿದ್ದಿಲ್ಲ ಇದೇ ನನ್ನ ಕತೇ ವೀಲಾಗಿರುತ್ತದೆ. ಇದು ನನ್ನ ಸುರಣದ ನಂತ್ರ ನೂತ್ರ ಜಾರಿಗೆ ಬರತಕ್ಕದ್ದು ಅದು ನಾಲ್ಕು ಪುಟಗಳ್ನುದ್ದು ಆದಕ್ಕೆ ನನ್ನ 5 ಹೆಬ್ಬೆಟ್ಟು ಸುಂದ್ರ ಮತ್ತು 5 ದಸ್ತತು ಕೂಡಾ ಮಾಡಿರುತ್ತೇನೆ ದಸ್ತತು ಹಾಕುವರೆ ಸರಿಯಾಗದ್ರಂಡ ಹೆಬ್ಬೆಟ್ಟು ಸುಂದ್ರೆ ಮಾಡಿರುತ್ತದೆ.

||| ಈ ಮೂರು ಗೆರೆ ಮತ್ತು ಎಡಗೈ ಹೆಬ್ಬೆಟ್ಟಿನ ಗುರ್ತು ಸಹಾ ಸಂದ್ರಿ
ಕೊರಗ ಜೋಗಿ ರುಜು

ಮೂಲಮತ. ತಾರೀಕು 13-1-45.

ಶಿಕ್ಷಣ ಅನರ್ಥಕ್ಕೆ ಅವಕಾಶ ಕೊಡಲು

ನೀವು ಎಂದಿಗೂ ಇಷ್ಟ ಪಡಲಾರಿರಿ.

ಆದರೆ, ಅನಿವಾರ್ಯಕವಾದ ಪದಾರ್ಥಗಳನ್ನು ನೀವು ಕೊಂಡುಕೊಂಡಾಗೆಲ್ಲಾ, ಸಂಭವಿಸತಕ್ಕದ್ದು ಈ ಅನಿಷ್ಟವೇ. ಪದಾರ್ಥಗಳ ಬೆಲೆ ನಿತಿ ಮೀರಿ ಏರಿರುವುದರಿಂದ, ನಿಮಗೆ ನಿಜವಾಗಿಯೂ ಅವಶ್ಯವಿಲ್ಲದ ಪದಾರ್ಥಗಳನ್ನು ನೀವು ಕೊಂಡುಕೊಳ್ಳುವ ಪ್ರತಿಯೊಂದಾನರ್ಥಿಯಾ, ಶ್ರಮಾರ್ಜಿತವಾದ ನಿಮ್ಮ ಧನವು ಹಾಳಾಗಿಯುವುದು. ಆದುದರಿಂದ ವೀನೇ ಗಳಾಗಿ, ಅನಿರ್ಬಾಹಗಳು ಯಾವಪ್ಪೋ ಅಂತಹ ಪದಾರ್ಥಗಳನ್ನು ಮೊತ್ರ ಕೊಂಡುಕೊಳ್ಳಿ. ಯುದ್ಧಕಾಲದಲ್ಲಿ, ಪದಾರ್ಥಗಳ ಬೆಲೆ, ನಮ್ಮ ಹಣಕ್ಕೆ ಅನುರೂಪವಾಗಿರುವುದಿಲ್ಲ. ಯುದ್ಧಕಾಲದಲ್ಲಿ ಹೆಚ್ಚು ಬೆಲೆಯನ್ನುಕೊಟ್ಟು ಅನವಶ್ಯಕವಾದ ಪದಾರ್ಥಗಳನ್ನು ಕೊಂಡು ಕೊಳ್ಳುವುದರಲ್ಲಿ ಹಣವನ್ನು ವೆಚ್ಚಮಾಡುವುದು, ಹಾಳುಭಾವಿಯಲ್ಲಿ ಹಾಕಿದಂತೆಯೇ.

ಅಭರಣಗಳು, ಜಮೀನುಗಳು, ಕಟ್ಟಿಡಗಳು, ಸರಕುಗಳು, ಕೈಗಾರಿಕೆ ಸಾಮಾನುಗಳು, ಇವುಗಳಿಗಾಗಿ ನೀವು ನೆಚ್ಚಮಾಡುವದರಿಂದ, ಬಂತನಾಳಕ್ಕೇನೆ ಅಪೇಕ್ಷಾಭಂಗವಾಗುವುದು. ಅವುಗಳ ಬೆಲೆಗಳು ಸ್ಥಿರವಲ್ಲ. ಆದುದರಿಂದ ಎಚ್ಚರಿಕೆ ತಪ್ಪಿ, ತಪ್ಪುಹೆಜ್ಜೆಯನ್ನಿಡಬೇಡಿ. ಈಗ ಬೆಲೆಗಳು ಏರುವುದಕ್ಕೆ ಬದಲಾಗಿ ಇಳಿಮುಖವಾಗಿರುವೆಂತೆ ಕಾಣುತ್ತದೆ.

ಹಣವನ್ನು ಕೈಲಾದ ಮಟ್ಟಿಗೂ ಉಳಿಸಿರಿ

ಉಳಿಸಿದ್ದನ್ನು ವಿವೇಕಮಾರ್ಗಗಳಲ್ಲಿ ವಿನಿಯೋಗಿಸಿರಿ.

ಹಾಗಾದರೆ, ಭವಿಷ್ಯತ್ತಿಗೆ ನೆತ್ತುಲಾಭಕರ, ಈ ಎರಡು ಗುಣಗಳನ್ನೂ ಹೊಂದಿರುವ, ಧನವಿನಿಯೋಗ ಮಾರ್ಗಗಳು ಯಾವುವೆಂದರೆ:—

★ ಇನ್‌ಷೂರೆನ್ಸ್ ಪಾಲಿಸಿಗಳು,
★ ಕೋಆಪರೇಟಿವ್ ಸಂಸ್ಥೆಗಳು,
★ ಬ್ಯಾಂಕುಗಳಲ್ಲಿ ಕಲ್ಪಿಸಿರುವ ಉಳಿತಾಯಸಾಕರ್ಯಗಳು,
★ ಪೋಸ್ಟಾಫೀಸ್ ಸೇವಿಂಗ್ಸ್ ಬ್ಯಾಂಕುಗಳು,
★ ಗವರ್ನಮೆಂಟ್ ಲೋನ್‌ಗಳು,
★ ಮತ್ತು ನ್ಯಾಷನಲ್ ಸೇವಿಂಗ್ಸ್ ಸರ್ಟಿಫಿಕೇಟುಗಳು.

ಸುರಕ್ಷಿತವಾದ ಧನವಿನಿಯೋಗದಿಂದ ದೊರೆಯುವ ಬಡ್ಡಿಯು ಕಡಿಮೆಯಾಗಬಹುದು, ಆದರೆ, ಅಸಲು ಭದ್ರವಾಗಿರುವುದು —ಯುದ್ಧಕಾಲದಲ್ಲಿ ಧನವಿನಿಯೋಗಮಾಡುವ ಉದ್ದೇಶವು ಬೇರೆ ರು ಗಮನಿಸಬೇಕಾದ ವಿಚಾರವು ಇದೇ ಅಲ್ಲವೆ?

ಇದು ರಾಷ್ಟ್ರೀಯ ಯುದ್ಧಮುಖವು ಭಾರತೀಯರ ಸಮಕ್ಷಮದಲ್ಲಿಮಾಡುವಅರಿಕೆ

AAA 1112 KN

ಚಿಕಿತ್ಸೆ

(೩ನೇ ಪುಟದಿಂದ ಮುಂದುವರಿದುದು).

ನನ್ನಲ್ಲಿ ಮನಸ್ಸು ಮೂಡಬೇಕು ಹೊರತು ಮದ ಮೂಡುವಂತಿಲ್ಲ. ಆದರೆ ಅವ ಅವಿವಾಹಿತ; ತರುಣ; ದೃಢದೇಹಿ-ಅವನ ಮನಸ್ಸನ್ನು ಮದ ಗೆಲ್ಲಬಾರದೆಂದಿರಲಿಲ್ಲ. ಆದರೆ ಆ ಆತ್ಮದಾಣೆ-ನಿನ್ನ ಕೊರಳಾಣೆ—ಅವನಲ್ಲೊಂದು ಬಾರಿ ಕೂಡಾ ಅಂತಹ ಚಿಹ್ನೆಯನ್ನು ನಾನು ಕಂಡುಬಿಟ್ಟಿ. ನಮ್ಮ ಒಡನಾಟಕ್ಕೆ ಊರು ಏನೇನೋ ಅರ್ಥ ಕಟ್ಟಿತು; ಅದು ಸ್ವಾಭಾವಿಕ. ನಮ್ಮಿಬ್ಬರ ಗುಟ್ಟು ಗೊತ್ತಿದ್ದ ಆ ಆತ್ಮ—ತಾನು ಆಗಲೇ ವಂಚಿಸಲ್ಪಟ್ಟಿದ್ದೆನೆಂದ ಈಗ ಮಿಡುಕುತ್ತಿದೆಯೇನೋ,- ಊರವರ ಅಜ್ಞಾನಕ್ಕಾಗಿ ಆಗ ನಗುತಿತ್ತು. ಬೇಡ ಸುಶೀ, ನಮ್ಮ ಸೋದರ ಸಂಬಂಧದ ಆ ಕಾಲದ ವರ್ಣನೆ ಇನ್ನೇಕೆ? ಆ ಸೋದರ ಸೋದರಿಯರು ಆಗಲೇ ಸತ್ತಿದ್ದಾರೆ- ಪದ್ಮನ ಯಜಮಾನನಿಗಿಂತ ಮೊದಲೇ ಅವರು ಹೋಗಿದ್ದಾರೆ! ಶ್ಯಾಮನ ಈ ಪರನಾರೀ ಸಹೋದರತ್ವಕ್ಕಾಗಿ ನಾನೀಗ ಹೆಗ್ಗಳಿಕೆ ಪಡುತ್ತಿಲ್ಲ ಸುಶೀ. ಅವ ವ್ಯಭಿಚಾರಿಯಾಗಿರಬೇಕಿತ್ತು; ತನ್ನ ಹೃದಯಕ್ಕಂತಹ ಕಬ್ಬಿಣದ ಕಟ್ಟನ್ನು ಬಿಗಿಸಿಕೊಳ್ಳಬಾರದಿತ್ತು; ಹಾಗಿರುತಿದ್ದರೆ ಆ ಕಟ್ಟೊಡೆದ ಪ್ರವಾಹದಿಂದಾದ ಇಂದಿನ ಪ್ರಳಯ ತಪ್ಪುತಿತ್ತು! ಆದರೆ ಆಗಿಹೋಯಿತು

ಈಗ ಮುಂದಿನ ಕಥೆಕೇಳು. ಹೃದಯವನ್ನು ಕಲ್ಲಾಗಿ ಮಾಡಿ ಓದು. ಅಂದು ಶಿಕ್ಷಪಕ್ಷದ ಚತುರ್ದಶಿ- ನಾನೂ ಶ್ಯಾಮನೂ ಮಹಿಳೆಯರ ಒಂದು ಸಭೆ ಮುಗಿಸಿ ಮನೆಗೆ ಮರಳಿದ್ದೆವು. ಪ್ರಕೃತ ಆ. ಭಾ. ಮಹಿಳಾ ಪ್ರಶ್ನೆಯಾಗಿರುವ ಕೊಲ್ಲಾಸುರದ ಮಹಿಳೆಯೊಬ್ಬಳ ಮೇಲೆ ಸಬ್ ಇನ್ಸ್‌ಪೆಕ್ಟರನು ನಡಸಿದ ಅತ್ಯಾಚಾರ ಖಂಡನೆಯ ಠರಾವು ಆ ಸಭೆಯಲ್ಲಿ ಬಂದಿತ್ತು. ಅದನ್ನೆನುಮೋದಿಸಿ ಶ್ಯಾಮನಿತ್ತ ಭಾಷಣದಲ್ಲಿ ಹೊರಸೂಸಿದ ಆವನ ನ್ಯಾಯನಿಷ್ಠೆ ಮತ್ತು ಬ್ರಹ್ಮಚರ್ಯ ಪ್ರಭಾವವು ಇಡೀ ಸಭೆಯನ್ನು ರೋಮಾಂಚಗೊಳಿಸಿದ್ದಿತ. ಸಭೆ ಮುಗಿಸಿ ನಾನು ಮತ್ತು ಶ್ಯಾಮ ಬೈಲಲ್ಲಿ ಬರುತಿದ್ದಾಗ ರಾತ್ರಿ 11 ಘಂಟೆಯಾಯಿತು. ಅಣ್ಣತಂಗಿಯರು ಆ ಸಬ್‌ಇನ್ಸ್‌ಪೆಕ್ಟರನ ಮನೋಭಾವನ, ಆಗ ಆ ಮಹಿಳೆಯಲ್ಲಾಗಿರಬಹುದಾದ ಹೃದಯಾಂದೋಲನಗಳ ಗೂಢ ವಿಷಯಗಳನ್ನೇ ಮಾತಾಡಿಕೊಂಡು ಬರುತಿದ್ದೆವು. ಆಗ ಮನುಷ್ಯರು ಕೂಗಿದಂತೆ 'ಹೆಹೆಹೆ ಕೇ!' ಎಂಬ ಕೂಗುಕೇಳಿಸಿತು. ನಾವು ಬೆಚ್ಚಿ ಬಿದ್ದು ಹಿಂದೆ ನೋಡಿ, ಆ ಮೇಲೆ ಒಬ್ಬರ ನ್ನೊಬ್ಬರು ನೋಡಿ ನಗಾಡಿದೆವು. ಒಂದು ಹೋತ ಹಣ್ಣಾಡೊಂದನ್ನಟ್ಟಿಕೊಂಡು ಬಂದು ಅದರೊಡನೆ ಉರುಡಾಡುತ್ತಾ ಆ ರಂಪಾಟವೆಬ್ಬಿಸುತಿತ್ತು. ಹೆಣ್ಣಾಡು ತಪ್ಪಿಸಿಕೊಂಡೋಡಲು ನೋಡುತಿತ್ತು. ಶ್ಯಾಮ ಛಕ್ಕನೆನ್ನೆಯ ನನ್ನ ಮುಖ ನೋಡಿ ನಗಾಡಿದವ ಆ ಮೇಲೆ ತಲೆಯೆತ್ತಲಿಲ್ಲ, ಒಂದು ಮಾತನ್ನೂ ಆಡಲಿಲ್ಲ; ನಾನು ಈ ಆಡು ಜತೆಯನ್ನೇ ಸಬ್ ಇನ್ಸ್‌ಪೆಕ್ಟರ್ ಮತ್ತು ಆ ಮಹಿಳೆಗೆ ಹೋಲಿಸಿ ನಗುತಿದ್ದೆ. ಅವ ಪಿಟ್ಟಿನ್ನಲಿಲ್ಲ. ನನಗಾಶ್ಚರ್ಯವಾಯಿತು. ಆ ವನ ಕೈ ಕುಲುಕಿ ಕುಲುಕಿ ಮಾತಾಡಿಸಲು ಪ್ರಯತ್ನಿಸಿದೆ. ಶ್ಯಾಮ ಹತ್ತು ಹೆಜ್ಜೆ ನಡೆದು ಬಂದವ "ನೀನು ಹೋಗಿ ಬಿಡು; ಹೋಗು! ನಾನು ಬರುವದಿಲ್ಲ" ಎಂದು ನಿಂತ. ನಾನು ಬೆಚ್ಚಿ ಬಿದ್ದೆ ಅವನನ್ನು ಹಿಡಿದೆಳೆಯುವೆನೆನ್ನುವಾಗ ಅವ ಕೈ ಕೊಸರಿ ಕೊಂಡೋಡಹತ್ತಿದ. ನಿಜಗರ್ಧವಾಗಿಲ್ಲಿ; ಅವನ ಹಿಂದೆ ಓಡೋಣವನ್ನಿಸಿತು; ನಾಲ್ಕು ಮಾರು ಆತ್ಮ ಓಡಿದ್ದೆ. ಜಿದರೆ ಅಲ್ಲೇ ನಿಂತೆ. ಏನೋನೋ ಯೋಚಿಸಿ ಹೇಗೂ ಮನೆಗೆ ಬಂದು ಸುಟ್ಟೆದೆ. ರಾತ್ರಿಯಿಡೀ ನಿದ್ರೆ ಬರಲಿಲ್ಲ. ಯಜಮಾನರು ಈ ಸಾರ್ತೆಯಿಂದ ಆಶ್ಚರ್ಯಗೊಂಡರೂ ಮಹತ್ವ ಕೊಡದೆ 'ಮುಂಜಾನೆ ಬಂದಾನು' ಅಂದರು.

ಮುಂಜಾನೆ ಎದ್ದೊಡನೆಯೇ ನಾನು ಕೇಳಿದ ವಾರ್ತೆ--ಶ್ಯಾಮನಿಗೆ ಹುಚ್ಚು ಹಿಡಿದಿದೆ! ಇದನ್ನು ಕೇಳಿ ನನ್ನ ತಲೆಯೂ ಕಟ್ಟಿತು. ಅವನಿದ್ದಲ್ಲಿಗೆ ಓಡಬೇಕೆನ್ನಿಸಿತು. ಯಜಮಾನರು ಮುಂದಾಗಿ ತಾನೇ ನೋಡಿಬರುತ್ತೇನೆಂದು ಕಡೆದರು. ಹೋಗಿ ಬಂದವರು ಕಣ್ಣಲ್ಲಿ ನೀರು ತಂದುಕೊಂಡು ಹೇಳಿದರು-"ಭಯಂಕರ ಹುಚ್ಚು! ಇಂತಹ ಹುಚ್ಚನ್ನು ನಾನು ಇದುವರೆಗೆ ನೋಡಿಲ್ಲ. ಮೈಯಲ್ಲಿ ಒಂದು ತಂಡು ವಸ್ತ್ರವೂ ಇಲ್ಲದಂತೆ ಹರಿದು ಬತ್ತಲೆ ಕುಣಿದನಂತೆ! ಹೆಂಗಸರನ್ನು ಕಂಡೊಡನೆ ಕಚ್ಚಿ, ಪರಚಿ, ಕಲ್ಲು ಹೊಡೆಯುತ್ತಾನಂತೆ. ಮೂವರು ಹೆಂಗಸರನ್ನು ಆಸ್ಪತ್ರೆಗೆ ಸಾಗಿಸಬೇಕಾಯಿತು. ಊರವರ ದೃಷ್ಟಿಯಲ್ಲಿ ಅವ ನೊದಲೇ ಹುಚ್ಚ; ಆದ್ದರಿಂದ ಈ ಹುಚ್ಚನ್ನಾರೂ ಗಣಿಸಿಲ್ಲ. ಆದರೆ ತನ್ನ ಹೆಂಗಸರ ಮೇಲಿನ ಮಮತೆಯಿಂದ ರಟ್ಟೆ ಹಿಂದೆ ಕಟ್ಟೆ ಧರ್ಮಸಾಲೆಯಲ್ಲಿ ಹಾದ್ದಾಕಿರೆ ಡಾಕ್ಟರ ತರಿಸಿ ಔಷಧವರನ್ನ ನ್ನೇನೋ ಕೊಡಿಸಿದೆ. ಆದರೆ ಆ ಹುಚ್ಚು ಬಿಟ್ಟೇತೆಂಬ ಭರವಸೆ ಅವರಿಗೂ ಇಲ್ಲ. ದೈವ ಲೀಲೆ! ನಮ್ಮಲ್ಲಿ ತ್ಯಾಗ ಜೀವಿಗಳಿಗೆ ದೊರೆಯುವ ಸಂಭಾವನೆ ಇದೇ!"

ನನ್ನ ತಲೆಯೀಗ ನಿಜಕ್ಕೂ ಕೆಟ್ಟಿತು. ಹಿಂದಿನ ರಾತ್ರಿ ಬರುತಿದ್ದಾಗಲವನಲ್ಲಾದ ಆಕಸ್ಮಿಕಬದಲಾವಣೆಯಂದೊಂದೇ ಚಿತ್ರವು ಸಿಡಿಯುತ್ತಿದ್ದ ನನ್ನ ತಲೆಯಲ್ಲಿ ತಿರುಗಹತ್ತಿತು. ಆಗಲೇ ಎದ್ದೆ. "ಏ, ಸುಶೀ.... ...."ಎಂದು ನನ್ನನ್ನು ಕರೆದು ಏನೋ ಹೇಳಬೇಕೆಂದಿದ್ದ ಯಜಮಾನರು ಮತ್ತೇನನ್ನೋ ನೆನೆಸಿಕೊಂಡು ಬಾಯಿ ಮುಚ್ಚಿದರು. ಧರ್ಮಶಾಲೆಯ ವರೆಗೆ ಹೇಗೆ ಹೋದೆನ್ನೋ!

ದೂರದಲ್ಲಿ ಹೆಂಗಸರು ಗಂಡಸರ ಗುಂಪು ತಮಾಷೆ ನೋಡುತ್ತಿತ್ತು. ಎಲ್ಲರೂ ಮಾತಾಡಿಕೊಂಡು ನಗುತಿದ್ದರು; ನನ್ನನ್ನು ಕಂಡು ಅವರ ಚತುರ ಹೆಚ್ಚಿದಂತೆ ತೋರಿತು; ಪರಸ್ಪರ ಗುಣಗುಟ್ಟಿ ಹಪ್ಪಿದರು. ಆದರೆ ನನಗಲ್ಲಾಕೂನ್ಯವಾಗಿದ್ದು ಶ್ಯಾಮನ ಬೈಗಳು ಮಾತ್ರ ಕೇಳಿಸುತ್ತಿದ್ದವು. ಸೀದಾ ಒಳಗೆ ಹೋದೆ- ಹಣೆಯಲ್ಲಿ ಹರಿಡಿ ಬಿದ್ದ ಕೂದಲುಗಳಡಿಯಲ್ಲಿ ಎರಡು ಕಣ್ಣುಗಳುವಿಕಾರವಾಗಿ ಹೊಳೆಯುತ್ತಿದ್ದವು. ಹೆಡೆಮುರಿ ಬಿಗಿತದಿಂದರಟ್ಟೆಗಳುಬ್ಬಾತಿದ್ದುವು 'ಶ್ಯಾಮಾ!.....' ಎಂದವಳೇ ಅವನಮುಂಭಾಗದಲ್ಲಿಮುಗ್ಗರಿಸಿದೆ; ಆ ಹುಚ್ಚುಗಣ್ಣುಗಳನ್ನೇ ಎವೆಯಿಕ್ಕದೆ ನೋಡಿದೆ; ನೋಡುತ್ತಿದ್ದಂತೆ ಅವುಗಳ ಹೊಳಪು ಬದಲುಗಹತ್ತಿತು; ಆ ಕಣ್ಣುಗಳಲ್ಲಿ ಧಾರಾಕಾರವಾಗಿ ನೀರಿಳಿಯಿತು. ಸುಮಾರು ಹತ್ತು ಮಿನಿಟಿನ ವರೆಗೂ ನಾಲ್ಕೂ ಕಣ್ಣುಗಳುನೀರು ಸುರಿಸಿದ ಮೇಲೆ, ಅವನ ಕಣ್ಣೀರನ್ನು ಸೆರಗಿನಿಂದೊರಸಿ ನೋಡುತ್ತೇನೆ—ಅವು ನನ್ನ ಶ್ಯಾಮನ ನವೇ ಆದ ತೇಜಸ್ವೀ ಕಣ್ಣುಗಳು! ಅವುಗಳ ಹುಚ್ಚು ಕಲೆಯೆಲ್ಲಾ ಹೋಗಿದ್ದಿತು. "ಪದ್ಮಾ, ಆ ಕೈಯನ್ನು ಹಾಗೆಯೇ ಇಡಲಾರೆಯಾ?"—ಅವನ ಕಂಠದೊಳಗಿಂದ ಬಂದ ಮೊದಲ ಮಾತು. ನಾನು ಕೈಯನ್ನು ಅವನ ಗಲ್ಲ, ಕೆನ್ನೆ, ತುಟಿ, ಹುಬ್ಬುಗಳ ಮೇಲಾಡಿಸಿದೆ ಅಷ್ಟರಲ್ಲಿ ಹೊರಗಿನ ಗುಂಪು ಹಾಕಿದ ಕೇಕೇ ನಗು ನನ್ನನ್ನೆಚ್ಚರಿಸಿತು. ಹೋಗಿ ಬಾಗಿಲ ಚಿಲುಕ ಹಾಕಿಕೊಂಡೆ. ಇವನ ರಟ್ಟೆಯ ಕಟ್ಟನ್ನು ಬಿಚ್ಚಿದೆ. ಹಾ! ಇದೇನು ಅವನ ಇಡೀ ದೇಹ ಕಂಪಿಸುತ್ತಿದೆ. ನಡುಗುತಿದ್ದಂತೆ ಒನ್ನೆ ಎರಡೂ ಕೈಗಳನ್ನು ನನ್ನೆಡಗಾ ಚಾಚಿದ; ಛಕ್ಕನೇ ಹಿಂದೆಳೆದುಕೊಂಡು ತನ್ನ ಕ್ರಾಪನ್ನೇ ಎರಡೂ ಮುಷ್ಠಿಯಿಂದ ಹಿಡಿದೆಳೆದುಕೊಂಡ. ಆ ವಿಕಾರ ಜೀಡನೆಂದು ನಾನವನ ಕೈ ಹಿಡಿದೆಳೆದೆ.... ....ಹಾ!.... ಅವ ನನ್ನ ಸಕ್ಕದೆಲುಬು ಮುರಿಯುತೆಂಬಷ್ಟು ಗಟ್ಟಿಯಾಗಿ ಆಲಿಂಗಿಸಿಕೊಂಡ! ಸುಶೀ-ಶ್ಯಾಮನನ್ನ, ನನ್ನ, ನನ್ನ ಯಜಮಾನರ, ನಿನ್ನ, ನಮ್ಮ ಕುಟುಂಬದ, ಇಡಿಯ ಜೀವಮಾನಕ್ಕೆ ಸಂಬಂಧಿಸಿದ ಸ್ಥಾನುಷ್ಠಿತ ನಿರ್ಧಾರವನ್ನು ನಾನು ಆಗಲೇ-ಅವನತೋಳ ಕಟ ನಲ್ಲಿದ್ದ ಆ ಮುಹೂರ್ತದಲ್ಲಿಯೇ-ಮಾಡಬೇಕಾಗಿತ್ತು. 'ಶ್ಯಾಮಾ' ಎಂದೊಮ್ಮೆ ಗಟ್ಟಿಯಾಗಿ ಹೇಳುತಿದ್ದರೆ ಅವ ಕೂಡಲೇ ನನ್ನನ್ನು ಬಿಡುತಿದ್ದ. ಅಲ್ಲಿಯೇ ಗೋಡೆಗೆ ತಲೆ ಬಡಿದುಕೊಂಡು ಸಾಯುತ್ತಿದ್ದ! ಆದರೆ ನಾನು ಶ್ಯಾಮನನ್ನು 'ಕೊಲ್ಲುವುದೆ? ಅವನಿಗೆ ಪುನ ಹುಚ್ಚು ಹಿಡಿಯಲು ಬಿಡುವದೆ? ಆಗದು-ಅವ ಹುಚ್ಚನಾದರೆ ನಾನು ಹುಚ್ಚಿ! ಹುಚ್ಚನ ನಡುವಿಗೊಂದು ವಿದೇಶಿ ಬೈರಾಸನ್ನು ಸುತ್ತಿದ್ದರು. ಅವನೆನ್ನಿಂದಾಗಿ ಹುಚ್ಚುಬಿಟ್ಟು ಶ್ಯಾಮನಾಗಿದ್ದಾನೆ- ಶ್ಯಾಮ ವಿದೇಶೀ ವಸ್ತ್ರ ಮುಟ್ಟೆದವನೇ ಅಲ್ಲ. ಅವನ ರಟ್ಟೆಯ ಕಟ್ಟು ಬಿಚ್ಚಿದಂತೆಯೇ ಅದನ್ನೂ ಬಿಚ್ಚಿದೆ!.....

ನಾನು ಮರುದಿನ ಮುಂಜಾನೆ ರಾಮನನ್ನು ಕರಕೊಂಡು ಮನೆಗೆ ಹೊರಟೆ. ರಾತ್ರಿ ಯಜಮಾನರು ನನ್ನನ್ನು ಹುಡುಕಿಕೊಂಡು ಧರ್ಮ ಸಾಲೆಗೆ ಬಂದಿದ್ದರಂತೆ. ಅವರು ಬಾಗಿಲು ತಟ್ಟಿದುದು ನಮಗೆ ಕೇಳಿಸಿರಲಿಲ್ಲ. ಧರ್ಮಸಾಲೆಯ ಹರಕು ಗೋಡೆಗಳಲ್ಲಿ ಒಳಗಿನಾಕಲಾಗುವ ಬಿರುಕುಗಳ ವೆಯಂತೆ. ಅವರೂ ನೋಡಿರಬಹುದು, ಊರವರೂ ನೋಡಿರಬಹುದು ಶ್ಯಾಮನ ಹುಚ್ಚು ಬಿಡಿಸುವ ಕಾರ್ಯದಲ್ಲಿ ಸ್ವಪಂಚವನ್ನೇ ನೋಡಲಾರೆನೆಂದು ನನ್ನ ಸಂಕಲ್ಪ ವಿದ್ದುದರಿಂದ ಯಾವುದನ್ನೂ ನಾನರಿಯೆ.

ಮನೆಗೆ ಬಂದಾಗ ನಾವು ಕಂಡುದು ಅವರ ಹೆಣವನ್ನೇ!

ಇದಿಷ್ಟು ನಡೆದ ಕಥೆ. ನಿನಗೂ ಇ ನ್ಸ್‌ಪೆಕ್ಟರಿಗೂ, ನಾಳೆ ಕೋರ್ಟಿನಲ್ಲೂ ಇದೇ ಕಥೆಯನ್ನು ಹೇಳುತ್ತೇನೆ. ನನ್ನ ಪಕ್ಷಕ್ಕೆ ಲರೂ ಒಪ್ಪಿದ್ದಾರೆ. ಬಿಡುಗಡೆಗೆ ಇದೇ ಉತ್ತಮ ಹಾದಿಯಂತೆ ಇದರಿಂದ ನನ್ನ ಮೇಲೆ ವೈಭಿಚಾರದ ಆರೋಪ ಹೊರತು ಕೊಲೆಯ ಆರೋಪ ತಪ್ಪುವದಿಲ್ಲವಂತೆ ನಾನಾನ್ಯಥಾಚಾರಿಣಿಯೆಂದು ದಾವೆ ಹೂಡಬೇಕಾದನದೇ ಹೊರಬು ಹೋಗಿದ್ದಿರಾದ್ದರಿಂದ, ಅದಕ್ಕಾಗಿ ಶಿಕ್ಷೆ ಕೊಡಲು ನ್ಯಾಯಾಧೀಶರಿಂದಾಗುವದಿಲ್ಲ. ನಾನು ಒಂದೇ ಒಂದು ದಿನ ಜೈಲಲ್ಲಿರಲಾರೆ. ಶ್ಯಾಮನನ್ನು ಕ್ಷಣ ಬಿಟ್ಟಿರೆ ಅವನಿಗೆ ಪುನಃ ಹುಚ್ಚು ಹಿಡಿದೀತು, ಆದ್ದರಿಂದ ಅಗಲಲಾರೆ.

ಸುಶೀ, ಸಾಕಲ್ಲ ನನ್ನ ಹೇಳಿಕೆ?

ಇತಿ ನಿನ್ನ
ಪದ್ಮ.

ಬಲವಂತಗುಟಿಕಾ (Nerve strengthening Pills)
(ನವ ಜವಾನ ಗುಳಿಗೆಗಳು)

ಮೇಸೆ ವಸಸ್ಪತಿಯಿಂದ ತಯಾರಿ ಸುವಿಡಿ ಈ ಗುಳಿಗೆಗಳಿಂದ ರಕ್ತಶುದ್ಧಿ ಸುತ್ತು ಬಲ ನೈದ್ಧಿ ಆಗಿ ಪರಸು 'ರೆಮಿಮಿಂದ ಆದವಾ ಕಿಟ್ಟಿ ಚಾಲಿನಿಂದ ಉಟ್ಟಾದ ರೋಗಗಳು ಯಲ್ಲಾ ಹೋಗುತ್ತವೆ. ಈ ಔಷಧವು ಹೆಂಗಸರ ಸುತ್ತು ಚಿನ್ನ ಪುಡುಗಂ ಕಡಿಕೆ ಮುಂತಾದ ರೋಗಗಳ ಮೇಲೆ ಸಹಾ ಒಳ್ಳೆ ಉಪಯುಕ್ತ ಇರುತ್ತವೆ ಬಾಟ್ಲಿ ಸಂಗಡ ಇನ್ನು ಅನುಭವಾನ ಪತ್ರಿಕೆ ಕರಿಯಾಗಿ ವಿಷಧ ಸೇವನೆ ಮಾಡಿದರೆ ಆ ರೋಗಗಳು ಒಂದೆ ಸಪ್ತಕ್ಕ ದಲ್ಲಿ ಸಾಶವಾಗುತ್ತವೆ. ೧ ಸಪ್ತಕವೆ ಒಂದು ಬಾಟ್ಲಿ ಕಿಮ್ಮತ್ತು (೨-೦-೦) ಎರಡು ಕೂಡಾಯಿ. ಟಪ್ಪಾಲ ಖರ್ಚು ಬೇರೆ. ಒನ್ನೊಳೆ ಒಂದು ಡಜನ ಬಾಟ್ಲಿಗಳು ತರಿಸಿಕೊಂಡರೆ ಕಿಮ್ಮತ್ತು (೨೦-೦ ೦) ಇಪ್ಪತ್ತು ರೂಪಾಯಿ. ಟಪಾಲ ಖರ್ಚ ಇಲ್ಲಾ ಫ್ರಿ ಇರುವದು ಏಜಂಟರಿಗೆ ಯೋಗ್ಯ ಕಮಿಶನ.

ನಿಳಾಸು:— ಎಸ್. ಬಿ. ಕದಮ ಮತ್ತು ಸನ್ಸ್,
ಮೂ. ಪೊ. ನಿಪಾಣಿ (ಜಿ. ಬೆಳಗಾವಿ)

ಬಾಡಿಗೆಗೆ ದೊರಕುತ್ತವೆ.

ಹೊಸ ಉಡುಪುಗಳು ಹೊಸ ಪರದೆಗಳು
ಹೊಸ ಇತರ ಉಪಕರಣಗಳು

ಶಾಲಾವಾರ್ಷಿಕ ಮತ್ತು ಎಮೆಚೂರ್ಸ್ ನಾಟಿಕ ಕಥಾಭಾಗದಲ್ಲಿ ಬರಬಹುದಾದ ವಿವಿಧ ಭೂಮಿಕೆಗಳಿಗನುಕೂಲವಾದ ಎಲ್ಲಾ ತರದ ಪರದೆ ಉಡುಪು ಸಹಿತ ಉಪಕರಣಗಳು ಬಹಳೇ ಕಡಿಮೆ ಬಾಡಿಗೆಗೆ ದೊರಕುತ್ತವೆ. ಅಗತ್ಯವಿದ್ದಲ್ಲಿ ಪೌಡರ್ ಕೆಲಸವನ್ನು ಸಹ ಮಾಡಿ ಸೋಣವಾಗುವುದು. ಹೆಚ್ಚಿನ ವಿವರಕ್ಕೆ ಈ ಕೆಳಗಿನ ವಿಳಾಸಕ್ಕೆ ಎಂಟು ದಿವಸಗಳ ಮುಂಚಿತವಾಗಿ ಬರೆದುಕೊಳ್ಳುವುದು.

B Budan Basha Saheb,
P. V. I., B. H. E. Boys School, Barkur,
P. O. Barkur.

ಮಂದಾರ್ತಿ

ಶ್ರೀ ಮಹಿಷಾಸುರಮರ್ದಿನೀ ದೇವಸ್ಥಾನ, ಮಂದಾರ್ತಿ, ಬಾರ್ಕೂರು ಪೋಸ್ಟ್, ದ. ಕ.

ಇಲ್ಲಿ ಅಮ್ಮನವರ ಸನ್ನಿಧಿಯಲ್ಲಿ ನಡೆಯುವ ಹರಿವಾಣ ನೈವೇದ್ಯ ಪಂಚಾಮೃತ ಸೇವೆ ಕೊಡಪಕ್ಕ ಸೇವಾ ಭಜಕರು ತಾವೇ ಅರ್ಧ ಸೇರು ಅಕ್ಕಿ ತಂದಲ್ಲಿ ಸದ್ರಿ ಸೇವೆಯನ್ನು ಪೂರೈಸಿಕೊಡಲಾದೀತು.

ಆರ್ಚಕರು ಕಾನೇರಮ್ಮ.

The Pangal Nayak Bank Limited.

(Incorporated in 1920.)

Registered Office Court Road, UDIPI.

Branches at— **Udipi, Mangalore, Katapadi, Kanhangad, Kinnigoli and Nileshwar,** South Canara District

Discounting of demand and short term negotiable instruments for approved parties granting of loans and overdraft accommodation on goldware, marketable produce, other merchandise and on other securities, collection of pay, pension or other bills transmission of monies to upcountry places on moderate terms acceptance of Fixed, Current, Savings Bank and Cumulative deposits and every other type of up-to-date Banking service is at the disposal of all the sections of the discreet public

For business proper please enquire at any one of our Offices.,

15th April 1944.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟಿ ಬಿದ್ದಿದ್ದರೆ, ಉಷ್ಣದಿಂದ ಜೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಭಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿ ದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರು ವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪ ದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮೂತ್ರ ವ ಮುಂಜಾನೆ ಸಂಜೆ ಎರಡು ಸಾರಿ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸ ಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಸ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಸ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳೈಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ಲ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ಡಾವಣಗೇರಿ:ಡಾವಣಗೇರಿ ನ್ಯೂಸ್. ಪತ್ರವ್ಯವಹಾರ ಮಾಡಬೇಕಲ್ಲ ಮಾಲಕರ ವಿಳಾಸ.

ರೇವಣಸಿದ್ದಪ್ಪ ಹಾಲಪ್ಪ ಡಾವಣಗೇರಿ,
ಆಯುರ್ವೇದ ಔಷಧಾಲಯ, ಗದಗ.

Ayurveda Oushadalaya GADAG.

The best preventive in epidemics of CHOLERA

"BHUVANENDRA"
CHANDRAMAS

Also a sovereign remedy for diarrhoea. Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ'
ಚಂದ್ರಮಸ್

ಸಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ

ದೊಡ್ಡವರಿಗೆ 40ಂದ 8ಪೊಟ್ಟು, ಸಣ್ಣ ಮಕ್ಕಳಿಗೆ 10ರಿಂದ 2ಪೊಟ್ಟು ಲವಂಗ ಯಾ ಏಲಕ್ಕಿ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟಿನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್, ಕಟಪಾಡಿ, ದ.ಕ.

ಉಡುಪಿ ಸ್ವಾಕಿಸ್ಟರು:— ಡಾ. ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ ಶ್ರೀ ಆರ್. ಎಸ್. ಶೆಣೈ, ರಥಬೀದಿ; ಡಾ. ಟಿ. ಜಿ. ಆಚಾರ್ಯ ಫಾರ್ಮಸಿಸ್; ಡಾ. ಕೆ. ಶೇಷಗಿರಿ ಪೈ, L. I. M.; ಡಾ. ವೆಂಕಟರಾವ್, ಕೊರಡ್ಡಲ್; ನವಭಾರತ ಬುಕ್ ಡಿಪೊ.



ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ಸ್ಪೆಷ್ಯೆಲಿಸ್ಟ್ ತಯಾರಿಸಲ್ಪಟ್ಟ ಅವೀಕ್ಷ ಪಾವಿ ಮಧುರದ್ರವ ರಸಾಯನ. ಅಲ್ಪ ವೆಚ್ಚ ಲ್ಯದಿಂದ ಬಡವರಿಗೂ, ಧಾರ್ಮಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ)

ಆ ದಿವ್ಯಸ ತಾಯಿಮಕ್ಕಳು ಹೆಚ್ಚು ಕಡಿಮೆ ಅಪಾಯಸಗಳಿಗೆ ಬಲುವು ಅಂದರ ಕೇವಲ ಳ ತಾಪ್ಯಾಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ.ಶಾಸ್ತ್ರಿ, ಆಯುರ್ವೇದ ಭೂಷಣ, ನಂ.೨ ಕೊಡಿಯಾಲಬೈಲು, ದ.ಕ

— ಮಕ್ಕಳನ್ನು ಹಡೆಯುವದು ಸಾಕು—

ಒಳಕ್ಕ ಸ್ತ್ರೀಯರಿಗೆ **ಬರ್ಥ ಕಂಟ್ರೋಲ್** ಪೋಗಗ್ರಸ್ತ ಚಿಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನೆ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟುಗುತ್ತಾರೆ. ಆಲ್ಲದೆ ಸ್ತ್ರೀಯರ ಬಿಳಿಕೆರಗು, ಪ್ರಪರದೋಗ, ಹೊಲಿಕುಟ್ಟು, ಗುಣವಾಗಿ ಸ್ತ್ರೀಯು ಗರ್ಭಿಣಿ ಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳ ಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪತ್ಯ:—ಹರವೀಸಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಸ್ಟ ಚಾರ್ಜು ೧೫ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ಡಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ

ಏಜಂಟರು:—ಹುಬ್ಬಳಿ ಫಾರ್ಮಸಿ,—ಹುಬ್ಬಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪುರ— ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪುರ. ಬಿಕ್ಕೋಡಿಯಲ್ಲಿ:—ಹುಂಬರವಾಡಿ ಸ್ಟೋರ್ಸ್. ಡಾವಣಗೇರಿ:—ಡಾವಣಗೇರಿ ಪ್ರೆಸ್ಸ್. ಆರ್. ಎಲ್. ಕವಲದಾಸ, ಕೆಮಿಸ್ಟ, ಜಾವೀರ, ಬ್ಯಾಡಿಗಿ.

Ayurveda Oushadalaya, GADAG CITY.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚು ವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು. ಅಪಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತ್ಯವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿ ಯಾಗಿ, ಬಾಣಂತಿಯರು ಪುಷ್ಟಿ ಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನವಮಾನಯ ಔಷಧಿಗಳು ದೊರೆಯುತ್ತವೆ. ಕ್ಯಾಟಲಾಗಿಂಗ್ ಬರದಲ್ಲಿ ರೋಗಕ್ಕೆ ತಕ್ಕವಾದ ಔಷಧಿ ರವಾನಿಸಲಾಗುವದು. ಉಡುಪಿ ಏಜಂಟರು:—ನವಭಾರತ ಬುಕ್ ಡಿಪೊ

ಅಂತರಂಗದ ಕತೆಗಳು

೧೨ ಕತೆಗಳ ಸಂಗ್ರಹ ಬೆಲೆ ೦—೧೦—೦

ಅಂತರಂಗವನ್ನು ಬೆಳಗಿ, ಬಹಿರಂಗವನ್ನು ಹೊಳೆಸಿ ಹರಿಯುವ ಮಾತು.

ಪ್ರೇಮಪ್ರವಾಹವು ಹೇಗೆ ಹರಿಯುತ್ತದೆ? ಪ್ರಣಯದಲ್ಲಿ ಪ್ರಲಯವಿದೆಯೆ?

ಪ್ರೇಮಪ್ರವಾಹ

ಸ್ವಾರಸ್ಯವಾದ ೫ ಕತೆಗಳ ಸಂಗ್ರಹ ಬೆಲೆ ೦ ೬—೦

ಬಹಿರಂಗವಾಗಿ ಆಲ್ಲವಾದರೂ ಅಂತರಂಗವಾಗಿ ನೋಡತಕ್ಕ

ಆರ್ಟ್ ಚಿತ್ರಗಳು

ಹಲವಾರು ಸುಂದರಿಯರ ನೈಜಚಿತ್ರಗಳ ಕಟ್ಟು. ಬೆಲೆ ೦—೬—೦

ಪಾಪಪೂರಿತ ಪಟ್ಟಣಗಳು

ಪ್ರಪಂಚದ ಬೇರೆ ಬೇರೆ ದೇಶಗಳಲ್ಲಿ ವ್ಯಭಿಚಾರ ಸೂಳೆಗಾರಿಕೆಗಳು ಸಮಾಜವನ್ನು ಹೊಕ್ಕು ಅದನ್ನು ಹೇಗೆ ಕೊರೆದು ತಿಂದು ಹಾಳು ಮಾಡುತ್ತಿದೆ ಎಂಬುದನ್ನು ವಿವರಿಸುವ ಗ್ರಂಥ. ಬೆಲೆ. ೧—೮—೦

ವ್ಯಭಿಚಾರಿಣಿ ಯಾರು?

ಸಾಮಾಜಿಕ ನಾಟಕ. ಬೆಲೆ: ೦—೧೨—೦

ಮಾನವಂತತನದ ಸೋಗಿನಿಂದ ನಡೆಸಲ್ಪಡುವ ಅನಾಚಾರವನ್ನೂ ಪವಿತ್ರ ಪ್ರೇಮವು ಕಠಿಣ ಪರೀಕ್ಷೆಗೊಳಗಾದರೂ ಕಟ್ಟಕಡೆಗೆ ಅದರ ವಿಜಯ'ನಿಶ್ಚಿ ಯವೆಂಬುದನ್ನೂ ಮನಗಾಣಿಸುವ ವಿಚಾರ ಕ್ರಾಂತಿಕಾರಕ ನಾಟಕ.

ನವಭಾರತ ಪುಸ್ತಕ ಭಂಡಾರ, ಉಡುಪಿ.

EDITED PRINTED & PUBLISHED BY K. H. SHETTY AT THE NAVAYUGA PRESS, UDIPI. S. India

Regd No. M 3618.

ವಾರ್ಷಿಕ ಚಂದಾ ರೂ. 4—8—0 ಬಿಡಿ ಸಂಚಿಕೆ 0—1—6.

Estd. 1921 ಸ್ಥಾಪನೆ.

ಅಂತರಂಗ

ಉಡುಪಿ.

ಅಖಿಲ ಕರ್ನಾಟಕದ ಹೊಸ

ಮಾದರಿಯ ಸಚಿತ್ರ

ವಿನೋದ ವಾರ ಪತ್ರಿಕೆ.

ವಾರ್ಷಿಕ ಚಂದಾ ರೂ. 4—8—0

ಬಿಡಿ ಪ್ರತಿಗೆ ರೂ. 0—1—6

ವರ್ಷ ೨೪ ವಾರ ೨೦] ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ. [Vol. 24 No. 20

Founder SHRI. B. SHETTY.

ಉಡುಪಿ ● 25-1-1945 ● ಮಂಗಳೂರು.

ದಿ ಜುಪಿಟರ್

ಜನರಲ್ ಇನ್ಶೂರೆನ್ಸ್

ಕಂಪೆನಿ, ಲಿ, ಬೊಂಬಾಯಿ.

ವಿಮೆಯಿಳಿಸ ಬೇಕೆ?

ಏಜಂಟರಾಗುವಿರಾ?

ಹಾಗಾದರೆ ಕೂಡಲೇ

ಪಿ. ಡಿ. ನಾನಯ್ಯ, ಉಡುಪಿ.

ದಕ್ಷಿಣ ಕನ್ನಡದ ಚೀಫ್ ಏಜೆಂಟ್.

ಇವರಿಗೆ ಬರೆಯಿರಿ.

1 ಕೋಟಿಗೆ ಮಿಕ್ಕಿ ವ್ಯವಹಾರ!

ಈ ವರುಷವೇ ರಜತೋತ್ಸವ!

The Jupiter General Insurance Company Ltd

NOTICE.

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟ್‌ನಲ್ಲಿ.

ಕೈಮು ನಂಬ್ರ 410/1944

ಯಂ. ನೇಮಿರಾಜ ಪಡಿವಾಳ —ವಾದಿ

ಮತ್ತು

ಹಸನಬ್ಬ ಹ್ಯಾರಿ. ಕಾಸಿಂಬ್ಯಾರಿ ಮಗ್ಗಾನು, ಮಂಗಳೂರು ತಾಲ್ಲೂಕು ತಂಬೀರುಘಾನಿ ಗ್ರಾಮಸ್ಥ —ಪ್ರತಿವಾದಿ

ಇವರಿಗೆ

ವಾದಿಯು ನಿಮ್ಮ ಮೇಲೆ ಪಾಕ್ಷ್ಯವಾಗಿರುವ ಸದ್ರಿ ವ್ಯಾಜ್ಯವು ಕಾರ್ಯಕ್ರಮ 30 1 1945ಕ್ಕೆ ಯಿಟ್ಟುರುತ್ತದೆ. ಆದುದರಿಂದ ನಿಮ್ಮ ಉಪಾಪರಣೆಯಿದ್ದರೆ ಮೇಲ್ಕಂಡ ಕೋರ್ಟ್ ನುಂದೆ ಸದ್ರಿ ತಾರೀಕಿನ ದಿವ್ಸ ಬೆಳಿಗ್ಗೆ ಹತ್ತು 11ಕ್ಕೆ ಹ್ಯಾಜೀರು ಮಾಡಿಕೊಳ್ಳತಕ್ಕದ್ದು

By order of the Court.

K. B. Jinaraja Hegde

Advocate for Plaintiff

Mangalore, Dated 18—1—1945

THE CANARA MUTUAL ASSURANCE CO., LTD.,

UDIPI (S. India.)

GOOD WISHES

We thank all our policy-holders, Agents, Medical Examiners and well-wishers for all their co-operation and wish them a happy, peaceful and prosperous life in the New Year.

B. Vaikunta Baliga

Chairman

BOARD OF DIRECTORS

REGD

ಅಮೃತಾಂಜನ

ತಲೆನೋವಿಗೆ, ತಿರೋವೇದನೆ, ಉರುಟು, ಕ್ರಿಮಿಗೆ, ಭುಜ, ಹುಣ್ಣು ನೋವುಗಳಿಗೂ ಎದೆನೋವು, ಶ್ವಾಯಗಳು ಬಾತು ಕೊಳ್ಳುವಿಕ್ಕು ಬೇಕು

ವಿಷ ಮುಂತಾದ ಬೇನೆ ದಕ್ಷಾಜ್ಞ ಮೊದಲು ಮೊದಲಾದ ಎಲ್ಲ ರೋಗಗಳಿಗೂ ಸಹ ಹುಲುಕಡ್ಡಿ ಮದ್ದು ಸಜ ಸಮ್ಮಿಶ್ರಿಸಿಕ್ಕುದೆ.

ಅಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

ವಾರ್ಧಿವ ಸಂಚಿಕೆ

ಉಡುಪಿ ಪಂಚಾಂಗ

(1945-'46)

ಸಕಲ ಪುಣ್ಯಾರುಣ ನಿತ್ಯನೈಮಿತ್ತಿಕ ಧರ್ಮ ಕಾರ್ಯಗಳಿಗೆಲ್ಲಾ ಶಾಸ್ತ್ರೋಕ್ತವೀಯಂಪ ಪರಿಶೀಲನೆಯಾಗಿಯಿಪು

ಬೆಲೆ ಇರ 0—4—0

ವಿಶೇಷ ಮಾಹಿತಿಗೆ ಬರೆಯಿರಿ:-

ಆತ್ಮೂರು ವಾಸುದೇವ ಉಡುಪ.

ಸಂಪಾದಕ,

ಶ್ರೀ ರವಿಪ್ರಸಾದ ಜ್ಯೋತಿಷ್ಯಾಲಯ,

ಉಡುಪಿ

ಹೊಸವರ್ಷದ ಅಭಿವಂದನೆ

ನನ್ನ ಎಲ್ಲಾ ಪಾಲಸಿದಾರರಿಗೂ, ಏಜಂಟರಿಗೂ, ಕಂಪೆನಿಯ ವೈದ್ಯರಿಗೂ, ಹಿತಚಿಂತಕರಿಗೂ

ನವ ವರ್ಷವು

ಆನಂದದಾಯಕವಾಗಿಯೂ ಅಭಿವೃದ್ಧಿಕರವಾಗಿಯೂ ಪರಿಣಮಿಸಲೆಂಪು

ಸುಬ್ರಾಯ

ಹೃತ್ಪೂರ್ವಕವಾಗಿ ಹಾರೈಸುತ್ತೇನೆ.

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ದಕ್ಷಿಣ ಹಿಂದೂಸ್ಥಾನದ ಪ್ರಾಮುಖ್ಯ ವಿಜಂಟರು

ಬಾಂಬೆ ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಉಡುಪಿ, ಮದ್ರಾಸು, ಬೆಂಗಳೂರು, ಟ್ರಿವೆಂಡ್ರಂ. ಮಂಗಳೂರು, ಕಲ್ಲಿಕೋಟೆ, ಬೊಂಬಾಯಿ, ಮಧುರಾ

ದಿ ಮೂಲ್ಕಿ ಬೇಂಕ್,

ಲಿಮಿಟೆಡ್

ಗ್ರಾಮಸ್ಥರ ಸಮಿತಿ ವ್ಯವಸ್ಥೆಯಾಗಿ 15 ವರ್ಷಗಳಿಂದ ಡಿಪೋಸಿಟ್ ಗಳಿಗೆ ಉತ್ತಮ ದರವನ್ನು ಒದ್ದುಮಾಡಿ ಸಾಲಗಳನ್ನು ಕಡಮೆ ಬಡ್ಡಿಯಿಂದಲೂ ಕೊಡುತ್ತಾ ಜೀವನಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,

Moolky, S. K.

ಬಾಲಚಂದ್ರ

ಇದೀಗ ನೂರನೇ ಸಂಪುಟಾರಂಭವಾಗಿದ ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲಾರುಗಳೂ ಪ್ರಕಟವಾಗುತ್ತವೆ

ವಾರ್ಷಿಕ ಚಂದಾ

ರೂ 1—8—0 ಮಾತ್ರ

ಹೆಚ್ಚಿನ ವಿವರಕ್ಕೆ ಬರೆಯಿರಿ

ಬಾಲಚಂದ್ರ, ಉಡುಪಿ.

ಕ್ರೌನ್

ರಬ್ಬರ್ ಸ್ಟಾಂಪ್ ಕಂಪೆನಿ

18 ಬಲ್ಮಠ ರಸ್ತೆ, ಮಂಗಳೂರು

ರಬ್ಬರ್ ಮೊಹರು ಸೈನ್ ಬೋರ್ಡ್

ತೃಪ್ತಿಕರವಾಗಿ ಮಾಡಿಕೊಡಲ್ಪಡುವವು

Crown Rubber Stamp Co.

81 Balmat Road, MANGALORE

Approved firm by the Govt. of Mysore. Certified by the Agent of the Govt of India in Ceylon. ESTD 1906

THE VIJAYA STORES, LTD.,

COONDAPUR, S. K.

Vijaya Commercial Cash Certificate

Rs 100 per Certificate.

Rs 104 will be paid against the production of the Certificate after one year or earlier.

Your money is safe

Do not invest on property Jewels etc They depreciate. But this will yield 4

ವಿಜಯಾ ಸ್ಟೋರ್ಸ್ ಲಿಮಿಟೆಡ್,

ಕುಂದಾಪುರ.

ವಿಜಯಾ ಕಮರ್ಷಿಯಲ್ ಸರ್ಟಿಫಿಕೇಟುಗಳು

ಒಂದಕ್ಕೆ ರೂಪಾ 100-0-0

ಒಂದು ವರ್ಷ ಕಳೆದ ನಂತರ ರೂ. 104 ಸಿಗುವುದೆ ಭೂಮಿ, ಭಂಗಾರಗಳಲ್ಲಿ ಹಾಕಿದ ಹಣದ ಬೆಲೆಯು ಇಳಿಯುವುದಿ ಈ ಸರ್ಟಿಫಿಕೇಟುಗಳ.

ಈ ಇರಪ್ಪು ಬಿದ್ದಿ ಕಾಣುತ್ತಿ

ಹಲವಾರು ಖರ್ಚಾದುವು ——— ನೀವೂ ಪಡೆಯಿರಿ

ಮುಟ್ಟಾಗುವಿಕೆ

ಹಲವಿಂಗಳಿಂದ ಕಟ್ಟುಗಿದ್ದರೂ, ಕಪ್ಪಸ ಗರ್ಭಧಾರಣೆ ಆಪತ್ತಾ ಇನ್ನಾವ ಕಾರಣಗಿದ್ದರೂ—'ಕುಮಾರಿ' (Govt Regd ನಿಶ್ಚಿತ ನಿರುಪದ್ರವಿ—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಹರಯಿಗೊಡುವುದು; ಬೇಕಾಪಾಗ ಗರ್ಭಧಾರಣೆಯನ್ನು ನಿಲ್ಲಿಸುವುದು; ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ ರೂ 3! ಕೈಮಾಪ ಕೇಸುಗಳಿಗೆ ರೂ.5,(ಪೊಸ್ಟೆ 12 ಆಣೆ ಅಲಾಯಿದ) Mrs P. DEVEE, L. D. S (N) Tollygunge, Calcutta.

ಸ್ಟಾಕಿಸ್ಟ್: ಪೊಪ್ಯುಲರ್ ಸ್ಟೋರ್ಸ್, ಮಂಗಳೂರು.

ರಾಜಪತ್ನಿ ವಿಧ ... ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾನ್ಸಾಗ್ರಿಗಳೂ ಸಿದ್ಧರಿಸುವುದಲ್ಲದೆ ಯೂ ಬೆಲ್ಲರೆಯಾಗಿಯೂ ಮೊರೆಯುತ್ತವೆ.

ಕಲ್ಯಾಣಿ ವ್ಯಾಸಾಚಾರ್ಯ,

ರಥಬೀದಿ, ಉಡುಪಿ.

CHAMPAE'S

Snow & Tastres

Sole Distributors for (India.)

Sukhananda Stores

Santhekatte, UDIPI, S. K.

ಬ್ರಿಟಿಷ್ ಸಾಮ್ರಾಜ್ಯ ಸಿಂಹದ ಚತುಷ್ಪಾದಗಳು!

ಎಡದಿಂದ ಬಲಕ್ಕೆ —ಫೀಲ್ಡ್ ಮಾರ್ಷಲ್ ಸರ್ ಆಲನ್ ಬ್ರೂಕ್, ಪ್ರಧಾನಿ ಚರ್ಚಿಲ್, ಜನರಲ್ ಸೊಂಟಿಗೋಮೆರಿ, ಜನರಲ್ ಸ್ಮಟ್ಸ್
ದ್ವಿತೀಯರಂಗಾರಂಭದಲ್ಲಿ ಫ್ರಾನ್ಸಿನ ನೋರ್ಮಂದಿಯಲ್ಲಿ ಇವರೊಟ್ಟಾಗಿನ ಚಿತ್ರವಿದು

★ ಮೈನೆ ಕೊಲೆ ಮೊಕದ್ದಮೆ ★

ಎಲಸ್ಮೈನಿನ ಅರಬ-ಯಹೂದೀ ಜಗಳವು ದೀರ್ಘಾವಧಿಯದು. ಯುದ್ಧಕ್ಕೆ ಮೊದಲು ಬ್ರಿಟಿಷ್ ಸೇನೆ ವಿಮಾನಗಳಿಗೆ ಕಲಸನಿಗ್ದದು ಪೆಲಸ್ಮೈನಿನಲ್ಲಿಯೇ. ಪೆಲಸ್ಮೈನ್ ತಮ್ಮದೇ ಎಂದು ಅರಬರನ್ನುತ್ತಾರೆ, ಅದು ತಮ್ಮದೂ ಎಂದು ಯೆಹೂದಿಗಳನ್ನುತ್ತಾರೆ ಹಿಟ್ಲರನು ಜರ್ಮನಿಯಲ್ಲಿ ಕಾಡುಮೃಗಗಳಂತೆ ಯೆಹೂದಿಯರ ಬೇಟೆಯಾಡಲಾರಂಭಿಸಿದಾಗ ಅಮೇರಿಕಾ ಬ್ರಿಟನುಗಳಿಗೆ ಅವರ ನೋವೇ ಎಂದೂ ಇಲ್ಲದ ಮಮತೆ ಮೂಡಹತ್ತಿತು. ಅರಬರ ಸ್ವಾಭಿಮಾನವೊಂದು ಅಡ್ಡಬಾರದಿರುತಿದ್ದರೆ ಜರ್ಮನಿಯಿಂದೋಡಿ ಬಂದ ಯೆಹೂದಿಯರಿಗೆ ಪೆಲಸ್ತೀನ್ ನರ್ತನರಂಗವಾಗಿ ಬಿಡುತಿತ್ತು. ಅದರ ಅಲ್ಲಿಯ ಅರಬರು ಶಕ್ತಿಯ ಮಟ್ಟಿಗೆ ನಾಜಿಗಳಿಗಿಂತ ದುರ್ಬಲರು ಹೌದು ಯೆಹೂದೀದ್ವೇಷದಲ್ಲಿ ಅವರಿಗೇ ನೂಕಷಿನೆಯಿಂತಿಲ್ಲ ಇವೆರಡುಪಂಗಡಗಳಕಾದಾಟವನ್ನು ಎರಡುವಿರುದ್ಧ ಮನೋವೃತ್ತಿಗಳ ಘರ್ಷಣೆಯೆನ್ನಬೇಕು. ಯೆಹೂದಿಯನುದು ಜಲಾಂತರ್ಗಾಮೀ ಮನೋವೃತ್ತಿ, ತಿರಬನದು ವಿಮಾನದಂತಹ ಮನಸ್ಸು ಅರ್ಥತ್ ಪಾತಾಳ-ಆಕಾಶದಂತಹ ಭೇದ. ಇದಿಯ ಪ್ರಪಂಚದಲ್ಲಿ ವ್ಯಾಪಾರ ಜಾಣ್ಮೆಯು ಮಟ್ಟಿಗೆ ಯೆಹೂದಿಯರನ್ನು ಸರಿಗಟ್ಟುವವರಿಲ್ಲ ತಾವು ಹೋದಲ್ಲಿ ಸಂಪತ್ತುವ ಹೆಚ್ಚು ಸಮವಟ್ಟಾಗಿ ಹರಡಿದ್ದರೂ ಕೂಡ ಅದರ ತಟಕನ್ನೂ ಬಿಡದೆ ಹೀರಿಕೊಳ್ಳಬಲ್ಲರು ಈ ವರ್ಗ ಹಿಟ್ಲರನಲ್ಲಿ ಯೆಹೂದೀ ದ್ವೇಷವೊಳೆಯುವದಕ್ಕೂ ಇದೇ ಕಾರಣ ಅಗ್ರಗಣ್ಯ ಸುಂದರಿಯರೆಂದು ಹೆಸರು ಹೋದ ಯೆಹೂದೀ ಪಂಕ್ತಿಯರಿಂದ ಬ್ರಹ್ಮಚಾರಿ ಹಿಟ್ಲರ್ ಉದ್ರೇಕಗೊಂಡುದಲ್ಲ, ಯೆಹೂದೀ ವ್ಯವಹಾರ ಜಾಣ್ಮೆಯು ಜರ್ಮನಿಯ ಆರ್ಥಿಕ ಸ್ಥಿತಿಗತಿಯ ಕಾರಣವೆಂಬುದರಿಂದ ಜರ್ಮನ್ ಫುರಾರ್ ಅವರನ್ನೆಟ್ಟಿದ ಅರಬರು ಧೀರೋದಾತ್ತ ಪ್ರಕೃತಿಯವರು ಯುಕ್ತಿಯ ಬದಲು ಶಕ್ತಿ-ಜಾಣ್ಮೆಯ ಬದಲು ಥೈರ್ಯ-ಕಷಟದ ಬದಲು ಪ್ರಾಣಾಪಾಯಿತನವನ್ನು ಉಪಯೋಗಿಸಿಯೇ ಕಾರ್ಯಸಾಧಿಸುವವರು ಆದ್ದರಿಂದಲೇ ಈ ವಿರುದ್ಧ ಮನೋವೃತ್ತಿಗಳೊಳಗೆ ಇಂತಹ ಘರ್ಷಣೆ ಪೆಲಸ್ತೈನಿನಲ್ಲಿರುವ ಇವೆರಡು ಜನಾಂಗಗಳಾಳಿಗಿರುವದು ಅವಿಶ್ವಾಸ ಮಾತ್ರ, ಅಳ್ಳಕಯಿರುವದು. ಮೂರನೆಯವರಾದ ಬ್ರಿಟಿಷರ ಕೈಯಲ್ಲೇ ಸರ್ವಸಮಾನ್ಯವಾಗಿ ಪೆಲಸ್ತೈನಿನ ಪಾಡೂ ಹಿಂದೂಸ್ಥಾನದ್ದೇ ಬ್ರಿಟಿಷರಿಗೂ ಅತ್ತ ಅರಬರನ್ನು ಸಮಜಾಯಿಸಲಿಕ್ಕೂ ಆಗಿಲ್ಲ; ಇತ್ತ ಯೆಹೂದಿಯರನ್ನು ಸಂತೈಸುವದಕ್ಕೂ ಆಗಿಲ್ಲ ಅಧುನಾ ಇವೆರಡು ಪಕ್ಷಗಳನ್ನು ಏಕೀಕರಿಸಿ, ತಾನೇ ಎಡ

★

ಮೆ ಮತ್ತು ಎಲಿಯಾಸೋ ಬೆನ್‌ಸೌರಿ ಎಂಬಿಬ್ಬರು ಇಬ್ಬರೂ ಎಳೇ ಪ್ರಾಯದವರು; ಬಿಸಿ ಮತ್ತು ತೆಳು ರಕ್ತದ ಯುವಕರು ವಿಶೇಷವೆಂದರೆ ಅವರು ಕಾನೂನನ್ನು ಮುಂದಿಟ್ಟುಕೊಂಡುಕೋರ್ಟಿನಲ್ಲಿಮಗ್ಗೂ ಲಕೊಚ್ಚಿಲ್ಲ ಪ್ರಾಣವನ್ನು ನಾಲಿಗೆತೆಂದು ಮಾತಾಡಿದ್ದಾರೆ ತಮ್ಮಮೇಲಿನವೆಲ್ಲಾ ಚಾರ್ಜುಗಳನ್ನೂ ಒಪ್ಪಿಕೊಂಡು ಲೋರ್ಡ್ ಮೈನೆಯ ವರನ್ನು ತಾವು ಕೊಲೆಮಾಡಿದ ಕಥೆಯನ್ನ ಮೂರನೆಯವರ ಕೃತ್ಯವನ್ನು ವರ್ಣಿಸುವಷ್ಟು ನಿರ್ಲಿಪ್ತ ಹೃದಯದಿಂದ ಮುಂದಿಟ್ಟದ್ದಾರೆ ಲೋರ್ಡ್ ಮೈನೆಯವರ ಪೂರ್ವ ತಯಾರೀ ಕೊಲೆ, ಅವರ ದ್ರೈವರನ ಕೊಲೆ, ತನ್ನ ಕರ್ತವ್ಯ ಮಾಡಲು ಒಂದ ಪೋಲೀಸ್ ಕಾನ್‌ಸ್ಟೇಬಲನನ್ನು ಕೊಲ್ಲುವ ಪ್ರಯತ್ನ—ಇವೆಲ್ಲಾ ಆರೋಪಗಳಿಗೂ ಪಾದೆಂದು ತಲೆಯಲ್ಲುಡಿಸಿದ್ದಾರೆ ಅವರ ವಾಗ್ಮೂಲವು ಹೆಬ್ರೂ ಭಾಷೆಯಲ್ಲಿತ್ತು. ಅಲ್ಲಿಯ ಕೋರ್ಟು ಭಾಷೆ ಅರಬಿ ಪ್ರಧಮಾರೋಪಿ ಹಕೀಮನವ ಗ್ಮೂಲವನ್ನು ಭಾಷಾಂತರಿಸಿ ಹೇಳುವನು 'ಆಪರಾಧ' ಶಬ್ದವನ್ನು ಸೇರಿಸಿ ಹೇಳುತ್ತಿದ್ದಾಗ ಎರಡನೇ ಆರೋಪಿ ಸಾರಿಯದನ್ನು ಆಕ್ಷೇಪಿಸಿದ. "ಅಲ್ಲ, ಇದು ಅಪರಾಧವಲ್ಲ" ಎಂದು ಅವನ ಪ್ರತಿಭಟನೆ.

ಡನೇ ಪಕ್ಷವಾಗಿ ನಿಲ್ಲುವದು ಬೇಕಾಗಿಲ್ಲ. ಯೆಹೂದೀ — ಅರಬರು ಜಗಳಕಡಿಕೊಂಡಿದ್ದರೆ ಬ್ರಿಟಿಷರು ಜಡ್ಜರಾಗಿ ಇರಬಹುದು: ಅವರೇ ಒಂದಾದರೆ ಇವರು ಕಕ್ಷಿಗಾರರಾಗ ಬೇಕಾಗುವದು ಹೀಗಾಗಿ ಈಗ ಯೆಹೂದಿಯರಿಗೂ ಅರಬರಿಗೂ ಬ್ರಿಟಿಷರೆಂದರೆ ಹೊಟ್ಟೆನೋಯ್ದಿದೆ ಆದರೆ ಅವೆರಡು ಜನಾಂಗಗಳಲ್ಲಿ ಸರಸ್ಪರವಾಗಿ ಈ ನೋವಿಗಿಂತಕಠಿಣವಾದ ಉದರ ಶೂಲೆಯೇ ಇದೆ. ಅದ್ದರಿಂದ ಬ್ರಿಟಿಷರು ಅಲ್ಲಿ ಪ್ರೇಮದಲ್ಲಿರಬಹುದೆಂಬ ನಿರೀಕ್ಷೆಯಿದ್ದಿತು ಆದರೆ ಕೆಡಿಸ್ರ ಜ್ವಲಿಸದಿರುವದೆ? ಈಬೂದಿ ಮುಚ್ಚಿದ ಕೆಂಡದಲ್ಲಿ ಲೋರ್ಡ್ ಮೈನೆಯವರು ಕರಟಹೋದರು! ಮೈನೆಯವರು ಆ ಬಾಗದ ಬ್ರಿಟಿಷ್ ಮುಖ್ಯಾಧಿಕಾರಿ ಒಂದು ದಿನ ಲೇಡಿ ಸಮೇತ ಕಾರು ಹತ್ತಿ ಹೋಗುತ್ತಿದ್ದಾಗ ಇಬ್ಬರು ಯೆಹೂದೀ ತರುಣರು ಅವರನ್ನು ಗುಂಡಿಟ್ಟು ಕೊಂದುಬಿಟ್ಟರು. ಇದಿಷ್ಟು ಮೈನೆ ಕೊಲೆ ಮೊಕದ್ದಮೆಯ ಹಿನ್ನೆಲೆ.

† † †

ಕೊಲೆಗಾರರ ವಿಚಾರಣೆಯು ಜನವರಿ ತಾ. 10ರಲ್ಲಿ ಕೈರೋದಲ್ಲಿ ಆರಂಭವಾಯಿತು. ಮೂವರು ಜಡ್ಜರಲ್ಲಿ ಕೆ ಮುಹಮ್ಮದ್ ಮನ್ಸೂರ್ ಬೇಯವರು ಅಧ್ಯಕ್ಷತೆಯು ಉಳಿದ ಇಬ್ಬರು ಮಿಲಿಟರಿ ಜಡ್ಜರು ಆರೋಪಿತರು ಯಾರೆಂದರೆ ಎಲಿಯಾಸೋ ಹಕೀ

"ನಾವು ಲೋರ್ಡ್ ಮೈನೆಯವರು ಬರುವದನ್ನೇ ಕಾಯುತ್ತಾ ನಿಂತೆವು. ಕಾರು ಬಂದ ಕೂಡಲೆ ನಾನದನ್ನು ನಿಲ್ಲಿಸಿ ಅದರ ಬಾಗಿಲು ತೆಗೆದೆ ಆ ಮೇಲೆ ಮೈನೆಯವರ ಮೇಲೆ ಮೂರು ಬಾರಿ ಗುಂಡು ಹಾರಿಸಿದ ಅವರ ಪಕ್ಕದಲ್ಲಿ ಕುಳಿತಿದ್ದ ಮಹಿಳೆಗೆ ತಾಗದಂತೆ ನಾನು ಅತೀ ಜಾಗರೂಕತೆ ವಹಿಸಿದ್ದೆ"—ಎಂದು ಹೇಕೀಮನ ಹೇಳಿಕೆ ಸೌರಿಯ ಹೇಳಿಕೆಯೂ ಅದಕ್ಕನುಗುಣವಾಗಿಯೇ ಇದ್ದಿತು. ಕೋರ್ಟಿಗೆ ಹಾಜರು ಮಾಡಲ್ಪಟ್ಟಿದ್ದ ರಿವಾಲ್ವರನ್ನು ತೋರಿಸಿ 'ಇವೆಯೋ ನೀವು ಹೊಡೆದ ರಿವಾಲ್ವರ್' ಎಂದು ಪ್ರಶ್ನಿಸಿದಾಗ 'ಹಾಗೆ ತೋರುತ್ತದೆ' ಎಂದ ಸೌರಿ. ಮಾಜೀ ಮಂತ್ರಿ ಟ್ಯೂಫೆಕ್ ಡೋನ್ ಪಾಶಾ ಮತ್ತು ಹಸ್ಸನ್ ಹೋಸ್ನಿ ಎಂಬವರು ಆರೋಪಿತರ ಕಡೆಯ ವಕಾಲತು ನಡೆಸುತಿದ್ದಾರೆ ಇ

(ಗಾಸೆ ಪುಟ ನೋಡಿರಿ.

ಮುಂದಾರ್ತಿ

ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನ, ಮುಂದಾರ್ತಿ, ಬಾರ್ಕೂರು ಪೋಸ್ಟ್, ದ ಕ

ಇಲ್ಲಿ ಅಮ್ಮನವರ ಸನ್ನಿಧಿಯಲ್ಲಿ ನಡೆಯುವ ಹರಿವಾಣ ನೈವೇದ್ಯ ಪಂಚಾಮೃತ ಸೇವೆ ಕೊಡತಕ್ಕ ಸೇವಾ ಭೋಜಕರು ತಾವೇ ಆರ್ಡರ್ ಸೇರು ಅಕ್ಕಿ ತಂದಲ್ಲಿ ಸದ್ರಿ ಸೇವೆಯನ್ನು ಪೂರೈಸಿಕೊಡಲಾಗುತ್ತದೆ. ಅರ್ಜಿಕಳು ಕಾವೇರಮ್ಮ.

ಹೊಸ ವರುಷದ ಶುಭಾಶಂಸೆ

ನಮ್ಮ ಆಶ್ರಯದಾತರಿಗೂ, ಗೆಳೆಯರಿಗೂ ಹೊಸ ವರುಷವು ಆನಂದ ಸಮೃದ್ಧಿಗಳನ್ನು ತರಲೆಂದು ಕೋರುವಾಗ, ಅವರಿಗೆ ನೆತ್ತೇವೆ ಸಲಿಸಲನುವಾಗಿ ಅವರ ಸಹಕಾರ ಮತ್ತು ಸ್ನೇಹಮಯ ಸತ್ಸಹಾಯಕ್ಕಾಗಿ ಅವರಿಗೆ ಅಭಿನಂದನೆಗಳನ್ನು ಸಲಿಸುವೆವು

ಮುಂಬರುವ ವರುಷದಲ್ಲಿ ನಮ್ಮೊಳಗಿನ ಸಂಬಂಧವು ಇನ್ನೂ ಬಲಗೊಂಡು ಇಂದಿನ ಸಂಬಂಧವು ಅಖಂಡವಾಗುವಂತಹ ಹೆಚ್ಚಿನ ಸಂದರ್ಭಗಳನ್ನಿದಿರು ನೋಡುತ್ತಿರುವವು

ಸ್ಥಾಪಿತ 1906
ಕೆನರಾ ಬ್ಯಾಂಕ್ ಲಿಮಿಟೆಡ್.

Canara Bank Ltd.
(Incorporated in British India
Liability of members limited)

ನೋಟೀಸು
ಉಡ್ಪಿ ಡಿಸ್ಟ್ರಿಕ್ಟ ಮುನ್ಸಿಫ ಕೋರ್ಟಿನಲ್ಲಿ

O. P. 3/1945

ಸಂಕಟ್ಟಾಡಲ ಭಟ್ಟ ಕೂಡ 2ಜನರು ಉಡ್ಪಿ ತಾಲ್ಲು ಸಾರ್ಕಾರ್ವಾಮದ ಮರ್ಕನುಳದಲ್ಲಿರುವವರು —ಅರ್ಜದಾರರು.

ರಾಮಕೃಷ್ಣ ಭಟ್ಟ ಸುಬ್ಬಣ್ಣ ಭಟ್ಟ ಮಗ, ಸಾಂಗ್ಲಿ ಸ್ಟೇಟಿನ, ಗಣಪತಿಪೇಟೆ, ಗಜಾನನ ಕಸ್ಟೂರಿಂಟಿನಲ್ಲಿರುವವರು —ಯೆದ್ರಿ

ಅರ್ಜದಾರರ ಪ ಯೆದ್ರಿಯ ಚಿಕ್ಕ ತಂದೆಯವರಾದ ವೀಲು ವಗ್ಗಾರೆ ಮಾಡದೆ, ನಿಸ್ಸಂತತಿಯಾಗಿ ತಾ 6—3—44ರಲ್ಲು ಮೃತಹಟ್ಟುವ ಕೃಷ್ಣ ಭಟ್ಟ ಯಾನೆ ಎಂಜ್ರಾಂದ್ರಿಯವರಿಗೆ ತಾವು ಸಾಲಿಸುದಾರರಾಗಿರುವ ಕಾರಣ, ಸದ್ರಿಯವರ ಬಾಬ್ತು, ನೆಲ್ಯಾಪೋಸ್ಟು ಆಫೀಸಿನಲ್ಲಿ ಸೇವಿಂಗ್ಸ್ ಬ್ಯಾಂಕಿನಲ್ಲಿರುವ ಪಣೀಜು ರೂ 600 ನ್ನು ಪತಿಯುವರೆ ದಕ್ಕುದಾರರಂತ್ತು ಆ ಕುರಿತು ತನ್ನ ವ ಯೆದ್ರಿಯ ಹೆಸರಿಗೆ ಕೂಡ ಪಂದು ವಾರೀಸು ಸರ್ಟಿಫಿಕೇಟು ಕೊಡಬೇಕಾಗಿ ಕೇಳಿ, ಕೊಟ್ಟ ಅರ್ಜಿಯು ಈ ಕೋರ್ಟಿನಲ್ಲಿ ತಾ 15—2—45ಕ್ಕೆ ಇಟ್ಟರುವುದರಿಂದ, ಆ ವಿಚಾರಣೆಲ್ಲಿ ಆಕ್ಷೇಪಣೆಯಿರುವವರು ಸದ್ರಿ ಕೋರ್ಟಿನಲ್ಲಿ ಸದ್ರಿ ತಾರೀಕಿನಲ್ಲಿ ಹಗಲು ಘಂಟೆ 11ಕ್ಕೆ ಹಾಜರಾಗಿ ತಮ್ಮ ಆಕ್ಷೇಪಗಳನ್ನು ಜ್ಞಾಪಿಸಿರು ಮಾಡಬೇಕಾಗಿ ಈ ಮುಖಲಕ ಸರ್ವಜನರಿಗೆ ತಿಳಿಸೋಣಾಗುತ್ತದೆ.

Udipi 18-1-45 | K Vittal Nayak, Pleader for Petitioner.

★ ಕಾಂಗ್ರೆಸ್ ತ್ರಿಮೂರ್ತಿಗಳ ತ್ರಿವಿಧ ಪ್ರಯತ್ನ! ★

ರಾಜಿರಂಗದಲ್ಲಿ ಭುಲಾಭಾಯಿ–ವಿದೇಶಗಳಲ್ಲಿ ವಿಜಯ ಲಕ್ಷ್ಮಿ–ಕಾಂಗ್ರೆಸ್ ಕ್ಷೇತ್ರದಲ್ಲಿ ಸರೋಜಿನಿ.

ಗಾಂಧಿಜೀಯಂದಿದ್ದಾರೆಂಕೆ. ಮಿ. ಜಿನ್ನರ ಅಭಿಪ್ರಾಯವೇನೆಂಬುದು ತಿಳಿದಿಲ್ಲ.

ಹಿಂದೂ ದೇಶದ ಸದ್ಯದ ದುಸ್ಥಿತಿ ನಿವಾರಣೆಗಾಗಿ ಪ್ರಕೃತ ಹೊರಗಿರುವ ಮೂವರು ಅಗ್ರಗಣ್ಯ ಮುಖಂಡರು ಮೂರು ಮುಖದಿಂದ ಪ್ರಯತ್ನಿಸುತ್ತಿದ್ದಾರೆ ಕೇಂದ್ರ ಎಸೆಂಬ್ಲಿಯ ಕಾಂಗ್ರೆಸ್ ಪಕ್ಷದ ನಾಯಕ ಶ್ರೀ. ಭುಲಾಭಾಯಿ ದೇಸಾಯಿಯವರು ಸರಕಾರ ಮತ್ತು ಜನತೆಯೊಳಗಿರುವ ತಪ್ಪು ಸಂಬಂಧವನ್ನು ತಿದ್ದಲು ನೋಡುತ್ತಿದ್ದಾರೆ. ಸಂಯುಕ್ತ ಪ್ರಾಂತ್ಯದ ಮಾಜಿ ಕಾಂಗ್ರೆಸ್ ಮಂತ್ರಿ, ನೆಹರು ಸಹೋದರಿ ಶ್ರೀಮತಿ ವಿಜಯ ಲಕ್ಷ್ಮಿ ಪಂಡಿತರು ಹಿಂದುಸ್ಥಾನದ ಬೇಡಿಕೆಯ ಕುರಿತು ವಿದೇಶಗಳಲ್ಲಿರುವ ತಪ್ಪು ಅಭಿಪ್ರಾಯವನ್ನು ಸರಿಪಡಿಸುವ ಪ್ರಯತ್ನ. ಕಾಂಗ್ರೆಸಿನೊಳಗೇನೇ ಇರುವ ತಪ್ಪು ಭಾವನೆಗಳನ್ನು ತಿದ್ದುವ ಸಾಹಸ ವಹಿಸಿಂಗ್ ಕನಿಟಿಯ ಓರ್ವ ಗಣ್ಯಸದಸ್ಯಳಾದ ಶ್ರೀಮತಿ ಸರೋಜಿನೀ ದೇವಿಯದು. ಆದರೆ ಮೂರು ಮುಖಗಳಲ್ಲೂ ಬ್ರಿಟಿಷ್ ಸರಕಾರವು ಕಟ್ಟುವ ಅಡೆತಡೆಯ ಕೋಟೆಯಿದಿರಲ್ಲಿ ಈ ತ್ರಿಮೂರ್ತಿಗಳ ತ್ರಿಮುಖ ಧಾಳಿಯು ಜಯಶೀಲವಾದೀತೆ?

ಭುಲಾಭಾಯಿ ಸಂಧಾನ ಯತ್ನ.

ಶ್ರೀ. ಭುಲಾಭಾಯಿ ದೇಸಾಯಿಗಳು ನವಢಿಲ್ಲಿಯಲ್ಲಿ ಇದೇ ತಾ. 19ರಲ್ಲಿ ವೈಸರಾಯಿ ವೇವೆಲರೊಡನೆ ಒಂದು ಘಂಟೆ ಸಂಭಾಷಿಸಿ ಬಂದಿದ್ದಾರೆ ತತ್ಕಾಲಿಕವಾಗಿ ಸರ್ವ ಪಕ್ಷೀಯ ಸಂಯುಕ್ತ ಸರಕಾರವನ್ನು ಸ್ಥಾಪಿಸುವ ತನ್ನ ಯೋಜನೆಯನ್ನು ಅವರು ಲೋರ್ಡ್ ವೇವೆಲರ ಮುಂದಿಟ್ಟು ವಿವರಿಸಿ ಹೇಳಿದರೆಂದು ತಿಳಿಯಬರುತ್ತದೆ ಈ ಸಂಬಂಧವಾಗಿ ಈ ತಿಂಗಳಾಂತ್ಯದೊಳಗೆ ಇನ್ನೊಮ್ಮೆ ವೇವೆಲ್-ದೇಸಾಯಿ ಮಾತುಕತೆ ನಡೆಯುವ ಸಂಭವವಿದೆ. ಕಳದ ಮೂರು ತಿಂಗಳಾವಧಿಯಲ್ಲಿ ಭು.ಲಾಭಾಯಿಗಳು ವೇವೆಲರ ನೆಲರೂಢನೆ ನಡಸಿದ ಎರಡನೇ ಸಂಭಾಷಣೆಯೆಂದು ಮೊದಲನೇ ಸಂಭಾಷಣೆ ನಡಿಸಿದ ದೇಸಾಯಿಗಳು ತಮ್ಮ ಮಿತ್ರ ಮಹಮ್ಮದ್ ನಗರದ ಜೈಲಲ್ಲಿರುವ ನವಾಬ್ ಭೋಪಾಲ್ ಯವರನ್ನು ಭೇಟಿಮಾಡಿ, ಎಲ್ಲಿಂದ ಸೇವಾಗ್ರಾಮದಲ್ಲಿರುವ ಮಹಾತ್ಮರನ್ನ ಕಂಡು, ಆ ಮೇಲೆ ಕೊನೆಯ ಮಂತ್ರದಲ್ಲಿ ಮುಸ್ಲಿಂ ಲೀಗ್ ಅಧ್ಯಕ್ಷರಾದ ಶ್ರೀ ಜಿನ್ನಾರವರಿಗೆ ತಮ್ಮ ಯೋಜನೆಯ ವಿವರವನ್ನು ಲಿಖಿತವಾಗಿ ತಿಳಿಸಿದ್ದರು. ಆದರೆ ಈಗ ವಿಚ್ಛಿನ್ನ ಕರ್ಮವಾಗಿ ತಿಳಿದುಬರುವಂತೆ ದೇಸಾಯಿಗಾಂ ರಾಜಿ ಸೂತ್ರಗಳೆಂದರೆ, 1935ರ ರಾಜ್ಯಘಟನೆಗನುಸಾರವಾಗಿಯೇ ಸದ್ಯದ ವೈಚಾಸ್ರವಿನಿಧಿ ಎಸಂಬ್ಲಿ ಸದಸ್ಯರಿಂದ ಒಂದು ತಾತ್ಕಾಲಿಕ ಕೇಂದ್ರ ಸರಕಾರವನ್ನು ಸ್ಥಾಪಿಸಿಕೊಳ್ಳಬೇಕು ಹೊಸ ಚುನಾವಣೆಯೇ ಆಗಬೇಕೆಂದು ಜನತಾಭಿಪ್ರಾಯವಿದ್ದರೆ ಹಾಗೆ ಮಾಡಬಹುದು ವೈಸರಾಯಿ ಎಗ್ಜಿಕ್ಯೂಟಿವ್ ಕೌನ್ಸಿಲಿನಲ್ಲಿ ಹಿಂದೀಯರೇ ಇರಬೇಕು. ಪ್ರಾಂತ್ಯಪ್ರತಿನಿಧಿ ಸಭೆಗಳಲ್ಲಿ ಕೆಲವನ್ನಾ ಮಾಡಲ್ಪಟ್ಟಿರುವ ಪ್ರಾಂತ್ಯಗಳಲ್ಲಿ ಸಂಯುಕ್ತ ಸರಕಾರಗಳ ರಚನೆಯಾಗಬೇಕು ಹೀಗಾದಲ್ಲಿ ಯುದ್ಧಪ್ರಯತ್ನಕ್ಕು ನೆರವಾಗುವ ಆಶ್ವಾಸನೆ ಈ ಸೂತ್ರಗಳಲ್ಲಿದೆಯೋ ಎಂಬುದು ಸ್ಪಷ್ಟವಾಗಿಲ್ಲ.ಕಾಂಗ್ರೆಸ್ ಪ್ರಾಂತಿಕ ಸರಕಾರಗಳಿಗೆ ಲೋರ್ಡ್ ಲಿನ್‌ಲಿತ್‌ಗೂ ಸರಿಯವರು ಹಿಂದೆನ್ನೆಕೊಟ್ಟಂತೆ, ತಮಗೆ ಸಂಬಂಧಿಸದ ವಿಷಯಗಳಲ್ಲಿ ತಾನು ಕೈಹಾಕುವಂತಿಲ್ಲವೆಂದು ಲೋರ್ಡ್ ವೇವೆಲರು ಈ ಸರಕಾರಕ್ಕೆ ಒಕ್ಕಾಸನೆ ಕೊಡುವರೋ ಎಂಬುದು ಕೂಡಾ ತಿಳಿದುಬಂದಿಲ್ಲ ಭುಲಾಭಾಯಿ-ಲಿಯಾಕತ್ ಸಂಭಾಷಣೆಯ ಸಾರವನ್ನೆಲ್ಲಾ ಆಗಾಗಲೇ ಲೋರ್ಡ್ ವೇವೆಲರಿಗೆ ತಿಳಿಸಲಾಗಿದ್ದಿತು ಬೈಸರಾಯರು ಈ ಕುರಿತು ಲಂಡನ್ನಿನಲ್ಲಿರುವ ಮೇಲಧಿಕಾರಿಗಳೊಡನೆ ವ್ಯವಹಾರ ನಡೆಸಿದ್ದರು. ಸದ್ಯದ ರಾಜ್ಯಘಟನೆಗನುಸಾರವಾಗಿ ಹೊಸ ಸರಕಾರ ಸ್ಥಾಪಿಸುವದಕ್ಕೆ ತಾವು ಸಿದ್ಧರಿದ್ದೇವೆಂದು ಲೋರ್ಡ್ ವೇವೆಲರ ಘೋಷಣೆಯಿದೆ. ಆದರೂ ಇಂತಹ ಸರಕಾರ ಸ್ಥಾಪನೆಯಾವಲ್ಲಿ ಯುದ್ಧಕಾಲದ ಹಲವು ಮುಖ್ಯ ಕಾರ್ಯಗಳು ಜನಪ್ರತಿನಿಧಿಗಳ ಕೈಗೆ ಹೋಗಲಿರುವದರಿಂದ ಚರ್ಚಲ್ ಆಮೆರಿಗಳು ಇದಕ್ಕೆ ಸಮ್ಮತಿಸಲಾರರೆಂಬ ಶಂಕೆಯಿದೆ "ಪ್ರಯತ್ನ ಮಾಡಿನೋಡಿ, ಆದರೆ ಪಾರ್ಲಿಮೆಂಟರಿ ಸದ್ಯಸ್ಥಿತಿಯಿಂದ ಸ್ವಾತಂತ್ರ್ಯ ಗೆಲ್ಲುವ ನಂಬಿಕ ನನಗಿಲ್ಲ -ಎಂದು ದೇಸಾಯಿಗಳಿಗೆ

ವಿದೇಶಗಳಲ್ಲಿ ವಿಜಯಲಕ್ಷ್ಮಿ ಪಂಡಿತರು

ಅಮೆರಿಕ ಪ್ರವಾಸ ಕೈಗೊಂಡಿರುವ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ಹಿಂದೀ ಸ್ವಾತಂತ್ರ್ಯವನ್ನೆತ್ತಿ ಹಿಡಿದು ಅಮೇರಿಕೆ ಭೂಷಣಗಳನ್ನೆತ್ತು ಅಲ್ಲಿಯ ಜನಮತವನ್ನೊಲಿಸಿಕೊಂಡಿದ್ದಾರೆ ಶಾಂತ ಸಮುದ್ರ ಸಂಬಂದದ ಅಂತರಾಷ್ಟ್ರೀಯ ಪರಿಷತ್ತಿನ ಹಿಂದೀ ಪ್ರತಿನಿಧಿ ಮಂಡಲದ ಅಧ್ಯಕ್ಷೆಯಾಗಿ ಹೋಗಿ ಶ್ರೀಮತಿಯವರು ತಾರತಮ್ಯ ಹಿಂದೀ ಪ್ರತಿನಿಧಿಗಳೊಡನೆ ಅಸ್ಪಾಖಂಡವಾದ ಸಂಘಟನೆಯ ಒಗ್ಗೆ ಪ್ಲಾಫನೀಯ ಪ್ರಯತ್ನ ಮಾಡಿದ್ದಾರೆ. ಪೌರ್ವಾತ್ಯ ರಾಷ್ಟ್ರಗಳಿಗೆ ಸ್ವಾತಂತ್ರ್ಯದಾನ, ವರ್ಣದ್ವೇಷ ನಿವಾರಣೆ ಮೊದಲಾದ ಈ ಅವಶ್ಯಕತೆಗಳ ಕುರಿತು ಹಿಂದೀ ಪ್ರತಿನಿಧಿಗಳು ಬ್ರಿಟಿಷ್ ಪ್ರತಿನಿಧಿಗಳೊಡನೆ ವಾದ ಸಂಗ್ರಾಮ ಹೂಡಿ ವಿಜಯಪಡೆದಿದ್ದಾರೆ. ಆ ಸಮ್ಮೇಲನವು ಇದೇ ತಾ. 18ರಲ್ಲಿ ಮುಗಿದಾಗ ಶ್ರೀಮತಿ ಪಂಡಿತರಾಡಿದ ಮನನೀಯ ಮಾತುಗಳವು: "ನಾವಿಲ್ಲಿ ಹಳೇ ಭಾವನೆಗಳನ್ನು ಹೊಸ ಶಬ್ದಗಳಲ್ಲಿ ಸುಟಿಸಿದ್ದೇವೆ ಪೌರ್ವಾತ್ಯ ದೂರ ಪ್ರಾಚ್ಯ ರಾಷ್ಟ್ರಗಳ ಕುರಿ

ಮೈಸೂರು ಶ್ರೀಮನ್ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ ಖಾಸ್ ವೈದ್ಯ ಅಂಬಳೆ ನರಸಿಂಹ ಪಂಡಿತರ ಮನೆತನದ

ಸಂತಾನ ಸಿಂಧೂರ

ಶಾಜನಂ... ಳ್ಳ ವರ್ಷವು ಜರೆಸಿ ? ಬಿಸಿಲ್ಲೆ ಸಂಬಂಧಿಸಿ ಕೂಟ್ಟ ನೆಗ ವೃತ್ತಿ ಗೂ ಗಾರದ ಹೆಣ್ಣು ಮಗಳಿಗೆ ಸುತಾನವಾಗುವುದಿಲ್ಲ ಮೂರು ದಿವಸದಲ್ಲಿ ಗುಣವಾ , ಖಾತ್ರಿ ಪರಿಹಾರ ಹೆಂ ಬೆಕಾದರೆ, ಎಕ ಸರ್ಪಗಳಿಂದ ಪ್ರಖ್ಯಾತವಾದ ಸೌಕ್ಯವಾದ ಸಿದ್ಧಿಸಿದ ಮಂತ್ರ ಔಷಧಿಗಳಿಂದ ಕೂಡಿದ ಸರ್ಪಗಂಧಿ ಎಂಬ ಔಷಧವನ್ನು ತೆಗೆದುಕೊಳ್ಳಿರಿವುದಾಗಿ ಇಂಗ್ಲಿಷ್, ಆಯುರ್ವೇದಿಕ್ ಡಾಕ್ಟರುಗಳ ವಿಚಾರಸರ್ಗಿಂಗಳಿಂದ ಪ್ರಶಂಸಾಪತ್ರಗಳನ್ನು ಪಡೆದಿದೆ

ಕ್ಷಯ ... ಕೆಮ್ಮು ಶ್ವಾಸ ಮತ್ತು ಸಿಹಿಮೂತ್ರ ಬಂದಿರುವ ಎಂಥ ಬಹಳ ಸುಸಾಧ್ಯವಾದ ಮಾತ್ರೆ ಮಾಡಿಕೊಡಲ್ಪಡುವುದು ಕೂಡಲೆ ರಿಜಿಸ್ಟರ್ ಪೋಸ್ಟಾಲ್ ಔಷಧವನ್ನು ಕಳುಹಿಸಿ ಬೇಕಾದ ಸಮಯದಲ್ಲಿ ಔಷಧವನ್ನು ಕೊಡಿಸಲಾಗುವುದು ಅಂಚೆಯ ಖರ್ಚು ಉಚಿತ ಅನುಭವಾನ ಪತ್ರಗಳಿಗೆ ಕಾಗದ

A. Ramaswami Aiyar
Ambley, Yelandur P O
(MYSORE Dt)

ಎ ರಾಮಸ್ವಾಮಿ ಅಯ್ಯರ್,
ಎಂಬಳೆ, ಯಳಂದೂರು ಪೋಸ್ಟು,
(ಮೈಸೂರು ಡಿಸ್ಟ್ರಿಕ್ಟ್)

ಉಡುಪಿ ಮಧ್ವಮತ

ಶಿವಳ್ಳಿ ಬ್ರಾಹ್ಮಣರ

ಧರ್ಮ ಛತ್ರ

ಇದೇ ತಾ 8–10–44ರಿಂದ

ರಾಮೇಶ್ವರ ದೇವಸ್ಥಾನದ ಬಡಗು ಬೀದಿಯಲ್ಲಿ ತೆರೆಯಲ್ಪಟ್ಟಿದೆ

ಎಲ್. ನರಸಿಂಗ ರಾವ್, ಪ್ರೊಪ್ರೈಟರ್

ಉಡುಪಿ ಬ್ರೋಡಿಂಗ್ ಎಂಡ್ ಲಾಜಿಂಗ್, ಉಡುಪಿ

Decorate your home with

Life-like Oil Painting

of those dear and near to you

M. S. Shirale,
MODERN STUDIO
UDIPI.

ನೋಟೀಸು.

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

ಫೈಸಲು ನಂಬ್ರ 409/1944

ಯಾ ನೇನಿರಾಜ ಪಡಿವಾಳ —ವಾದಿ

ಮತ್ತು

ಸಾಸಂಬಮ—ಲಿಂಗಪ್ಪಾಚಾರಿ ಧನಿಷ ಮುಂಗಳೂರು ಕಾಲ್ಕು ತಂಬೀರುಭಾವಿ ಗ್ರಾಮವಾಸಿಗಳು —ಪ್ರತಿವಾದಿ

ಇವರಿಗೆ

ವಾದಿಯು ಬಂದು ಮೇಲೆ ಹಾಕ್ಕು ಮಾಡಿದವ ಸದ್ದಿ ವ್ಯಾಜ್ಯವ ಕಾರ್ಯಕ್ಕು 30-1-1945ಕ್ಕೆ ಮುಟ್ಟುವುದಕ್ಕೆ ಒದ್ದರಿಂದ ಬಂದು ಉತ್ತರವನ್ನೆಯಂದಿಗೆ ನೋಟ್ಟಂದ ಕೋರ್ಟಿಗೆ ಬಂದು ಸದ್ರಿ ವ್ಯಾಜ್ಯಕ್ಕೆ ಸಂಬಂಧಿಸಿದ ಸಕ್ಷಿಗಳನ್ನು ಕರೆಸಿಕೊಳ್ಳಲಿಕ್ಕೆ ಸಾಧ್ಯವಾಗುವಂತೆ ಮಾಡ

ತು ನಾವಿಲ್ಲಿ ನಡೆಸಿದ ಚರ್ಚೆಗನುಸಾರವಾಗಿ ಸಂಬಂಧಪಟ್ಟ ರಾಷ್ಟ್ರಗಳು ತಮ್ಮ ಪೂರ್ವ ನಿಶ್ಚಿತ ಧೋರಣೆಯನ್ನು ಬದಲಾಯಿಸಿಕೊಂಡು ಕಾಲಾನುಗುಣವಾಗಿ ವರ್ತಿಸುವೆಂಬ ಲಕ್ಷಣ ಕಾಣುವದಿಲ್ಲ. ಪರಿಷತ್ತಿನ ಕೆಲವು ಸದಸ್ಯರು ಒಂದಲ್ಲೊಂದು ನೆವಹೇಳಿ ದೂಷಿತ ವಿಷಯಗಳ ಚರ್ಚೆಯನ್ನಿದಿರಿಸಲಾರದೆ ತಪ್ಪಿಸಿಕೊಳ್ಳಲು ಯತ್ನಿಸಿದ್ದಾರೆ ಅಂತಹ ವಿಷಯಗಳೇನಾದರೂ ಬಂದಲ್ಲಿ ಪರಿಷತ್ತಿನ ಸಲ್ಲುವಿಯಂದ ೫೦ವು ವಸ್ತುಸ್ಥಿತಿಯ ಕಡೆಗೆ ನೋಡೋಣ'ವೆಂಬುದು. ಆದರೆ ಅಕಸ್ಮಾತ್ತಾಗಿ ಅನಾಯಮಾಯೀ ವಸ್ತುಸ್ಥಿತಿಯನ್ನೇ ಇದಿರಿಸಬೇಕಾಗಿ ಬಂದಾಗ "ಇದನ್ನು ನಾವು ಕಚ್ಚಾಟಿಗೆ ಮಾನವೀಯತೆಯ ದೃಷ್ಟಿಯಿಂದ ಪರಿಶೀಲಿಸಬೇಕು" ಎಂದು ನವಹೇಳಿ ಪರಿಷತ್ತು ನಿರಾಕರಿಸುತ್ತಿತ್ತು. ಹೀಗಾಗಿ ಚರ್ಚೆಗಳೆಲ್ಲ ವರ್ತುಲಾಕಾರವಾಗಿ ಸುತ್ತಿದುವು ತಾವು ಶಾಂತಿಪ್ರಿಯರು ಮತ್ತು ಸತ್ಪ್ರವೃತ್ತಿಯವರೆಂದು ಮಿತ್ರರಾಷ್ಟ್ರಗಳು ಹೇಳುತ್ತಿರುವದನ್ನು ನಾನು ಕೇಳಿದ್ದೇನೆ. ಆದರೆ ಸದ್ಯಕ್ಕವುಗಳು ಆಧಿಕಾರಾಕಾಂಕ್ಷೀ ರಾಷ್ಟ್ರಗಳೆಂದು ನಾನು ಕರೆಯಬೇಕಾಗುತ್ತದೆ. ಅವುಗಳೀಗ ಅತಿಗರ್ವಶಾಲಿಗಳಾಗಿ ವಿಜಯ ದೊರೆತಾಗ ತಾವು ಹೆಚ್ಚಿನ ಆಧಿಕಾರಗಳನ್ನು ಸಿಕೊಳ್ಳವದು ಹೇಗೆ ಎಂಬ ನಿರ್ಧಾರ ನಾಡುವುದರಲ್ಲೇ ಇನೆ. ಯುದ್ಧಾಂತ್ಯವಾಗುವದು ಒಂದು ಪಕ್ಷಕ್ಕಿಂತ ಹೆಚ್ಚಿನ ಜನ, ಹಣ ಮತ್ತು ಯುದ್ಧೋಪಕರಣಗಳುಳ್ಳ ಇನ್ನೊಂದು ಪಂಗಡದ ವಿಜಯದಿಂದಾಗಿಯೇ. ಅದು ಮಾನವೀಯತೆಯ ಆಧಾರದ ಮೇಲೆ ಶಾಂತಿಸ್ಥಾಪನೆ ಮಾಡುವಂತಿಲ್ಲ" ಎಂದು ಶ್ರೀಮತಿ ಪಂಡಿತರು ಹೇಳಿಕೆ.

ಸರೋಜಿನೀ ದೇವಿಯ ಸ್ಪಷ್ಟೀಕರಣ

ಮದ್ರಾಸಿನಲ್ಲಿ ಶ್ರೀಮತಿ ನಾಯಡುಗಳು ಕಾಂಗ್ರೆಸ್ ರೀತಿ ನೀತಿಗಳ ಕುರಿತು ಅನೇಕ ಭಾಷಣಗಳನ್ನಿತ್ತಿದ್ದಾರೆ. ಕಾಂಗ್ರೆಸ್ ಸಮಿತಿಗಳ ಮೇಲೆ ಬಹಿಷ್ಕಾರವಿರುವದರಿಂದ ತಾತ್ಕಾಲಿಕ ಸಮಿತಿಗಳನ್ನು ಸ್ಥಾಪಿಸಿಕೊಳ್ಳುವಾಗ ಕಮ್ಯೂನಿಸ್ಟರಿಗೆ ಹಾಕಿರುವ ಬಹಿಷ್ಕಾರವು ಕಾಂಗ್ರೆಸ್ ಕ್ರಮ ನಿಯಮಗಳಿಗೆ ಸಂಬಂಧಪಟ್ಟ ಸದ್ಯದ ಪ್ರಮುಖ ಪ್ರಶ್ನೆಯಾಗಿದೆ 'ತಾತ್ಕಾಲಿಕ ಸಮಿತಿಗಳು ಶಾಶ್ವತವಲ್ಲ. ಅವು ತಮ್ಮಿಷ್ಟಿಯಂತೆ ರೂಪುಗೊಳ್ಳಬಹುದು. ಸದ್ಯದ ನಿಬಂಧನೆಗಳಿಗನುಸಾರವಾಗಿ ಭಿನ್ನಾಭಿಪ್ರಾಯ ನಿವಿತ್ತು ಯಾರನ್ನೂ ಕಾಂಗ್ರೆಸಿನಿಂದ ಬಹಿಷ್ಕರಿಸಲಾಗುವದಿಲ್ಲ. ಕಮ್ಯೂನಿಸ್ಟರು ರಾಷ್ಟ್ರಕ್ಕೆ ಸತ್ಸೇವೆ ಸಲ್ಲಿಸಿದ್ದಾರೆ. ಕೆಲವೊಂದು ಕಾರ್ಯಕ್ರಮಗಳು ಅಸಮ್ಮತವಾದ ಮಾತ್ರಕ್ಕೆ ಒಂದು ಪಕ್ಷವನ್ನು ಹೊರಗಟ್ಟುವ ಅಧಿಕಾರ ಇನ್ನೊಂದು ಪಕ್ಷಕ್ಕಿಲ್ಲ' ಎಂದು ಶ್ರೀಮತಿಯವರ ಅಧಿಕಾರಬದ್ಧ ಸ್ಪಷ್ಟೀಕರಣ ಮದ್ರಾಸಿನ ಮಹಿಳಾ ಸಂಸ್ಥೆಯ ಆಶ್ರಯದಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಶ್ರೀಮತಿಯವರಾಡಿದ ಈ ಕೆಳಗಿನ ಮಾತುಗಳು ಸ್ಮರಣೆಯೊಬ್ಬ ಭಾರತೀಯನ ಪ್ರಜ್ಞಾನಗಳಾಗಬೇಕು. "ಸರಕಾರದ ನಿಂದೆಯೊಂದೇ ರಾಜಕೀಯೋದ್ಧಾರವಲ್ಲ. ಆದು ನಮ್ಮ ದೌರ್ಬಲ್ಯದ ಬಾಯ್ದೆರೆ ಘೋಷಣೆ ಜನರೇ ಹೊತ್ತುಕೊಂಡಿರುವುದಲ್ಲವಾದರೆ ಸರಕಾರವೆಲ್ಲಿದೆ? ನಾವು ದಾಸ್ಯದಲ್ಲಿಯೇ ಬೆಳೆದವರು; ದಾಸ್ಯದಲ್ಲಿಯೇ ನೆಮ್ಮದಿಯನ್ನು ಕಾಣುವವರು; ಆದ್ದರಿಂದ ನಮ್ಮ ದಾಸ್ಯತ್ವವು ನಮಗೆ ಮರೆತು ಹೋಗಿದೆ. ನಾನು ಮತ್ತೊಮ್ಮೆ ಹೇಳುತ್ತೇನೆ—ಸರಕಾರವದನ್ನು ಮಾಡುತ್ತಿಲ್ಲ; ಅದನ್ನು ಮಾಡಿಕೊಳ್ಳುತ್ತಿರುವವರು ನಾವೇ. ವಿದೇಶೀ ಅಧಿಕಾರವು ನಮ್ಮನ್ನಾಳುವಂತೆ ನಾವೇ ಘಂಟೆ ಘಂಟೆಯೂ ಒಪ್ಪಿಕೊಳ್ಳುತಿದ್ದೇವೆ. ನಾವು ಸಾಮ್ರಾಜ್ಯವಾದಿಗಳು, ಸರಕಾರವಲ್ಲ! ನಮಗೆ ದಾಸ್ಯದ ನೋವಿನ ಅರಿವಾಗಿದ್ದರೆ—ಹರಿಣೀತನೆತಾಗಿ ನಾಚಿಕೆ ಮೂಡಿದ್ದರೆ—ಅದು ಅಪಮಾನಕರವೆಂದು ಹೊಳೆದಿದ್ದರೆ, ನೀವಿಲ್ಲಿ ನೆಮ್ಮದಿಯಿಂದ ಕುಳಿತುಕೊಂಡು, ಆಳುವದಕ್ಕುಚ್ಛೆಯಿಲ್ಲದೆ ನಾನಾಡುತ್ತಿರುವ ಈ ಹುಚ್ಚು ತಮಾಷೆಗಳಿಗಾಗಿ ಹೀಗೆ ನಗುತ್ತಿದ್ದಿರೆ? ಇದು ಲಜ್ಜೆಗೇಡಿತನವೇ ಸರಿ. "ನಮ್ಮಲ್ಲಿ ಮೂರನೇ ಪಕ್ಷವೊಂದಿರುವುದರಿಂದಾಗಿ ನಾವು ಒಟ್ಟುಗೂಡಲಾರೆವು" ಎಂದು ದುರ್ಬಲರು ಮಾತ್ರ ಹೇಳಬೇಕು ಮೂರನೇ ಪಕ್ಷವನ್ನು ಇರಗೊಡಿಸಿ, ಅದನ್ನು ಪುಷ್ಟಿಗೊಳಿಸುತ್ತಿರುವವರು ನಾವೇ. 'ನಮಗೆ ಸ್ವರಾಜ್ಯ ಕೊಡಿ, ಸ್ವಾತಂತ್ರ್ಯ ಕೊಡಿ, ರಾಷ್ಟ್ರೀಯ ಸರಕಾರ ಕೊಡಿ, ಮಂತ್ರಿಪದ ಕೊಡಿ, ಧುರೀಣರನ್ನು ಬಿಡಿ, ಅದು ಕೊಡಿ, ಇದು ಬಿಡಿ ಎಂದೆಲ್ಲಾ ಹೇಳುತಿದ್ದೇವೆ. ನಮ್ಮ ಸ್ವಂತ ಶಕ್ತಿಯಿಂದಲ್ಲದೆ ಧುರೀಣರನ್ನು ಬಿಡುವವರಾರು? ಸ್ವಾತಂತ್ರ್ಯ ಬರುವದೆಲ್ಲಿಂದು? ಎಂದು ನಾನು ಕೇಳುತ್ತೇನೆ. ನಮಗೆ ಧ್ವಜವಿದೆ; ನಾವದರ ಮುಂದೆ ಹಾಡುತ್ತೇವೆ ಮತ್ತು ಜೈ ಜೈಕಾರ ಹಾಕುತ್ತೇವೆ. ಧ್ವಜಗಳಿರಬೇಕಾದುದು ಸ್ವತಂತ್ರರಿಗೆ ಹೊರತು ಗುಲಾಮರಿಗಲ್ಲ. ನಾವು ಸ್ವಾತಂತ್ರ್ಯದ ಮೂಲಕ ಧ್ವಜ ಸಂಪಾದಿಸಬೇಕು. ಸ್ವಾತಂತ್ರ್ಯ ದಿನದಂದು ಧ್ವಜವಂದನೆ ಮಾಡಿ, ಹಾಡಿ, ನಮ್ಮ ಧ್ಯೇಯ ಮತ್ತು ವಿಶ್ವಾಸ ಪ್ರದರ್ಶಿಸಿ ಸುಮ್ಮನಿರುವದು ಶುದ್ಧ ಕಪಟ! ಆ ಧ್ವಜಕ್ಕೊಂದು ಆಸ್ತಿತ್ವ ದೊರಕಿಸಿಕೊಡುವೆನೆಂಬ ಶಪಥ ವಿನಹಾ ಇದರ ವಂದನೆ ಮಾಡಲು ಎದೆಗೊಳ್ಳಬೇಡಿರೆಂದು ನಾನನ್ನುತ್ತೇನೆ. ಹೀಗಾದರೇನೇ ನಮ್ಮ ಸಾಮಾಜಿಕ ಪುನರ್ರಚನೆ; ಇದೇ ನಮ್ಮ ಯುದ್ಧೋತ್ತರ ರಚನೆ; ಇದು ನಮ್ಮ ಯುದ್ಧ ಪ್ರಯತ್ನ! ಈ ದಿನ ನಮ್ಮ ಊಹೆಯಾಗಿರುವ ಈ ಧ್ವಜವು ನಾಳೆ ನಮ್ಮ ಹಕ್ಕು ಬಾಧ್ಯತೆಗಳ ನಿಜ ಚಿಹ್ನೆಯಾಗಿ ಹಾರಾಡುವಂತೆ ನೋಡೋಣ. ನಾವು ಉದಯದ ಕಡೆಗೆ ಮುಂದೊತ್ತಿ "ಕತ್ತಲೆ ಕಳೆಯಿತು; ಉದಯೋನ್ಮುಖ ಸೂರ್ಯನಿದಿರು ಗಾಯತ್ರಿ ಹಾಡುವಾ" ಎಂದು ಘೋಷಿಸೋಣ!"

ನೋಟೀಸು

ಉಡ್ಪಿ ಡಿಸ್ಟ್ರಿಕ್ಟ ಮುನ್ಸಿಫ್ ಕೋರ್ಟಿನಲ್ಲಿ

O. P. No. 4/45

ಆಕ್ಕು ಪೂಜಾರ್ತಿ, ಬೊಗ್ಗಿ ಪೂಜಾರ್ತಿಳ ಮಗಳು, ಉಡ್ಪಿ ತಾಲ್ಲೂ ಅಂಬ್ಲಪಾಡಿ ಗ್ರಾಮು ..ಅರ್ಜಿದಾರಳು

ಮತ್ತು

1. ರಾಮ ಪೂಜಾರಿ. 2. ಶೇಷಿ ಪೂಜಾರ್ತಿ-ಬೊಗ್ಗಿ ಪೂಜಾರ್ತಿಳ ಮಕ್ಕಳು, ಉಡ್ಪಿ ತಾಲ್ಲೂ ಸದ್ರಿ ಅಂಬ್ಲಪಾಡಿ ಗ್ರಾಮು ರೆಸ್ಪೊಂಡೆಂಟುಗು

ಇವರೊಳಗೆ

ಮೇಲ್ಕಂಡ ಅರ್ಜಿ ವ್ಯವಹರಣೆಯ ಅರ್ಜಿದಾರಳು ವರ್ಸೆಸ್ಪೊಂಡಂಟರ ಅಹೇವ ತಾರೀಕು 3-12 1944ಲ್ಲಿ ಮೃತಪಟ್ಟ ಕೂಳ್ರು ಪೂಜಾರಿಯು ಆತನ ಜೀವದೆಶೆಯಲ್ಲಿ ತಾರೀಕು 28-11 1944ರಲ್ಲು ಬರೆದಿಟ್ಟ ಸೀಲು ಮೀಕರೆಗೆ ಸದ್ರಿಯವರಿಗೆ "Empir of India Life Assurance Co. Ltd" Bombay ಯವರ Policy No 92024 ರ ಬಾಬ್ತು ಬರತಕ್ಕ ಅಯಿವೇಜನ್ನು ಪಸೂಲು ಪಡಿಯುವರೇ ಅರ್ಜಿದಾರಳೇ ಸಂಪೂರ್ಣ ಹಕ್ಕುದಾರಳೆಂತ್ಲೂ, ಆ ಬಗ್ಗೆ ಅರ್ಜಿದಾರಳ ಹೆಸರಿಗೆ Succession Certificate ಕೊಡಿಸಬೇಕಾಗಿಯೂ ನಗರಿಯರೆ ಸಂಗ್ತಿ ಕಾಣಿಸಿ ಅರ್ಜಿದಾರಳು ದಾಕಲು ನೂಡಿರುವ ಮೇಲ್ಕಂಡ ಅರ್ಜಿಯು ತಾರೀಕು 13-2-1945 ಕ್ಕೆ ಯಿಟ್ಟಿರುತ್ತದೆ. ಆಕ್ಷೇಪ ಹೇಳಲುಳ್ಳವರು ಸದ್ರಿ ತಾರೀಕು 13-2-45ನೇ ದಿವ್ಸ ಬೆಳಿಗ್ಗೆ 11 ಗಂಟೆಗೆ ಯಾ ಕೋರ್ಟುಮುಂದೆ ಹಾಜರಾಗಿ ಜ್ಯಾಹೀರು ನೂಡಿಕೊಳ್ಳತಕ್ಕದ್ದೆಂಬ ಸಂಗ್ತಿ ಯಾ ಮೂಲಕ ಸರ್ವರಿಗೂ ತಿಳಿಸೋಣಾಗಿಯಿದೆ.

Udipi, Dated 22-1-1945 } **K. J. Bailal,** Vakil for Petitioner

Sri Narayan Guru Bank, Ltd.,

(Incorporated in British India. Liability of Members is Limited)

Regd. Head Office HAMPANKATTA,

MANGALORE.

Branche UDIPI & COONDAPUR

Authorised Capital	Rs. 2,00000
Issued Capital	,, 1,00000
Paid-up Capital	,, 1,00000

No further shares available All kinds of Banking business undertaken

Short term Hundi Loans a speciality. Fixed Deposits for varied terms accepted at favourable rates.

ANNOUNCEMENT

We have pleasure in annoucing that a Branch of the Bank has been

Opened on 1-1-1945 at Coimbatore.

at "Venkātrama Road, (P. B. No. 167) R S. Puram".

MANGALORE JARAPPA,
President & Managing Director

THE

VIJAYA BANK LTD.,

Head Office: **MANGALORE.**

We convey our hearty greetings for a happy new year to all our constituents, share-holders and other well-wishers.

B. Manjaya Hegde,
Chairman,
BOARD OF DIRECTORS

ಕಲೆಕ್ಟರರ ಪ್ರಕಟಣೆ—ಆಕ್ಟಿ ಬಟ್ಟ ಸಂಭವಿಸುವ ವಿಚಾರದಲ್ಲಿ ತಾ ೧೬-೧೦-೪೪ರಂದು ಮದ್ರಾಸ್ ಸರಕಾರವು ಪ್ರಕಟಿಸಿದ ಪ್ರಕಟಣೆಗೆ ಜಿಲ್ಲಾ ಕಲೆಕ್ಟರರು ಈ ಕೆಳಗಿನ ತಿದ್ದುಪಡಿಗಳನ್ನು ಸೂಚಿಸುತ್ತಾರೆ. ಅಕ್ಕಿಯನ್ನು ಸೈನ್ಯಕ್ಕೆ ಸಾಗಿಸುವ ಮತ್ತು ಮೂರನೆಯ ಕಂತಿನ ಅವಧಿಯು ಜನವರಿ ತಾ. ೩೧ ಮತ್ತು ಫೆಬ್ರುವರಿ ೨೮ ಆಗಿರುತ್ತದೆ.

ರಾಗಿಯಾ ದ್ದರೆ ಪೂರ್ತಿ ಅಂಕವನ್ನು ಫೆಬ್ರುವರಿ ತಾ. ೨೮ರ ಒಳಗೆ ಸಲ್ಲಿಸಬೇಕು. ಬೆಲೆ ಮುಡಿಗೆ ರೂಪಾಯಿ ೬ ೫-೦.ರಾಗಿಯನ್ನೂ ಸರಕಾರದಲ್ಲಿ ಸ್ಥಿರಪಡಿಸಿದ್ದರೆ, ಮುಡಿಗೆ ೧ ರೂ ಕಡಿಮೆ ಮಾಡಲಾಗುವುದು.

The Canara Banking Corporation Limited.

(Incorporated in British India Liability of Members is Limited)

Estd 1906

Head Office **UDIPI**, (S. K.

Authorised Capital	Rs 25,00,000/-
Issued & Subscribed Capital	Rs 16,00,000/
Paid up Capital	Rs 14,55,165 -
Reserves	Rs 1,15,000/-
Total working Capital	exceed one crore & 24 lakhs

ANNOUNCEMENT

Branches fo the BAnk have been opened at HUBLI & DHARWAR fon 4—12—1944

ನವಯುಗ

ಉಡುಪಿ, ಗುರುವಾರ ೨೫-೧-೧೯೪೫

ಸ್ವಾತಂತ್ರ್ಯದಿನ

ನಾಳೆ (ತಾ 26-1-45ನೇ ಶುಕ್ರವಾರ) ಭಾರತೀಯ ಸ್ವಾತಂತ್ರ್ಯ ದಿನ. 1929ರ ಲಾಹೋರು ಕಾಂಗ್ರೆಸ್ ಅಧಿವೇಶನದಲ್ಲಿ ಪೂರ್ಣ ಸ್ವಾತಂತ್ರ್ಯಪ್ರತಿಜ್ಞೆಯು ಅಂಗೀಕಾರವಾದಂದಿನಿಂದ ಜನವರಿ ತಾ 26 ಸ್ವಾತಂತ್ರ್ಯದಿನವಾಗಿ ಆಚರಿಸಲ್ಪಡುತ್ತಿದೆ. ನಾಳೆಯಂದು ಸ್ವಾತಂತ್ರ್ಯಪ್ರತಿಜ್ಞೆಯನ್ನು ಉಚ್ಚರಿಸಿದರೆ ಹಿಂದೂದೇಶವನ್ನು 16 ಬಾರಿ ಪರಿಸಿದಂತಾಗುವುದು. ಹೀಗೆ ಹದಿನಾರು ವರುಷ ಕಲಿತರೂ ನೇರ್ಗಡೆ ಹೊಂದಿ ಸ್ವಾತಂತ್ರ್ಯದರ್ಜೆಗೇರಲಾಗದ ಹಿಂದೀಯರು ತಮ್ಮ ದಡ್ಡತನಕ್ಕಾಗಿ ಲಜ್ಜೆಯಿಂದಲೂ—ಧ್ವಜದಿರಿರಲ್ಲ ಮಾಶ್ರವಲ್ಲ-ತಲೆಬಾಗಬೇಕಾಗಿದೆ! ಪ್ರಜಾತಸೇರಿ, ದ್ವಜವಂದನೆ, ಮೆರವಣಿಗೆ, ಸಭಮತ್ತು ಸ್ವಾತಂತ್ರ್ಯ ಪ್ರತಿಜ್ಞೆಯ ವಾಚನಗಳಿರುವ ಸಂಗೀತಮಯ ಸರ್ಕಸ್ ಎಂಬಂತೆ ಸ್ವಾತಂತ್ರ್ಯ ದಿನಾಚರಣೆ ನಡೆಸುವ ಸಂಪ್ರದಾಯ ಈ ಬಾರಿ ಗಾಂಧಿಜೀಯವರಿಂದ ಕಾರ್ಯಕ್ರಮಗಳಿಗೂ ಕಡಿತ ಹಾಕಿ ಕೆಲಸವನ್ನು ಮತ್ತಾಸುಲಭಮಾಡಿದ್ದಾರೆ. ತದನ ಸಾರವಾಗಿ ವಂದನ ಮಂತ್ರ ವಾಚನ ಮುಗಿಸಿದರಾಯಿತು, ಆ ಮೇಲೆ ವಿವಾದಾಯಕ ಕಾರ್ಯಕ್ರಮವೆಂಬುದು ಸರದಹುದಾದ ಏನೆನ್ನಾದರೂ ಮಾಡಿದರಾಯಿತು! ಇದೀಗ ನಮ್ಮಲ್ಲಿಯ ಸ್ವಾತಂತ್ರ್ಯ ದಿನಾಚರಣೆ ಪ್ರೇಮಿತಿ ಸರೋಜಿನಿಯವರಂದಂತೆ ಇದನ್ನು ಸ್ವಾತಂತ್ರ್ಯ ಸಾಧನೆಯನ್ನುವ ಬದಲಿಗೆಬರಿಯ ನಟನೆಯಂದರಾಗದೆ.

ಇಂದೀ ಸ್ವಾತಂತ್ರ್ಯದಿನದ ವೈಶಿಷ್ಟ್ಯವೇನು? ಇಂದು ಲೋಕದ ಅಗ್ರಗಣ್ಯ ರಾಷ್ಟ್ರಗಳಾಗಿರುವ ರಶ್ಯ, ಅಮೇರಿಕಗಳೂ ಕೂಡ ಒಂದು ಕಾಲದಲ್ಲಿ ಒಂದಲ್ಲೊಂದು ವಿಧದ ಒಂಧನಕ್ಕೊಳಗಾಗಿದ್ದುವು. ಸ್ವಂತ ಶಕ್ತಿಯಿಂದ ಬಿಡುಗಡೆ ಹೊಂದಿದ ಸಂತೋಷ ಸೂಚನಾರ್ಥವಾಗಿ ಆ ರಾಷ್ಟ್ರಗಳೂ ಸ್ವಾತಂತ್ರ್ಯದಿನವನ್ನಾ ಚರಿಸುತ್ತಾ ಬಂದಿವೆ; ಅನಂತಕಾಲದ ವರೆಗೆ ಆಚರಿಸಲಿಕ್ಕಿನೆ ಹಿಂದುಸ್ಥಾನದ ಸ್ವಾತಂತ್ರ್ಯದಿನವು ಅಂತಹ ಸಂತೋಷ ಸೂಚನೆಯ ದಿನವಲ್ಲ-ಸಾಧನೆಯ ದಿನ ಆದ್ದರಿಂದ ಚಿರಕಾಲ ಈ ರಾಷ್ಟ್ರೀಯ ದಿನವಾಚರಿಸುವ ಭಾಗ್ಯವು ನಮಗಿರಲಿ ಎಂದು ನಾವು ಹಾರೈಸುತ್ತೇವೆ.

ಸದ್ಯಸ್ಥಿತಿಯಲ್ಲಿ ಸ್ವಾತಂತ್ರ್ಯವು ದಸೆಯು ವಿಯಾವುದರ ಬಿಡುಗಡೆಯೆಂಬ ತೊಂದರೆಗೆ ಸ್ವಾತಂತ್ರ್ಯ ಸೈನಿಕರ ಕೆಲವು ಇಂಗಿತ ವಿಚಾರಗಳಿಂದ ಸ್ಪಷ್ಟವಾಗುತ್ತಿದೆ. ಬ್ರಿಟಿಷ್ ಜನತೆಯನ್ನು ಹಿಂದೆಂದೂ ಇಲ್ಲದ ಕಡಿಗೆ ಕಾಡುಹಬ್ಬಿಸಿರುವ ದ್ವಿತೀಯ ಮಹಾಯುದ್ಧವಶಾತ್ ಈ ಪ್ರಶ್ನೆಗಳಿಗೆ ಸಮಾಧಾನಕರ ಉತ್ತರ ದೊರೆಯುವ ದಿನ ಅದರ ಜನತೆಯೇ ಸಂಕಾಗುವುದು. ಸ್ವಾತಂತ್ರ್ಯದಿನದ ತತ್ವ ಮತ್ತು ಸ್ವಾತಂತ್ರ್ಯ ಪ್ರತಿಜ್ಞೆಯು ಅರ್ಥವನ್ನು ಸರಿಯಾಗಿ ಎಣಿದಿರಬೇಕು. ಎಲ್ಲರಲ್ಲಿ ಗರ್ಭಿತವಾಗುವ ಸ್ವಾತಂತ್ರ್ಯೋದಯಕ್ಕಾಗಿ ತಯಾರಿರಬೇಕು. ರಾಟೆ ತಿರುಗಿಸುವುದು, ರಾಜ್ಯ ಸಾಧಿಸುವುದು, ರಚ್ಚೆ ಗುಡಿಸುವುದು ಮೊದಲಾದ ವಿಧಾಯಕ ಕಾರ್ಯಕ್ರಮಗಳಲ್ಲಿ ಸಾಧನೆಯಿಲ್ಲವೆಂಬುದನ್ನು ತಿಳಿದಿರಬೇಕು. ಗಾಂಧಿಯ ಪಥವಿಗೆ ತಡೆಗಟ್ಟಲ್ಪಟ್ಟಿದೆ ಇಡಿಯ ಪ್ರಪಂಚವು 1945ರ ವಿಶೇಷ ಕಾರ್ಯಾಚರಣಯಲ್ಲಿರುವಾಗ, ಹಿಂದೂದೇವ್ಯಾಂದು 1920ರ ವಿಧಾಯಕ ಕಾರ್ಯಕ್ರಮಗಳಿಗೆ ಕಟ್ಟುಬಿದ್ದು, ಸಾಧಿಸುವದೇನನ್ನೂ ನಾವೆ ತತ್ವ ಸ್ಪೂರ್ತಿಯಿಂದ ಮಾಡಿ ಸ್ಥಿತಿಯನ್ನು ನಿರೆಯುವ ಕಣ್ಣುರುಡರಾಗಿ ರದು ನಮ್ಮ ಧುರೀಣರು ಅಂತಹ ಜಾಡ್ಯವನ್ನು ನಮಗೆ ಕಲಿಸಬಾರದು. ಧುರೀಣತ್ವವೆನೆಸ್ಸಾಗಾವಲಿದ ಜನತೆ ಸ್ಫೂರ್ತಿಗೊಂಡೇಳುವಂತೆಯೇ, ಜನತೆಯ ಶಕ್ತಿ ಸ್ಪೂರ್ತಿಯನ್ನು ಧುರೀಣರನ್ನು ನಿರ್ನಿಮಿಕ ಸೃಷ್ಟಿವೆಂದೂ ಇದೆ ಹೊಸ್ಪೂರ್ತಿಯು ನಿಷ್ಫಲವಾಗಿರುವ ಈ ಕಾಲದಲ್ಲಿ ಎರಡನೆಯದರ ನಿರೂಪಣೆಗಾಗಲಿ, ಯಾವ ದಿನ ಸ್ವಾತಂತ್ರ್ಯದಿನದಲ್ಲಿ ಸ್ಫೂರ್ತಿಯ ತ್ಸವವನ್ನೇ ಆಚರಿಸಲು ಸಾಧ್ಯವಾಗಲಿ ಎಂದು ಹಾರೈಸುತ್ತೇವೆ.

ಸ್ವದೇಶ—ವಿದೇಶ

ಗೃಹಮಂತ್ರಿಯ ಮುಂತ್ಯಾಲೋಚನೆ

ಕೇಂದ್ರ ಸರಕಾರದ ಗೃಹಮಂತ್ರಿ ಸರ್ ಪ್ಯಾಸ್ಸಿ ಸ್ಮಾಮಿಯವರು ಬೊಂಬಾಯಿಗೆ ಬಂದು ಅಲ್ಲಿ ಹೌಸ್, ನಗಿನ್ ದಾಸ್ ಮಾಸ್ಟರ್ ಪಾಟೇಲ್, ಸಮಲಲ್ಭಾಯ್, ಚಂದ್ರಿಕಾರಾಮ್, ಬೋಳೆ, ಮೊದಲಾದ ವಿವಿಧ ಪಕ್ಷೀಯ ಪ್ರಮುಖರೊಡನೆ ಗುಪ್ತ ಮಾತುಕತೆ ನಡೆಸಿ ಹೈದರಾಬಾದಿಗೆ ಕೋಗಿದ್ದಾರೆ.

ಅ ಭಾ. ಹಿಂದೂ ಮಹಾಸಭೆ

ಇದರ ಕಾರ್ಯಕಾರಿ ಸಮಿತಿಯು ನಾಳೆಯಿಲ್ಲಿಯಿಸ್ಲ ತಾ 20ರಲ್ಲಿ ಸೇರಿ ಪಾರ್ಲಿಮೆಂಟರಿ ಸಮಿತಿಗೆ ನೇಮಕ, ನವ ಧಿಸ್ಥಿಯಲ್ಲಿ ರಾಜಕೀಯ ಕರಬೇತಿ ಶಾಲೆ ಯೊಂದರ ಸ್ಥಾಪನೆ, ಪ್ರಚಾರಕರ ನೇಮಕ, 10 ಲಕ್ಷ ಹೆಂಬರಿರ ಸಂಗ್ರಹ ಮಾಡುವ ನಿರ್ಧಾರಗಳನ್ನು ಮಾಡಿದೆ ಲಂಡನ್ ಮತ್ತು ನ್ಯೂಯೋರ್ಕ್‌ಗಳಲ್ಲಿ ಮಹಾಸಭೆಯ ಕಾರ್ಯಾಲಯಗಳನ್ನೆ ತೆರೆಯುವ ನಿರ್ಣಯವೂ ಆಗಿದೆ.

ಟ್ರೇಡ್ ಯೂನಿಯನ್ ಕಾಂಗ್ರೆಸ್

ಅ. ಬಾ ಟ್ರೇಡ್ ಯೂನಿಯನ್ ಕಾಂಗ್ರೆಸಿನ ಪ್ರತಿನಿಧಿ ಅಧಿವೇಶನವು ಮದ್ರಾಸಿನಲ್ಲಿ ಜರಗಿ ಅಧಿಕಾರ ಬದಲಾವಣೆ, ದುರೀಣರ ಬಿಡುಗಡೆ ಮೊದಲಾದ ನಿರ್ಧಾರಗಳ ದುವು.

ಚರ್ಚಿಲ್ಲರ ಭಾಷಣ

ಗ್ರೀಸ್ ಘೋಷಣೆಯ ಸ್ಪಷ್ಟೀಕರಣಕ್ಕಾಗಿ ಎರಡು ದಿನ ಪಾರ್ಲಿಮೆಂಟಿನ ಕಾಮನ್ಸ್ ಅಧಿವೇಶನ ನಡೆಯಿತು ಪ್ರಧಾನಿ ಚರ್ಚಿಲ್ಲ- ಪ್ರಥಮ ಭಾಷಣವೀಯಂತ್ರಾಸಿನ ಬೆದ್ರಕಾಪಾಲೆಯ ಹೂರತ ಬೇರೆ ಎಲ್ಲಿದ್ದರಿಂದಲೂ ಬ್ರಿಟಿಷ್ ಸೇನೆ ಹೋಗಿಲ್ಲ ಜನರಿಂದಲೇ ಚುನಾಯಿಸಲ್ಪಟ್ಟು, ಜನರದು ಮತು ಜನರಿಗಾಗಿಎಂಬ ಸರಕಾರ ಸ್ಥಾಪಿಸದೇ ಬ್ರಿಟಿನಿನವಿದೇಶೀ ಘೋಷಣೆ ಸಶಕ್ತ ದಕಾಯಿತರಾದ ಎಲಾಪರನ್ನು ಸೋಲಿಸಿದೆ ನಿರ್ಣಯಿಸಿ ಎಂದಿದ್ದಾರೆ.

ಟೀಕಾಕಾರರಿಗೆ ಉತ್ತರ

ತನ್ನ ಘೋಷಣೆಯ ಬಗೆಗೆ ಹಿಂದೆ ಎಸ ಕೇಳಿಬಂದಿದೆಯೆಂತಲೂ ಕರಿಂ ಟೀಕೆಗಳು ಇಂಗ್ಲೆಂಡಿನಲ್ಲಿಯೇ ನಡೆಯುತ್ತಿರುವ ಜನಾಭ್ಯಾಯಿಕತೆಗೆ ಗೌರವಾರ್ಹ ಪತ್ರಿಕೆಗಳೂ ಕರಿನಾಗಿ ಟೀಕಿಸಿತ್ತಿರುವ ತಮ್ಮ ನಡೆ ಇಂತಹ ಘೋಷಣೆ ವಹಿಸಿರುವಾಗ ಅಮೆರಿಕನರನ್ನು ದಾರಿಯನದು ಹೇಗೆ ಎಂದು ನಿ. ಚರ್ಚಿಲ್ಲರು ರಶ್ಯತ್ವಾಪೂರ್ವಕ ಸೈನ್ಯದೊಡನೆ ಐಕ್ಯತೆಯನ್ನು ಭಂಗಿಸುವ ಇಂತಹ ಕಾರ್ಯಮಾಡಬಾರದೆಂದು ವಿನಂತಿಸಿಕೊಂಡಿದ್ದಾರೆ.

ಸರಕಾರದ ಮೇಲೆ ವಿಶ್ವಾಸ

ತದನಂತರ ಗ್ರೀಸಿನ ಘೋಷಣೆಯ ಬಗ್ಗೆ ಲೇಬರ್ ಸದಸ್ಯರಿಂದ ಕಠಿಣವಾಗಿ ಎಬಿಸಲ್ಪಟ್ಟಿದ್ದನ್ನು ಕಾಣದೆ ಮಿ ಈಡನ್ ರವರು, ಸರಕಾರವು ಘೋಷಿಸಿರುವ ನ್ಯಾಯವಾದ ಕಾರ್ಯಕ್ರಮಗಳನ್ನು ಬೆಂಬಲಿಸುವಂತೆ ಕೋರಿಕೊಂಡಿದ್ದಾರೆ. ಕೊನೆಯಲ್ಲಿ ಸಾರ್ವಜನಿಕ ಅಭಿಪ್ರಾಯವು ಸರಕಾರಕ್ಕೆ ಪ್ರಬಲ ಬಹುಮತ ದೊರೆಯಿತು.

ರುಸವೆಲ್ಟರ ಭಾಷಣ

ತನ್ನ ಅಧ್ಯಕ್ಷತನದ ಉದ್ಘಾಟನಾ ಭಾಷಣವೀಯುತ್ತಾ ಪ್ರೆ. ರೂಸವೆಲ್ಟರು ಸಂದೇಹ, ಅವಿಶ್ವಾಸ ಮತ್ತು ಭಯವನ್ನು ಒದಿಗೊತ್ತಿ ಹೆಂಬು ಹೃದಯದಿಂದ ವಿಜಯಕ್ಕಾಗಿ ಮುಂದೊತ್ತಬೇಂದು ವಿನಂತಿಸಿಕೊಂಡಿರುವರು. ಸ್ವತ್ಕೇಕತಾ ಭಾವನೆಯ ನಿರಾಕರಣದಿಗಳಿಂದಾಗುವ ಅಪಾಯದ ಕುರಿತು ಸ್ವಲ್ಪ ಎಚ್ಚರಿಕೆಯ ತ್ತಿರುವರು. "ನಾವು ಅಮೇರಿಕನ್ನರು ನಮ್ಮ ಮಿತ್ರರೊಂದಿಗಿನ ಅತಿದೊಡ್ಡ ಸರಿಕ್ಷೆಯ ಜವಾಬ್ದಿಯನ್ನು ನಿರ್ವಹಿಸಿದ್ದೇವೆ ಈ ಪರೀಕ್ಷೆಯಲ್ಲಿ ನಾವು ಉತ್ತೀರ್ಣರಾದಲ್ಲಿ ಮುಂದಿನ ತಲತಲಾಂತರದ ವರೆಗೂ ಸಂಧಿಸ್ಥಿತಿ ಸಾಧಿಸಿ ಸ್ವಮುಖ್ಯ ಕಾರ್ಯವನ್ನ ನಾವು ಸಾಧಿಸಿದಂತಾಗುತ್ತದೆ" ಎಂದು ರ ಸವೆಲ್ಟರು ಮಾತು.

ಬರ್ಮಾ ರಸ್ತೆ ತೆರೆದರು-

ಚೀನದ ರಕ್ಷಣೆಯೊಗಲುವಂದೆಂದು ನೇ ಡಿರುವ ಜನರಲ್ ಡೋಬರ್ಟರಂದಿದ್ದಾರೆ. ಅಮೇರಿಕನ್ ಅಕಾಶ ಧಾಳಿಗಳಿಂದಾಗಿ ಮೂರುತಿಂಗಳ ಮೊದಲಿದ್ದುದಕ್ಕಿಂತ ಚೀನದ ಸ್ಥಿತಿಯೀಗ ಸುಧಾರಿಸಿದೆ ಬರ್ಮಾ ಸ್ತೆಯಲ್ಪಟ್ಟಿ ಮಾರ್ಗಕ್ಕೆ ಚೀನೀ ಸೇನೆ ಸಾಕಾಗುವಷ್ಟು ಸಂಖ್ಯೆಯ ಕೊಡಿಸಲಾಗುವದಿಲ್ಲವಂದಕ್ಕೆ ಚೀನದ ಯಾವುದಾದರೊಂದು ಬಂದರನೇ ದೊರೆಯುವಂತಾಗಬೇಕು ಸಾಕಷ್ಟು ಆಹಾರ, ಉತ್ತಮ ಶಸ್ತ್ರ ಮತ್ತು ಯೋಗ್ಯ ನಾಯಕತ್ವ ದೊರೆತರೆ ಚೀನೀ ಯೋಧರು ಪ್ರಥಮ ಸಂಗ್ರಿಯ ಹೋರಾಟಗಾರರಾಗಬಲ್ಲರೆ, ಎಂದು ಈ ಗಲರ ಅಭಿಪ್ರಾಯ.

ಪ್ರಕಟಣೆ

ಪ್ರಸ್ತುತ ಕಾಲದಲ್ಲಿ ಕುಂತುರು ಗ್ರಾಮದ ಕುಂದಪ್ಪ ಕಾಳಪ್ಪ ಗೌಡನ ಮಗ ಜೀವಪ್ಪ ಗೌಡನು ಈ ಮೂಲಕ ಪ್ರಕಟಿಸುವುದೇನೆಂದರೆ—

ಈಗ 3ದಿವಸಗಳ ಮುಮ್ಮೆ ಕುಂತೂರುಬೈಲ್ಯಾಮದ ಪಟೇಲ ದಾಮೋದರ ಪ್ರಭುಗಳು ನೆರೆಯ ಸೇವಂಗ್ಸ ಸೊಸೈಟಿಯಿಂದ ಒಕ್ಕೆ ರೂಪ್ಯಾ 10-0-0 ಕೊಡಬೇಕಾಗಿರುವ ಒಕ್ಕೆ ವಂನು ಅರ್ಜಿ ಅಗಬೇಕಾದ್ದರಿಂದ ಮಂಜೆ ಹೆಜ್ಜೆಟ್ಟಿನ ಗುಂಡ ಸಮಾ ಪೂಜಾರಿಕೆಂತ ನನ್ನನ್ನು ಪತ್ಯಾಯಪಡಿಸಿ ರೂಪ್ಯಾ 10-0-0 ವಸಾಲು ಪಡೆದು, ಅರ್ಜಿ ಸಂತೆ ಬಿಯುವುದಂಗಿ ಹೇಳಿ ಮಂಜು ಜಾರಿ ಕಾಗದವಲ್ಲಿ ನನ ಎಡ ಹೆಜ್ಜೆಟ್ಟಿನ ಹೆಬ್ಬರು ಸಮಾ ಪಡೆದುಕೊಂಡಿರುತ್ತಾರೆ ಈ ತಿಳಿವಳಿಕೆಗೆ ನನ್ನ ಜಿಲ್ಲೆಟ್ಟಿನ ಗುರುತುಪಡಿಸಿದ ಸಾಕ್ಷಿ ಜಾರಿ ಕಾಗದಲ್ಲಿ ನಂತ ಮೆಸರು ಮಾಡುವಂತಾಗಿ ತಿಳಿದು ಬರುತ್ತದೆ ಆದ್ದರಿಂದ ಸದರಿ ಇಷ್ಟಿದ ನಂತ ಹೆಬ್ಬೆಸರ ಆಸರು ಮಾಡಿದ್ದೂ ಸೋಟು ರಗೈಕೆ ಆಕಾಗ್ದವಲ್ಲಿ ಮಾಡಿಸಿವಾಗ್ಯೂ ಆದು ಸಂಧಾರ್ಥ ಕೊಡಿಸಿಲ್ಲವಾಗಿ ಇದು ಸರಿ ರದ ಮೂಲಕ ಪ್ರಕಟಿಸುವ ಕ್ಷೇಪ.

ಜಿಯೊ ಮೂರುಗರೆ ದೇವಪ್ಪ ಗೌಡನ ರುಜು

ತಾ 16-1 1945

ಜರ್ಮನಿಯನ್ನಪ್ಪಳಿಸಲು ರಶ್ಯಾನರ ಅದ್ಭುತಧಾಳಿ!

ರಶ್ಯಾನರ ಅದ್ಭುತ ಧಾಳಿ

ಪೂರ್ವರಂಗದಲ್ಲಿ ಬುಡಾಪೆಸ್ಟಿನಿಂದ ಪೂರ್ವ ಪ್ರಶ್ಯಾದ ವರೆಗಿನ್ನೆಪಿಸ್ತಾರರಂಗದಲ್ಲಿ ಕೆಂಪುಸೇನೆಯು ಪ್ರಳಯ ತೆರೆಗಳಂತೆ ಜರ್ಮನಿಯ ಮೇಲೆರಗಿ ನುಗ್ಗಿ ಹೋಗುತ್ತಿದೆ. ಕೆಂಪುಸೇನೆಯ ದತ್ತಾತ್ರೇಯನ ತ್ರಿತೆರಸ್ಸುಗಳಂತಿರುವ ಅಗ್ರಗಣ್ಯ ಮೂವರು ಸೇನಾನಿಗಳು-ಮಾರ್ಶಲ್ ರೊಕೊಸ್ಸೋವ್‌ಸ್ಕಿ, ಮಾರ್ಶಲ್ ಝುಕೋವ್--ಮಾರ್ಶಲ್ ಕೋನೀವ್-ಸುಮಾರು 20ಲಕ್ಷ ಯೋಧರುಳ್ಳ 200 ಡಿವಿಜನ್ ಸೇನೆಗಳನ್ನು ಒಂಭತ್ತು ರಂಗಗಳಲ್ಲಿ ಧಾಳಿಗೊಡ್ಡಿದ್ದಾರೆ. ಇದೀಗ ನಾಜೀ ಜರ್ಮನಿಯನ್ನು ರಸಾತಳಕ್ಕೆ ಮೆಟ್ಟಿಲು ಮಾರ್ಶಲ್ ಸ್ಟಾಲಿನರು ಪ್ರಾರಂಭಿಸಿರುವ ಕೊನೆಯ ತಾಡನ!

ನಾಜೀ ರಕ್ಷಣಾವ್ಯೂಹ ಪುಡಿಪುಡಿ!

ಈ ಮಹಾಧಾಳಿಯ ನಮ್ಮಾನ್ನೆ ತುಳಿತದಲ್ಲಿ ಜರ್ಮನರ ಪೂರ್ವವರಂಗದ ಯುದ್ಧವ್ಯೂಹಗಳೆಲ್ಲಾ ನಜ್ಜುಗುಜ್ಜಾಗಿವೆ. ರಶ್ಯನ್ ಸೇನೆ ಹಲವು ಚರಿತ್ರಾರ್ಹ ವಿಜಯಗಳನ್ನು ಅನಾಯಾಸವಾಗಿ ಪಡೆದಿದೆ. ಹಲವು ತಿಂಗಳುಗಳಿಂದ ಸಮಸ್ಯೆಯಾಗಿ ಪರಿಣಮಿಸಿದ್ದ ಪೋಲೆಂಡಿನ ರಾಜಧಾನಿ ವಾರ್ಸಾ ನಗರವು ಈ ಬಾರಿ ಒಂದೇ ಹೊಡೆತದಿಂದ ಕೆಂಪುಸೇನೆಯ ವಶವಾಯಿತು. ಪೋಲೆಂಡಿನ ಇನ್ನೊಂದು ಮುಖ್ಯ ನಗರ ಕ್ರಾಕೋವ್, ಮತ್ತೊಂದು ಕಡೆಯಲ್ಲಿ ಲೋಡ್ಜ್, ಹೀಗೆ ಪೂರ್ವರಂಗದ ಆ ತುದಿಯಿಂದ ಈ ತುದಿಯ ವರೆಗಿನ ಎಲ್ಲಾ ಆಯಕಟ್ಟಿನ ಪ್ರಾಮುಖ್ಯ ಸ್ಥಳಗಳೂ ಫಳಿಗೆಫಳಿಗೆಗೂ ರಶ್ಯಾನರ ಕೈವಶವಾಗುತ್ತಾ ಹೋಗಿವೆ.

ಬರ್ಲಿನ್ ಸೇರುವರೆ?

ಪೂರ್ವರಂಗದಲ್ಲೀಗ ಸುರಿಯುತ್ತಿರುವ ದು ರಕ್ತ ಮಾತ್ರವಲ್ಲ-ನಾಜೀಕೃತ ಚರಿತ್ರೆಯನ್ನೇ ನುಂಗುವ ಮಸಿಯೂ ಚಿಲ್ಲಪಲ್ಲು ತ್ತಿದೆ ಎಂಬುದನ್ನು ಇಂದಿನ ರಶ್ಯನ್ ಮಹಾಧಾಳಿಯ ಪ್ರಗತಿಯಿಂದೂಹಿಸಬೇಕು ಹಿಟ್ಲರನ ಪಾಲಿನ ಜೀವನ್ಮರಣ ಹೋರಾಟವಿನೀಗ ಕೊನೆಯ ಮುಹೂರ್ತಕ್ಕೆ ಬಂದಿದೆ ಎಂಬುದು ನಿರ್ವಿವಾದ. ವಿಸ್ತುಲಾ ನದಿ ದಡದಿಂದ ರಶ್ಯಾನಂತರಂ ಭಿಸಿದ್ದ ಮುಖ್ಯ ಧಾಳಿಯು ಭೇತಾಳ ರೂಪದಿಂದ ಬೆಳೆದು ಜರ್ಮನರ ಕಾರ್ಖಾನೆಗಳ ಪ್ರಾಂತ್ಯವಾದ ಸಿಲೆಸಿಯಾದೊಳಗೆ ನುಗ್ಗಿದೆ. ಕೆಂಪು ಸೇನೆಯ ನುಮೋಟಂತೂ ಆಶ್ಚರ್ಯಕರ ವೇಗದಲ್ಲಿದೆ. ಪೂರ್ವ ಪ್ರಶ್ಯಾದ ಟಿಲೆಸಿಟ್ ನಗರವೂ ರಶ್ಯಾನರ ವಶವಾಯಿತು. ಮಾರ್ಶಲ್ ಕೋನೀವರ ಸೇನೆಯೀಗ ಬರ್ಲಿನ್ ನಗರಕ್ಕೆ 200 ಮೈಲುಹತ್ತೂ ದೂರದಲ್ಲಿಲ್ಲ. ಇದೀಗ ಪ್ರತ್ಯಕ್ಷ ಜರ್ಮನಿಯನ್ನೇ ಆಹುತಿಗೊಳ್ಳಿಪ ಯುದ್ಧ ಇಂತಹ ಬ್ರಹ್ಮಾಂಡ ಪ್ರಗತಿಯನ್ನು ಹೊಂದಿರುವ ಕೆಂಪುಸೇನೆಯು ಒಳಗಡೆಯಲ್ಲಿರುವ ನಾಜೀ ಸೇನೆಗಳನ್ನು ಅಡ್ಡನಾಡಿ ಹಾದು ಮುಂದೊತ್ತಿದಂತಿದೆ. ಹಾಗೆ ಒಳ ಮಗ್ಗುಲಿಗೆ ಬಿದ್ದಿರುವ ನಾಜೀ ಸೇನೆಗಳೆಲ್ಲಾ ವ್ಯವಸ್ಥೆಯಿಂದ ಹಿಂದೆಗೆದು ಆ ತ.ದಿಯಿ.ದ ಈ ತುದಿ ವರೆಗಿನ ಕ್ರಾಕೋ---ಚೆಸ್ಟೊಜೋವಾ---ಲೋಡ್ಜ್ ಕುಂಟೋ---ಪ್ಲೋನ್ಸ್---ಮಿಲಾವಾ---ಕ್ರಾಸ್ನೋಕೀಲ್ಸ್---ಓಸ್ಟ್ರೊಲೆಂಕಾಗಳ ಸಾಲಿನಲ್ಲಿ ಒಂದು ಪ್ರಬಲ ರಕ್ಷಣಾ ವ್ಯೂಹವನ್ನು ರಚಿಸಿಕೊಂಡು ಕೊನೆಯ ಹೋರಾಟಕ್ಕನುವಾಗುತ್ತಿವೆ. ನಿರ್ಣಯಾತ್ಮಕ ಕದನ ಕಾಳಗವು ಇಲ್ಲಿ ನಡೆಯಲಿದೆ ಎಂಬುದನ್ನು ನಿರೀಕ್ಷಿಸಬೇಕು

ಪಶ್ಚಿಮರಂಗದಲ್ಲಿ.

ವೋನ್ ರುಂಡ್‌ಸ್ಟೆಡನೇ ಈ ವರೆಗೆ ಮೇಲ್ಗೈಯಾಗಿ ಒಂದಲ್ಲೊಂದು ಮುಖದಿಂದ ಮುಂದೊತ್ತುತ್ತಿದ್ದಾನೆ. ರಶ್ಯಾರಂಗದ ಒತ್ತಡದಿಂದಾಗಿ ಆ ಭಾಗದಿಂದ ಸೇನಾ ಸಹಾಯ ಯಾಚನೆ ಬರುತ್ತಿದೆಯಾದರೂ ನಾಜಿಗಳು ಪಶ್ಚಿಮ ರಂಗದಿಂದ ಒಬ್ಬನೇ ಒಬ್ಬನನ್ನಾದರೂ ಹಿಂದೆಗೆದಿಲ್ಲವೆಂದೂ ಅಲ್ಲೀಗ 80 ಡಿವಿಜನ್ ಜರ್ಮನ್ ಸೇನೆಗಳಿವೆಯೆಂದೂ ತಿಳಿದು ಬರುತ್ತದೆ. ಹೆಚ್ಚಿನ ಸೇನೆಗಳು ಆರ್ಡೆನ್ನಿಸ್ಸಿನಲ್ಲಿವೆ ಉತ್ತರ ಆಲ್ಸಾಕ್ಸೆನ್ಲಲ್ಲಿ ಜರ್ಮನರು ನವಧಾಳಿ ಹೂಡಿ ಮುಖ್ಯ ಸ್ಥಳಗಳನ್ನಾಕ್ರಮಿಸಿಕೊಂಡಿದ್ದಾರೆ. 7ನೇ ಅಮೇರಿಕನ್ ಸೇನೆ ಮತ್ತು ಫ್ರೆಂಚ್ ನೊದಲನೇ ಸೇನೆಗಳಿರುವ ಕಡೆಗಳಲ್ಲಿ ರುಂಡಸ್ಟೆಡನ ಪ್ರತಿಭಟನೆ ಪ್ರಬಲವಾಗಿಯೇ ಇದೆ. ಒಂದೆಡೆಯ ಕೋಲ್ಮಾರ್ ವಲಯದಲ್ಲಿ ಫ್ರೆಂಚ್ ಸೇನೆ, ಸಿಲ್ವಾಡಿನ ಉತ್ತರಕ್ಕೆ ಬ್ರಿಟಿಷ್ ಸೇನೆ ಮುಂದೊತ್ತುತ್ತಿವೆ.

ಜಾಪಾನ್ ಯುದ್ಧರಂಗಗಳಲ್ಲಿ

ಲುಝೋನ್ ದ್ವೀಪದಲ್ಲಿ ಜಾಪಾನರಿಗೆ ವಿಶೇಷ ಹಾನಿಯೊಡ್ಡುತ್ತಾ ಅಮೇರಿಕನ್ ಸೇನೆ ಪ್ರಗತಿ ಪಡೆದಿದೆ. ಬರ್ಮಾ ರಣರಂಗದಲ್ಲಿ ಬರ್ಮಾ-ಚೀನಾ ಸರಹದ್ದಿನ ಬೀಗದ ಕೈಯಂತಿರುವ ನಾಂಟೌಂಗ್ ನಗರವನ್ನು ಚೀನೀ ಸೇನೆ ವಶಪಡಿಸಿಕೊಂಡಿತು. ಬರ್ಮಾದೊಳಗಡೆಯ ಮಿತ್ರ ಸೇನೆಯೂ ಈ ಚೀನೀ ಸೇನೆಯೂ ಈಗ ಹಳೇ ಬರ್ಮಾ ರಸ್ತೆಯಲ್ಲಿ ಒಟ್ಟಾದುವು ಈ ರೀತಿ ಬರ್ಮಾ ಯುದ್ಧದ ಒಂದು ಮುಖ್ಯ ಗುರಿಯಾಗಿದ್ದ ಬರ್ಮಾ ರಸ್ತೆಯೀಗ ತೆರೆಯಲ್ಪಟ್ಟಿದೆ ಆದರೆ ಆಲ್ಲಿಯ ಅನಾನುಕೂಲ ತೆಗಳಿಂದಾಗಿ ಚೀನಕ್ಕಿನ್ನೂ ವಿಮಾನ ಮೂಲಕವೇ ಸರಬರಾಯಿ ಕೋಗಬೇಕಾಗಿದೆಯೆಂದು ಪ್ರಕಟವಾಗಿದೆ. ಬರ್ಮದೊಳಗಡೆ 14ನೇ ಸೇನೆಯು ಮಂಡಲೆಯನ್ನು ಸಮೀಪಿಸಿದೆ. ಅಕ್ಯಾಬಿನ ಬಳಿಯ ರಣಪ್ರದೇಶದಲ್ಲಿ ಮಿತ್ರ ಸೇನೆ ಹೊಸದಾಗಿ ಕಾಲಿರಿದೆ ಜಾಪಾನ್ ರಾಜಧಾನಿ ಮತ್ತಿತರ ನಗರಗಳ ಮೇಲೆ ಅಮೇರಿಕನ್ ವಿಮಾನ ಧಾಳಿ ನಡೆಯುತ್ತಿದೆ. ಜರ್ಮನಿಯು ಮೇಲೂ, ಇಂಗ್ಲಾಂಡಿನಲ್ಲಿರುವ ಅಮೇರಿಕನ್ ವಿಮಾನ ದಳಗಳು ತಾ. 1ರಲ್ಲಿ ಸ್ವಯ ಒಳಧಾಳಿ ನಡೆಸಿದವು. ಇಟೆಲಿ ಯುದ್ಧ ಯಥಾ ಪ್ರಕಾರ ಸಾಗಿದೆ.

ಜಾಪಾನ್ ಪ್ರಧಾನಿಗಳ ಎಚ್ಚರಿಕೆ

ಜಾಪಾನ್ ಮುಖ್ಯ ಮಂತ್ರಿ ಜನರಲ್ ಕುನಿಯಾಕೊ ಕ್ಯುಸೋರವರು ಸದ್ಯದ ಅನಾಯತರ ಯುದ್ಧಸ್ಥಿತಿಯ ಕುರಿತು ಜಾಪಾನರಿಗೆ ಎಚ್ಚರಿಕೆಯಿತ್ತಿದ್ದಾರೆ. ಹೊಸ ಲಜ್ಜೆ ಪ್ರಕಾರ ಪ್ರತಿಯೊಬ್ಬ ಸಮರ್ಥ ಜಾಪಾನನೂ ಇಂದಿನ್ನು ಮುಂದೆ ಯುದ್ಧ ಕಾರ್ಯವೊಂದನ್ನೇ ಮಾಡುವಂತಾಗಿದೆ.

ವಾರ್ಸಾದಲ್ಲಿ ಪೋಲೆಂಡ್ ಸರಕಾರ

ವಾರ್ಸಾ ಪತನವಾದೊಡನೆ ಲುಬ್ಲಿನ್‌ನಲ್ಲಿದ್ದ ಪೋಲೆಂಡ್ ಸರಕಾರವು ಆ ನಗರವನ್ನು ಪ್ರವೇಶಿಸಿದೆ.



A vigorous programme of expansion has been planned throughout Madras Presidency and it will pay those who desire to take Life Insurance as a career to write to

M SUNDERRAM SHETTY Esq., Agency Manager, "Warden House" Sir Phirozshah Mehta Road, Fort, Bombay

or to

M Rama Rao Esq., B.A.B.L., Branch Manager, Post Box No 1525, 79 A-B Sembadoss St, G T Madras.

B. Sachidanand Hegde Esq., Branch Secretary, Hampankatta, Mangalore

W 50

ತಾ. 20—1—45 ರಿಂದ

ಶ್ರೀರಾಮಕೃಷ್ಣ ಥಿಯೇಟರ್, ಲಿಮಿಟೆಡ್, ಉಡ್ಪಿ.

ಎಂದೆಂದು ವೈರಿಗಳಿಗೆ ತಲೆ ತಗ್ಗಿಸದೆ ಪ್ರಥ್ವೀವಲ್ಲಭನೆಂದು ಖ್ಯಾತಿಗೊಂಡ ಮುಂಜ ಮಹಾರಾಜನ ಕಥೆ.

ನಿರ್ಮಾಪಕರು

ಪ್ರಥ್ವಿವಲ್ಲಭ್

ಕೋರಬ್ ಮೋಡಿ, ದುರ್ಗಾಖೋಟೆ, ಸಂಕಲ್ಪ, ಕೆ ಎನ್. ಸಿಂಗ್, ಮೀನಾ ಮೊದಲಾದವರು

ಬರುವ ಚಿತ್ರ—ಭಕ್ತ ರಾಯದಾಸ್

ಪರೇಶ ಬ್ಯಾನರ್ಜಿ ಮತ್ತು ಲಲಿತಾ ಪವಾರ್

NOTICE.

Notice by substituted service.

In the Court of the District Munsif of Mangalore.

S. C. No. 451/1944

Vithalji Madhavji — Plaintiff

Vs.

Anantha alias Koraga Shettigara —Defendant.

To

Defendant—Anantha alias Koraga Shettigara, son of Kittappa Shetty, trading at Kunjibettu, Udipi Town.

Please take notice that the plaintiff has filed the above suit against the defendant for recovery of Rs. 66-9-5 being principal and interest up to 23-10-1944 in respect of dealings, together with future interest and costs of suit with interest and that the suit is posted for hearing at 11 a. m. on 30—1—1945 in the above court. You may appear either in person or by a Pleader on or before the said date and contest the suit, failing which the same will be heard and decided exparte.

B. Vaikunta Baliga

Vakil for Plaintiff.

Mangalore, 19-1-1945.

ಡಿ. ಪಿ ಎಸ್. ತಿಮ್ಮಪ್ಪ ಶೆಟ್ಟರು ಶ್ರೀ. ಡಿ. ಡಿ. ಸಾಹೆಯವರು ಟವಿಗೆ (South Kanara Island) ಯ ಇನ್ಸ್‌ಪೆಕ್ಷನ್ ಬಗ್ಗೆ ಕಳುಹಲ್ಪಟ್ಟುದರಿಂದ ಅವರ ಸ್ಥಾನವನ್ನಿ ಶ್ರೀ ಪಿ. ಎಸ್. ತಿಮ್ಮಪ್ಪ ಶೆಟ್ಟಿ ಬಿ. ಎ, ಇವರು ಡಿಪ್ಯುಟಿ ಕಲೆಕ್ಟರರಾಗಿ ನೇಮಿಸಲ್ಪಟ್ಟಿರುವರು. ಶ್ರೀಗ ಶೆಟ್ಟರು ಕಳದ ವಾರದಲ್ಲಿ ಚಾರ್ಜು ವಹಿಸಿಕೊಂಡಿರುವರು.

ಟ್ಯಾಪಿಸ್ಪರು ಬೇಕು—ಸ್ವಂತ ಟ್ಯೂಷನ್ ಟ್ಯುಟೋರಿಯಲ್ ವೀಕ್ಷಣಗಳದ್ದು ಎಸ್. ಎಸ್. ಎಲ್. ಸಿ. ಉತ್ತೀರ್ಣರಾಗಿದ್ದಿರೂ ಟ್ಯೂಷನ್ ಮಾಡಿ ಪಾದರ್ಥಿ ಚೆನ್ನಾಗಿರುವ ಟ್ಯೂಷನ್ಸ್ಪರು ಜಲ್ಲಾ ಕಛೇರಿಯ ಅಫೀಸಿನಲ್ಲಿ ಕೆಲಸ ಮಾಡಲು ಜರೂರು ಬೇಕಾಗಿದ್ದಾರೆ. ಬಯಸಿದ್ದಾರರು ಅರ್ಜಿ ಮಾಡಬೇಕಾಗಿದೆ.

ದಕ್ಷಿಣ ಕನ್ನಡ, ಮಂಗಳೂರು

ಒಕ್ಕಲುಗಳಿಗೆ ಮುಂಗಡ–ವಾಗಿ ಅಕ್ಕಿಯನ್ನ ಕೊಡಬೇಕಾಗುತ್ತದೆ; ನನ್ನ ವಿಷಯವನ್ನು ಎಣಿಸುವಾಗ ಈ ಮುಂಗಡವಾಗಿ ಕೊಡಬೇಕಾಗಿರುವ ಅಕ್ಕಿಯನ್ನು ಪ್ರಮಾಣವನ್ನೂ ಎಣಿಸಿಕೊಳ್ಳಬೇಕು–ಎಂದು ವರ್ಗದಾರರು ಕಲೆಕ್ಟ್ರರಿಗೆ ಸೂಚಿಸಿಕೊಂಡಿದ್ದಿರುವರು. ಇದಕ್ಕೆ ಕಲೆಕ್ಟ್ರರು, 'ತಮ್ಮ ವೇಸಾಯದ ಉತ್ಪತ್ತಿಯು ಸಾಕಾಗದ ಒಕ್ಕಲುಗಳಿಗೆಲ್ಲ ಗುರುತು ಚೀಟುಗಳ ಮೂಲಕ ಅಕ್ಕಿಯನ್ನು ಸ್ವೀರಿಸಿಂದ ಒದಗಿಸುವುದ–ವರ್ಗದಾರರು ಮುಂಗಡಕೊಡಬೇಕಾಗಿಲ್ಲ' ಎಂದು ಉತ್ತರವಿತ್ತಿರುವರು. ಇದಕ್ಕೆ 'ಗುರುತು ಚೀಟಿಗಳ ಮೂಲಕ ಅಕ್ಕಿ ಪಡೆಕೊಳ್ಳಲು ಒಕ್ಕಲುಗಳಲ್ಲಿ ಹಣವಿರುವುದಿಲ್ಲ' ಎಂಬ ತರ್ಕ ಮುಂದೆ ಬಂತು. 'ಹಾಗಿದ್ದರೆ ವರ್ಗದಾರರು ಹಣವನ್ನು ಒಕ್ಕಲುಗಳಿಗೆ ಮುಂಗಡವಾಗಿ ಕೊಟ್ಟು ಅವರು ಗುರುತು ಚೀಟುಗಳ ಮೂಲಕ ಅಕ್ಕಿಯನ್ನು ಪಡಕೊಳ್ಳುವಂತೆ ಮಾಡಲಿ'–ಎಂದು ಕಲೆಕ್ಟ್ರರು ಪ್ರಕಟಿಸಿದ್ದಾರೆ.

ಚಿಮಿಣಿ ಎಣ್ಣೆಯ–ಬೆಲೆಯನ್ನು ಜಿಲ್ಲಾ ಕಲೆಕ್ಟ್ರರು ಈ ರೀತಿಯಾಗಿ ನಿರ್ಧರಿಸಿದ್ದಾರೆ:–ಮಂಗಳೂರು ನಗರದಲ್ಲಿ ೦–೩–೪; ಮಂಗಳೂರು ನಗರದ ಹೊರಗೆ ಆದರೆ ಹಣುಗೆ ಹರಿದಿಲ್ಲಿ ೦–೩–೬; ಹಣುಗೆ ಹರಿದಿದ ಪ್ರದೇಶದಲ್ಲಿ ನಗರದಿಂದ ೧೫ ಮೈಲು ಅಂತರದೊಳಗೆ ೦–೩–೮; ಮಂಗಳೂರು ನಗರದಿಂದ ೧೫ ಮೈಲಿಗಿಂತಲೂ ದೂರ ಪ್ರದೇಶದಲ್ಲಿ ೦–೩–೧೦ ಕಾಸರಗೋಡು ತಾಲೂಕು ಮಂಜೇಶ್ವರ ೦–೩–೧೮; ಕುಂಬಳೆ ೦–೩–೮; ಕಾಸರಗೋಡು; ಕೆಟಳಳ್ಳಿ, ಪಳ್ಳಿಕೆರೆ, ಅನ್ನಂಗಾಡು ೦.೩.೮ (ಕೆರೊಪು ೦-೩-೫) ಪುತ್ತೂರು ತಾಲೂಕು ಸುಳ್ಯ ವಿನಹ ಇತರ ಕಡೆ ೦-೩-೧೧; ಸುಳ್ಯ; ಉಬ್ರಿ ೦-೪-೪ ಕುಂದಾಪುರ ತಾಲೂಕು ಕುಂದಾಪುರ ಗಂಗೊಳ್ಳಿ ೦-೩-೪ (ಕೆರೊಪು ೦-೩-೪) ಬೈಂದೂರ್ ೦-೩-೪ [ಕೆರೊಪು ೦-೩-೫] ಉಡುಪಿ ತಾಲೂಕು ಉಡುಪಿ ೦-೩-೩ [ಕೆರೊಪು ೦-೩-೪] ಕಟ್ಟಪ್ಪಾಡಿ, ಬ್ರಹ್ಮಾವರ್, ಹಂಗಾರ ಕಟ್ಟೆ ೦-೩-೮ (ಕೆರೊಪು ೦-೩-೫) ಕಾರ್ಕಳ ತಾಲೂಕು ಕಾರ್ಕಳ ೦-೪-೦ ಮತ್ತು ೦-೩-೪ ಪಡುಬಿದ್ರಿ ೦-೪-೦ ಮತ್ತು ೦-೩-೪.

೮,೨೦೦ ರೂ. ಬೆಲೆ–ಯ ಬಟ್ಟೆಯನ್ನು ಮನೆಯಲ್ಲಿ ದಾಸ್ತಾನು ಮಾಡಿದ್ದಕ್ಕೆರೆಂಬ ಆರೋಪದ ಮೇಲೆ ಕುಮ್ಟೋಳಿಯ ವ್ಯಾಪಾರಿಯೊಬ್ಬರು ಒಂದು ವರ್ಷದ ಕಠಿನ ಸಜೆಗೆ ಗುರಿಯಾಗಿರುವರು.

WANTED

ಪುತ್ತೂರು ಡಿ. ಮುನ್ಸಿಫ್ ಕೋರ್ಟಿನಲ್ಲಿ
R. E. C 339/1944.
S. C. 884/1941.

ತುಳಸಿ ಯಾನೆ ಪದ್ಮಾವತಿ ಅಮ್ಮ ಆರ್ಜಿದಾರಳು.

ರೋಹಿಣಿ ಯಾನೆ ರಾಧಾಬಾಯಿ- ಎದ್ರಿಳು

ಸದ್ರಿ ಆಸ್ಪುಜ್ಯಾರಿಯ ಎದ್ರಿ ಪೂಂಜಲ್ಲ ಸಾಕೇತ ಕೈಗಳ ಹೆಂಡ್ತಿ ಮೋಹಿನಿ ಯಾನೆ ರಾಧಾಬಾಯಿಯವರೀಗ ಮೊ ಮೂಲ್ಕ ತಿಳಿಸುವುದೇನೆಂದರೆ: -

ಪುತ್ತೂರು ಕ್ಷಸಬೆಯಲ್ಲಿರುವ ಬಾಡಿಗೆಗೆಯವರ ಹೆಂಡ್ತಿ ಭಾಗೀರತಿ ಅಂಮನು ನಿನಗೆ ತಾ. 30-11-1935ರಲ್ಲಿ ಸ್ತಿರಾಸ್ತಿ ಜಣಾಜ್ಞಾರಿಯಿಂದ ಪುತ್ತೂರು ಸ. ನಿ. ಆಸ್ಪಿನ 1ನೇ ಪುಸ್ತಾಕದ 233ನೇ ಸಂಚಿಕೆಯ ನಿ. ನಂಬ್ರ 903ನೇಗೆ ರುಪ್ಯಾ 100 ಕ್ಕೆ ಬರಕೊಟ್ಟ ಆಡಪು ಜಸ್ತಾವೇಜಿನ ಪ್ರಕಾರ ನಿಮಗೆ ಸದ್ರಿ ಭಾಗೀರತಿ ಅಂಮನಿಂದ ವಸೂಲು ಆಗತಕ್ಕ ಅಸ್ಸುರುಪ್ಯಾ 100 ನ ಜಸ್ತಾವೇಜು ತಾರೀಕು ಲಾಗ್ಯಾಯ್ತು ವಸೂಲು ಪರೆಗಿನ ಬಡ್ಡಿ ಕೂಡಾ ಅ್ಯವಜುಗಳ ವಸೂಲಿ ಹಕ್ಕನ್ನು ಜಸ್ತಿ ಪಡ್ಡಚೇಕಾಗಿ ಆರ್ಜಿದಾರಳು ಆರ್ಜಿ ಕೊಟ್ಟಿರುವುದರಿಂದ ಆವರ ಕುರಿತು ನಿಮಗೇನಾದರೂ ಆಕ್ಷೇಪವಿದ್ದಲ್ಲಿ ತಾರೀಕು 31-1 .945ನೇ ದಿನ್ನ ಹಗಲು ಗಂಟೆ 10ಕ್ಕೆ ಮುಂ ಕೋರ್ಟು ಮುಂದೆ ಹಾಜ್ರಾಗಿ ಉದಹರಿಸತಕ್ಕದ್ದು. ತಪ್ಪಿದ್ರೆ ನಿಂಮ ಗೈರು ಹಾಜರಿಯಿಂದ ತೀರ್ಮಾನಿಸಲಾಗುವುದು.

ಪುತ್ತೂರು. (Sd) C.S Shastry,
ತಾ.10-1-1945 Vakil for Petn

ಲೋಕ ಶಾಂತಿ–ಯಂಬ ವಿಷಯದ ಕುರಿತು ರಾ. ಸಾ. ಎಂ. ಶೆ. ನಂಬಿಯಾರು ತಾ. ೧೩ ರಂದು ಸೈಂಟ್ ಆಲೋಶಿಯಸ್ ಕಾಲೇಜಿನಲ್ಲಿ ಯು ನಿಸೆಫ್ ಎಸ್ಟೋಸ್ಸನ್ ಭಾಷಣ ಮಾಡಿರುವುದು ಆರಂಭಿಸಿ ಕ್ರಿ ಉಪಯೋಗಿಸಿದರು. ಸೈಕ್ಷಕ ಸಿದ್ಧತೆಯೂಗದೆ ಜಾಗತಿಕ ಶಾಂತಿ ನೆಲೆಸಲು ಎಂಬುದು ಅವರ ಅಭಿಪ್ರಾಯ ವಾಗಿತ್ತು. ಜಿಲ್ಲಾ ನ್ಯಾಯಾಧೀಶರಿ ಕೋಮಿಸರ್ ಅಧ್ಯಕ್ಷತೆ ಆಯಿದ್ದರು. ಪ್ರಿನ್ಸಿಪಾಲ ರೆವಾ. ಕೊಲೊಂ ಆರಿಯ ಧನ್ಯವಾದಗಳನ್ನರ್ಪಿಸಿದರು

ಗವರ್ನಮೆಂಟ್ ಕಾಲೇಜಿನಲ್ಲಿ–ಪ್ರಿನ್ಸಿಪಾಲ್ ಮಿ| ಕೆ. ಏ. ವಿಸ್ವೇಶ್ವರ ಅಧ್ಯಕ್ಷತೆಯಲ್ಲಿ ತಾ. ೧೫ರಂದು ಸಭೆ ಸೇರಿ ಸ್ಥಾನಿಕ ವಿದ್ಯಾಧಿಕಾರಿ ಸರ್- ಆರ್-ಎಲ್- ಸ್ಯಾಥರ್‌ರ ಸಹಿತ ಕಾಲೇಜಿನ ಸಿಬ್ಬಂದಿ ಸಭೆ ಸೇರಿತ್ತು.

ಫ್ರೆಂಚ್ ಸಾಹಿತಿ–ರೋಮೈರೊಲಾ ದಿನವು ಮಂಗಳೂರು ಪ್ರಗತಿಶೀಲ ಲೇಖಕರ ಸಂಘದ ಆಶ್ರಯದಲ್ಲಿ ತಾ. ೧೬ರಂದು ಸಂಜೆ ಪತ್ರಿಕೋದ್ಯೋಗಿ ಸಂಘದ ಕಛೇರಿಯಲ್ಲಿ ಶ್ರೀ ಎಸ್- ಮುಕುಂದ ರಾಯರ ಅಧ್ಯಕ್ಷತೆಯಲ್ಲಿ ಆಚರಿಸಲ್ಪಟ್ಟು ಪರತಂತ್ರ ಭಾರತದ ಪ್ರತಿವಾದಿಕನೂ ಸಮಾಜವಾದಿ ರಸ್ಯವಾದಿಯೂ ಆಗಿದ್ದ ಆ ದಿವಂಗತ ಸಾಹಿತಿಯ ಜೀವನ ಮತ್ತು ಕೃತಿಗಳ ಕುರಿತು ಶ್ರೀಯುತರು ಕುಳಕುಂದ ಶಿವರಾಯ ಮತ್ತು ಎಸ್ ಕೆ. ಉಪಾಧ್ಯಾಯ ಇವರು ವಿವೇಚನೆ ಮಾಡಿದರು. ಕಾರ್ಯದರ್ಶಿ ಶ್ರೀ ಕೆ. ಕೆ ಶೆಟ್ಟರು ವಂದನೆಗಳನ್ನರ್ಪಿಸಿದರು.

ಕೆಥೋಲಿಕ್ ಕ್ಲಬ್ಬಿ–ನಲ್ಲಿ, ಅನ್ಯಾಮಿ ಎಸ್ಸಿ ವಿದ್ಯಾಸಂಘದ ವೈಸ್-ಚಾನ್ಸಲರೂ ಆಗಿರುವ ಮಿ| ರಿಚರ್ಡ ಸ್ವಾಯರಿಯರು ಕೆಥೋಲಿಕ್ ಸಂಘದ ಧ್ಯೇಯ ಉದ್ದೇಶಗಳ ಕುರಿತು ಭಾಷಣ ಮಾಡಿದರು. ವಿ| ಯು. ಕೆಷ್ಟಪ್ಪ ಅವರು ಅಧ್ಯಕ್ಷತೆ ವಹಿಸಿದ್ದರು. ವಿ| ಅಲ್ಬರ್ಕರಿಯರು ಧನ್ಯವಾದಗಳನ್ನರ್ಪಿಸಿದರ.

ಉಡುಪಿ

ಕ್ರಿಕೆಟ್ ಸ್ಪರ್ಧೆ–ತಾ 7ರಲ್ಲಿ ಆಜ್ಜರಕಾಡು ಗಾಂಧಿ ಮೈದಾನದಲ್ಲಿ ಹಾರಾಡಿ ಕೇಸರಿ ಮೈ ಮೊಮೋರಿಯಲ್ ಶೀಲ್ಡ್ ಕ್ರಿಕೆಟ್ ಸ್ಪರ್ಧೆಯಲ್ಲಿ ಮೈ- ಎಸ್- ಎಸ್. ಸಿ ಟೀಮಿನವರು ಉಡುಪಿ ಕ್ರಿಕೆಟ್ ಟೀಮಿನ್ನ 5 ವಿಕೆಟುಗಳಿಂದ ಗೆದ್ದರು. ಉಡುಪಿ ಕ್ರಿಕೆಟ್ ಟೀಮಿನ ಶ್ರೀಗಳಾದ ಮುನ್ನಜ್ಜ ಸೆಟ್ಟಿ 15, ಭಾಸ್ಕರ ಶೆಟ್ಟಿ 24, ಜಿ. ಸಿ ರೆಡ್ಡಿ 12 ಯು ಪಿ. ಎಸ್- ಶೈಕ್ 15. ವಿಜಯನಂದ ಶೆಟ್ಟಿ 25 ರನ್ನುಗಳನ್ನು ತೆಗೆದರು. ಮೈ- ಎಸ್- ಎಸ್. ಸಿ ಕಡೆಯಿಂದ ಶ್ರೀಗಳಾದ ಸದಾನಂದ ಕೆ.ಡ್ಡಿ 18, ದಯಾನಂದ ಶೆಡ್ಡಿ 16, ರಘುರಾಮ ಹೆಗ್ಡೆ 35, ಗೋಪಾಲ 37 ರನ್ನು ತೆಗೆದರು.

ಮೈ- ಎಸ್. ಎಸ್- ಸಿ. ಯ ವಿರ್ವಾಧಿಕಾರ್ ಪರ್ಚುಯು ತಾ 14ರಲ್ಲಿ ವಿಕ್ಟೋರಿಯಾ ಜುಬಿಲಿ ಮೂಮಿಯ ನ್ ಕ್ಲಬ್ಬಿನಲ್ಲಿ ಜರಗಿತು. ಮದ್ರಾಸಿನ ರಾ| ಎಸ್. ಶಾಲಕೃಷ್ಣ ಪ್ರಭುಗಳು ಅಧ್ಯಕ್ಷತೆ ವಹಿಸಿದ್ದರು. ಡಿಸ್ಟ್ರಿಕ್ಟ ಹಾಗೂ ಇತರ ಪಿಚ್‌ಗಳನ್ನು ಶ್ರೀ ಪಿ. ವೆಂಕಟೇಶ ನಾಯ್ಕರು ನೆಲಸಿದ್ದರು. ಶ್ರೀಗಳಾದ ಯ- ಪಿ. ಎಸ್. ರೈಕ್ಕರ್, ದಯಾನಂದ ಶೆಡ್ಡಿ, ಸದಾನಂದ ಕುಡ್ವ, ವಿಷ್ಣು. ಬಿ. ಕಾಮತ್ ಇವರುಗಳಿಗೆ ಸಿಲ್ವರ್ ಕಪ್ಪುಗಳು ಕೊಡಲ್ಪಟ್ಟವು.

ಸಿಡುಬು–ಪಾಸಿನ ಓರ್ವ ಹೆಂಗಸಿಗೆ ತಗಲಿ ಪ್ರಾಣ ಹಾನಿಯಾಯಿತ್ತು. ಅಂಕೂ ಈ ಕನಕ ಇನ್ನೂರಿಗೆ ಸಿಡುಬು ತಗಲಿ ಇಬ್ಬರೂ ಮಡಿದಿರುವರು.

ಅಕ್ಕಿ ವಿತರಣೆ–ಸುಗಮವಾಗಿ ನಡೆಯುತಿದಿಲ್ಲ. ಎಲ್ಲಾ ಡಿಪೊಗಳಲ್ಲಿ ಒಂದೇ ರೀತಿಯು ಬೆಲ್ಲಿಗೆ ಮತ್ತು ಕೆಜ್ಜಿಗೆ ಅಕ್ಕಿಯ ವಿತರಣೆಯಾಗುವುದಿಲ್ಲ. ಸಾಲುಪಡಕ್ಕೆ ಕೊಡುವ ಗೋಧಿ ಸಹಾ ಕೆಲವು ವೇಳೆ ತೂಯು ಬಿದ್ದು ಹಾಳಾಗಿದ್ದು ಧೂಳಿನಿಂದ ಕೂಡಿರುತ್ತದೆ. ಸಿಡುಬು ವಿಜ್ಞತಿ ಜ್ಯಾರಿಗೆ ಬಂದಂದಿನಿಂದ ಇದೊಂದು ಅಂದು ರೋಗದಂತೆ ಪರಿಣಮಿಸಿಯದೆ. ಇದಕ್ಕೆ ಇನಾಕ್ಯುಲೇಶನ್ ಮಾಡದ್ದಿರಲೆ ಪರಿಣಾಮ ನೆಟ್ಟಗಾಗದು ಎಂದು ಶ್ರೀಳು ಯು ಎಸ್. ಭಟ್ಟರು ಬರೆಯುತ್ತಾರೆ.

ಕಾರ್ಕಳ

ಸಾರ್ವಜನಿಕ ಸಭೆಯು–ತಾ 21ರಲ್ಲು ಮೋರ್ಡ್ ಎಲಿವೆಂಟರಿ ಶಾಲೆಯಲ್ಲಿ ಡಿ| ಹಶಿಲ್ವಾರ್ ಮಿ| ಕೆ. ಟೊಸ್ಟರವರ ವ್ಯವಸ್ಥಾಪಕತ್ವದಲ್ಲಿ ಜರಗಿದ ಡ್ರಾಸನ ಡಿಫೆನ್ಸ್‌ಟೋನ್ ಕಮಿಶನರ್‌ಶ್ರೀಟಿ.ಕೃಷ್ಣಸ್ವಾಮಿಅಯ್ಯರ್,ಡಿಫೆನ್ಸ್‌ಸೇವಿಂಗ್ಸ್, ಸೆಕರೆಟರ್ ಸೇವಿಂಗ್ಸ್, ಓಕ್ಟರ್ ಲೋನ್ ಬಾಂಡುಗಳನ್ನು ವಿಷಯ ಜನರು ಪದಕೊಳ್ಳುವ ಅವಶ್ಯಕತೆಯು ಕುರಿತು ಭಾಷಣ ಮಾಡಿದರು.

ಶಿವರ್–19-1 45ರಲ್ಲಿ ಸ್ಥಳೀಯ ಬಂಟರ ಯಾನೆ ನಾಡವರ ವಿದ್ಯಾವರ್ಧಕ ಭವನವು. ಶ್ರೀ. ಕೆ. ಬಿ. ಬಲ್ಲಾಳ್, B. A. L. L. B. ಯವರ ದಿವ್ಯ ಹಸ್ತದಿಂದ ಬಹಳ ವಿಜೃಂಭಣೆಯಲ್ಲಿ ತೆರೆಯಲ್ಪಟ್ಟಿತು.

ಸಂಘವ ಅಧ್ಯಕ್ಷರಾಗಿದ್ದ, ಡಾ| ಕೆ. ಕೆ. ರೈಗಳು, ಕೊಡಲೇ ವಗ ವಾಗಿ ಕಡಬಕ್ಕೆ ಹೋಗಿದ ವರಿಂದ, ಅವರ ಸ್ಥಾನದಲ್ಲಿ, ಅಧ್ಯಕ್ಷರಾದ, ಶ್ರೀ. ಮಂದ್ಕೂರ್ ಶೆಟ್ಟಿ, ಸಂಘದ ವಾರ್ಷಿಕವನ್ನು ಓದಿದರು.

ಬಳಿಕ ಸಭಿಕರ ಭಾಷಣ, ಸಂದೇಶಗಳವಾಚನ, ಧನ ಸಹಾಯ ವಾಡಿದವರ ಹೆಸರುಗಳನ್ನು ಓದಿ ಜೋಡಿದ ನಂತರ, ಅಧ್ಯಕ್ಷ ಶ್ರೀ ಬಲ್ಲಾಳರು ಸಂಘವನ್ನು ಅಭಿನಂದಿಸಿ, ಹಿಂದೂಸ್ಥಾನದ ದುರವಸ್ಥೆಯನ್ನು ವಿವರಿಸಿ ನವ್ಯ ದೇಶದ 7 ಲಕ್ಷ ಹಳ್ಳಿಗಳಲ್ಲಿ ಒಂದಾದ, ಶಿರ್ವವಲ್ಲಿಯೂ ಇಂಥ ಒಂದು ಗ್ರಾಮ ಸೇವೆಯ ಸಂಘದ ಅಗತ್ಯವನ್ನು ಸೂಚಿಸಿದರು. ಮತ್ತು ಹಳ್ಳಿಯ ಪುನರ್ನಿರ್ಮಾಣವೇ ದೇಶದ ನಿಜವಾದ ಸ್ವರಾಜ್ಯ, ಯಂದ್ಯಾನಂತರ, ಕೆಲಸಗಳಲ್ಲಿ ಇದು ಮಹತ್ವದವುದು ಎಂದಿತ್ಯಾದಿಯಾಗಿ ವಿಚಾರ ಪೂರ್ಣ ಭಾಷಣ ಮಾಡಿದರು.

ಸಭೆಯು ವರ್ಷಾಂತರ ಸಹಾಯಧನಗಳಿಂದ, ಮುಖ್ಯವಾದ ಮೇಲೆ "ಸುಂದಾಸ್, ಬಿ. ಮಹದೇವ"ರವರ "ಭಕ್ತ ಪ್ರಹ್ಲಾದ"ವೆಂಬ ಕನ್ನಡ ಪರಿಕಥಾ ಕಾಲಕ್ಷೇಪವು ಜರಗಿತು.

ಸ್ಫುಟಣೆ

ಕಾರ್ಕಳ ತಾಲ್ಲೂ ಸಾಣಾ ಗ್ರಾಮದ ಮಂಗಳು ಜೋಗಿಯಟ್ಟ ಎಂಬಲ್ಲಿರುವ ದುರ್ಗಾಯಜೋಗಿ ಮಕ್ಕಳು ಕೊರಗಜೋಗಿ], ರಾಮಪ್ಪಜೋಗಿ], ಕೃಷ್ಣಜೋಗಿ], ಸೋಮಯ್ಯಜೋಗಿ] ಕೂಡಾ 4ಜನರು ಸಮಸ್ತರಿಗೂ ತಿಳಿಯಪಡಿಸುವುದೇನಂದ್ರೆ.

ನಮ್ಮ ಚಿಕ್ಕತಂದೆ ಕೊರಗ ಜೋಗಿ ಎಂಬವರು ಎಂದು ನರ್ಸಾರಭ್ಯ ಕಠಿಣ ಕರಣದ ಪಕ್ಷವಾತದ ಕ್ಯಾಲೆಯಲ್ಲಿದ್ದು ಚಿತ್ತಜ್ಞಾನ ವೃತ್ತಿ ಸರಿಯಿಲ್ಲದೆಯೂ, ನಡೆಯುತ್ತಿದ್ದು ತಾ 17 1-45ರಲ್ಲು ಸ್ವರ್ಗಸ್ಥರಾಗಿರುತ್ತಾರೆ. ಅವರೀಗೆ ಮಕ್ಕಳು ಇಲ್ಲದಿರುವುದ್ರಿಂದ ಅವರು ಕ್ಯಾಲೆಯಲ್ಲಿ ಬಿದ್ದಂತ್ರ ಶ್ರೀ ಕಾಳಜೈರವ ಮಂದಿರ ಅವರ ಪರ್ಯಾಯದ ಪೂಜೆ ನಡುರಿದ್ದಲ್ಲಿ ನಡೆಯುವಕ್ಕೆ ಪಟಾಪರ್ ಇತ್ಯಾದಿ ಪಿಪಿ ಯೋಗಗಳನ್ನು ಕೂಡಾ ನಾವೇ ಮಾಡಿಕೊಂಡು ಬಂದದ್ದಲ್ಲದೆ ಅವರ ಉತ್ತರ ಕ್ರಿಯೆಗೂ ನಾವೇ ತೊಡಗಿರುತ್ತೇವೆ ಸದ್ರಿ ಕೊರಗಜೋಗಿ ಎಂಬವರೀಗೆ ಕುಟುಂಬಾರ್ಥದ ಜಾಬ್ತು ಪಿತ್ರಾರ್ಜಿತ (ancestral) ಆಸ್ತಿ ಇರುತ್ತದೆ. ಶಾಲವೇನೂ ಇರುವುದಿಲ್ಲಾ. ಸದ್ರಿಯವರ ಹೆಸರಲ್ಲಿರತಕ್ಕ ಎಲ್ಲಾ ಸ್ಥಿರಾಸ್ತಿಗಳೂ ಕುಟುಂಬ ಪಿತ್ರಾರ್ಜಿತ (ancestral) ಆಸ್ತಿಯಾಗಿದ್ದು ಅವರ ಸ್ವಂತ ಹಕ್ಕಿನದಲ್ಲಾ.ಸದ್ರಿಯವರೊಬ್ಬರೂ ನಾಪತ್ತೆ ಕೂಡಾ ಮಕ್ಕಳಕ್ಕಟ್ಟಿಸ್ಥಾಸಿಯಾಗಲಿ ಮಿಂದಣ ಎರಡೆರಡು ತಲೆಗೆ ಸದ್ರಿ ಕೊರಗಜೋಗಿಯರ ಸ್ವಾಧೀನಯ ಬಿಟ್ಟು ಸಂಬಂಧವನು ಸದ್ರಿ ಕೊರಗಜೋಗಿಯರ ಜೊತೆ ಜೇಳವ ತನಕೆ ಅನುಕೂಲವಾಗುವ ಕೆಲವು ಕೃತಕ ವಿಕಾರ್ಡುಗಳನ್ನು ಸೃಷ್ಟಿಸಿ ಮಾಡಿರುತ್ತಾನೆಂತ ಸದ್ರಿಯವನು ಕೊರಗ ಜೋಗಿಯರ ಪರಾಣಾನಂತ್ರ ಜೇಗಿಂಡು ಬರುವ ಭೈತಿಯಿಂದ ನಾವು ತಿಳಿಯುತ್ತೇವೆ. ಸದ್ರಿ ಕೊರಗ ಜೋಗಿಯರಿಗೆ ಸಾಯುವ ಸಮಯದಲ್ಲಿ ಅವ್ರ ಅನೇಕ ಸಮಯದ ಮಿಂದಿನಿಂದ್ಲು, ಸ್ಮೃತಿಶಕ್ತಿಯಿದ್ದ ವ್ಯಾನಕ್ಕೆ ಚಿತ್ತ ವೃತ್ತಿ ಸರಿಯಿರದೆ ಯಾವ ವಿಚಾರವನ್ನೂ ತಿಳಿಯಲು ಆಗ್ರಹಿಸಲು ಆಗಾಧ್ಯ ಸ್ಥಿತಿಯಲ್ಲಿದ್ದರು. ಸದ್ರಿ ಬಡ್ಡಿಸು ಮೇಲೆ ಜೇಳವಂತೆ ತನ್ನ ಅಕ್ಕನು ಲಾಭಕ್ಕೋಸ್ಕರ ಜೇನಾದರೂ ಮೋಸದ ವಿಕಾರ್ಡುಗಳನ್ನು ಸೃಷ್ಟಿಸಿ ಮಾಡಿದ್ದರೆ ಅಂಥ ವಿಕಾರ್ಡುಗಳು ಯಾಥಾರ್ಥ್ಯದ್ದಲ್ಲಾ. ನಿಂಧಾಗತಕ್ಕದ್ದಲ್ಲಾ. ಮುಂಜಾಗರತೆ ಕೈದ್ದಲ್ಲಾ. ಅಂಥಾ ವಿಕಾರ್ಡುಗಳಿಂದ ಯಾವ ತರದ ಯಿಷ್ಟನ್ನಾದ್ರೂ ಹಕ್ಕು ಅಂಟಿಗಡಕ್ಕದ್ದಲ್ಲಾ ಆ ನಮ್ಮ ಹಕ್ಕಿಗೆ ಸಿಂಗಾಪಾಣಿ ಆವುಗಳು ಭಾಧಿಸಕ್ಕದ್ದುಗಳಲ್ಲಾ.

(Sd) ಕೊರಗ ಜೋಗಿ
(Sd) ರಾಮಪ್ಪ ಜೋಗಿ,
(Sd) ಕೃಷ್ಣ ಜೋಗಿ,
(Sd) ಸೋಮಯ್ಯ ಜೋಗಿ

ಸಾಣಾ ತಾರೀಕು 23--1- 45

ಬಲವಂತ ಗುಟಿಕಾ (Nerve strengthening Pills)
(ನವ ಜವಾನ ಗುಳಿಗೆಗಳು)

ಯೇಸೆ ನಪುಂಸಕತ್ವಮುಂದೆ ತಯಾರು ಮಾಡಿದ ಈ ಗುಳಿಗೆಗಳಿಂದ ರಕ್ಷಿಸುತ್ತವೆ ಮತ್ತು ಬಲವೃದ್ಧಿ ಆಗಿ ಸರಪುಗಿರತಿಯಿಂದ ಆವನಾ ಕೆಟ್ಟ ತಾಲಿಮಿಂದ ಉಂಟಾದ ರೋಗಗಳು ಯಂಪ್ಟೊ ಸೋಗುತ್ತವೆ ಈ ಔಷಧವು ಹೆಂಗಸರ ಮತ್ತು ತನ್ನ ಹುಡುಗರ ಕಡಿಕೆ ಮುಂತಾದ ರೋಗಗಳ ಮೇಲೆ ಸದಾ ಒಳ್ಳೆ ಉಪಯುಕ್ತ ಇರುತ್ತದೆ. ಮಾಸ್ಟ್ರು ಸಂಗದ ಇವ್ವ ಅನುಷಾನ ಶಕ್ತಿಕೆ ಕಡಿಯಾಗಿ ನಿಧಿಧ ಕಾರಣ ಉಂಡಾದರೆ ಈ ರೋಗಗಳು ಒಂದೆ ಸಕ್ಷತ್ತೆ ದಲ್ಲಿ ನಾಶವಾಗುತ್ತವೆ ೧ ಸಕ್ಷತಕ್ಕೆ ಒಂದು ರೂಪಾಯಿ ಮಾತ್ರ ಕಿಮ್ಮತ್ತು (೨ ೦ ೦) ನಿಮಗೆ ಬೇಕಾದಷ್ಟು ಕಿಮ್ಮತ್ತು (೨೦ ೦ ೦) ಇಪ್ಪತ್ತು ರೂಪಾಯಿ ಟಪಾಲು ಖರ್ಚು ಇಲ್ಲಾ ಪ್ರ ಬರುವದು ಏಜಂಟರಿಗೆ ಯೋಗ್ಯ ಕಮಿಶನ್.

ವಿಳಾಸ:— ಎಸ್. ಬಿ. ಕದಮ ಮತ್ತು ಸನ್ಸ್,
ಮೂ. ಪೊ ನಿಮಾಣಿ (ಜಿ. ಬೆಳಗಾವಿ).

ಬಾಡಿಗೆಗೆ ಮೊರಕುತ್ತವೆ.

ಹೊಸ ಉಡುಪುಗಳು ಹೊಸ ಪರದೆಗಳು
ಹೊಸ ಇತರ ಉಪಕರಣಗಳು

ಶಾಲಾವಾರ್ಷಿಕ ಮತ್ತು ಎನೆ ಜೊರ್ಸ್ ನಾಟಿಕ ಕಥಾಭಾಗದಲ್ಲಿ ಬರಬಹುದಾದ ವಿವಿಧ ಭೂಮಿಕೆಗಳಿಗನುಕೂಲವಾದ ಎಲ್ಲಾ ತರದ ಪರದೆ ಉಡುಪು ಸಹಿತ ಉಪಕರಣಗಳು ಬಹಳೇ ಕಡಿಮೆ ಬಾಡಿಗೆಗೆ ದೊರಕುತ್ತವೆ. ಅಗತ್ಯವಿದ್ದಲ್ಲಿ ಪೌಡರ್ ಕೆಲಸವನ್ನು ಸಹ ಮಾಡಿ ಸೋಡಾಗುವುದು. ಹೆಚ್ಚಿನ ವಿವರಕ್ಕೆ ಈ ಕೆಳಗಿನ ವಿಳಾಸಕ್ಕೆ ಎಂಟು ದಿವಸಗಳ ಮುಂಚಿತವಾಗಿ ಬರೆದುಕೊಳ್ಳುವುದು.

B Budan Basha Saheb,
P. V. I, B. H. E. Boys School, Barkur,
P. O. Barkur.

ಬಿಡಿನುಡಿ

ಅ. ಭಾ. ಮುಸ್ಲಿಂ ಲೀಗಿನ ಕಾರ್ಯದರ್ಶಿ ಹಾಗೂ ಮಿ. ಜಿನ್ನರ ಸನುಬಲ ತತುರ ನವಾಬ್‌ಜಾದಾ ಲಿಯಾಖತ್ ಅಲೀಖಾನರು ಇತರ ಲೀಗ್ ಧುರೀಣರೊಂದಿಗೆ ಕಳೆದ ವಾರ ದಕ್ಷಿಣ ಕನ್ನಡಕ್ಕೆ ಬಂದು ಕಾಸರಗೋಡು ಮಂಗಳೂರುಗಳಲ್ಲಿ ಅತಿಸಂಭ್ರಮದ ಸ್ವಾಗತಪಡೆದರು.

ಜಿಲ್ಲೆಯ ಕಮ್ಯೂನಿಸ್ಟರು ಮತ್ತು ಕಿಸಾನರಿತ್ತ ಸ್ವಾಗತವನ್ನು ಕೆಂಡು 'ಬಂದವರಾರು, ಅಲಿಖಾನರೋ ಸ್ಟಾಲಿನರೋ?' ಎಂದು ಕಲವರಿಗೆ ಅನುಮಾನ.

ಸ್ಟಾಲಿನ್, ಅಲೀಖಾನ್, ಖಾನ್‌ನೂನ್, ಕಾನೂನ್, ಕಿಸಾನ್–ಇಂತಹ ನ್ನ್‌ಗಳೆಲ್ಲ ಕಮ್ಯೂನಿಸ್ಟರ ದೃಷ್ಟಿಯಲ್ಲಿ ಸಮಾನ್?

"ಮುಸ್ಲಿಮರನ್ನು ಮುಟ್ಟಬೇಡಿ. ನಿಮ್ಮ ಯಾವ 'ಇಸಮೂ' ನಮಗೆ ಬೇಡ" ಎಂದೊಮ್ಮೆ ಮಿ ಜಿನ್ನರು ಕಮ್ಯೂನಿಸ್ಟರನ್ನು ಗದರಿಸಿದ್ದರು.

'ಜಾತಿ, ಧರ್ಮ, ಮತಭ್ರಾಂತಿಗಳಿಂದ ದೂರವಿರಬೇಕು' ಎಂಬುದು ಕಮ್ಯೂನಿಸ್ಟರ ಮೂಲತತ್ವ.

ಆರ್ಥಾತ್ ಕಮ್ಯೂನಿಸ್ಟರು ಮುಸ್ಲಿಮರನ್ನು ಮುಟ್ಟಬಾರದು; ಮತವಾರು ಸಂಸ್ಥೆಯಾದ ಮುಸ್ಲಿಂ ಲೀಗ್ ಪ್ರಮುಖರನ್ನು ಕಮ್ಯೂನಿಸ್ಟರು ಸ್ಪರ್ಶಿಸಬಾರದು.

ಒಬ್ಬರದು 'ಇಸಮ್'; ಮತ್ತೊಬ್ಬರದು 'ಇಸ್ಲಾಮ್'-ಆದ್ದರಿಂದ ದೂರದೂರ!

ಕಮ್ಯೂನಿಸ್ಟರು ಲೀಗಿಗೆ ಬೆಂಬಲಕೊಡುತ್ತಿರುವದೂ ಹೀಗೆ ದೂರದೂರವಿರಬೇಕೆಂಬುದಕ್ಕಾಗಿಯೇ.

ಮುಸ್ಲಿಂ ಲೀಗ್ ಕೇಳುತ್ತಿರುವದು ತಾವು ಬೇರೆ ರಾಜ್ಯವಾಗಿ ದೂರವಾಗಬೇಕು ಎಂಬುದನ್ನೇ.

ಅಂದಮೇಲೆ ಕಮ್ಯೂನಿಸ್ಟರು ಲೀಗಿಗ ಬೆಂಬಲಕೊಡುವದು-ಲೀಗ್ ಸ್ವಮುಖರು ಕಮ್ಯೂನಿಸ್ಟರಿಂದ ಸ್ವಾಗತಪಡೆಯುವದು-ಇಕ್ಕಡೆಯವರ ಧೋರಣೆಯೂ 'ದೂರ-ದೂರ'ತ್ವನುಗುಣವಾಗಿಯೇ!

ನವಾಬ್‌ಝಾದಾ ಲಿಯಾಖತ್ ಅಲಿಖಾನರು ದ. ಕನ್ನಡದಲ್ಲಿಯೂ ಪಾಕಿಸ್ತಾನ್ ಮಹಾತ್ಮೆಯನ್ನೇ ವರ್ಣಿಸಿದರು.

ಆದರೆ ಈ ಮಾತುಗಳಿಂದ ಹುರುಪುಗೊಂಡು ಪಾಕಿಸ್ತಾನ್ ಬೇಡುವಷ್ಟು ಇಲ್ಲಿ ಮುಸಲ್ಮಾನರ ಸಂಖ್ಯೆಯಿಲ್ಲ.

ಹಾಗೆಂದು ನವಾಬ್‌ಜಾದಾರ ಮಾತಿನ ಮೋಹಕಶಕ್ತಿ ಸುಳ್ಳಾಗುವಂತಹದಲ್ಲ.

ಹಾಗಾದರೆ ಇದರ ಪರಿಣಾಮವೇನು? ಬಹುಸಂಖ್ಯಾಕರಾಗಿರುವ ಹಿಂದುಗಳೇ ಸ್ಫೂರ್ತಿಗೊಳ್ಳಬಹುದು.

ದ್ರಾ. ಬ್ರಾಹ್ಮಣರು, ಗೌ. ಸಾ. ಬ್ರಾಹ್ಮಣರು, ಬಿಲ್ಲವರು, ಮೊಗವೀರರು, ಮುಂಡಾಲರು, ಕೊರಗರು, ಬಂಟರು-ಎಲ್ಲರಿಗೂ ತಮಗೊಂದೊಂದು 'ಸ್ಥಾನ' ಕೇಳಬೇಕೆಂಬ ಮನಸ್ಸಾಗಬಹುದು.

ಆದರೆ ಅವರು ಕೇಳುವ ಸ್ಥಾನವಾವುದಿರಬಹುದು?

ಮತ್ತಾವುದು? ಎಲ್ಲರೂ ತಮಗೆ ಬೇರೆ ಬೇರೆ 'ದೇವಸ್ಥಾನ'ಗಳನ್ನೇ ಕೇಳಬೇಕು.

ಸರಿ. ದಕ್ಷಿಣ ಕನ್ನಡಕ್ಕೆ ಬಂದ ಲೀಗ್ ಪ್ರಮುಖರಿಗೆ ದೇವಸ್ಥಾನ ಕಟ್ಟಿಸಿದ ಪುಣ್ಯವಿದೆ!

ಅವರನ್ನು ಸ್ವಾಗತಿಸಿದ ಕಮ್ಯೂನಿಸ್ಟರಿಗೆ ಅದರಲ್ಲಿ ಪಾಲಿದೆ!

* * * *

ದ. ಕನ್ನಡದ ಅಕ್ಕಿ ಪಡೆಯುವ 'ಸ್ಪೋರು' ಎಂದರೆ ಗುಡಿ-ಅದರೊಳಗೆ ಸೇರಬೇಕಾದ ದೇವರೆಂದರೆ ಅಕ್ಕೀಮುಡಿ.

ದೇವರನ್ನು ಹೊತ್ತುಕೊಂಡು ಪಾತ್ರಿ, ರೈತ ಸುತ್ತು ತೆಗೆದು ಹಿಂದೆಮುಂದೆ ಮೂರುಮೂರು ಸಲ ಕುಣಿದು ಆ ನೇಲೊಂದು ಸುಮುಹೂರ್ತದಲ್ಲಿ ಗುಡಿ ಪೀಠದಲ್ಲಿ ಮುಡಿಯೆಂಬ ಮೂರ್ತಿಯನ್ನು ಮಂಡಿಸಬೇಕು.

ಇದೀಗ ಈ ಕಾಲದ ಬಲಿಪೂಜೆ. ಇದಕ್ಕೆ ಕಾರಣ:—

ಅಕ್ಕಿಯೊಪ್ಪಿಸಲಿಕ್ಕಾಗಿ ಎರಡುಮೂರು ವೈಲು ದೂರದಿಂದ ರೈತರು ಹೊತ್ತು ಕೊಂಡು ಬರುವಾಗ ಸ್ಪೋರುಗಳಲ್ಲಿ ಘಂಟಿಯಾಗಿ ಹೋಗುತ್ತದೆ.

ಮರುದಿನ ಪುನಃ ತರುವಾಗ ಸ್ಪೋರಿನ ಏಜಂಟರಿಗೆ ಆದನ್ನು ಸಡಕೊಳ್ಳಲು ಸಮಯ ಸಾಕಾಗದೆ ಹೋಗುವದಿದೆ.

ಆದರೆ ಸಮಯವಿರುವ ಬೇರೆ ಸ್ಪೋರುಗಳಿಗಾದರೂ ಅಕ್ಕಿಯೊಪ್ಪಿಸುವ ಅಧಿಕಾರ ರೈತರಿಗಿಲ್ಲ.

ಹೀಗಾಗಿ ರೈತರು ಏಳಪತ್ನೀವ್ರತಧಾರಿ ಗಂಡನಂತಾಗಿದ್ದಾರೆ-ಸ್ಪೋರುಗಳು ಬಹು ಜನಾಶ್ರಯುದಾತೆಯಾದ ಪತ್ನಿಯಂತಿವೆ.

ಎಷ್ಟು ಬಾರಿ ದೂಡಿದರೂ ತನ್ನ ಗಂಡ ತನ್ನಲ್ಲಿಗೇನೇ ಬರುತ್ತಾನೆಂದು ಅವಳಿಗೆ ಗೊತ್ತು.

ಈ ಒದ್ದಾಟ ಸಹಿಸಲಾರದೆ ಹಳ್ಳಿಗರು ದೂರುತಿದ್ದಾರೆ.

ಆದ್ದರಿಂದ ಈ ಯುದ್ಧಕಾಲದಲ್ಲಿ ಎಲ್ಲವುಗಳ ಧಾರಣೆಯೂ ಏರಿದಂತೆ, ದಿನದ ೨೫ ಘಂಟೆಗಳನ್ನು ೪೮ಕ್ಕೇರಿಸಿ ಸ್ಪೋರುಗಳ ಏಜೆಂಟರಿಗೆ ಸಮಯದೊರೆಯುವಂತೆ ಮಾಡಬೇಕು.

ಆಥವಾ ಆಸುಪಾಸಿನ ಎರಡುಮೂರು ಸ್ಪೋರುಗಳಿಗಾದರೂ ಅಕ್ಕಿಯೊಪ್ಪಿಸಬಹುದೆಂಬ ಪರ್ಮಿಟು ರೈತರಿಗೆ ದೊರೆಯಬೇಕು.

—ಬೀದಿನಾಲ.



ಈಗ ಉಳಿಸಿದ ಪ್ರತಿಯೊಂದು ರೂಪಾಯಿಯೂ..

ಯುದ್ಧ ನುಗಿದಮೇಲೆ, ಈಗಿನಕ್ಕಿಂತಲೂ ಬಹುಮಟ್ಟಿಗೆ ಹೆಚ್ಚಾದ ಕೊಳ್ಳುವ (ಪದಾರ್ಥಗಳನ್ನು) ಶಕ್ತಿಯನ್ನು ಪಡೆಯುವುದು. ಪದಾರ್ಥಗಳು ಮಿತಿಮೀರಿ ತುಟ್ಟಿಯಾಗಿರುವ ಈ ಸಮಯದಲ್ಲಿ, ನಾವು ಅವುಗಳನ್ನು ಕೊಂಡುಕ್ಕೊಂಡರೆ, ನಮ್ಮ ಮುಡ್ಡಿಗೆ ತಕ್ಕ ಪ್ರಯೋಜನವು ದೊರಕುವುದಿಲ್ಲ ನೆಂಬಂಶವು, ಸಾಮಾನ್ಯ ಬುದ್ಧಿಯುಳ್ಳವರಿಗೂ ಕೂಡ ಸ್ಪಷ್ಟವಾಗಿ ತಿಳಿದಿರುತ್ತದೆ. ಅಲ್ಲದೆ, ಬಟ್ಟೆಗಳು, ಆಹಾರ ಸಾಮಗ್ರಿಗಳು, ಮತ್ತು ಔಷಧಿಗಳು, ಇವುಗಳಿಗೆ ಈಗ್ಗೆ ಒಂದು ವರ್ಷದ ಹಿಂದೆ ಇದ್ದ ಬೆಲೆಗೂ, ಈಗಿನ ಬೆಲೆಗೂ ಹೋಲಿಸಿದ್ದೇ ಆದರೆ. ಈಗಿನ ಧಾರಣೆಯು ಎಷ್ಟುಮಟ್ಟಿಗೆ ಕಡಿಮೆಯಾಗಿದೆಯೆಂಬುವುದೂ, ಮತ್ತು ಇವುಗಳ ಧಾರಣೆಯು ಇನ್ನೂ ಇಳಿಯುವದರಲ್ಲಿಯೇ ಇದೆಯೆಂಬುವದು ಸ್ಪಷ್ಟವಾಗುವುದು. ಈ ವಿಚಾರವನ್ನು ಚೆನ್ನಾಗಿ ಸ್ಫೂರ್ತಿಯಲ್ಲಿಡಿರಿ. ಕಳೆದವರ್ಷ, ಮತ್ತವ್ಯಯಮಾಡಿದ ವಿನೇತಿಯು, ಈ ವರ್ಷ, ಅಂದಿಗಿಂತಲೂ ಸುಲಭಕ್ರಯಕ್ಕೆ ತನಗೆ ಬೇಕಾದವಸ್ತುಗಳನ್ನು ಕೊಳ್ಳಬಹುದು. ಆದುದರಿಂದ ನಿಮ್ಮ ಕೈಲಾದಮಟ್ಟಿಗೂ ಈಗ ಹಣವನ್ನು ಉಳಿಸಿ, ಯುದ್ಧ ನಿಂತು, ಶಾಂತಿಯು ನೆಲೆಸಿದಾಗ ಈಗಿನಕ್ಕಿಂತಲೂ ಕನಿಷ್ಟಪಕ್ಷ ಇಮ್ಮಡಿ ಪ್ರಯೋಜನವನ್ನು ಹೊಂದುವುದು ಅತ್ಯಂತ ವಿವೇಕಯುಕ್ತವಾದ ಮಾರ್ಗ.

ಮತ್ತೊಂದಂಶವನ್ನೇನೆಂದರೆ, ನೀವು ಉಳಿಸಿದ ಹಣವನ್ನು ವಿನಿಯೋಗಿಸುವಾಗ ಹೆಚ್ಚುಬಡ್ಡಿಗೆ ಆಸೆಪಡದೆ, ಬಂಡವಾಳಕ್ಕೆ ಚ್ಯುತಿಯಿಲ್ಲದ ಮಾರ್ಗವನ್ನು ವಿವೇಚಿಸಿರಿ. ಉದಾಹರಣೆಗಳು, ಜಮೀನುಗಳು, ಕಟ್ಟಡಗಳು, ಕೈಗಾರಿಕೆ ಸಾಮಾನುಗಳು, ಸರಕುಗಳು, ಇವುಗಳೆಲ್ಲವೂ. ಈ ಯುದ್ಧದ ದಿವಸಗಳಲ್ಲಿ, ಧನ ವಿನಿಯೋಗಕ್ಕೆ ಯೋಗ್ಯವಾದವುಗಳಲ್ಲ. ಆವುಗಳ ಬೆಲೆ ಪ್ರಕೃತದಲ್ಲಿ ಮಿತಿಮೀರಿ ಏರಿರುವದೇನೋ ನಿಜ. ಆದರೆ, ಆವುಗಳು ಒಮ್ಮಟ್ಟಿಗೆ ಇಳಿಯುವ ದನ್ನೂ ಸಹ ನೀವು ಒಂದು ದಿನವಲ್ಲೊಂದು ದಿನ ನೋಡಿಯೇ ನೋಡುವಿರಿ.

ಭದ್ರತೆ ಪುತ್ತು ಮಿತವಾದ ಬಡ್ಡಿ. ಇವುಗಳ ಮೇಲೆ ನಿಮ್ಮ ಧ್ಯಾನವಿದ್ದಲ್ಲೇ ಆದರೆ, ನಿಮ್ಮ ಹಣವನ್ನು ಗಾರ್ನಮೆಂಟು ಲೋನುಗಳಲ್ಲಾ, ನ್ಯಾಷನಲ್ ಸೇವಿಂಗ್ಸ್ ಸರ್ಟಿಫಿಕೇಟುಗಳಲ್ಲಾ, ಷೇರುಮಾರ್ಕೆಟ್, ಕೋ ಆಪರೇಟಿವ್ ಸಂಘಗಳಲ್ಲಾ, ಪೋಸ್ಟಾಫೀಸ್ ಮತ್ತು ಬೇಂಕುಗಳಲ್ಲಿ ವಿವೃದ್ಧಿಸಿರುವ ಉಳಿತಾಯ ಸಾಕೆರ್ಯಗಳಲ್ಲಾ, ಇವುಗಳಲ್ಲಿ ನಿಮ್ಮ ಹಣವನ್ನು ಇಡಿರಿ.

ಹಣವನ್ನು ಕ್ಷೇಮವಾದ ಮಟ್ಟಿಗೂ

ಉಳಿಸಿರಿ

ಉಳಿಸಿದ್ದನ್ನು ವಿವೇಕಮಾರ್ಗಗಳಲ್ಲಿ ವಿನಿಯೋಗಿಸಿರಿ.

ಇದು ರಾಷ್ಟ್ರೀಯ ಯುದ್ಧಮುಖವು ಭಾರತೀಯರ ಸಮಕ್ಷಮದಲ್ಲಿ ಮಾಡುವ ಅರಿಕೆ.

AAA 1113 KN.

— ಮೈನೆ ಕೊಲೆ ಮೊಕದ್ದಮೆ —

(೨ನೇ ಪುಟದಿಂದ ಮುಂದುವರಿದಿದೆ)

ವರಿಬ್ಬರಿಗೂ ಮರಣದಂಡನೆಯನ್ನೇ ವಿಧಿಸಬೇಕೆಂದು ಪಬ್ಲಿಕ್ ಪ್ರೊಸಿಕ್ಯೂಟರರ ವಾದ.

† † †

'ನಾವು ಪೆಲೆಸ್ತೈನಿನ ಯೋಗ್ಯ ಪುತ್ರರಂತೆ ವರ್ತಿಸಿದ್ದೇವೆ' 'ನ್ಯಾಯದ ಹೆಸರಿನಿಂದ ನಮ್ಮನ್ನು ನಿರಪರಾಧಿಗಳೆಂದು ತೀರ್ಮಾನಿಸುವಂತೆ ಈ ಕೋರ್ಟನ್ನು ಕೇಳಿಕೊಳ್ಳುತ್ತೇವೆ' 'ತನ್ನ ಕಾರ್ಯಕ್ಕಡ್ಡಬರುವ ಯಾವನನ್ನೇ ಆದರೂ ನಿರ್ದಾಕ್ಷಿಣ್ಯವಾಗಿ ನಿರ್ಮೂಲಿಸುವದೇ ನಮ್ಮ ಸಂಸ್ಥೆಯ ಧ್ಯೇಯವಾಗಿದ್ದರೂ ಈ ಮಟ್ಟಿಗೆ ಲೋರ್ಡ್ ಮೈನೆಯವರಿಗಲ್ಲದೆ ಬೇರಾರಿಗೂ ಹಾನಿಮಾಡಬಾರದೆಂದು ನಮಗೆ ಕಟ್ಟಪ್ಪಣೆಯಿತ್ತು' ಎಂದು ಸೌರಿ ಮತ್ತು ಹಕೀಮರ ಹೇಳಿಕೆ ಆರೋಪಿತರ ಕಡೆಯ ವಕೀಲರಿಗೆ ವಾದಾಂಶ ಕಡಿಮೆಯಿದ್ದುದರಿಂದ ಅವರು ಹೃದಯಸ್ಪರ್ಶೀ ಬಾಷಣಗಳನ್ನೇ ಕೋರ್ಟಿನಲ್ಲಿತ್ತಿದ್ದರು "ಜಗತ್ತು ಒಂದು ನ್ಯಾಯವನ್ನಾಲೈಸಲಾಗುವಂತೆ, ಒಂದು ಯೋಗ್ಯ ತೀರ್ಮಾನಕ್ಕೆ ನಮ್ಮನ್ನು ನಡಿಸಿಕೊಂಡು ಹೋಗೆಂದು ನಾನು ದೇವರನ್ನು ಕೇಳಿಕೊಳ್ಳುತ್ತೇನೆ. ಆರೋಪಿಗಳಿಬ್ಬರೂ ಪೆಲಸ್ತೈನಿನ ಮೂಲನಿವಾಸಿಗಳು ಹೊರತು ಬಂದು ನಿಂತವರಲ್ಲ ಪೆಲೆಸ್ತೈನ್ ಸ್ವತಂತ್ರವಾಗಬೇಕೆಂಬುದೇ ಅವರ ಒಯಿಕ್" ಎಂದು ವಕೀಲ್ ಪಾಶಾರವರು ವಾದಿಸಿ ಯೆಹೂದಿಗಳಿಗೆ ತಾಗಿರುವ ಪಲಾಯನದ ವಿಧಿ. ಬ್ರಿಟಿಷ್ ಅಳ್ವಿಕೆ ಮತ್ತು ಶ್ವೇತಸತ್ರಗಳಲ್ಲಿ ಪೆಲಸ್ತೈನಿಗಾಗಿರುವ ಅನ್ಯಾಯಗಳೇ ಈ ಎಳೆಯ ತರುಣರ ಮನಸ್ಸಿನ ಮೇಲೆ ಪರಿಣಾಮ ಮಾಡಿತೆಂದು ಸಾಧಿಸಿ, ಕೊಲೆಯ ಅಪರಾಧವನ್ನು ಈ ಅಗುಳೋಗುಗಳ ಮೇಲೆ ಹಾಕಿ, ಆರೋಪಿತರನ್ನು ಬಿಡುಗಡೆ ಮಾಡಿಸಲು ನೋಡಿದರು. "ತಮ್ಮ ಯೋಜನೆಗನುಸಾರವಾದ ದೇಶಸೇವೆಯ ಆತುರದಿಂದ ಅಗೋಪಿತರು. ತಮಗೆ ಪಾಕಾಪಾಯವನ್ನೇ ತಂದುಕೊಂಡಿದ್ದಾರೆ ದಯೆಯು ನ್ಯಾಯಕ್ಕಿಂತ ದೊಡ್ಡದು ನಿಮ್ಮ ತೀರ್ಮಾನವು ಇಡಿಯ ಜಗತ್ತಿನ ಮೇಲೇನೇ ಮುದ್ರೆಯೊತ್ತುವಂತಹದಾದ್ದರಿಂದ ಇಜಿಪ್ಟಿನಲ್ಲಿ ಜಡ್ಜರಿದ್ದಾರೆ ಎಂಬುದನ್ನೊಮ್ಮೆ ನೆನಸುವಂತಾಗಲಿ" ಎಂದು ನ್ಯಾಯಾಧೀಶರೊಡನೆ ಅವರ ವಿನಂತಿ.

ವಿಚಾರಣೆಯ ಕಾಲದಲ್ಲಿ, ಬೇರೆ ಪ್ರಸಂಗದಲ್ಲೇ ಇದ್ದಾರೇನೋ-ಅಥವಾ ಇವರು ಕುರುಡರು ಮತ್ತು ಕಿವುಡರೇನೋ-ಎಂಬಷ್ಟು ನಿರ್ಲಿಪ್ತ ಮನಸ್ಸಿನಿಂದ ಆರೋಪಿತರುಣರಿಬ್ಬರೂ ಕಾಫಿ ಮತ್ತು ಸಿಗರೇಟ್ ಸೇವನೆಮಾಡುತ್ತಾ, ಹಸನ್ಮುಖಿಗಳಾಗಿ ಕುಳಿತುಕೊಂಡಿದ್ದರು.

ಈ ಮೊಕದ್ದಮೆಯ ವಿಚಾರಣೆ ಕೈಕೊಂಡಿರುವ ಜಡ್ಜರನ್ನು ಬೆದರಿಸುವ ಮತ್ತು ನಿಂದಿಸುವ ಹಲವು ಪತ್ರಗಳು ಬಂದಿವೆಯೆಂದೂ ಇಂತಹ ಸಂಗತಿಗಳನ್ನು ಗಣಿಸಿ ಕೋರ್ಟು ಕರ್ತವ್ಯಬಾಹಿರವಾಗಲಾರದೆಂದೂ ಜಡ್ಜರಂದಿದ್ದಾರೆ. ಹಲವು ಅರಬರು ಜಡ್ಜರು ಈ ವಿಚಾರಣೆಯಲ್ಲಿ ಅನಗತ್ಯವಾದ ಅಧಿಕಪ್ರಸಂಗಗಳಿಗಾಸ್ಪದವಿಟ್ಟಿದ್ದಾರೆಂದು ದೂರಿ ಒದಿದ್ದಾರೆ. 'ಇದೊಂದು ಕೊಲೆಯು ತಪ್ಪೇರಿಯ. ಅದನ್ನು ತಪ್ಪಿರಾಗಿಯೇ ವಿಚಾರಿಸಬೇಕು ಕಾರಣ ರಾಜಕೀಯ ಧೋರಣೆಗಳ ಪ್ರಕಾಶಕ್ಕವಕಾಶ ಕೊಡಬಾರದು' ಎಂದು ಕೆಲವು ಪ್ರಮುಖ ಅರಬರೂ ನಿಷೇಧ ಸೂಚಿಸಿದ್ದಾರೆ. 'ಇಜಿಪ್ಟ್ ಕಾನೂನಿನಲ್ಲಿ ರಾಜಕೀಯಾಪರಾಧಗಳಿಗಾಗಿ ಪ್ರತ್ಯೇಕ 'ಕ್ಲಾಸ್' ಇಲ್ಲ' ಎಂದು ಪಬ್ಲಿಕ್ ಪ್ರೊಸಿಕ್ಯೂಟರರೂ ಹೇಳಿದ್ದಾರೆ

ಆದರೆ ಇಜಿಪ್ಟ್ ಕಾನೂನಿನಂತೆ 17ವರ್ಷದ ಕಳಗಿನವರಿಗೆ ಮರಣದಂಡನೆಯಿಲ್ಲ. ಲೋರ್ಡ್ ಮೈನೆಯವರಿಗೆ ಗುಂಡಿಟ್ಟ ಹಕೀಮನ ಪ್ರಾಯವು ಆ ಕಾಲದಲ್ಲಿ 17 ವರುಷಕ್ಕೆ ಮಿಕ್ಕಿರಲಿಲ್ಲವೆಂಬುದೇ ಈಗ ಮುಖ್ಯ ಡಿಫನ್ಸ್ ಸಾಧನೆ ಎರಡನೇ ಆರೋಪಿ ಈ ಕೊಲೆಯ ಕೃತ್ಯಕ್ಕೆ ಸಂಬಂಧಿಸಿದವನಲ್ಲವೆಂದೂ ಸಾಧಿಸಲಾಗಿದೆ ಆದರೆ ಪ್ರೊಸಿಕ್ಯೂಶನಿನ ವಾದವು ಇನ್ನೆರಡಕ್ಕೂ, ವಿರುದ್ಧವಿದೆ 'ಹಕೀಮ್' 'ಪೈಸರ್' ಅಬ್ದಿ, ಪೂರ್ವವ್ಯವಸ್ಥೆಯಂತೆ ಸೌರಿಯೂ ಕೂಲಿಯ ಉದ್ದೇಶದಿಂದಲೇ ಲೈಸನ್ಸು ಮತ್ತು ಆವರ ಡ್ರೈವರರ ನಡುವೆ ಬಂದು ಸಹಾಯಮಾಡಿದ್ದ' ಎಂದು ಪ್ರೊಸಿಕ್ಯೂಟರರು ವಾದಿಸಿದ್ದಾರೆ. ಇವುಗಳ ಕುರಿತು ಸತ್ಯ ಶೋಧಿಸಿ ತೀರ್ಮಾನವೀಯುವ ಕೆಲಸ ಮಾತ್ರ, ಜಡ್ಜರವಾಲಿಗುಳಿದಿದೆ ಅರಬರು ಈ ಮೊಕದ್ದಮೆಯ ಕುರಿತು ವಿಶೇಷ ಮೆಹನತು ವಹಿಸಿದ್ದಾರೆ."ಮೈನೆ ಕೂಲ ಮೊಕದ್ದಮೆಯ ಇಬ್ಬರು ಆರೋಪಿಗಳಿಗೆ, ವಿಚಾರಣೆಗೊಳಪಟ್ಟಿರುವ ಕೈದಿಗಳಿಗೆ ನ್ಯಾಯವಾಗಿ ಕೊಡಬೇಕಾದ ಸೌಕರ್ಯಗಳೂ ಕಹಿ ಮನಸ್ಸಿನ ಕೋರ್ಟಿನಿಂದ ನಿರಾಕರಿಸಲ್ಪಟ್ಟಿವೆ –ಎಂದು ಪೆಲಸ್ತೈನ್ ನಾಗರಿಕ ಸ್ವಾತಂತ್ರ್ಯಸಂರಕ್ಷಣಾ ಸಂಸ್ಥೆಯ ಚರ್ಚಿಲ್, ರುಸವೆಲ್ಟ್, ಸ್ಟಾಲಿನ್ ಮತ್ತು ಪೋಪ್ ಗುರುಗಳಿಗೆ ನಿವೇದ ಕಳುಹಿಸಿಯಿದೆ.

ಜಡ್ಜರು ಇಬ್ಬರು ಆರೋಪಿಗಳಿಗೂ ಮರಣ ದಂಡನೆ ವಿಧಿಸಿದ್ದಾರೆ ತೀರ್ಪಿನಲ್ಲಿ ಮರಣ ತಿಪ್ಪೆಯ ಸ್ಪಷ್ಟ ಉಲ್ಲೇಖವಿಲ್ಲ ಆದರೆ ಅಧ್ಯಕ್ಷ ಜಡ್ಜರ ಹೇಳಿಕೆಯಿಂದ ಆ ಅರ್ಥವಾಗುತ್ತದೆ ಈ ಸಂಬಂಧದ ಎಲ್ಲ ವಾಖಲೆಗಳನ್ನು ಮುಫ್ತಿಯವರಿಗೆ ರವಾನಿಸಲಾಗಿದೆ. ಮುಫ್ತಿಯವರು ಇದೇ ತಾ 22 ರಲ್ಲಿ ಕೊನೆಯ ತೀರ್ಮಾನವಿತ್ತಿರುವರೆಂದು ತಿಳಿದು ಬರುತ್ತದೆ

ಕಟೀಲ್ ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ಜೀರ್ಣೋದ್ಧಾರ ನಿಧಿಗೆ ಮುಂಬಯಿ ಬಾಬ್ತು ಸಹಾಯಧನವಿತ್ತ ಮಹನೀಯರ ಹೆಸರು-

ಶ್ರೀ ಮೂಡು ದೇವಸ್ಥ ಬೊಮ್ಮಯ ಶೆಟ್ಟಿ, ಲಕ್ಷ್ಮೀವಿಲಾಸ, ಬೈಕ್ಲ	1111- 0-0
ಶ್ರೀಮತಿ ಗಿರಿಜಾ ನಾರಾಯಣ ಶೆಟ್ಟಿ c/o ನಾರಾಯಣ ಶೆಟ್ಟಿ, ಲಕ್ಷ್ಮೀವಿಲಾಸ, ದಾದರ್	555- 0-0
ಶ್ರೀ ನಿಡ್ಡೋಡಿ ಸಂಕು ಶೆಟ್ಟಿ, ಕೆನರಾ ಹಿಂದೂ ಹೋಟೆಲ್ Arthur Rd	501- 0-0
,, ಕಂಡೇವು ಮುತ್ತಣ್ಣ ಶೆಟ್ಟಿ, Little Co.	505- 0-0
,, ದೊಡ್ಡಯ ಶೆಟ್ಟಿ, ಮಹಾ ಗಣಪತಿ ಹಿಂದೂ ರೆಸ್ಟೋರೆಂಟ್ ಗುಲಾಬ್‌ದೇವ್	505- 0-0
,, ಬೋಳ ಮಂಜಯ ಶೆಟ್ಟಿ, ಗಿರಗಾವ್ ಆರೋಗ್ಯ ಭವನ	501 0-0
,, ಬಾಬು ಶೆಟ್ಟಿ, ರಾಷ್ಟ್ರೀಯ ವಿಜಯ ಹಿಂದೂ ಹೋಟೆಲ್ ಡೀಲಾ ರೋಡ್	501- 0-0
,, ತುಳ್ಳ ಮೂಲ್ಯ ಎಲ್ಲಪ್ಪ ಮೂಲ್ಯ, ಮಹಾ ಲಕ್ಷ್ಮೀ ಹಿಂದೂ ರೆಸ್ಟೋರೆಂಟ್, Jacob cercle	501- 0-0
,, ಪಂಜ ಮಾಜಲಗುತ್ತು ದೇವು ಶೆಟ್ಟಿ	250- 0-0
,, ದೇವಸ್ಯ ಪುಟ್ಟಣ್ಣ ಶೆಟ್ಟಿ	251- 0-0
,, ಗೋಪಾಲ ಶೆಟ್ಟಿ ಶ್ಯಾಮ ಶೆಟ್ಟಿ, ಸೂರ್ಯೋದಯ ಹಿಂದೂ ಹೋಟೆಲ್, Warden Rd	250 0-0
,, ದೇವಸ್ಯ ಎರಲ ಶೆಟ್ಟಿ, Modern Hindu Rest Sewdi	151 0-0
,, ಅತ್ತೂರು ಗುತ್ತು ಸೆಂಕಪ್ಪ ಶೆಟ್ಟಿ	102-12-0
,, O ರಾಮಚಂದ್ರಯ್ಯ ಡಾ! ಶೇಶಂಎಂ ಎಂಡ್ ಬ್ರದರ್ಸ್	125- 0-0
,, ಡಾ! N. O ಅಡ್ಯಂತಾಯ, ಗಾಮ್‌ದೇವಿ	125- 0 0
,, ಕಡಂದಲೆ ನಾಗ ಪೂಜಾರಿ	125- 0 0
,, ಕೆನ್ನಿಗೋಳಿ ಸರ್ವೋತ್ತಮ ಕಾಮತ್	105- 0-0
,, ನಿಡ್ಡೋಡಿ ನಾರಾಯಣ ಶೆಟ್ಟಿ, ಶ್ರೀ ಕೃಷ್ಣ ವಿಜಯ ಹಿಂದೂ ಹೋಟೆಲ್, ಕೆಂಡ್ಯಾಡಿ	105- 0-0
,, ಇನ್ನ ನರ್ಸು ಶೆಟ್ಟಿ, ಲಕ್ಷ್ಮೀ ವಿಲಾಸ, ಬೈಕ್ಲ	105- 0-0
,, ಕಾಳಪ್ಪ ಶೆಟ್ಟಿ, ಕೃಷ್ಣ ಭವನ, Victor Gardens	101 0-0
,, ಮುದ್ದಣ್ಣ ಶೆಟ್ಟಿ, ಲಕ್ಷ್ಮಣ ಶೆಟ್ಟಿ ಶ್ರೀ ದುರ್ಗಾಪರಮೇಶ್ವರೀ ಹಿಂದೂ ಹೋಟೆಲ್	101- 0-0
,, ಲೋಕಯ ಶೆಟ್ಟಿ, ಗಿರಿಯ ಶೆಟ್ಟಿ, New Bombay Hindu Hotel	101- 0-9
,, ಅಣ್ಣು ಶೆಟ್ಟಿ, ರಾಮಾಂಜನೇಯ ಶಾಂತಿ ಭುವನ	101- 0-0
,, ಕೃಷ್ಣ ಶೆಟ್ಟಿ, Hindu Visruthi Grih	101- 0-0
,, ಎಲ್ಲಪ್ಪ ಶೆಟ್ಟಿ, ರಾಮ ಹಿಂದೂ ಹೋಟೆಲ್	101- 0-0
,, ಕೋಟಿ ಶೆಟ್ಟಿ, ರಾಷ್ಟ್ರೀಯ ಆರೋಗ್ಯ ಭುವನ	101- 0 0
,, ಬಜಪೆ ಶಿವಪ್ಪ ಶೆಟ್ಟಿ	101- 0-0
,, ಬಾಳ ಹೊಸಮನೆ ತಪ್ಪಿ ಹೆಂಗ್ಸು ಒಗ್ಗ ಶಂತಾರಾಮ ಅಡ್ಯಂತಾಯ	101- 0-0
,, ಭುಜಂಗ ರಾವ್, ಬೊಂಬೈ ಸರ್ಜಿಕಲ್ ಕಂಪನಿ	101- 0 0
,, ತಿಪ್ಪೂರು ಲಿಂಗ ಶೆಟ್ಟಿ, ತಿಮಜಿ ಖಾರ್ಡ್ ಹಿಂದೂ ರೆಸ್ಟೋರೆಂಟ್	101- 0-0
,, ವೀರಪ್ಪ ಶೆಟ್ಟಿ, ಆರೋಗ್ಯ ಭವನ ಬೈಕ್ಲ	101- 0-0
,, ವೇಣುವರ ವಾಸುದೇವರಾವ್ B Sc Kumpta Metal Industries	101 0-0
,, ಪಾಂಗಳ ತಬುರ ಶೆಟ್ಟಿ, General Hindu Rest.	101- 0 0
,, ಬಬು ಮೂಲ್ಯ ಪೂಂಬ ಮೂಲ್ಯ, ಮನೋಹರ ಹಿಂದೂ ರೆಸ್ಟೋರೆಂಟ್	101- 0 0
,, ರುಕ್ಕಯ ಅಮಿನ್, ದೂಜ ಶಾಲಿ ಲೇಟೊ	101- 0-0
,, ರಾಮ ಮೂಲ್ಯ, ಮಹಾತ್ಮ ಹೋಟೆಲ್	101- 0 0
,, ದಾಸು ಪೂಜಾರಿ, ಸ್ವದೇಶೀ ಹಿಂದೂ ಹೋಟೆಲ್	101- 0-0
,, ಡಾಕ್ಟರ್ U R ರಾವ್	101- 0 0

(ಮುಂದುವರಿಯಲಿದೆ)

NOTICE

In the Court of the Subordinate Judge of South Kanara.

O S No 71 of 1944

Between

Manjunatha alias Narasimha Shenoy & another —Plaintiffs

and

Devamma alias Secthamma and others —Defendants

To

3rd Defendant Venkatesha Manjunatha Shenoy, son of Manjunatha Shanbhaga, residing at Palimar village and Mogane, Udipi Taluk.

4th Defendant Pangal Madhava Rama Bhat, son of Rama Bhat, residing at Katapady in Udipi Taluk

Please take notice that the above suit filed by the Plaintiffs to render account of their administration and management of the estate of the deceased Vaikunta Ramachandra Shanbhaga, of which you were constituted executors or trustees under his last will and testament dated 30-10-1922 and of which you had taken out a probate from the date of death of the deceased up to the date of your rendering an account and directing you to pay the amounts will come on for hearing on 16-2-1945 at 11 A M in the above Court, You may appear either in person or by a pleader failing which it will be decided in your absence.

Mangalore, 15 1 1945. **M A. Kamath,** Vakil for Plaintiffs.

The Pangal Nayak Bank Limited.

(Incorporated in 1920)

Registered Office Court Road, UDIPI

Branches at— **Udipi, Mangalore, Katapadi, Kanhangad, Kinnigoli and Nileshwar, South Canara District**

Discounting of demand and short term negotiable instruments for approved parties granting of loans and overdraft accommodation on goldware, marketable produce, other merchandise and on other securities, collection of pay, pension or other bills transmission of monies to upcountry places on moderate terms acceptance of Fixed Current, Savings Bank and Cumulative deposits and every other type of up to date Banking service is at the disposal of all the sections of the discreet public

For business proper please enquire at any one of our Offices.

15th April 1944.

ಗನೋರಿಯಾ ಪರನೂರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗಾರಂಟೀ

ಶರೀರದಿಂದ ಕೇವ ಬರುತ್ತಿದ್ದರೆ, ಥೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು, ಘಾಯವಾಗಿದ್ದರೆ, ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೃಕಾಲು ಶೂಲಿ, ಅರ್ಧಾಂಗ ವಾಯು ನಷ್ಟವಾಗುವದು ಸ್ತ್ರೀಯರ ಬಿಳಿಕಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟ್ಟಿ ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿ ದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇದು ವದು ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧಕೊಲೆ ತುಪ್ಪ ದಲ್ಲಿ ತಕ್ಕೊಳ್ಳಬೇಕು. ನೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು ಮುಂದೆ ದಿನ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸ ಬೇಕು ಈ ಔಷಧವನ್ನು ಬೇಸಿಗೆಯಲ್ಲಿ ತಿಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು ಪಥ್ಯ: ಹಸೇಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು

ಬಾಟ್ಲಿ ೧ಕ್ಕೆ ೫ರೂ ಪೋಸ್ಟ್ ಚಾರ್ಜ ೪ ಆಣೆ

ಏಜೆಂಟರು —ಗದಗ -ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗ ಲಕೋಟೆ — ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ಡಾವಣಗೇರಿ-ಡಾವಣಗೆರಿಪೈಸ್ ಪತ್ಯವಹಾರ ಮಾಡಕಕ್ಕೆ ನಾಲಕರ ವಿಳಾಸ

ರೇವಣಸಿದ್ದಪ್ಪ ಹಾಲಪ್ಪ ಡಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ

Ayurveda Oushadalaya GADAG

The best preventive in epidemics of CHOLERA

"BHUVANENDRA"

CHANDRAMAS

Also a sovereign remedy for diarrhoea Stomachache, Vomiting and Nausea

BHUVANENDRA PRODUCTS LTD., Katapadi.

'ಭುವನೇಂದ್ರ'

ಚಂದ್ರಮಸ್ ನಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ

ಹೊಡ್ಡವರಿಗೆ 4ರಿಂದ 8ಜೊಟ್ಟು, ಸಣ್ಣ ಮಕ್ಕಳಿಗೆ 1ರಿಂದ2ಜೊಟ್ಟು ಅವರಿಗೆ ಯಾ ಪಿಮಾಣ ಕಷಾಯದಲ್ಲಿ ದಿನಕ್ಕೆ 2 ಯಾ ೩ ಸರ್ತಿ ಯುಕ್ತ ಕಂದಂತ ಕೊಡುವುದು

ಅತಿಸಾರ ಹೊಟ್ಟನೋವು, ಹಲ್ಲು ನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್, ಕಟಪಾಡಿ, ದ ಕ.

ಉಡ ಕಿಶ್ವರ್ ಡಾ ನಾಯಕ್ಸ್ ಕನ್ಸರ್ವೇಟರಿ ಆಫ್ ಮ್ಯೂಸಿಕ್ ಪಾಠೋಪಕರಣ ಪ್ರ ಉದ ಸಾ ಲೈ ರಫೂಡಿ ಡಾ ಪಿ ಜಿ ಆಫ್ ಸಾರ್ಟೆನ್ಸ್, ಡಾ ಕಾ ಎಂ ಸಿ ಸೈ, L I M, ಮಂಗಳೂರು, ಕೊರಡ್ಡಲು, ನವಭಾರತ ಬುಕ್ ಡಿಪೊ



ಬಾಣಂತಿಯರ ಸಲು ಗಾಗಿಯೇ ನೀರ ಮತ್ತು ಸ್ವಕ್ಕತದ ದೀರ್ಘಸ್ಥಿತಿಯ ನ್ನು ಸೃಷ್ಟಿಸಿ ತಯಾ ರಿಸಲ್ಪಟ್ಟ ಅಮೋಘ ಮಾವ ಮಧುರದ್ರವ ರಸಾಯನ ಅಲ್ಪ ವೌ ಲ್ಯದಿಂದ ಒದವರಿಗೂ, ಸ್ವಾಸ್ಥ್ಯ ಲಗಳಿಗೂ ಸು ಲಭವಾಗಿರುವುದು

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಜಿಸ್ತರು ಮಾಡಲ್ಪಟ್ಟಿದೆ)

ಬಿಡಿಸ್ಥಿತಿಯ ಟ್ಟಿಗಳು ಹಬ್ಬುಕ್ಕಿನಿಂದ ಅಲಭಿಸಗಳಿಗೆ ಬರುವಂತೆ ಅಂದರೆ ಕೇವಲ ೪ ರೂಪಾಯಿಗಳ ಒಂದು ಬಾಣಂತಿತನಕ್ಕೆ ಸಾಕಾಗುವಷ್ಟು ವಿಲಕ್ಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ ವಿ ಶಾಸ್ತ್ರಿ, ಆಯುರ್ವೇದ ಭೂಷಣ, ನಂ ೨ ಕೊಡಿಯಾಲಬೈಲು, ಪ.ಕ

— ಮಕ್ಕಳನ್ನು ಹಡೆಯುವದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ್** ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನೆ ಮಾಡಿದರೆ ಮುಂದ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಶರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿ ಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳ ಬೇಕು ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು

ಪಥ್ಯ:—ಹರಪೀಪಲ್ಲಿ ಬಿಡಬೇಕು ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0 ಪೋಸ್ಟ್ ಚಾರ್ಜು ೧ಆಣೆ

ಮಾಲಕರು —**ಹಾಲಪ್ಪ ಫಕೀರಪ್ಪ ಡಾವಣಗೇರಿ**

ಆಯುರ್ವೇದ ಔಷಧಾಲಯ, ಗದಗ-ಪಿಟಿ

ಏಜಂಟರು:—ಹುಬ್ಬಳಿ ಫಾರ್ಮಸಿ,—ಹುಬ್ಬಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪೂರ— ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ ಚಿಕ್ಕೋಡಿಯಲ್ಲಿ —ಹುಂಬರವಾಡಿ ಸಪ್ಲೈರ್ಸ. ಡಾವಣಗೇರಿ —ಡಾವಣಗೇರಿ ಸ್ಟೆಸ್ಸ್. ಆರ್. ಎಲ್. ಕವಲಿದಾಸ, ಕೆಮಿಸ್ಟ, ಹಾನೇರಿ, ಬ್ಯಾಡಗಿ.

Ayurveda Oushadalaya, GADAG CITY

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತು ಮೂತ್ರದೊದನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚು ವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು ಬಾಟ್ಲಿ 1ರ ದರ ರೂ 3—8—0

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ ಪ್ರಸವವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿ ಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು ಬಾಟ್ಲಿ 1ರ ರೂ 1—12—0

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಎಲ್ಲಾ ನವ ನಮೂನೆಯ ಔಷಧಿಗಳಿಗೆ ಡೂರಿಯುಕ್ತವೆ ಕ್ಯೂಟೆ ಸಂಗ್ರಿ ಬರದಲ್ಲಿ ರೋಗಕ್ಕೆ ತಕ್ಕೆವಾದ ಔಷಧಿ ರವಾನಿಸಲಾಗುವದು ಉಡ ಏಜಂಟರು. —ನವಭಾರತ ಬುಕ್ ಡಿಪೊ

ಅಂತರಂಗದ ಕತೆಗಳು

೧೨ ಕತೆಗಳ ಸಂಗ್ರಹ ಬೆಲೆ ೦—೧೦—೦

ಅಂತರಂಗವನ್ನು ಬೆಳಗಿ, ಬಹಿರಂಗವನ್ನು ಹೊಳೆಸಿ ಹರಿಯುವ ಮಾತು.

ಪ್ರೇಮಪ್ರವಾಹವು ಹೇಗೆ ಹರಿಯುತ್ತದೆ? ಪ್ರಣಯದಲ್ಲಿ ಪ್ರಲಯವಿದೆಯೆ?

ಪ್ರೇಮಪ್ರವಾಹ

ಸ್ವಾರಸ್ಯವಾದ ೫ ಕತೆಗಳ ಸಂಗ್ರಹ ಬೆಲೆ ೦—೬—೦

ಬಹಿರಂಗವಾಗಿ ಅಲ್ಲವಾದರೂ ಅಂತರಂಗವಾಗಿ ನೋಡತಕ್ಕ

ಆರ್ಟ್ ಚಿತ್ರಗಳು

ಹಲವಾರು ಸುಂದರಿಯರ ನೈಜಚಿತ್ರಗಳ ಕಟ್ಟು. ಬೆಲೆ ೦—೬—೦

ಪಾಪಪೂರಿತ ಪಟ್ಟಣಗಳು

ಪ್ರಪಂಚದ ಬೇರೆ ಬೇರೆ ದೇಶಗಳಲ್ಲಿ ವ್ಯಭಿಚಾರ ಸೂಳೆಗಾರಿಕೆಗಳು ಸಮಾಜವನ್ನು ಹೊಕ್ಕು ಅದನ್ನು ಹೇಗೆ ಕೊರೆದು ತಿಂದು ಹಾಕುತ್ತಿದೆ ಎಂಬುದನ್ನು ವಿವರಿಸುವ ಗ್ರಂಥ. ಬೆಲೆ ೧—೪—೦

ವ್ಯಭಿಚಾರಿಣಿ ಯಾರು?

ಸಾಮಾಜಿಕ ನಾಟಕ ಬೆಲೆ ೦—೧೨—೦

ಮಾನವಂತನನ್ನು ನೋಗಿನಿಂದ ನಡೆಸಲ್ಪಡುವ ಅನಾಚಾರವನ್ನೂ ಪವಿತ್ರ ಪ್ರೇಮವು ಕರಿಣ ಪರೀಕ್ಷೆಗೊಳಗಾದರೂ ಕಟ್ಟಕಡೆಗೆ ಅದರ ವಿಜಯ ನಿಶ್ಚಯವೆಂಬುದನ್ನೂ ಮನಗಾಣಿಸುವ ವಿಚಾರ ಕ್ರಾಂತಿಕಾರಕ ನಾಟಕ

ನವಭಾರತ ಪುಸ್ತಕ ಭಂಡಾರ, ಉಡುಪಿ

EDITED PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA

Regd No. M 3618. ವಾರ್ಷಿಕ ಚಂದಾ ರೂ. 4—8—0 ಬಿಡಿ [illegible] 0—1—6 Estd. 1921 ಸ್ಥಾಪನೆ.

ಅಂತರಂಗ

ಉಡುಪಿ

ಅಖಿಲ ಕರ್ನಾಟಕದ ಹೊಸ

ಮಾದರಿಯ ಸಚಿತ್ರ

ವಿನೋದ ವಾರ ಪತ್ರಿಕ.

ವಾರ್ಷಿಕ ಚಂದಾ ರೂ 4—8—0

ಬಿಡಿ ಪ್ರತಿಗೆ ರೂ 0—1—6



ವರ್ಷ 24 ವಾರ 21] ಪ್ರತಿ ಗುರುವಾರ ಹೊರಡುವ ಸಾಹಿತ್ಯಿಕ ವಾರಪತ್ರಿಕೆ [Vol 24 No. 21

Founder SRI A. U. SHETTY.

ಉಡುಪಿ • 1—2—1945 • ಮಂಗಳೂರು

ದಿ ಜುಪಿಟರ್

ಜನರಲ್ ಇನ್ಶ್ಯೂರೆನ್ಸ್

ಕಂಪೆನಿ, ಲಿ, ಬೊಂಬಾಯಿ.

ವಿಮೆಯಿಳಿಸ ಬೇಕೆ?

ವಿಜಂಟರಾಗುವಿರಾ?

—ಹಾಗಾದರೆ ಕೂಡಲೇ

ಪಿ. ಡಿ. ನಾಯಕ್, ಉಡುಪಿ.

ದಕ್ಷಿಣ ಕನ್ನಡದ ಚೀಫ್ ಏಜೆಂಟ್.

—ಇವರಿಗೆ ಬರೆಯಿರಿ—

ಕೋಟಿಗೆ ಮಿಕ್ಕಿ ವ್ಯವಹಾರ

ಈ ವರುಷವೇ ರಜತೋತ್ಸವ!

The Jupiter General Insurance Company Ltd

ನೋಟೀಸು

ಮಂಗಳೂರು ಡಿ. ಮು. ಕೋರ್ಟಿನಲ್ಲಿ.

S. C- ನಂಬ್ರ 506/1944.

ಮಿಸಿಸ್ ಜುಲಿಯಾನ ನೊರೊಂಞ-ಪಾದಿ ಉಂಞಾಯಾನ ಪೋಳಕರ ಬ್ಯಾರಿ ಪ್ರತಿವಾದಿ ಪ್ರತಿವಾದಿಗೆ ಉಂಞಾ ಯಾನೆ ಪೋಳಕರ ಬ್ಯಾರಿ, ಸುಮಾ ಜ್ಯಾರಿಗಳ ಮಗ, ಮಂಗಳೂರು ತಾಲೂಕು ಜೆಪ್ಪಿನಮೊಗ್ರು ಗ್ರಾಮವಹಲ್ಲಿ ಇರುವವರು

ವಾದಿಳು ನಿಮ್ಮ ಮೇಲೆ ಚಾಲಗೇಯನ್ನುವಸೂಲು ಮಾಡುವ ಬಗ್ಗೆ ಪಾಸಲುಗೂಡಿಸಮೇಲೆ ಕಾಣ್ಸಿಸ ವ್ಯಾಜ್ಯವು ಸಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ 1945ನೇ ಇಸ್ವಿ ಫೆಬ್ರುವರಿ ತಿಂಗಳು 8ನೇ ತಾರೀಕಿನಲ್ಲಿ ಪೂರ್ವಾಹ್ನ 11 ಗಂಟೆಗೆ ತಪ್ಪಿಗೆ ಇಟ್ಟಿರುತ್ತದೆ ನೀವು ಬಾವ್ಯಾಗಲೀ ನಿಮ್ಮ ವಕೀಲ ಮೂಲಕವಾಗಲಿ ಹಾಜರಾಗಲಿಕ್ಕೆ ತಪ್ಪಿದಲ್ಲಿ ಒಬ್ಬ ಗೈರು ಹಾಜರಿಯಲ್ಲಿ ವ್ಯಾಜ್ಯವು ತೀರ್ಮಾನವಾಗುವುದು

ಮಂಗಳೂರು ತಾ 23-1-1945 | N E L Peris Vakil for plaintiff

Develop the God given "Talents".

'Children are the 'Talents' given to man by the Lord, and unless parents provide for their full development they will not be fit to enter the Kingdom of Heaven.' said General Garfield, one of the illustrious Presidents of the United States

A Children's Endowment Policy will forestall the financial want which often hampers the full development of your children

THE CANARA MUTUAL ASSURANCE CO., LTD.,

UDIPI (S India)

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು, ಕತ್ತಿಗೆ, ಭುಜ, ಹಲ್ಲು ನೋವುಗಳಿಗೂ ಎದೆನೋವು, ಪಾರ್ಶ್ವವಾಯು ಬಿತ್ತು ಕೊಳ್ಳುವಿಕ, ಚೇಳು ವಿಷ ಮುಂತಾದ ಬೇನೆ ದುಷ್ಟವಾಸ ನೋವಿನು ನೋವೆಲ್ಲಾ ಎಲ್ಲಾ ರೋಗಗಳಿಗೂ ಸಿದ್ಧ

REGD

ಪ್ರಥಮಬಳಕ್ಕೆ ಮತ್ತು ಸಕ ನಮ್ಮಲ್ಲಿ ಸಿಕ್ಕುತ್ತದೆ

ಅಮೃತಾಂಜನ ಲಿಮಿಟೆಡ್.

ಮದರಾಸು

ಬೊಂಬಾಯಿ ಮತ್ತು ಕಲ್ಕತ್ತ.

ಪಾರ್ಥಿವ ಸಂವತ್ಸರದ

ಉಡುಪಿ ಪಂಚಾಂಗ

(1945-'46)

ಸಕಲ ಶುಭಾಶುಭ-ನಿತ್ಯನೈಮಿತ್ತಿಕ ಧರ್ಮ ಕಾರ್ಯಗಳಿಗೆಲ್ಲಾ ಶಾಸ್ತ್ರೋಕ್ತ ರೀತಿಯಿಂದ ಪರಿಶೀಲನೆಯಾಗಿರುವದು

ಬೆಲೆ ಠಿರ 0—4—0

ವಿಶೇಷ ಮಾಹಿತಿಗೆ ಬರೆಯಿರಿ:—

ಉತ್ತೂರು ವಾಸುದೇವ ಉಡುಪ

ಸಂಪಾದಕ,

ಲಂಬಾ ಭವನ ಕಾಫಿ ಕ್ಲಬ್ ಮಾತುಂಗ

ಬೊಂಬೈ.

ಹೊಸವರ್ಷದ ಅಭಿವಂದನೆ

ನಮ್ಮ ಎಲ್ಲಾ ಪಾಲಸಿದಾರರಿಗೂ, ವಿಜಂಟರಿಗೂ, ಕಂಪೆನಿಯ ವೈದ್ಯರಿಗೂ, ಹಿತಚಿಂತಕರಿಗೂ

ನವ ವರ್ಷವು

ಆನಂದದಾಯಕವಾಗಿಯೂ ಅಭಿವೃದ್ಧಿಕರವಾಗಿಯೂ ಪರಿಣಮಿಸಲೆಂದು

ನಾವು

ಹೃತ್ಪೂರ್ವಕವಾಗಿ ಹಾರೈಸುತ್ತೇವೆ.

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ದಕ್ಷಿಣ ಹಿಂದೂಸ್ಥಾನದ ಪ್ರಮುಖ ವಿಜಂಟರು

ಬಾಂಬೆ ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಉಡುಪಿ, ಮದ್ರಾಸು, ಬೆಂಗಳೂರು, ಟ್ರಿವೆಂಡ್ರಂ, ಮಂಗಳೂರು, ಕಲ್ಲಿಕೋಟೆ, ಬೊಂಬಾಯಿ, ಮಧುರಾ

ದಿ ಮೂಲ್ಕಿ ಬೇಂಕ್,

ಲಿಮಿಟೆಡ್

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪಾಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು

The Moolky Bank Ltd.,

Moolky, S K

ಕ್ರೌನ್

ರಬ್ಬರ್ ಸ್ಟ್ಯಾಂಪ್ ಕಂಪೆನಿ

18 ಬಲ್ಮಠ ರಸ್ತೆ, ಮಂಗಳೂರು

ರಬ್ಬರ್ ಮೊಹರು ಸೈನ್ ಬೋರ್ಡ್ ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co.

81 Balmat Road-MANGALORE

Approved firm by the Govt of Mysore Certified by the Agent of the Govt of India in Ceylon. ESTD 1906

ಮುಟ್ಟಾಗುವಿಕೆ

ಹಲವಾರಿಂಗಳಿಂದ ಕಟ್ಟಾಗಿದ್ದರೂ, ಕಪ್ಪಸ ಗರ್ಭಧಾರಣೆ ಆಥವಾ ಇನ್ನಾವ ಕಾರಣವಿದ್ದರೂ—'ಕುಮಾರಿ' (Govt Regd) ನಿಶ್ಚಿತ ನಿರುಪದ್ರವಿ—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಹರಿಯಗೊಡುವುದು; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು, ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ ರೂ 3! ಕೈಮೊಂದಿ ಕೇಸುಗಳಿಗೆ ರೂ 5,(ವಿ ಪ 12 ಆಣೆ ಆಲಾಯದ) Mrs P. DEVEE. K. D. S (N) Tollygunge Calcutta

ಸ್ವಾಕಸ್ವಾ: ಪೊಪ್ಯುಲರ್ ಸ್ಟೋರ್ಸ್, ಮಂಗಳೂರು.

THE VIJAYA STORES, LTD.,

COONDAPUR, S. K.

Vijaya Commercial Cash Certificate

Rs 100 per Certificate.

Rs 104 will be paid against the production of the Certificate after one year or earlier

Your money is safe.

Do not invest on property Jewels etc They depreciate But this will yield 4%

ವಿಜಯಾ ಸ್ಟೋರ್ಸ್ ಲಿಮಿಟೆಡ್,

ಕುಂದಾಪುರ

ವಿಜಯಾ ಕಮರ್ಶಿಯಲ್ ಸರ್ಟಿಫಿಕೇಟುಗಳು

ಒಂದಕ್ಕೆ ರೂಪ್ಯಾ 100-0-0

ಒಂದು ವರ್ಷ ಕಳೆದ ನಂತರ ರೂ. 104 -ಸಿಗುತ್ತವೆ ಬೋನಸ್, ಭಂಗಾರಗಳಲ್ಲಿ ಹಾಕಿದ ಹಣದ ಬೆಲೆಯು ಇಳಿಯುತ್ತದೆ ಈ ಸರ್ಟಿಫಿಕೇಟುಗಳು ಕ್ರಯಕ್ಕು ಬಿಡ್ಡಿ ಕೊಡುತ್ತವೆ

ಹಲವಾರು ಖರ್ಚಾದುವು ——— ನೀವೂ ಪಡೆಯಿರಿ

ಯಾವತ್ತೂ ವಿಪದ ದೆಸೆ, ತಾವತ್ತೆ ಹಿತ್ತಾಳೆ, ಕಂಚು ನೊದಲಾದವುಗಳ ಪಿನಿದಾತ್ರಗಳೂ ಸಾಮಾನ್ಯಗಳೂ ರಕ್ಷಿಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಣಿ ವ್ಯಾಸಂ[illegible],

ರಥಬೀದಿ, ಉಡುಪಿ.

CHAMPAE'S

Snow & Lastrex

Sole Distributers for (India.)

Sukhananda Stores

Santhekatte, UDIPI, S K.

ಧುರೀಣರಲ್ಲಿರುವ ದೌರ್ಬಲ್ಯಗಳು

(ದೋಷಾನ್ವೇಷಿಯಿಂದ)

ಯಂಥೀ ರಾಜಕೀಯದಲ್ಲಿ ಒಂದು ಅಸಾಧಾರಣ ರಿಯಾಯಿತಿ ಕಾಣುತ್ತಿದೆ. ಒಬ್ಬ ಸಾಮರ್ಥ್ಯವಂತನು ಒಬ್ಬೈಯೊಂದು ಮಹತ್ಕಾರ್ಯ ಮಾಡಿ ಧುರೀಣ ಸ್ಥಾನ ಸಂಪಾದಿಸಿಕೊಂಡರಾಯಿತು; ಆ ಮೇಲೆ ಶತಾಸರಾಧ ಮಾಡಿದರೂ ಆ ಗದ್ದುಗೆಯಿಂದ ಇಳಿಯಬೇಕೆಂದಿಲ್ಲ. ಇಂತಹ ಪ್ರಮಾಣವು ಬೇರೊಂದು ದೇಶದ ಜನತೆಯಲ್ಲಿ ಗೋಚರಿಸದು. ಈ ಅಂಧ ಕೃತಜ್ಞತಾ ಭಾವವೊಂದಿಲ್ಲವಾದರೆ, ಮಹಾತ್ಮಾ ಗಾಂಧಿಯವರು ಈಗಲೂ ರಾಜಕೀಯ ಸೂತ್ರಧಾರಿಯಾಗಿರಲು ಸಾಧ್ಯವಿಲ್ಲ. ಗಾಂಧಿಯವರ ಮಹತ್ಕೆ ನಮಗೆ ಮಂದಟ್ಟಾಗಿದೆ; ಅವರ ಆತ್ಮಬಲದ ಅರಿವಾಗಿದೆ; ಆದರೆ ಈ ಶಕ್ತಿಯು ಗಾಂಧಿಜಿಯ ಮುಂಭಾಗದ ವೀಪಿಗೆಯಾಗಬಲ್ಲುದಲ್ಲದೆ ರಾಜಕೀಯಾಕಾರವನ್ನು ಬೆಳಗುವ ಸೂರ್ಯನಾಗಲಾರದಂಬುದನ್ನು ನಾವರಿತಿಲ್ಲ. ಪೂಡಾರಿತ್ವವು ಸಾಮರ್ಥ್ಯಕ್ಕೆ ಜೋರೆಯುವ ಉಡುಗೊರೆ; ಸಂಪೂರ್ಣತೆಯ ಸರಿಣಾಮವಾದ ಉದ್ಭಾರವೇನೂ ಅಲ್ಲ. ಆದ್ದರಿಂದ ನಮ ಖಂದರಲ್ಲೂ ಸಹಜವಾಗಿ ದೋಷಗಳಿವೆ. ನಾವವರ ಪ್ರಾಬಲ್ಯವನ್ನು ಆರಾಧಿಸ.ತಿದ್ದೇವೆ; ಈಗ ಅವರ ದೌರ್ಬಲ್ಯವನ್ನೂ ಚರಿತು ಕೊಳ್ಳೋಣ.

ಮಹಾತ್ಮಾ ಗಾಂಧಿ

ಇವರು ವಸಿಷ್ಟ ಯುಗದ ಓರ್ವ ರಾಜರ್ಷಿ ರಾಜಕೀಯರಂಗದಲ್ಲಿ ಆತ್ಮಶಕ್ತಿಯ ''ಂಗವಲ್ಲಿ ಬಿಡಿಸುವ ಕೆಲಸ ಇವರದು. ಭಾರತೀಯರ ಹಳೆಯ ಧಾರ್ಮಿಕ ಭಾವನೆಯನ್ನು ಗೊಬ್ಬರರಾಗಿ ಹುಗಿದು ಕ್ರಾಂತಿ ಸಸಿಯನ್ನು ಹುಲುಸಾಗಿ ಬೆಳೆಸುವುದೇ ಆಧುನಿಕ ರಾಜಕೀಯ ಕೃಷಿ ಗಾಂಧಿಜೀ ಈ ವರ್ಗದ ಕೃಷಿಕರಲ್ಲ; ಅವರು ಆ ಗೊಬ್ಬರವನ್ನೇ ಬೆಳೆಸುತಿದ್ದಾರೆ. ಅದರ 'ಸುವಾಸನೆ'ಯು ಲೋಕವ್ಯಾಪಿಯಾಗಲೆನ್ನುತ್ತಾರೆ! ಕಾಲಾನುಗುಣವಾಗಿ ನಿರ್ಮೂಲವಾಗಬೇಕಾದುದನ್ನು ಉಳಿಸಲು ನೀರೆರೆಯುತಿದ್ದಾರೆ ಅವರ ಅಹಿಂಸೆ, ಸತ್ಯ, ಸತ್ಯಾಗ್ರಹ, ಅಸಹಕಾರಗಳೆಂದರೆ ಹಳೇ ಕಾಲದ ತಪಸ್ಸಿನ ಆಧುನಿಕ ರೂಪಗಳು. ಹೀಗಾಗಿ ಗಾಂಧೀ ಧುರೀಣತ್ವವು ಗತ ವೈಭವದ ಪುನರುತ್ಥಾನಕ್ಕಾಗಿ; ನವನಿರ್ಮಾಣಕ್ಕಾಗಿ ಅಲ್ಲ. ಅವರು ಗೆಲ್ಲುವದು ಅಸಾಧ್ಯ; ಅವರು ಗೆದ್ದುಕೊಂಡುದೇನಾದರೂ ಇದ್ದರೆ ಅದು ಈ ಕಾಲದ ಸುಂಟರಗಾಳಿಯಿದಿರು ನಿಲ್ಲುವದು ಅಸಂಭವ.

ಪಂಡಿತ ನೆಹರು

ಇವರಷ್ಟು ತೀಕ್ಷ್ಣಸ್ವಭಾವದ ಧುರೀಣರನ್ನೊಬ್ಬರಿಲ್ಲ. ಚುರುಕು ಮೆದುಳು, ಹರಿತ ಭಾವನೆಗಳ ಮನುಷ್ಯ. ಆದ್ದರಿಂದ –ಅವರ ಹೃದಯ ಸಮುದ್ರ ಭೂಮಂಡಲವನ್ನೇ ಆವರಿಸಿದೆ. ಇಂತಹ ಪುಟಿಕ್ಕಿಟ್ಟ ಪುತ್ಥಳಿ ಬೇರೆ ದೊರೆಯಲಾರದು. ಆದರೆ ಒಂದು ಕೊರತೆಯಿದೆ. ಎಲ್ಲವೂ ಹದವಿಲ್ಲದೆ ಹೋದಂತಿದೆ. ಗಾಂಧಿಯವರು ಸತ್ಯಲೋಕದ ನಿಯಮಗಳನ್ನು ಮರ್ತ್ಯಲೋಕಕ್ಕಿಳಿಸುತಿದ್ದಾರೆ; ಅವರಿಗೆರಡನೆಯವರಾದ ನೆಹರುಗಳು ಈ ಲೋಕದವುಗಳನ್ನೇ ಆ ಲೋಕದತ್ತ ಏರಿಸುತಿದ್ದಾರೆ. ಆರ್ತತ್ರಾಣ ಸಂದಿತರಮ ಆಕಾಶಗಾಮಿತ್ವ; ಊರ್ಧ್ವಮುಖ! ವಸ್ತುಸ್ಥಿತಿಯನ್ನು ಹದವಾಗಿ ಬಿಸಿಯೇರಿಸಬೇಕು; ನೆಹರುಗಳು ಕೊಡುವ ಕಾವಿನಿಂದ ಅದು ಕರಗಿ ಆವಿಯಾಗಿ ಬಿಡುತ್ತದೆ! ಸಾಲದುದಕ್ಕೆ ಪಂಡಿತರಲ್ಲಿ ಅಸಹನೆ ಜಾಸ್ತಿ. ಇವೆಲ್ಲವುಗಳಿಂದಾಗಿ ಅವರು ಅಕಿರೇಕಿಯಾಗಿದ್ದಾರೆ; ಅಪರಾಧಿಯಲ್ಲ! ಗಾಂಧಿಯವರಂತೆಯೇ ಇವರೂ ಆರಾಧನೆಗೆ ಮಾತ್ರ ಆರ್ಹರು. ಆದ್ದರಿಂದ ನೀವಿವರ ಅನುಯಾಯಿ ಎಂದು ಹೇಳಿಕೊಳ್ಳಬಹುದು; ಅನುಕರಿಸಲಾರಿರಿ!

ಸರ್ದಾರ್ ಪಟೇಲ್

ನನ್ಮಲ್ಲೂ ಒಬ್ಬ 'ಉಕ್ಕಿನ ಮನುಷ್ಯ' ಸಿದ್ದಾನಾದರೆ ಅದು ಪಟೇಲರೇ! ಅವರ ಹೃದಯವನ್ನಾಗಲೀ ಕಾರ್ಯವನ್ನಾಗಲೀ ಭೇದಿಸುವಂತಹದು ಹುಟ್ಟಿಲ್ಲ. ಸರ್ದಾರರಿದ್ದಾರೋ?-ಸಂಘಟನೆಯೂ ಇದೆ ಗಾಂಧೀ ನೆಹರುಗಳ ಘೋರಣೆಗಳು ನಮ್ಮ ತಲೇ ಮೇಲಿಬ್ಬಗದಲ್ಲಿ ಸುತ್ತುತ್ತಿವೆ; ಪಟೇಲರು ಕಾರ್ಯಾಚರಣೆಗಳು ಕೆಲವೊಮ್ಮೆ ಕಾಲ್ಬಳ್ಳಿಗಳಾಗಿ ಸುತ್ತುಗಟ್ಟುತ್ತವೆ. ಮೂವರ ಉದ್ದೇಶವೂ ಒಂದೇ. ಆ

ಆಗಲೂ ಈಗಲೂ-

1939ರಲ್ಲಿ ಒಪ್ಪಂದದಾಲಿಂಗನ
1945ರಲ್ಲಿ ಒತ್ತಡದಾಕ್ರಮಣ !

ಬರ್ಲಿನಿನಲ್ಲಿ ಕೆಂಪು ಧ್ವಜಾರೋಹಣ ಎಂದು?

ಸಮೂಲನಾಶದ ಮೊದಲೇ ಹಿಟ್ಲರ್ ಸಂಧಿಯಾಚಿಸುವನೆ?

ಬುದನ್ನು ನಾಜೀ ಸರ್ವಾಧಿಕಾರಿ ಊಹಿಸದಾದ. ರಶ್ಯನ್ ಧಾಳಿಯ ನಿರ್ಧಾರಮಾಡುವಾಗ ಹಿಟ್ಲರನ ಆಂತರಂಗದಲ್ಲಿ ಶಂಕೆ ಮತ್ತು ಬಿಂಕಗಳ ತ.ಮುಲ ಯುದ್ಧ ನಡೆದಷ್ಟು ಜೋರಾಗಿ ನಿಶ್ಚಯ ಕೈಕೊಳ್ಳುವಾಗಲೂ ನಡೆಸುದಿಲ್ಲವಂತೆ ಆವನ ಸಲಹೆಗಾರ ಸೇನಾನಿಗಳೂ ಈ ಕುರಿತು ತಿಣ್ಸಲೆನ್ನಾಭಿಪ್ರಾಯ ಸೂಚಿಸಿದ್ದರಂತೆ. ಆದರೆ ನಾಜೀ ಜರ್ಮನಿಯಪಾಪಮಯಕೃತ್ಯಗಳಿಗೆ ಪ್ರತಿಫಲ ಪದೆಯುವ ಯೋಗವಿದ್ದಿತು. ಕಾಲದ ಕೈವಾಡಕ್ಕೆ ಕಟ್ಟುಬಿದ್ದು, ಹಿಟ್ಲರ್ ಈ ಆತ್ಮಘಾತುಕ ಕಲಸವಂಗೀಕರಿಸಿಕೊಂಡ; ಸೋವಿಯೆಟ್ ಗಡಿಯೊಳಗೆ ಸೇನೆ ಹೊಗಿಸಿದ.

ಸ್ಟಾಲಿನ್‌ಗ್ರಾಡಿನಿಂದ ಹಿಮ್ಮುಖ

ಸ್ಟಾಲಿನ್ ಆಗ ತಪಸ್ಸಿಗೆ ಕುಳಿತ ರುದ್ರನಂತೆ-ನಿದ್ರಿತ ಜ್ವಾಲಾಮುಖಿಯಂತೆ-ಇದ್ದ. ಕೆಂಪುಸೇನೆಯು ಪ್ರಳಯದ ಮೊದಲ ಪ್ರಶಾಂತ ಸಮುದ್ರದಂತಿದ್ದಿತು ಇವರು ಕೆರಳಿದಾಗ ಎಂತಹ ಬಿಸಿಯೇರಬಹುದೆಂಬುದನ್ನು ಊಹಿಸಲು ಹಿಟ್ಲರನಿಂದಾಗಲಿಲ್ಲ. ಅವ ರಶ್ಯನ್ ಶಕ್ತಿಯ ತಪ್ಪು ಅಳತೆ ಮಾಡಿದ; ಕಡಿಮೆ ಅಂದಾಜು ಕಟ್ಟಿದ. ನಾಜೀ ನಾಯಕನು ಮಾಡಿದ ಸ್ವಾಪರಾಧಗಳ ಪೈಕಿ ಇದೇ ಅತಿ ಹೆಚ್ಚಿನದ.; ಫ್ರಾನ್ಸ್ ಪತನವಾದೊಡನೆ, ಆ ಮೇಲೆ ಕ್ರೇಟ್ ದ್ವೀಪಕ್ಕಿಳಿಸಿದಂತೆ, ವಿಮಾನ ಮೂಲಕ ಇಂಗ್ಲಾಂಡಿನೊಳಗೆ ಸೇನೆಯಿಳಿಸುತ್ತಿದ್ದರೂ ಆಗಿನ ಇಂಗ್ಲಾಂಡಿನ ಅವತಾರ ಮುಗಿಯುತಿತ್ತು ಎಂದು ತಜ್ಞರನ್ನುತ್ತಾರೆ, ಹಾಗೆ ಮಾಡದುದೇ ಹಿಟ್ಲರನು ಮಾಡಿದ ಅತಿದೊಡ್ಡ ಸ್ವಾಪರಾಧವೆನ್ನುತ್ತಾರೆ. ಆದರೆ ರಶ್ಯದ ಮೆ ಲೆ ಕೈವಾಡಿದುದೇ ಅವ ತನಗೆ ತಾ ಮಾಡಿಕೊಂಡ ಅತಿದೊಡ್ಡ ಹಾನಿಯೆಂಬುದು ನಿರ್ವಿವಾದ ಹಿಟ್ಲರ್ ತಪ್ಪಿಬದ್ದನೆಂಬುದು ಕಳದ ವರುಷದ ವರೆಗೂ ಮನವರಿಕೆಯಾಗದೆ ಹೋಯಿತು. ಧಾಳಿ ಹೂಡುವಂತೆ ರಶ್ಯನ್ ಸೇನೆಯು ಫಿನ್ಲೆಂಡಿನಲ್ಲಿ ಪ್ರದರ್ಶಿಸಿದ ಕೃತಕ ಬೌರ್ಬಲ್ಯವೂ ಸ್ಟಾಲಿನ್‌ಗ್ರಾಡ್ ತನಕವೂ ಹಿಮ್ಮೆಟ್ಟುತ್ತಾ ಹೋದ ರಶ್ಯನ್ ಸೇನೆಯ ತಾತ್ಕಾಲಿಕ ಪರಾಭವಗಳು ಆ ಮೇಲೆ ಹುರಿದುಂಬಿಸಿದವು, ಆದರೆ ಸ್ಟಾಲಿನ್‌ಗ್ರಾಡ್ ಸಮರವು ಯುದ್ಧ ನಕಾತೆಯನ್ನೇ ಬದಲಾಯಿಸಿಬಿಟ್ಟಿತು. ಅಲ್ಲಿಂದ ಹಿಮ್ಮೆಟ್ಟಲಾರಂಭಿಸಿದ ಜರ್ಮನರಿಗೆ ಈ ವರೆಗೂ ಸಲಾಯ ನವಾಗಿದೆ; ಇನ್ನಿದು ಪತನದೊಡನೆಯೇ ಮುಕ್ತಾಯವೇನೋ!

ರಶ್ಯಕ್ಕೆ ಕೃತಜ್ಞತೆಯಿರಲಿ!

ಬ್ಲೊಟ್ಸಿಕ್ ಗಡಿ ನುಗ್ಗುವ ವರೆಗಿನ ಎಲ್ಲಾ ಹೋರಾಟಗಳನ್ನೂ ನಾಜೀ ಭೇತಾಳ ಸೇನೆಯು ಒಂದು ಆಟಿಬಿಂಬಂತೆ ಗೆದ್ದಿದ್ದಿತೆಂಬುದನ್ನು ಮರೆಯಬಾರದು ಸರ್ವಶಕ್ತಿಯಿಂದ ಕಾದಾಡುವ ಆವಶ್ಯಕತೆ ನಾಜಿಗಳಿಗೊದಗಿದುದು-ಸಮಬಲ ಯೋಧರನ್ನಿದಿರಿಸಬೇಕಾಗಿ ಬಂದುದು-ರಶ್ಯನ್ ನೆಲದಲ್ಲೇ. ಸುಮಾರು ಎರಡು ವರುಷಗಳ ತನಕ ಜರ್ಮನ್ ಸೇನೆಯೆಂಬ ಮಹಾಮೇರುವಿನ ಘಾತವನ್ನು ರಶ್ಯವೊಂದೇ ಹೊತ್ತುಕೊಂಡು ದ್ವಿತೀಯರಂಗವಾರಂಭಿಸಿರೆಂದು ಕೂಗುತಿತ್ತು. ರಶ್ಯದ ಉಪಕಾರದಿಂದಾಗಿಯೇ ಜೀವರಿಸಿಕೊಳ್ಳಲು ಆವಧಿದೊರೆತ ಆಂಗ್ಲೋ ಅಮೆರಿಕಾನರು ಕೊನೆಗೆ ಹೇಗೂ ಫ್ರಾನ್ಸಿನೊಳಗೆ ನುಗ್ಗಿದರು. ಜರ್ಮನ್ ಗಡಿಯ ವರೆಗೂ ಆವರನ್ನು ಬರಲುಬಿಟ್ಟು, ರುಂಡಸ್ಟೆಡ್ ಅಲ್ಲಿ ಜರ್ಮನ್ನೋಡಿ ತಾಡನ ಕೊಡಿಕತ್ತಿದ. ಇವನ್ನೂ 1939ರ ಇಂಗ್ಲಾಂಡು ಅಮೆರಿಕಾ ಮತ್ತು ಜರ್ಮನಿಗಳೇ' ಎಂದು ಲೋಕವು ಸ್ಮರಿಸುವಂತಾಯಿತು. ಅಷ್ಟರಲ್ಲೇ ಅಪಾಯಕಾಲದಲ್ಲಿ ನೆರವಾಗುವ ರಶ್ಯಾನನು ಪುನಃ ಮಹದುಪಕಾರ ಮಾಡಿದ್ದಾರೆ. ಇಡಿಯ ಯುದ್ಧಸ್ಥಿತಿಯನ್ನೇ ಬದಲಾಯಿಸಿಬಿಟ್ಟಿದ್ದಾರೆ 'ಬರ್ಲಿನ್ ವರೆಗೋಟ' ಎಂಬ ರಣನಾದ ಮಾಡುತ್ತಾ ಕೆಂಪುಸೇನೆ ನುಗ್ಗಿ ಹೋಗುತ್ತಿದೆ. ಬರ್ಲಿನ್ ರಕ್ಷಣೆಗಾಗಿ ಪಶ್ಚಿಮರಂಗದಿಂದಲೂ ಸೇನೆಯನ್ನು ಹಿಂದೆಗೆದುಕೊಳ್ಳಲು ಜರ್ಮನರು ನಿರ್ಧರಿಸಿದ್ದಾರಂತೆ. ಸರಿ ಇನ್ನು ಪುನಃ ಆಂಗ್ಲೋ ಅಮೆರಿಕಾನರು ಮುಂದೊತ್ತಬಹುದು!

ಹಿಟ್ಲರ್ ಏನಂತೆ?

ಜರ್ಮನ್ ಜನತೆ ನಿರಾಕರಿಸಿಬಿಡಿದೆ; ಜರ್ಮನಿಯ ಹೃದಯಕ್ಕೇನೇ ಪೆಟ್ಟು ಬೀಳುವ ಅಪಾಯವು ಕ್ಷಣಕ್ಷಣವೂ ಎರ್ಪಡುತ್ತಿದೆ 'ಇದಕ್ಕೊಂದು ಪರಿಹಾರವಿದೆ' ಎಂದು ಗೋಬೆಲ್ಸನು ಕೂಡಾ ಆಶ್ವಾಸನೆ ಕೊಡಲಾರ. ಆದ್ದರಿಂದ ಜರ್ಮನಿಯೊಳಗೆ ಆಂತಃಕಲಹವೇಳುವದನ್ನು ಹೆಚ್ಚಿನವರು ನಿರೀಕ್ಷಿಸುತಿದ್ದಾರೆ. ಪಶ್ಚಿಮರಂಗದಲ್ಲಿರುವ ಸುಮಾರು 80 ಡಿವಿಜನ್ ಸೇನೆಗನ್ಯಾಡಿಯಷ್ಟು ನಾಜೀ ಸೇನೆ ಪೂರ್ವರಂಗದಲ್ಲಿ ಈಗಲೂ ಇದೆ ಆದರೆ ಈ ತನಕ ಎಲ್ಲಿಯೂ ರಕ್ಷಣಾವ್ಯೂಹ ರಚಿಸಿಕೊಂಡು ಜರ್ಮನರು ಪ್ರತಿಭಟಿಸಲು ನಿಲ್ಲದಿರುವದೊಂದು ವಿಶೇಷ. ಹಾಗೆ ಸಂಘಟಿಸಿಕೊಳ್ಳಲು ರಶ್ಯಾನರು ಅವಕಾಶವನ್ನೇ ಕೊಡದಿದ್ದುದು ಇದಕ್ಕೆ ಕಾರಣ. ಪೂರ್ವ ಪ್ರಶ್ಯದಲ್ಲಿ ಬಾಲ್ಟಿಕ್ ಕರಾವಳಿಯನ್ನೂ ಆಕ್ರಮಿಸಿಟ್ಟು ಸುಮಾರು 2ಲಕ್ಷ ನಾಜೀ ಸೇನೆಯನ್ನು ಶ್ಯಾರನರು ಬಲೆಯೊಳಗೆ ಸಿಕ್ಕಿಸಿಬಿಟ್ಟಿದ್ದಾರೆ ಹೀಗೆ ಪೂರ್ವರಂಗದಲ್ಲಿರುವ ನಾಜೀ ಸೇನೆಯು ತಿಪ್ಪಲ್ಲಿ ಚೆದರಿಹೋಗಿದೆ. ಜರ್ಮನ್ ಸೇನಾನಿಗಳೆಂದ ಭಯಂಕರ ಅಜಾತಶತ್ರುವಾಗಿರಬಹುದೇ. ಎಂಬ ಸಂದೇಹಕ್ಕೆಡೆಯಿಲ್ಲದೆ ರಶ್ಯದ ಮುಖಪತ್ರ 'ಪ್ರಾವ್ದಾ' ಹೇಳುತ್ತಿರುವಂತೆ, ರಕ್ಷಣಾವ್ಯೂಹ ರಚಿಸಿಕೊಳ್ಳಲು ನಾಜಿಗಳಿಗೆ ಕೊನೆಯ ವರೆಗೂ ಅವಕಾಶ ದೊರೆಯದೆ ಹೋದಲ್ಲಿ ಬರ್ಲಿನಿನ ಭವಿಷ್ಯ ಮುಗಿದಂತೆಯೇ!

ಸಂಧಾನ ಯತ್ನ

ಪದ್ಯದ ದುಃಸ್ಥಿತಿಯನ್ನು ಅಳವಾಗಿ ಯೋಚಿಸಿ, ತಾನು 1939ರ ಅವತಾರವನ್ನು ಪುನಃ ಧರಿಸಬೇಕೆಂದು ಹಿಟ್ಲರ್ ಸಂಕಲ್ಪಿಸಿದ್ದಾನೆಂದು ವಾರ್ತೆ ಹಿಟ್ಲರನಿಂದ ಸರ್ವಾಧಿಕಾರ ಪಡೆದು, ಗೆಸ್ಟೆಪೋ ನಾಯಕ-ನವಹಂಚಿಕೆಗಳ ನವಬ್ರಹ್ಮ-ಹೆಮ್ಲರ್ ಪೂರ್ವರಣರಂಗಕ್ಕೆ ಬಂದುದರಲ್ಲೂ ಇದೇ ಉದ್ದೇಶವಿರಬೇಕೆಂದು ಊಹಿಸಲಾಗಿದೆ ಮೇಲಾಗಿ ನಾಜೀ ಸಂಧದ ಮೇಲೆ ಹೊರತು ಜರ್ಮನ್ ರಾಷ್ಟ್ರದ ಮೇಲೆ ಇಂಗ್ಲಾಂಡು ಅಮೆರಿಕಗಳಿಗಿರುವಷ್ಟು ದ್ವೇಷ ರಶ್ಯಕ್ಕಿಲ್ಲ. ಎಲ್ಲಾ ಅಕ್ರಮಿತ ಯುರೋಪು ರಾಷ್ಟ್ರಗಳಿಗೂ ಒಂದೊಂದು ಸ್ವತಂತ್ರ ಸಮಿತಿಯನ್ನು ಲಂಡನಿನಲ್ಲಿ ಸ್ಥಾಪಿಸಿಕೊಂಡಿರುವ ಇಂಗ್ಲಾಂಡು ಅಂತಹ ಸಮಿತಿಯೊಂದನ್ನು ಜರ್ಮನಿಯ ಪರವಾಗಿ ನಿರ್ಮಿಸಿಕೊಂಡಿಲ್ಲ. ಆದರೆ ಜರ್ಮನರೇ ಇಂಥ ಒಂದು ಸ್ವತಂತ್ರ [illegible] ರಶ್ಯಾ ಕಟ್ಟಿಕೊಂಡಿದೆ. ಜನರಲ್ ವೋನ್ ಸೀಡ್ಲಿಜ್‌ರವರ ನಾಯಕತ್ವದಲ್ಲಿ ಅಂತಹ ದೊಂದು ಮಂಡಲ ಮೋಸ್ಕೋದಲ್ಲಿದ್ದಿದೆ. ಈಗ ಜನರಲ್ ವೋನ್ ಸೀಡ್ಲಿಜ್‌ರವರು ಸಂಧಾನಯತ್ನ ಪ್ರಾರಂಭಿಸುವರೆಂದೂ ರಶ್ಯನ್ ಸೇನಾನಿಗಳೊಡನೆ ಮಾತಾಡಿರುವರೆಂದೂ ಸುದ್ದಿಯಿದೆ. ಇಲ್ಲವೆನ್ನಲಾಗುವದಿಲ್ಲ. ಒಳಿನಿನಲ್ಲಿ ತಮ್ಮ ಸರ್ವಾಯಕ ಹಾಗೂ ಕಾಂತಿದಾಯಕ ಮಿತ್ರ ಸರಕಾರವೊಂದಿರುವದಕ್ಕಿಂತ ಹೆಚ್ಚಾಗಿ ರಶ್ಯವು ಜರ್ಮನಿಯಿಂದ ಆಪೇಕ್ಷಿಸುವದಿಲ್ಲ. ವಾರ್ಸಾ ಕ್ರಮಣ ಮಾಡಿ ಲುಬ್ಲಿನ್ ಸರಕಾರವನ್ನು ಅಲ್ಲಿಹೊಗಿಸಿದಂತೆಯೇ ಬರ್ಲಿನನ್ನು ಸ್ವಾಧೀನ ಪಡಿಸಿ ಅಲ್ಲಿ ಈ ಸ್ವತಂತ್ರ ಕಮಿಟಿಯನ್ನು ರಶ್ಯವು ಸ್ಥಾಪಿಸಲೂ ಒಹುದು. ಜರ್ಮನ್ ವಿದೇಶ ಮಂತ್ರಿ ವೋನ್ ಜೇನರು ಸಂಧಿಯತ್ನಕ್ಕಾಗಿಯೇ ವಿಶ್ವದಿಗೆ ಹೋಗಿದ್ದಾರೆಂಬ [illegible] ಕಾರ್ಯವೂ ಇರ. ಎಲ್ಲವೂ ಊಹಾಪೋಹಗಳೇ ಹೊರತು ಅಧಿಕೃತ ವಾರ್ತೆಗಳಲ್ಲ. ಹೇಗಿದ್ದರೂ ಕಷ್ಟಕಾಲದಲ್ಲಿ ಕೆಂಗಾಲಾಗದ ರಶ್ಯವು, ಹುರಿಸಿನ ಹೆಚ್ಚಿನಿಂದಕೂಡ ತಪ್ಪಿ ಬೀಳುವ ಸಂಭವವಿಲ್ಲ ಭವಿಷ್ಯಾಕಾಶದಲ್ಲಿ ಹಾರಾಡುವಭಾಗ್ಯವು ಕೆಂಪುಧ್ವಜಕ್ಕೇನೇ ವಿನಃ ಎಂಬುದು ನಿರ್ವಿವಾದ

ಉಡುಪಿ ಮಧ್ವಮತ

ಶಿವಳ್ಳಿ ಬ್ರಾಹ್ಮಣರ

ಧರ್ಮ ಛತ್ರ

ಇದೇ ತಾ 8-10-44ರಿಂದ

ರಾಮೇಶ್ವರ ದೇವಸ್ಥಾನದ ಬಡಗು ಬೀದಿಯಲ್ಲಿ ತೆರೆಯಲ್ಪಟ್ಟಿದೆ

ಎಲ್ ನರಸಿಂಗ ರಾವ್, ಪ್ರೊಪ್ರೈಟರ್

ಉಡುಪಿ ಬೋರ್ಡಿಂಗ್ ಎಂಡ್ ಲಾಜಿಂಗ್, ಮುಂಬಯಿ

— ಸ್ವಾತಂತ್ರ್ಯ ದಿನಾಚರಣೆ — ಭಾರತಕ್ಕಾಗಿರುವ ಪ್ರಾಣಹಾನಿ

ಸೇವಾಗ್ರಾಮದ ವಿಶೇಷ ಘಟನೆ. ಪರ್ಲ್ ಬಕ್ಕರ ಭಾಷಣ

ಜನವರಿ ತಾ 26ರ ಸ್ವಾತಂತ್ರ್ಯದಿನದಲ್ಲಿ ಸಭೆ ಮೆರವಣಿಗೆಗಳಂತಹ ಪ್ರದರ್ಶನಗಳೇನನ್ನೂ ಮಾಡದೆ ಧ್ವಜವಂದನೆ, ಪ್ರತಿಜ್ಞಾವಾಚನ ಮತ್ತು ವಿಧಾಯಕ ಕಾರ್ಯಾಚರಣೆಗಳಿಂದಲೇ ಮುಗಿಸಬೇಕೆಂದು ಗಾಂಧೀಜಿಯ ಸ್ಪಷ್ಟಸೂಚನೆಗಳಿದ್ದರೂ ದೇಶದ ಮುಖ್ಯ ಕಡೆಗಳಲ್ಲೆಲ್ಲಾ ಪ್ರತಿಬಂದಕಾಜ್ಞೆಗಳು ಜ್ಯಾರಿಯಾಗಿದ್ದುವು ಅಷ್ಟಿಲ್ಲ ಹಲವರ ದಸ್ತಗಿರಿಗಳೂ ಆಗಿವೆ ಮಿಸಗೇ ಸ್ಥಳಗಳಲ್ಲೇ ಧ್ವಜವಂದನೆ ಮತ್ತು [ಪ್ರತಿಜ್ಞಾವಾಚನ ನಡೆದಿತ್ತಲ್ಲದೆ, ಸರಕಾರದ ದಾಸನೋಲ್ಲಂಘನೆಯಾಗಲೀ, ಗಾಂಧೀಜಿಯ ಸೂಚನೋಲ್ಲಂಘನೆಯಾಗಲೀ ಎಲ್ಲಿಯೂ ನಡೆಯಲಿಲ್ಲ

ಸೇವಾಗ್ರಾಮದ ಘಟನೆ

ಸೇವಾಗ್ರಾಮದಲ್ಲಿ ಧ್ವಜಾರೋಹಣ ಮತ್ತು ಖಾದಿ ವಿತರಣೆಯೊಂದಿಗೆ ಆ ದಿನದ ಕಾರ್ಯಾರಂಭವಾಯಿತು. ಆ ಮೇಲೆ ಬೇರೆಬೇರೆ ಸಂಸ್ಥೆಗಳ 250 ಸದಸ್ಯರು ಗ್ರಾಮ ಶುಚೀಕರಣಕ್ಕಾಗಿ ಕತ್ತಿ, ಕೈಕೊಡಲಿ, ಕಸಬರಿಕೆಗಳೊಂದಿಗೆ ದಳದಳವಾಗಿ ಮೆರವಣಿಗೆ ಹೊರಟರು ಸೇವಾಗ್ರಾಮದಿಂದ 50 ಗಜ ಹೋಗುವದರೊಳಗೆ ಎಡಿಶನಲ್ ಡಿಸ್ಟ್ರಿಕ್ಟ್ ಮೆ ಜಿಸ್ಟ್ರೇಟರೊಂದಿಗೆ ಬಂದಿದ್ದ ಪೋಲೀಸು ಪಾರ್ಟಿಯೊಂದು ಆ ವಂದನ್ನು ತಡೆಗಟ್ಟಿ ನಿಲ್ಲಿಸಿತು. ಹೀಗೆ ಸಾಲಾಗಿ ಮುಂದೊತ್ತುವದು ನಿಷೇಧಾಜ್ಞೆಯ ವೆಂದು ಪೋಲಿಸರ ಆಜ್ಞೆಯಾಯಿತು. ಮಹಾತ್ಮರ ಮೊಮ್ಮಗ ಪಾನು ಗಾಂಧಿಯವರ ನಾಯತಕ್ಕದಲ್ಲಿ ಹೂಟಿದ್ದ ಸೇವಾ ಶಿಬಿರದ ಸದಸ್ಯರ ದಳವು ಚದರಲಿಪ್ಪಲಿಲ್ಲ "ನಾವೊಂದು ದಳವಾಗಿಯೇ ಮುಂದೊತ್ತಲು ತರಬೇತಿ ಪಡೆದವರಾದುದರಿಂದ ಚಿದರಲಾರೆವು" ಎಂದು ಹೇಳಿ, ಹಳ್ಳಿಗ ನೈರ್ಮಲ್ಯದ ಹೊರತು ಧ್ವಜವಂದನಾದಿ ಪ್ರದರ್ಶನಗಳಿಗೆ ತಾವೀಗ ಹೋಗುವದಲ್ಲವೆಂದು ಖ ನು ಗಾಂಧಿಯವರು ವಿವರಿಸಿದರು. ಆದರೆ ಪೋಲೀಸರು ಅವರನ್ನು ಮುಂದೊತ್ತಲು ಬಿಡಲಿಲ್ಲ ಆಗ ಆಶ್ರಮ ಸದಸ್ಯೆಯೆಲ್ಲಾ ಅಲ್ಲಿಯೇ ರಸ್ತೆಯಲ್ಲಿ ಕುಳಿತುಬಿಟ್ಟರು ಎರಡು ಘಂಟೆ ಕಳೆಯಿತು ಅಷ್ಟರಲ್ಲಿ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರಿಗೆ ಈ ಸುದ್ದಿ ತಲಪಿ, ಪೋಲೀಸರು ಹಿಂದೆಗೆಯುಬೇಕೆಂದು ಅವರ ಆಜ್ಞೆ ಬಂತು ಒಡನೆ ಪೋಲೀಸರು ಕಾಲ್ದೆಗೆದರು; ಆ ಮೇಲೆ ಯಾವ ಆತಂಕವೂ ಇಲ್ಲದೆ ಸ್ವಯಂಸೇವಕರು ಗ್ರಾಮ ಶುದ್ಧೀಕರಣಕಾರ್ಯ ಮಾಡಿಬಂದರು

ಅಮೇರಿಕದ ನ್ಯಾಯೋರ್ಕಿನಲ್ಲಿ ಭಾರತ ಸ್ವಾತಂತ್ರ್ಯ ದಿನದ ಘೋಷಣ ಸಮಾರಂಭದಲ್ಲಿ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ಹಿಂದೀ ಸ್ವಾತಂತ್ರ್ಯ ಸಮರವನ್ನು ವರ್ಣಿಸಿ ಹೇಳಿ 'ಈ ರೀತಿ ಅಹಿಂಸಾತ್ಮಕ

ಗಾಂಧಿಜೀಯ ಸಂದೇಶ.

"ಹಿಂದ ಸ್ಥಾನದ ಸ್ವಾತಂತ್ರ್ಯದೊಡನೆ ದಬ್ಬಾಳಿಕೆಗೊಳಗಾಗಿರುವ ಲೋಕದ ಸಮಸ್ತ ಜನಾಂಗಗಳೂ ಆಂತೆಯೇ, ದಬ್ಬಾಯಿಸುತ್ತಿರುವ ಸಾಮ್ರಾಜ್ಯವಾದಿ ಇಂಗ್ಲಾಂಡು ಮತ್ತು ಇತರ ಸಾಮ್ರಾಜ್ಯಗಳೂ ಸ್ವಾತಂತ್ರ್ಯ ಹೊಂದಲು ಬದ್ಧವಿವೆ" - ಎಂದು ಗಾಂಧಿಜೀಯವರು ಸ್ವಾತಂತ್ರ್ಯ ದಿನದ ಸಂದೇಶದಲ್ಲುಂದಿರುವರು. ಆ ದಿನದ ಪೋಲಿಸ್ ಪ್ರತಿಭಟನೆಯನ್ನು ವಸ್ತಿಸದ ಸೇವಾಗ್ರಾಮದ ಸ್ವಯಂಸೇವಕರ ವರ್ತನೆಯನ್ನು ಸಮರ್ಥಿಸಿ "ಇಂತಹ ಸಂದರ್ಭಗಳಲ್ಲಿ ಅಧಿಕಾರಿಕ್ಕೆ ಬಗ್ಗುವದು ಶುದ್ಧ ಹೇಡಿತನ ಹೊರತು ಅಹಿಂಸೆಯಲ್ಲ" ಎಂದಿದ್ದಾರೆ. "ನನ್ನ ಮಟ್ಟಿಗೆ ನಿಜವಾದ ಸ್ವಾತಂತ್ರ್ಯವು ದೇವತ್ವವಾಗಿ ಮತಾಂತರಗೊಳ್ಳುವದು. 'ಸ್ವರಾಜ್ಯವು ನಮ್ಮ ಜನ್ಮಸಿದ್ಧ ಹಕ್ಕು' ಎಂಬ ಸುಲಭ ಮಂತ್ರವನ್ನು ತಿಲಕರು ಉಪದೇಶಿಸಿದ್ದಾರೆ .ಆ ಮಂತ್ರವನ್ನು ಸತ್ಯ ಮತ್ತು ಅಹಿಂಸೆಯ ಮೂಲಕವೇ ಕಾರ್ಯಕ್ಕಿಳಿಸತಕ್ಕದ್ದೆಂದು ನನ್ನ ಸೂಚನೆ ಮತ್ತು ಮಿಲಿಯಾವಧಿ ಜನರು ವಿಧಾಯಕ ಕಾರ್ಯಕ್ರಮಗಳನ್ನು ಕೈಗೊಳ್ಳುವದೇ ಆದನ್ನು ಸಾಧಿಸಲಿರುವ ಏಕಮಾತ್ರ ಮಾರ್ಗವೆಂದು ನನ್ನ ಖಂಡಿತಾಭಿಪ್ರಾಯ"- ಎಂದ ಮಹಾತ್ಮರು ಉಪದೇಶ

ವಾಗಿ ಸ್ವಾತಂತ್ರ್ಯ ಹೋರಾಟ ನಡೆದ ಒಂದು ನಿದರ್ಶನವು ಯಾವ ಕಾಲದಲ್ಲೂ ಯಾವ ರಾಷ್ಟ್ರದಲ್ಲೂ ದೊರಕುವಂತಿಲ್ಲ' ಎಂದರು

ಪರ್ಲ್ ಬಕ್ಕರ ಸ್ಪಷ್ಟ ವಾಣಿ

ಲೋಕ ಪ್ರಸಿದ್ಧ ಅಮೇರಿಕನ್ ಲೇಖಕಿ ಮಿಸ್ ಪರ್ಲ್ ಬಕ್ಕರು 'ಚೀನವೊಂದನ್ನು ಬಿಟ್ಟರೆ ಬೇರಾವ ರಾಷ್ಟ್ರದಲ್ಲೂ ಆಗದಷ್ಟು ಪ್ರಾಣ ಹಾನಿಯು ಈ ಯುದ್ಧದಿಂದಾಗಿ ಹಿಂದುಸ್ಥಾನ ಕ್ಕಾಗಿದೆ ಕಳೆದ ವರುಷದ ಭೀಕರ ಬರಗಾಲವು ಯುದ್ಧದ ಪ್ರತ್ಯಕ್ಷ ಪರಿಣಾಮ ಆಹಾರದ ಬಿಕ್ಕಟ್ಟಿಗೆ ಸ್ವಾಭಾವಿಕ ಕಾರಣಗಳೆಲ್ಲ ನಿಜ್ಜೆಯ ರಹ್ಯದಲ್ಲಿದ್ದಂತೆ, ಈ ದಿನದ ಭಾರತದಲ್ಲಿ, ಅಸಹನೀಯ ದಬ್ಬಾಳಿಕೆಯಿಂದಾಗಿ ಜನಿಸಿರುವ ಕ್ರೋಧೋದ್ರೇಕವು ಜನರನ್ನು ಹುಚ್ಚುಗಟ್ಟಿಸಿ,ಎಲ್ಲಾ ವಿಧದ ಪ್ರತಿಬಂಧಗಳನ್ನೂ ಸಟ್ಟು ಬಿಡಲಣಿಯಾಗಿದೆ" ಎಂದು ಖಂಡತುಂಡ ವಾಣಿಯಲ್ಲಿಂದಿದ್ದಾರೆ

ಜಗನ್ನಾಯಕ ನೆಹರು

ಬಿಶೋಪ್ ಮ್ಯಕೊನೋಲರು ಇಂಗ್ಲಾಂಡಿನ ಅಸಹನೆಯ ನ್ನು ಟೀಕಿಸುತ್ತಾ "ಹಿಂದುಸ್ಥಾನದ ಸನ್ನಿಯ ಕುರಿತು ಇಂಗ್ಲಾಂಡಿನ ಉದಾಹರಣೆಯೇನೆಂದು ಅಮೆರಿಕನರು ಕೇಳುತ್ತಿರುವದಕ್ಕಾಗಿ ಇಂಗ್ಲಂಡಿನ ನಮ್ಮ ಮಿತ್ರರು ಉದ್ರೇಕಗೊಂಡಿದ್ದಾರೆ ಹಿಂದುಸ್ಥಾನವು ಇಂಗ್ಲಂಡಿನ ಗೃಹ ಸಂಬಂಧೀ ಕೃತ್ಯವೆಂದು ಅವರ ಹೇಳಿಕೆ. ಆದರೆ ಇಂಗ್ಲಾಂಡು ನಮ್ಮ ಮಿತ್ರರಾಷ್ಟ್ರವಾಗಿರುವ ವರೆಗೆ ಹಿಂದೀ ಪ್ರಶ್ನೆಯು ಅವರಂತೆಯೇ ನಮಗೂಸಂಬಂಧಿಸಿದುದು ನೀಲಾಗಿ ಪಂಡಿತ ನೆಹರುಗಳ ವಿಷಯವಾಗಿ ಬ್ರಿಟಿಷರು ವಹಿಸಿರುವ ಧೋರಣೆಯು ಇಡಿಯ ಪ್ರಪಂಚಕ್ಕೆ ಸಂಬಂಧಿಸಿದುದು ಸದಭಿಪ್ರಾಯಗಳಿಗೆ ಸನ್ಮಾನ್ಯತೆಯೆಂಬುದೊಂದಿದೆ ಈ ಮಾನ್ಯತೆಯ ಹೆಸರಿನಿಂದ ಜಾಗತಿಕ ಅಂತರ್ಯದ ಓರ್ವ ನಾಯಕನನ್ನು ಈ ರೀತಿ ತಿರಸ್ಕಾರದಿಂದೆ ಕಾಣುವದನ್ನು ನಾವು ಧಿಕ್ಕರಿಸುತ್ತೇವೆ" ಎಂದಿದ್ದಾರೆ.

ಲಂಡನಿನಲ್ಲಿ ಸಭೆ.

ಲಂಡನಿನಲ್ಲಿಯೂ ಭಾರತ ಸ್ವಾತಂತ್ರ್ಯ ದಿನಾಚರಣೆಯು ಸಂಭ್ರಮಪೂರ್ವಕ ನಡೆದಿದ ಆ ಸಂಬಂಧದ ಸಭೆಯೊಂದರಲ್ಲಿ ಲೇಬರ್ ಸದಸ್ಯೆ ಶ್ರಿನ್ ಡೇವಿಸರಂದರು–"ತಾನು ಬ್ರಿಟಿಷ್ ಸಾಮ್ರಾಜ್ಯವನ್ನು ಒರ್ವಾಸ್ತು ಪಡಿಸುವದಕ್ಕಾಗಿ ಪ್ರಧಾನಿ ಪಟ್ಟಕ್ಕೇರಿಲ್ಲ ಎಂದು ಚರ್ಚಿಲ್ಲರಂದಿದ್ದಾರೆ. ಆದರೆ ನಾವವರನ್ನು ಇನ್ನೂ ಅನುಕರಿಸಿದಲ್ಲಿ ಬ್ರಿಟಿಷ್ ಸಾಮ್ರಾಜ್ಯವು ದಿವಾಳಿಯಾಗುವದನ್ನು ಪ್ರತ್ಯಕ್ಷ ಕಾಣಬೇಕಾಗುವದು" ಪ್ರಸಿದ್ಧ ಬ್ರಿಟಿಷ್ ಲೇಖಕ ಲೇಖಿಕೆಯರಾದ ಪ್ರೊ ಜೋರ್ಜ್ ಕೇಟ್ಲನ್.ಮತ್ತು ವೆರಾ ಬ್ರಿಟ್ಟನ್ರೂ,ಜೋನ್ ಹಿಂಡ್, ಡಾಂಗ, ನೀಗ್ರೋ ನಾಯಕ ಬಂಕೋಲಿ, ಡಾ! ಗಂಗುಲಿ ಮೊದಲಾದವರೂ ಧರೀಣರ ಬಿಡುಗಡೆ ಮತ್ತು ರಾಷ್ಟ್ರೀಯ ಸರಕಾರ ಸ್ಥಾಪನೆಗಳನ್ನು ಸಮರ್ಥಿಸಿ, ಚರ್ಚಿಲ್ ಸರಕಾರದ ಸದ್ಯದ ಧೋರಣೆಯನ್ನು ಕಟುವಾಣಿಗಳಲ್ಲಿ ಖಂಡಿಸಿ ಭಾಷಣವಿತ್ತಿದ್ದಾರೆ

ನೋಟೀಸು

ಉಂದಾಪುರ ಡಿ ಮು ಕೋರ್ಟಿನಲ್ಲಿ

O S 199/1944 R. I A 1 1945

ತಾದಿರು ಅಬ್ಬಕ್ಕ ಸೆಟ್ತಿ ಕೂಡಾ

ಪ್ರತಿವಾದಿರು ನಾಮ್ಮ ಸೆಟ್ತಿ ಕೂಡಾ

ಪ್ರತಿವಾದಿರು 18 ಕೃಷ್ಣ ಸೆಟ್ತಿ ಕೆಂಜನಾಮಲಕ್ಷ್ಮಿ ಸೆಟ್ತಿ ಮಗಳು 34 ನಾಗಮ್ಮ 35 ಮ್ಯಾನರ ಸುಬ್ಬಾಂಬು 36 ಮ್ಯಾನರ ಶ್ರೀಮತಿ 37 ಮ್ಯಾನರ ಕಸ್ತೂರಿ 38 ಮ್ಯಾನರ ಸಂಗಮ್ಮರೀಲ 39 ಮ್ಯಾನರ ತಿಮ್ಮಮ್ಮ 40 ಮ್ಯಾನರ ನಾರಾಯಣ 11ನೇ ಪ್ರತಿವಾದಿಯು ಕೊರಗಮ್ಮ ಸೆಟ್ತಿ ಮಕ್ಕಳು 35ರಿಂದ 40ನೇ ವರೆಗಿನವರ ಗಾರ್ಡಿಯನ್ ತಾಯಿ ಪದ್ರಿ ಕೊರಗಮ್ಮ ಸೆಟ್ತಿ ಸಂಕಮ್ಮ ಮಗಳು

53 ಮ್ಯಾನರ ಸಂಜೀವಿ 54 ಮ್ಯಾನರ ಸುಧಾಕರ 54 ಮ್ಯಾನರ ಭಾಸ್ಕರ 56 ಮ್ಯಾನರ ಸರೋಜಿನಿ 57 ಮ್ಯಾನರ ಹೇಮಾವತಿ 58 ಮ್ಯಾನರ ಸವಿತಾ 18ನೇ ಪ್ರತಿವಾದಿಯ ಮಕ್ಕಳು ಇವರ ಗಾರ್ಡಿಯನ್ ತಾಯಿ 18ನೇ ಕೃಷ್ಣಿಸದ್ರಿ ಲಕ್ಷ್ಮಿ ಸೆಟ್ತಿ ಮಗಳು

18 ಮತ್ತು 53ರಿಂದ 58ನೇ ವರೆಗಿನವರು ಉಡ್ಪಿ ತಾಲ್ಲೂ ಪಂದಾಡಿ ಗ್ರಾಮದ ಸಲ್ತಮನೆಯಲ್ಲಿರುವವರು 34ನೇ ಪ್ರತಿವಾದಿಯು ಕುಂದಾಪುರ ತಾಲ್ಲೂ ಖಂಬದ ಕೋಣೆ ಗ್ರಾಮದಲ್ಲಿರುವವಳು 35ರಿಂದ 40ನೇ ವರೆಗಿನವರು ಗೋಳಿಹೊಳೆ ಗ್ರಾಮದ ಕುಡೂರು ಶಾಲೆ ಚಿಕ್ಕಯ್ಯ ಸೆಟ್ರಿ ಮನೆಯಲ್ಲಿರುವವರು

ಸದ್ರಿ ಪ್ರತಿವಾದಿರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ

ಮೇಲೆ ಹೆಸರು ಕಾಣಿಸಿದ ವಾದಿರು ತಮಗೆ ಕುಟುಂಬದ ಆಸ್ತಿಗಳಿಂದ ಒಕ್ಕತಕ್ಕ ಆಕಸ್ಮಾರ್ಜಿತ ಕಾಣವನ್ನು ಬರಮಾಡಿಕೊಳ್ಳುವರೆ ಮೇಲಿನ ವಾಹೆಯನ್ನು ನೀವು ಕೂಡಾ ಪ್ರತಿವಾದಿರ ಮೇಲೆ ಜರಗಿಸಿರುತ್ತಾರೆ ಮತ್ತು ನಮ್ಮನ್ನು ಈ ದಾವೆಯಲ್ಲಿ ಸಲ್ಲನುಂಟು ಪ್ರತಿವಾದಿರನ್ನಾಗಿ ಸೇರಿಸಿಕೊಳ್ಳಬೇಕೆಂತ ಮೇಲಿನ R. I A 1/1945ನೇಗೆ ಅರ್ಜಿ ಸಹಾ ಮಾಡಿರುತ್ತಾರೆ ಅದರಿಂದ ವ್ಯಾಜ್ಯಕ್ಕೆ ಉದಾಹರಣೆಯಾಗಲೀ ವರ್ಜಿಗೆ ಅಕ್ಷೇಪವಾಗಲೀ ಬಿದ್ದರೆ ತಾ 10 2 1945ನೇ ದಿವಸ ಬೆಳಿಗ್ಗೆ 11 ಘಂಟೆಗೆ ಮೇಲಿನ ಕೋರ್ಟಿನಲ್ಲಿ ಹಾಜರಾಗಿ ಜ್ಞಾಪೀರು ಮಾಡಿಕೊಳ್ಳತಕ್ಕದ್ದು ತಪ್ಪಿದರೆ ನಿಮ್ಮನ್ನು ಯಕ್ಪಾರ್ಟೆ ಮಾಡಲಾಗುವುದೆಂಬ ಸಂಗತ್ತಿಯನ್ನು ತಿಳಿಸಿರುತ್ತದೆ

By order of The court

K. Venkappa Shetty

Vakil for plaintiffs

Koondapoor, 22—1—45

The Canara Industrial & Banking Syndicate, Ltd

(Incorporated in British India with limited liability)

HEAD OFFICE

NOTICE.

The Register of Members and Transfer Books of the Syndicate will remain closed from the 20th February 1945 to 19th March 1945, both days inclusive

(By order)

"Mukund Nivas" UDIPI. 28th January, 1945

K. V Shenoy,
Secretary

ತಾ. 3—2—45 ರಿಂದ ತಲವಾರ್‌ನವರ

ರಮೋಲ ಮತ್ತು ಸುಂದರ್ ನಟಿಸಿದ

ಶುಕ್ರಿಯಾ

ತಾ 8—2—45 ರಿಂದ

ನಮ್ಮ ನಿಮ್ಮೆಲ್ಲರ ಅದೃಷ್ಟ ಕಿಸ್ಮತ್

ಮುಮತಾಜ್ ಶಾಂತಿ, ಅಶೋಕ ಕುಮಾರ್

ಷಾ ನವಾಜ್ ಮೊದಲಾದವರು

ಶ್ರೀರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡ್ಪಿ.

The Canara Banking Corporation Limited.

(Incorporated in British India Liability of Members is limited)

Estd 1906

Head Office **UDIPI**, (S. K.)

Authorised Capital	Rs 25,00,000/-
Issued & Subscribed Capital	Rs 16,00,000 -
Paid up Capital	Rs 14,55,165 -
Reserves	Rs 4,15,000/-
Total working Capital	exceed one crore & 24 lakhs

ANNOUNCEMENT

Branches of the BAnk have been opened at HUBLI & DHARWAR on 4—12—1944.

ನವಯುಗ

ಉಡುಪಿ, ಗುರುವಾರ ೧೫-೨-೧೯೪೫

ಒಂದು ವಿಜ್ಞಾಪನೆ

ಕಾರ್ಕಳ ತಾಲೂಕು ಪಳ್ಳಿಗ್ರಾಮ–ಗ್ರಾಮಕ್ಕೊಂದೇ ಬೋರ್ಡುಶಾಲೆ. ಶಾಲೆಯಲ್ಲಿ ಸುಮಾರು130 ಮಕ್ಕಳಿದ್ದರೂ ಉಪಾಧ್ಯಾಯರಿಬ್ಬರೆ! ಉತ್ತಮ ಶಿಕ್ಷಣವಿದೆಯಲು ನನ್ನವಳ್ಳಿಗೆ ಅರ್ಹತೆಯಲ್ಲ. ಈತಿರಿದಲು. ಹೆಚ್ಚಿಗೆ ಕೆಂಸಉಪಾಧ್ಯಾಯರೊಬ್ಬರ ನೇಮಕಕ್ಕಂಬಗ್ಗೆ ಮನವಿಯನ್ನು ಗ್ರಾಮಸ್ಥರು ಬೋರ್ಡಿಗೆ ಬರ ಕೊಂಡಿದ್ದರು. ಬೋರ್ಡಿಗೆ ಮೌನತಾಳಿತು? ಗ್ರಾಮಸ್ಥರ ಸಾರ್ವಜನಿಕ ಏಳಿಗೆಯನ್ನು ಬಯಸುವಾರದೇ? ಇನ್ನೂ ಗ್ರಾಮಸ್ಥರಿಲ್ಲಿ ಶಾಲೆಗೆ ಹೋಗದ ಮಕ್ಕಳು ಸುಮಾರು 200 ಇದ್ದರೂ ಇವರಿಗೆ ಒಲೆಗೆ ಸೇರಲು ಅವಕಾಶವಿಲ್ಲ! ಬಡಹಳ್ಳಿಯ ದೀನಮಕ್ಕಳ ಭಾವಿ ಏಳಿಗೆಗಾಗಿ ವಿದ್ಯಾ ಡಿ. ಬೋರ್ಡಿನವರು ಕೈಪಾಡ್ಯವನ್ನಿಡಬೇಕಾಗಿ ಗ್ರಾಮಸ್ಥರು ಕೋರಿಕೆ.

ಲಲಿತಕಲಾ ಕರ್ನಾಟಕ ಸಂಗೀತ ಸಭಾ, ಮುಂಬಯಿ

ಇವರು ಉಡುಪಿ ಬೋರ್ಡ ಹೈಸ್ಕೂಲಿನ 'ಪೀಪಲ್ಸ್ ಹಾಲಿ'ನ ಸಹಾಯಾರ್ಥವಾಗಿ ಇದೇ ಫೆಬ್ರವರಿ ತಾ. ೯ ರವಿವಾರ ಬೆಳಿಗ್ಗೆ ೯-೩೦ಕ್ಕೆ ಸರೇಲ್ ಜಂಕ್ಷನಿನ ಬಳಿ ದಾಮೋದರ ಭೆಕರ್ನೇ ಹಾಲಿನಲ್ಲಿ

ಸಂಶಯ ಸಾಮ್ರಾಜ್ಯ

ವೆಂಬ ನೂತನ ಸಂಗೀತ ನಾಟಕವನ್ನು ಅಭಿನಯಿಸುವರು.

ಮುಂಬಯಿಯಲ್ಲಿರುವ ಕನ್ನಡಿಗರೆಲ್ಲ ಪ್ರೋತ್ಸಾಹಿಸಬೇಕಾಗಿ ವಿನಂತಿ

ಕಾರ್ಯದರ್ಶಿ,
ಪೀಪಲ್ಸ್‌ಹಾಲ್ ರಚನಾ ಸಮಿತಿ, ಬೋರ್ಡ್ ಹೈಸ್ಕೂಲ್, ಉಡುಪಿ.

ಹಿಂದೂಸ್ಥಾನದ ಚಿತ್ರರತ್ನಗಳೆಲ್ಲೊಂದು ಮಹತ್ವಾದ ಚಿತ್ರ.

ಅದು ನಮ್ಮ ನಿಮ್ಮೆಲ್ಲರ ಭಾಗ್ಯ

ಕಿಸ್ಮತ್

ಎಣೆಯಿಲ್ಲದ ಜೊತೆ ಮಮತಾಜ್ ಶಾಂತಿ ಮತ್ತು

ಅಶೋಕ ಕುಮಾರ್ ಜೊತೆಗೆ ಷಾ ನವಾಜ್, ಪಿಥಾ

ವಾಲಾ, ಚಂದ್ರಪ್ರಭಾ ಮೊದಲಾದವರು.

ತಾ. 6—2—45 ರಿಂದ

ಶ್ರೀರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡ್ಡಿ.

ಬರುವ ಚಿತ್ರ—

— ಶಾಂತಾರಾಮರ ಶಾಕುಂತಲಾ. —

ದಕ್ಷಿಣ ಕನ್ನಡ.

ಮಂಗಳೂರು

ಜನವರಿ ಅಂತ್ಯದೊಳಗೆ–ಗಲಾಯಿಸಬೇಕಾಗಿದ್ದ ಎಂಡನೆಯ ಕಂತಿನ ೨/೩ ಅಕ್ಕಿಯನ್ನು ಈ ತನಕ ಸಲಾಯಿಸಲಾಗಿದ್ದವರು, ಫೆಬ್ರವರಿ ೦ ಅಂತ್ಯದೊಳಗೆ ಅದನ್ನು ಸಲಾಯಿಸಬಹುದೆಂದೂ, ಆ ತನಕ ಒಂದು ರೂಪಾಯಿ ಕಡಿತಮಾಡಲಾಗುವುದಿಲ್ಲವೆಂದೂ ಜಿ| ಕಲೆಕ್ಟರರು ಪ್ರಕಟಿಸಿರುತ್ತಾರೆ. ಆದರೆ ೧/೩ನೆಯ ಮೊದಲನೆಯ ಕಂತನ್ನೇ ಕೊಡದವರಿಗೆ ಈಗ ಕಡಿತಮಾಡಲಾಗುತ್ತಿದೆ. ಫೆಬ್ರವರಿ ತಾ. ೨೮ರ ಅನಂತರ ತಂದೊಪ್ಪಿಸುವ ಎಲ್ಲ ಅಕ್ಕಿಯ ಮೇಲೂ ಕಡಿತಮಾಡಲಾಗುವುದು.

ಸಾರ್ವಜನಿಕ ವಿಚಾರವಾಗಿ–ಕಲೆಕ್ಟರಗೊಂದು ಪ್ರತಿಕಟನೆಯನ್ನು ಹೊರಡಿಸುತ್ತ ನದಿಯ ಮತ್ತು ನೆಲವರ್ಗದ ಮೂಲಕವಾಗಿ ಬರುವ ಕಟ್ಟಿಗೆಗಳನ್ನು ಹಂಚು ಕಾರ್ಖಾನೆ ವಿಶ್ವ ಮತ್ತಿತರ ಕೈಗಾರಿಕೆ ಸಂಸ್ಥೆಗಳು ಕಲೆಕ್ಟರರ ಪರ್ಮಿಟು ಇಲ್ಲದೆ ಯಿ ಪಡಕೊಳ್ಳಬಹುದು. ಈ ಕುರಿತು ಪೋಲೀಸರು ಯಾವ ತರದ ಅಡ್ಡಿ ಆತಂಕವನ್ನೂ ಮಾಡದಂತೆ ಅವರಿಗೆ ಆಜ್ಞಾಪಿಸಲಾಗಿದೆ. ಅಲ್ಲದೆ, ಬರುವ ಪಳಗಾಲ ಪೂರ್ತಿ ಕಟ್ಟಿಗೆ ಸರಬರಾಯಿಯು ವಿತರಿಸಲ್ಪಟ್ಟ ಒಬ್ಬ ವ್ಯಕ್ತಿಗೆ ಒಟ್ಟಿಗೆ ೨ ವ.ಘಕ್ಕಿಂತ ಇಳಿಸುವುದಿಲ್ಲವೆಂದೂ ಸಾರ್ವಜನಿಕರು ತಮ್ಮ ಮಳೆಗಾಲದ ಸಂಗ್ರಹದ ಕುರಿತು ಈಗಿಂದಲೆ ಯೋಚಿಸುವುದು ಒಳ್ಳೆಯದು. ಸಮುದ್ರದ ಮೂಲಕ ಬಾಯಿ ಎಲ್ಲಾ ಕಟ್ಟಿಗೆಯನ್ನೂ ಕೋಮನ್‌ವೆಲ್ತ್ ಟ್ರಸ್ಟ್ ಇವರಿಗೇನೇ ಕೊಡಕ ತಕ್ಕದ್ದು.

ಹೊರಗಿನಿಂದ ಗೋಣಿಯಲ್ಲಿ—ಬರುವ ಅಕ್ಕಿ ಎರಡು ಮಣ (೯೭೪ ಕಿ/ಬರಾತಲು) ಎಂದು ಪರಿಗಣಿಸಲ್ಪಟ್ಟಿರೂ, ಹಸುಗೆ ಅಂಗಡಿಯ ವರಿಗಾಗಿ ಆದರ ಪ್ರಮಾಣವನ್ನು ಈ ರೀತಿ ವಿಂಗಡಿಸಲಾಗಿದೆ. ಪ್ರಥಮ ತರಗತಿಯ ಅಕ್ಕಿ ಗೋಣಿಗೆ ೭೫ ಸೇರು, ದ್ವಿತೀಯ ತರಗತಿ ೭೫ ಸೇರು, ತೃತೀಯ ತರಗತಿ ೦೦ ಸೇರು.

ರೇಶನ್ ಪರಿಮಾಣವನ್ನು–ಈಗ ಇರುವ ೧೫ ಪಾವನ್ನು ಅರ್ಧ ಸೇರಿಗೆ ಏರಿಸಬೇಕೆಂದು ಪ್ರಾಂತೀಯ ಸರಕಾರದೆಡೆಗೆ ಕೇಳಿಕೊಳ್ಳುವ ನಗರದ ಸಾವಿರಾರು ಮಂದಿಯ ಸಹಿಯನ್ನೊಳಗೊಂಡ ಮನವಿಯೊಂದನ್ನು ವಕೀಲ ಶ್ರೀ. ಎಸ್ ನರ್ಸಪ್ಪಯ್ಯನವರು ಮದ್ರಾಸ್ ಸರಕಾರಕ್ಕೆ ಕಳುಹಿಸಿದ್ದಾರೆ. ವಿನಂತಿಯು ಮಾನಸಲ್ಪಡುವುದೆಂದು ನಂಬಲಾಗಿದೆ.

ನಗರದೊಳಗೆ ಹುಲಿ–ತಾ. ೫ರಂದು ಮಂಜಾನೆ ಕದ್ರಿ ಕಂಬಳದ ಬಳಿಯ ಮನೆಯೊಂದರ ಹಿಂ ತೋಟದಲ್ಲಿ ಚಿಕ್ಕ ಹುಲಿಯೊಂದು ಕಾಣಿಸಿಕೊಂಡಿತು. ಹೂ ಕೊಯ್ಯುತ್ತಿದ್ದ ಹುಡುಗನ ಮೇಲೆ ನೆಗೆದು ಗಾಯಗೊಳಿಸಿತು. ಇಷ್ಟರಲ್ಲಿ ಜನರು ಕೂಡಿ ಗುಲ್ಲೆಬ್ಬಿಸಲು ಹುಲಿಯು ಮತ್ತೆರಡಿಂದು ಹಿತ್ತಲಿಗೆ ಹಾರಿತು. ಕೊನೆಗೆ ಗೋ ವೈದ್ಯ ಪೀಟರ್ಸ್ ಅವರು ಹುಲಿಯನ್ನು ಗುಂಡಿಕ್ಕಿ ಕೊಂದರು.

ಸ್ವಾತಂತ್ರ್ಯ ದಿನದಂದು–ಕಮ್ಯುನಿಸ್ಟರ ಕೆಲವು ಪ್ರಕಟನೆಗಳನ್ನು ವಿತ್ತಯಿಸುತ್ತಿದ್ದ, ಬೀಡಿ ಕೆಲಸಗಾರ ಸಂಘದ ಅಧ್ಯಕ್ಷ ಶ್ರೀ ಯಂಡಣ್ಣ ಮತ್ತು ಕಾರ್ಯದರ್ಶಿ ಶ್ರೀ. ಕಿಂಗ್‌ಸ್ಲಿ ಸುರ್ವಾರನ್ನು ಬಂಧಿಸಿ ೭ ದಿನ ದಿವಾಂಧಿನಲ್ಲಿರಲಾಗಿದೆ

ಶ್ರೀ. ದಿನಕರ ದೇಸಾಯಿ– ಅವರು ಮಂಗಳೂರಿಗೆ ಆಗಮಿಸಿದ್ದರು. ಶ್ರೀಯುತರು ಕನ್ನಡ ಮತ್ತು ಕೊಂಕಣಿ ಭಾಷೆಗಳ ಸುಪ್ರಸಿದ್ಧ ಲೇಖಕರೆಲ್ಲದೆ ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯ, ಟ್ರೇಡ್ ಯೂನಿಯನ್ ಕಾಂಗ್ರೆಸ್, ಬೊಂಬಾಯಿಯ ಆಹಾರ ಸಮಿತಿ ಮತ್ತು ಕರ್ನಾಟಕ ವಿಶೇಷಣ ಸಮಿತಿಯ ಸದಸ್ಯರೂ ಆಗಿರುವರು ಇಲ್ಲಿಯ ಹಲವಾರು ಸಂಘಸಂಸ್ಥೆಗಳನ್ನು ಪ್ರಮುಖ ಮಹನೀಯರನ್ನೂ ಕಂಡು ಸಂಭಾಷಿಸಿದರು.

ಸತ್ಕಾರ ಕೂಟ–ಒಂದನ್ನು ಸ್ಥಳೀಯ ಕಲ್ಚರಲ್ ಎಸೋಸಿಯೇಷನ್‌ನವರು ಶ್ರೀ. ದಿನಕರ ದೇಸಾಯಿಯವರಿಗಾಗಿ ಬಿಜೈ ಶಾಲೆಯಲ್ಲಿ ಏರ್ಪಡಿಸಿದ್ದರು ಉಪಾಹಾರವಾದ ಬಳಿಕ ಶ್ರೀ. ದೇಸಾಯಿಯವರು ತಮ್ಮ ಸ್ವಂತ ಕೈತಿಗಳಾದ ಹಲವಾರು ಕನ್ನಡ, ಕೊಂಕಣಿ ಕವನಗಳನ್ನು ಓದಿದರು.

ಜಿಲ್ಲಾ ಪತ್ರಿಕೋದ್ಯೋಗಿಗಳ ವಾರ್ಷಿಕ ಸಭೆಯು ಅದರ ಕಾರ್ಯಾಲಯದಲ್ಲಿ ತಾ. ೫ರಂದು ಸಂಜೆ ಜರಗಿ, ನುಂಗಿನ ವರ್ಷಕ್ಕೆ ಹೊಸ ಕಾರ್ಯಕಾರಿಗಳ ನೇಮಕವಾಯಿತು. ಹೊಸ ಸಮಿತಿಯಲ್ಲಿ, ಶ್ರೀಗಳಾದ ಡಿ. ಪುಟ್ಟಸ್ವಾಮಿ ಅವರು ಅಧ್ಯಕ್ಷರು, ಕೆ. ಎಸ್. ಆಡಿಗ-ಉಪಾಧ್ಯಕ್ಷ ಕೆ. ಸದಾಶಿವ ಕಾರ್ಯದರ್ಶಿ ಮತ್ತಿತರರು ೬ ಮಂದಿ ಕಾರ್ಯಕಾರಿಗಳಾಗಿ ಆರಿಸಲ್ಪಟ್ಟಿರುವರು.

ಜಿಲ್ಲಾ ಸ್ಕೌಟ್ ಎಸೋಸಿಯೇಶನ್–ವಾರ್ಷಿಕ ಸಭೆಯು ಕಾ. ೨೮ರಂದು ಡಾ| ಕೇಶವ ಪೈ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಕೆ. ದೇವಪ್ಪ ಶೆಟ್ಟಿರವರಿಂದ ಸ್ಕೌಟ್ಸಿಸಂ ಕುರಿತು ಉಪನ್ಯಾಸವೊಂದು ಏರ್ಪಡಿಸಲ್ಪಟ್ಟಿತ್ತು. ಕಳೆದ ಕೆಲವು ವರ್ಷಗಳಲ್ಲಿ ತಮ್ಮ ತಮ್ಮ ಕಡೆಯ ಅಂಗಡಿಯು ವರಿಂದ ಸಿಕ್ಕಿರುವ ಕಪ್ಪು ತೊಂದರೆಗಳ ಕುರಿತು ಮಾತಾಡಿದರು. ಒಂದು ಆಹಾರ ಸಮಿತಿಯನ್ನು ರಚಿಸಬೇಕೆಂದು ನಿರ್ಣಯವಾಯಿತು ದಕ್ಷಿಣ ಕನ್ನಡ ಜಿಲ್ಲಾ ಆಹಾರ ಕೌನ್ಸಿಲಿಗೆ ಹರಿಜನ ಸದಸ್ಯನೊಬ್ಬನನ್ನು ಸೇರಿಸಿಕೊಳ್ಳಬೇಕೆಂದೂ ಸರಕಾರವನ್ನು ಪ್ರಾರ್ಥಿಸುವ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಕೋ ಆಪರೇಟಿವ್ ಬಿಸ್ಕತ್ ಫ್ಯಾಕ್ಟರಿಗಳ ಸ್ಥಾಪನೆಯಲ್ಲಿ ಹರಿಜನರಿಗೂ ಸೌಲಭ್ಯ ಕೊಡಿಸುವಂತೆ ಸರಕಾರವನ್ನು ಕೇಳಿಕೊಳ್ಳುವ, ಪ್ರಕೃತಿಯ ರೇಶನ್ ಡಿಪೋಗಳಲ್ಲಿ ವಾರದ ಕಡೆಯ ದಿನವಾದ ಶನಿವಾರ ದಿವಸ ರೇಶನ್ ಆಹಾರ ಸಾಮಗ್ರಿಗಳನ್ನು ಕೊಂಡುಕೊಳ್ಳಲು ಹರಿಜನರಿಗೆ ಬಹಳ ಕಷ್ಟವಾದ ಕಾರಣ ಹರಿಜನರಿಗೆ ವಾರದ ಕೊಲಿಯು ವಾರದ ಕಡೆಯ ದಿವಸವಾದ ಶನಿವಾರ ಸಿಕ್ಕುವುದರಿಂದ, ಆಂದೇ ಆಹಾರ ಸಾಮಗ್ರಿಗಳನ್ನು ಪಡಕೊಳ್ಳಲು ಇರುವ ಸರ್ಕಾರದವನ್ನು ತೆಗೆದು ಹಾಕಿ ಅದಿಕೃವಾರ ಬಿಳಿಗ್ಗೆಯ ತನಕ ರೇಶನ್ ಆಹಾರವನ್ನು ಪಡಕೊಳ್ಳುವ ಹರಿಜನರಿಗೆ ಅವಕಾಶವನ್ನು ಸರಕಾರವು ಕಲ್ಪಿಸಿ ಕೊಡಬೇಕೆಂದು ಸ್ಪಾರ್ಥಿಸಿಕೊಳ್ಳುವ ನಿರ್ಣಯ ಆಹಾರ ಸ್ಟೋರ್‌ಗಳಲ್ಲಿ ಬಡ ಹರಿಜನರಿಗೆ ತೊಂದರೆಗಳಾಗುತ್ತಿವೆ, ಇನ್ನು ಮುಂದೆಕ್ಕೆ ಹರಿಜನರಿಗೆ ಕೊಂದರೆಯಾಗದಂತೆ ಮಾನ್ಯ ಜಿಲ್ಲಾ ಕಲೆಕ್ಟರ್‌ರವರೊಂದಿಗೆ ಪ್ರಾರ್ಥಿಸಿಕೊಳ್ಳುವ ನಿರ್ಣಯಗಳಾದವು. ಇನ್ನೊಂದು ಸಭೆಯು ಇದೇ ಫೆಬ್ರವರಿ ತಿಂಗಳ ತಾ. 11ನೇ ಆದಿತ್ಯವಾರ ಸೇರಲಿದೆ.

ಮಾಧ್ವ ಸಂಘ ಮದ್ರಾಸ್– ಮಾಧ್ವ ಸಮಾಜದ ಮಾಧ್ವ ಸಂಘದವರು ಈ ವರ್ಷದ ಮಧ್ವ ನವಮಿ ಮಹೋತ್ಸವವನ್ನು ಅಧಿಕವಾದ ವಿಜೃಂಭಣೆಯಿಂದ ಆಚರಿಸಿದರು. ಮಾರ್ಡನ್ ಕೇಪ್ ಪ್ರೊಪ್ರೈಟರ್ ಶ್ರೀ. ಕೆ. ಸೀತಾರಾಮರಾಯರು ದಾನಶೂರಸಾದವೆಂಬ ಕನ್ನ ದಿವ್ಯ ಧನಸಮೃದ್ಧಿಯ ಒಂಭತ್ತು ದಿನಗಳ ಕಾರ್ಯ ಕಲಾಪಗಳಿಗೆ ಅವಶ್ಯಕತೆ ಕೊಟ್ಟುದರಿಂದ ಈ ಸಂತಾಂಧಿಕ್ಕೆ ತುಂಬ ಕಳೆಯೇರಿತು. ಈ ಸಂಧರ್ಭದಲ್ಲಿ ಶ್ರೀಗಳಾದ ಮಾನ್ಯ ಗೋಪಾಲಕೃಷ್ಣಾಚಾರ್ಯ ಶಿರೂರ ಮಠ, ಯು. ವೆಂಕಟಕೃಷ್ಣರಾವ್ ಎಲ್. ಎ. ಎಲ್. ಬಿ. ಮಧ್ವಾಡಿ ಜನಾರ್ದನಾಚಾರ್ಯ ವೇದಾಂತ ಶಿರೋಮಣಿ ಉಡುಪಿ ಸೀತಾರಾಮಾಚಾರ್ಯ ಕನ್ನಡ ಪಂಡಿತ. ಕೆ. ಎಲ್. ನ್ಯಾಯಾಧ್ಯ ಶಾಸ್ತ್ರಿ ವೈ. ಹೋಸಂಧ್ಯಾಯ, ಪಿ. ಪಿ. ಲಕ್ಷ್ಮೀನಾರಾಯಣ ಉಪಾಧ್ಯಾಯ, ಕರ್ಕಿ ಜ್ಯೋತಿಷ ವಿದ್ವಾನ್, ಇವರು ಭಾಷಣಗಳನ್ನಿತ್ತರು. ಮಧ್ವನವಮಿ ದಿನ ಬೆಳಿಗ್ಗೆ 8 ಗಂಟೆಯಿಂದ ಮಧ್ವ ವಿಜಯ ಪಾರಾಯಣ 12 ಗಂಟೆಗೆ ಮಹಾಪೂಜೆ ನಂತ್ರ ಬ್ರಾಹ್ಮಣ ಸಂತರ್ಪಣೆ ಮೊದಲಾದ ವು ಶ್ರೀ. ಕೆ. ಸೀತಾರಾಮರಾಯರ ಉದಾರಾಶ್ರಯದಿಂದ ನಡೆದು ಆಪರಾಹ್ನ 3 ಗಂಟೆಗೆ ಶ್ರೀ. ಬಿ ಶ್ರೀನಿವಾಸ ಭಟ್ಟರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಸಂಸ್ಕೃತ ವಿದ್ಯಾರ್ಥಿಗಳಿಗೂ, ವಿದ್ವಾಂಸರಿಗೂ ಸಂಭಾವನೆಗಳು ಕೊಡಲ್ಪಟ್ಟವು. ಮೈಸೂರು ಮಹಾರಾಜಾ ಕಾಲೇಜಿನ ಪ್ರಿಯುಕ್ತ ಪ್ರೊ. ಕೆ. ಸೀತಾರಾಮ ರಾಯರು ಮತ್ತು ಅವರ ಸಹೋದರ ಧನದಾನ ಶೇವೆಯೆಂದಿಗೆ ಗಂಗಾಧರೇಶ್ವರ ದೇವಾಲಯಕ್ಕೆ ಪ್ರದಕ್ಷಿಣೆಯಾಗಿ, ಕೃತಜ್ಞತೆಯಿಂದ ರಾತ್ರಿ ಪೂಜೆ ವಗೈರೆ ಆಯಿತು. ಮರುದಿವಸ ಗೋವಿಂದ ದಾಸರ ಸ್ಮಾರಕವಾದ ಭೃತ್ಯಸಾಹಾಯವು ವಿಶಿಷ್ಟ ರೀತಿಯಿಂದ ನಡೆದು, ಅಪರಾಹ್ನ ನಾಲ್ಕು ಗಂಟೆಗೆ ಶ್ರೀ ರಾಜಾರಾಮ್ ಎಸ್. ಎ. ಇವರು "ಹರಿದಾಸ ಕೃತಿಯ ಸರ್ವ ಕರ್ತೃತ್ವ" ಎಂಬ ವಿಷಯವನ್ನು ಕೆ.ರಿತು ಸರಣಿ ಭಾಷಣವಿತ್ತರು. ಅಧ್ಯಕ್ಷರಾದ ಶ್ರೀನಿವಾಸ ಭಟ್ಟರು ಅದನ್ನು ಸವಧಿಗೆ ಉಪನ್ಯಸಿಸಿದರು. ಶ್ರೀಕೆ. ಸೀತಾರಾಮರಾಯರ ಮತ್ತು ಇತರರ ಉಪಕಾರ ಸ್ಮರಣೆಗಳೂ ಧನ್ಯವಾದಗಳೂ ನಡೆದು, ರಾತ್ರಿ ಪೂಜಾ, ಭೋಜನ, ಪ್ರಸಾದ ವಿತರಣೆಗಳೊಡನೆ ಸಮಾರಂಭವು ತುಂಬ ವೈಭವದಿಂದ ಜರಗಿತು.

THE

Vijaya Stores, Ltd.,

(Incorporated under the Indian Companies Act 1913)

Registered Head Office: COONDAPUR, S. K.

Registered On 28th October, 1944
Liabilities of Members Limited.

Authorised Capital Rs. **3,00,000**
Issued Capital Rs. **50,000**

Divided into 10 (A) Shares of Rs. 1,000 each
10 (B) Shares of Rs. 500 each
100 (C) Shares of Rs. 250 each
100 (D) Shares of Rs. 100 each at par

"Consent of the Central Government has been received to the issue under the Defence of India Rules, 94-A,. "It must be distinctly understood that in giving this consent the Government of India do not take any responsibility for the financial soundness of any schemes or for the correctness of any of the statements made or opinions expressed with regard to them."

BOARD OF DIRECTORS:

1. Sri Mangalore Narappa, Special Magistrate
President & Managing Director
The Badavara Bhandhu Printing Press Ltd Mangalore.
Sri Narayan Guru Bank Ltd,
Chairman, The Mysore Speedwell Engineering Works, Ltd.,
Mangalore (*Chairman*)
2. Sri. B Narsappa. Superintendent,
The Badavara Bandhu Printing Press, Ltd ,& Estate Superintendent
Sri Narayana Guru Bank, Ltd., Mangalore.
3 Sri Hatady Monappa Shetty, Timber Merchant & Landlord Coondapur
4 Sri. A. S Vittel Shetty, Merchant & Landlord, Coondapur.
(*Managing Director*)
6 Sri A Muthaya Shetty, Merchant & Landlord Coondapur
5 Sri K Thimappa Shetty, Merchant, Coondapur,
7. Ignatius Menezes, Esq Merchant, Coondapur

LEGAL ADVISER:
Sri. Kotkebail Sanjiva Shetty, B. Sc., LL. B., Advocte, Coondapur.

BANKERS:
Sri Narayan Guru Bank, Ltd.,

AUDITOR:
Sri P. M Hegde, B. A., B. L., Registered Accountant.

This is the only Company of the kind in the Coondapur Taluk Join in the expansion scheme of the business of this large Stores of the District.

WANTED.

Travelling Representatives to represent our Medical Specialities in Mysore State, Coorg and South Kanara. Decent terms offered for capable persons. Persons with previous experience in canvassing only need apply *Apply to:*

Manager,
Oriental Pharmaceutical Works,
Guntakal.

ಮೈಸೂರು ಸತ್ರ.

(ನಮ್ಮ ಸ್ವಂತ ಸುದ್ದಿಗಾರರಿಂದ).

ಚುನಾವಣಾ ಪ್ರಚಾರ–ಮೈಸೂರಿನಲ್ಲಿ ಚುನಾವಣಾ ಪ್ರಚಾರದ ಪ್ರಾರಂಭೋತ್ಸವವನ್ನು ಕಾಂಗ್ರೆಸ್ ಮುಂದಾಳುಗಳಾದ ಶ್ರೀ. ಎನ್. ಸಿ ತಿಮ್ಮ ರೆಡ್ಡಿಯವರು 21ನೇ ತಾರೀಕು ಶ್ರೀ ಎಸ್. ರಂಗ ರಾಮಯ್ಯನವರ ಅಧ್ಯಕ್ಷತೆಯಲ್ಲಿ ಸೇರಿದ್ದ ಸಭೆಯಲ್ಲಿ ನೆರವೇರಿಸಿದರು.

ಅದೇ ದಿನ ಕಾಂಗ್ರೆಸ್ ಕೆಲಸಗಾರರ ಸಭೆಯು ಸೇರಿ ನಗರದ ಪ್ರತಿ ಒಂದು ಮೊಹಲ್ಲಾಕ್ಕೂ ಒಂದೊಂದು ಸಮಿತಿಗಳನ್ನು ಏರ್ಪಡಿಸಿ ಸಂಚಾಲಕರನ್ನು ನೇಮಿಸಲಾಯಿತು

ವಾರ್ಷಿಕೋತ್ಸವಗಳು—ತಾರೀಕು 21-1-15ನೇ ಭಾನುವಾರ ರಂಗಚಾರ್ಲು ಸ್ಮಾರಕ ಭವನದಲ್ಲಿ ಅಖಿಲ ಮೈಸೂರು ಮಸ್ಕಳ ಕೂಟದ ವಾರ್ಷಿಕೋತ್ಸವವು ಪೌರ ಸಭಾಧ್ಯಕ್ಷರಾದ ಶ್ರೀ. ಆರ್ ಆರ್-ಬೇಂದ್ರೋರೆಯವರ ಅಧ್ಯಕ್ಷತೆಯಲ್ಲಿಯೂ, ಒಕ್ಕಲಿಗ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ಒಕ್ಕಲಿಗ ಆಸ್ಥಾಪಾಲಯದಲ್ಲಿ ನಗರದ ಎರಡನೇ ನ್ಯಾಯಾಧೀಶರಾದ ಶ್ರೀ. ಎಲ್. ಮುನಿ ಸ್ವಾಮಿಯವರ ಅಧ್ಯಕ್ಷತೆಯಲ್ಲಿಯೂ ನಡೆದುವು.

ಲೆನಿನ್ ದಿನಾಚರಣೆ—21-1-45ನೇ ದಿನ ಲೆನಿನ್ ದಿನಾಚರಣೆಯು ಪ್ರಯುಕ್ತ ಸಾರ್ವಜನಿಕ ಕೆರೆಯಲ್ಲಿ ಬಹಿರಂಗ ಸಭೆ ನಡೆಯಿತು. ಶ್ರೀ. ಎಂ. ಎಸ್. ಜೋಯಿಸರವರು ಭಾಷಣ ಮಾಡಿದರು.

ಸ್ವಾತಂತ್ರ್ಯದಿನಾಚರಣೆ-ಸ್ವಾತಂತ್ರ್ಯ ದಿನಾಚರಣೆಯು ಮೈಸೂರಿನಲ್ಲಿ ಆಚರಿಸಲ್ಪಟ್ಟಿತು. ಬೆಳಿಗ್ಗೆ ಶ್ರೀ. ಎಸ್. ರಂಗರಾಮಯ್ಯನವರು ಮೈಸೂರು ಧ್ವಜವನ್ನೂ ಶ್ರೀ. ಹೆಚ್. ಕೆ. ಕುಮಾರ ಸ್ವಾಮಿಯವರು ರಾಷ್ಟ್ರಧ್ವಜವನ್ನೂ ಹಾರಿಸಿದರು: ಮಧ್ಯಾಹ್ನ ಸ್ವಯಂಸೇವಕರು ಖಾದಿ ಮೂರಾಟ ಮಾಡಿದರು. ಸಾಯಂಕಾಲ ಬಹಿರಂಗ ಸಭೆ ನಡೆದು ಅನೇಕರು ಪ್ರತಿಜ್ಞೆ ಸ್ವೀಕರಿಸಿದರು. ದೇಶೀಯ ವಿದ್ಯಾಶಾಲೆಯಲ್ಲಿಯೂ ಧ್ವಜಾರೋಹಣ, ನಡಲುವ ಪ್ರಭೇ ನಡೆಯಿತು

ಪತ್ರಿಕೋದ್ಯೋಗಿಗಳ ಸಮ್ಮೇಳನ—ಸಂಸ್ಥಾನದ ಮೂರನೇ ಪತ್ರಿಕೋದ್ಯೋಗಿಗಳ ಸಮ್ಮೇಳನವು ತುಮಕೂರು ಜಿಲ್ಲಾ ಸಿದ್ಧಗಂಗಾ ಕ್ಷೇತ್ರದಲ್ಲಿ 28,29, ತಾರೀಕುಗಳಲ್ಲಿ ತಾಯನಾಡು ಪತ್ರಿಕಾ ಸಂಪಾದಕರಾದ ಶ್ರೀ. ಪಿ ಆರ್. ರಾಮಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು ಸುಮಾರು 250 ಮಂದಿ ಪತ್ರಿಕಾ ಪ್ರತಿನಿಧಿಗಳು ಹಾಜರಿದ್ದರು. ಸಮ್ಮೇಳನದ ಅಂಗವಾಗಿ ಅಖಿಲ ಭಾರತ ಪತ್ರಿಕಾ ಪ್ರದರ್ಶನವು ಏರ್ಪಡಿಸಲಾಗಿತ್ತು. ಸಿದ್ಧಗಂಗಾ ಕ್ಷೇತ್ರದ ಮಠಾಧಿಪತಿಗಳು ಪ್ರದರ್ಶನದ ಪ್ರಾರಂಭೋತ್ಸವವನ್ನು ನೆರವೇರಿಸಿದರು. ಪ್ರದರ್ಶನಕ್ಕೆ ಸುಮಾರು 500ಕ್ಕೆ ಮೇಲ್ಪಟ್ಟ ಪತ್ರಿಕೆಗಳು ಬಂದಿದ್ದವು. ಸ್ವಾಗತ ಸಮಿತಿಯ ಅಧ್ಯಕ್ಷರಾದ ಶ್ರೀ. ಕೆ. ರಂಗಯ್ಯಂಗಾರ್ಯರವರು ಸ್ವಾಗತ ಭಾಷಣ ಮಾಡಿದ ನಂತರ ನ್ಯಾಯ ವಿಧಾಯಕ ಸಭಾಧ್ಯಕ್ಷರಾದ ಶ್ರೀ. ಡಿ. ಹೆಚ್. ಚಂದ್ರ ಶೇಖರಯ್ಯನವರು ಸಮ್ಮೇಳನದ ಪ್ರಾರಂಭೋತ್ಸವವನ್ನು ನೆರವೇರಿಸಿದರು. ಅವರು ಭಾಷಣ ಮಾಡುತ್ತಾ ಪತ್ರಿಕೆಗಳಿಗೂ ಸರಕಾರಕ್ಕೂ ಇರುವಂಥ ಘರ್ಷಣೆಯ ಕಾಲದಲ್ಲಿ ಸರಕಾರಕ್ಕೆ ತಕ್ಕ ಸಲಹೆ ಕೊಡಲು ಶಾಸನ ಸಭಾ ಸದಸ್ಯರು ಮತ್ತು ಪತ್ರಿಕಾ ಸಂಪಾದಕರ ಚುನಾಯಿತ ಪ್ರತಿನಿಧಿಗಳ ನ್ನೊಳಗೊಂಡ ಪಕ್ಷೇತರ ನ್ಯಾಯವಾದಿಗಳ ಕೊಬ್ಬರಿ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಏರ್ಪಡಿಸಬೇಕೆಂದರು. ನಂತರ ಅಧ್ಯಕ್ಷರಾದ ಶ್ರೀ. ಪಿ. ಆರ್ ರಾಮಯ್ಯನವರು ತನ್ನ ಅಧ್ಯಕ್ಷ ಭಾಷಣದಲ್ಲಿ ಮೈಸೂರಿನ ಪತ್ರಿಕೆಗಳಿಗೆ ಇರುವ ಕಷ್ಟಗಳನ್ನು ವಿವರಿಸಿದರು ಜೆ. ಸಿ. ಎಸ್. ಐ. ಬಿರುದು ಬಂದುದಕ್ಕಾಗಿ ಶ್ರೀಮನ್ಮಹಾರಾಜರನ್ನು ಅಭಿನಂದಿಸುವ ವಿಶ್ವ ಕರ್ನಾಟಕ ಪತ್ರಿಕೆಯನ್ನು ಪುನಃ ಕೊರಡಿಸುವಂತೆ ಕೇಳಿಕೊಳ್ಳುವ, 'ಜನವಾಣಿ' ಪ್ರಜಾಮತ' ಮತ್ತು 'ಮೈಸೂರು' ಪತ್ರಿಕೆಗಳಿಂದ ಸರಕಾರ ಪಡೆದ ಠೇವಣಿಯನ್ನು ಸಾಪಸ್ ಕೊಡಬೇಕೆಂದು ಸರಕಾರವನ್ನು ಪ್ರಾರ್ಥಿಸುವ, ಪ್ರೆಸ್ ಸಲಹೆ ಸಮಿತಿಯನ್ನು ರದ್ದು ಪಡಿಸಬೇಕೆಂದು ಸರಕಾರವನ್ನು ಪ್ರಾರ್ಥಿಸುವ, ಪ್ರಾಮುಖ್ಯ ನಿರ್ಧಾರಗಳಾದವು.



ಇದನ್ನು ತಿಳಿಯುವುದಕ್ಕೆ
ಯಾವ ಜ್ಯೋತಿಷ್ಯವೂ ಬೇಕಿಲ್ಲ

ಇನ್ನು ಮುಂದಕ್ಕೆ ಪದಾರ್ಥಗಳ ಬೆಲೆಗಳು ಹೆಚ್ಚುವವೋ, ಇಳಿಯುವವೋ ಎಂಬುದನ್ನು ಹೇಳುವದಕ್ಕೆ ಯಾವ ಅಪರೋಕ್ಷಜ್ಞಾನಿಯೂ ಬೇಕಾಗಿಲ್ಲ. ಪದಾರ್ಥಗಳ ಬೆಲೆಗಳು ಇಳಿಮುಖವಾಗಿರುವ ಅಂಶವು, 1943ನೇ ಇಸವಿಯಲ್ಲಿ ಜನಗಳಿಗೆ ಉಂಟಾದ ಅನುಭವದಿಂದಲೇ ಜನಸಾಮಾನ್ಯಕ್ಕೆ ನಂಬಿಕೆಯನ್ನುಂಟುಮಾಡಿರುತ್ತದೆ. ಬೆಲೆಗಳು ಇಳಿಯುತ್ತಿವೆಯೆಂದು ಸ್ಪಷ್ಟಪಡಿಸುವ ಸರ್ಕಾರಗಳು ನಮ್ಮ ಸುತ್ತಮುತ್ತಲೂ ಇವೆ. ಬೆಲೆಗಳನ್ನು ಹತೋಟಿಗೆ ತರುವ ಉದ್ದೇಶದಿಂದ ಗ್ರಾಹಕನೊಂದಿಗೆ ಜಲಾವಣಿಗೆ ತಂದಿರುವ ರಾಜಕಾರಣಗಳು ಮತ್ತು ಅನ್ಯಾಯದಿಂದ ಲಾಭಮಾಡಿದವರನ್ನು ಮಾಡಲು ಪ್ರಯತ್ನಿಸಿದ ನ್ಯಾಯಾಲಯಗಳೇಕರನ್ನು ದಂಡವೆಗೆ ಗುರಿಮಾಡಿದ್ದೂ, ಕಾನೂನಿನ ಏರ್ಪಾಟುಗಳಿಂದಾ ಬೆಲೆಗಳು ತಲೆಯೆತ್ತುವದನ್ನು ನಿಲ್ಲಿಸಿದ್ದಲ್ಲದೆ, ಅವುಗಳು ಇನ್ನೂ ಕಡಿಮೆಯಾಗುವಂತೆ ನಿಸ್ಸಂದೇಹವಾಗಿ ಮಾಡಿರುತ್ತವೆ. ಬೆಲೆಗಳ ಇಳಿತದ ಏಟಿಗೆ ನೀವು ಸಿಕ್ಕಬೇಡಿ

ಕೈಗಾರಿಕೆಗೆ ಸಾಮಾನುಗಳು, ವ್ಯಾಪಾರದ ಸರಕುಗಳು, ಜಮೀನುಗಳು, ಕಟ್ಟಡಗಳು, ಆಭರಣಗಳು, ಇವುಗಳನ್ನೆಲ್ಲ ಬಂಡವಾಳವನ್ನು ಹಾಕುವುದಕ್ಕೆ ಇದು ಸಮಯವಲ್ಲ. ಕಾಲಚಕ್ರವು ಮುಂದುವರಿದಹಾಗೆಲ್ಲಾ ಇವುಗಳ ಬೆಲೆಯು ಇಳಿಯುವುದು ಖಂಡಿತ ಇವುಗಳನ್ನೆಲ್ಲ ಹಾಕಿದ ರೂ 100 ಬಂಡವಾಳವನ್ನ, ಒಂದೆ ವರ್ಷ ಅಥವ ಇನ್ನೂ ಮುಂಚೆಯೇ ರೂ 70 ಅಥವ ಇನ್ನೂ ಕಡಿಮೆ ಬೆಲೆಗೆ ಇಳಿಯುವುದು.

ಹಣವನ್ನು
ಕ್ಷೆಲಾದ ಮಟ್ಟಿಗೂ
ಉಳಿಸಿರಿ
ಉಳಿಸಿದ್ದನ್ನು
ವಿವೇಕಮಾರ್ಗ
ಗಳಲ್ಲಿ ವಿನಿಯೋ
ಗಿಸಿರಿ

ಈಗ ಬಂಡವಾಳವನ್ನು ವಿನಿಯೋಗಿಸಲು ಅತ್ಯುತ್ತಮ ಮಾರ್ಗಗಳು ಇವು —ಕೋ ಆಪರೇಟಿವ್ ಸೊಸೈಟಿಗಳು, ಸೇವಿಂಗ್ಸ್ ಬ್ಯಾಂಕು ಪಾಸ್‌ಬುಕ್‌ಗಳು, ಪೋಸ್ಟಾಫೀಸ್ ಸೇವಿಂಗ್ಸ್‌ಬ್ಯಾಂಕುಗಳು, ಗೌರ್ನಮೆಂಟ್ ಲೋನುಗಳು ಮತ್ತು ನ್ಯಾಷನಲ್ ಸೇವಿಂಗ್ಸ್ ಸರ್ಟಿಫಿಕೇಟುಗಳು.

ಬಟ್ಟೆಬರೆಗಳು, ಚರ್ಮದ ಸಾಮಾನುಗಳು, ಔಷಧಿಗಳು, ಔಷಧಿಗಳ ತಯಾರಿಕೆಗೆ ಬೇಕಾಗುವ ಸಾಮಗ್ರಿಗಳು, ಆಹಾರಕ್ಕೆ ಉಪಯುಕ್ತವಾದ ಧಾನ್ಯಗಳು, ಇವೇ ಮೊದಲಾದವುಗಳ ಧಾರಣೆಯು ಇಳಿಯುತ್ತಿದೆ. ಇದೂ ಅಲ್ಲದೆ, ಬೆಲೆಗಳನ್ನು ಅಧೀನಕ್ಕೆ ತೆಗೆದುಕೊಳ್ಳುವ ಕಾನೂನುಗಳ ಕಾರಣ್ಯವು ಹೆಚ್ಚುತ್ತಿರುವದಲ್ಲದೆ, ಇವುಗಳನ್ನು ಉಲ್ಲಂಘಿಸಿದವರನ್ನು ಶಿಕ್ಷೆಗೆ ಗುರಿಮಾಡುವ ಏರ್ಪಾಟುಗಳೂ ಬಲಮಾಡಲ್ಪಡುತ್ತಿವೆ. ಈ ಕಾರಣಗಳಿಂದ ಬೆಲೆಗಳು ಇನ್ನೂ ಇಳಿಯುತ್ತವೆಂದು ನೀವು ಖಂಡಿತವಾಗಿಯೂ ನಂಬಿರಿ.

ಇದು ರಾಷ್ಟ್ರೀಯ ಯುದ್ಧಮುಖವು ಭಾರತೀಯರ ಸಮಕ್ಷಮದಲ್ಲಿ ಮಾಡುವ ಅರಿಕೆ

AAA 1115 KN.

ತ್ರಿಮೂರ್ತಿ ಸಮ್ಮೇಲನ

(ಎನ್ ಛದದಿಂದ ಮುಂದುವರಿಯಿದು).

●

ದು ತೋರಿಸುತ್ತಾ ಚರ್ಚಿಲ್ಲರು ವಿರಿಕೆಯ ಸ್ವರದಿಂದ ಹೇಳಿದರು. "ನೋಡಿ, ಸದ್ಯ ಯುದ್ಧ ಸಂಬಂಧನೇನೂ ಇಲ್ಲಿದ ಈ ಗ್ರೀಸಿಗೂ, ಯುದ್ಧಾ ತಂಕವೊಡ್ಡಿದ್ದ ಪಟೆಂಗರಿರುವ ಪೂರ್ವ ಮೂಲೆಯ ಆ ಹಿಂದುಸ್ಥಾನಕ್ಕೂ ರಾಜ್ಯಭಾರ ನಿರ್ಣಯ ಮಾಡುವ ಕಾರ್ಯಕ್ರಮಗಳು 4-ನೇ ಐಟಮುಗಳಾಗಿ ಈ ಪಟ್ಟಿಯಲ್ಲಿ ಸೇರಿವೆ. ಉಪರ ಅತಿ ಮುಖ್ಯವಾದ ಜರ್ಮನಿಯ ಭಾವೀ ಭವಿಷ್ಯ ನಿರ್ಣಯವನ್ನೇ ಬಿಟ್ಟು ಬಿಡಲಾಗಿದೆ ಇಡಿಯ ಲೋಕಕ್ಕನ್ವಯಿಸುವ ಮುಖ್ಯ ನಿರ್ಧಾರಗಳನ್ನು ಮಾಡಲು ಸೇರಿರುವ ನಾವು ಆಗತ್ಯವಾದವುಗಳನ್ನು ಬಿಟ್ಟು, ಲೋಕದಿದಿರು ತಿಳಿಗೇಡಿಗಳಾಗುವಂತಹ ಇಂತಹ ಅಲ್ಪ ವಿಷಯಗಳನ್ನು ಚರ್ಚಿಸುವದು ಸರಿಯಲ್ಲವೆಂದ ನಾನು ಸ್ಪಷ್ಟವಾಗಿ ನಿಷೇಧಿಸುತ್ತೇನೆ" ಚರ್ಚಿಲ್ಲರಿಗೆ ಭುಸ್ಸೆಂದು ಬಿಟ್ಟ ಹೊಗೆಯು ಆ ಭೂನಕಾಶೆಯನ್ನೇ ಲ್ಲಾ ಹರಡಿ ಇಡೀ ಪ್ರಪಂಚವನ್ನಾವರಿಸಿರುವ ಹೊಗೆಯನ್ನು ಸೂಚಿಸಿತು. ಇಷ್ಟನ್ನಾಡಿದ ಚರ್ಚಿಲ್ಲರು ಜಿಗುಪ್ಸೆಯಿಂದೊಮ್ಮೆ ರುಸವೆಲ್ಟರ ಮುಖ ನೋಡಿದರು. "ನಾವಿಬ್ಬರೇ ಮುಂದಿಗಿ ಒಂದು ಸಮ್ಮೇಲನ ಕೂಡೋಣವೆಂದರೆ ನೀನೊಪ್ಪಲಿಲ್ಲ ಈಗ ಇದರ ಪರಿಣಾಮ ಕಾಣುತ್ತಿದೆ"—ಎಂದು ರುಸವೆಲ್ಟರನ್ನು ಹಂಗಿಸುವಂತಿತ್ತು ಆ ನೋಟ!

ರುಸವೆಲ್ಟರನ್ನು ಚುಚ್ಚಿದಂತಾದ ಧರಿಂದ ಅವರು ಆವೇಶಗೊಂಡು ತೊಡೆ ತಟ್ಟಿ ಕೂಡಾಗ, ಅಲ್ಲಿ ಮಂಡಿಸಿದ್ದ 'ಖಾಲಾ'ನಿಗೆ ಇದೀಗ ಪ್ರಥಮ ಬಾರಿ ಯಜಮಾನನ ಹೊಡೆತದ ಅನುಭವವಾಗಿ ಅದು ದೊಡ್ಡ ರಂಪಾಟವೆಬ್ಬಿಸಿತು ಅದೇ ಶ್ರುತಿಯೆಂಬಂತೆ ರುಸವೆಲ್ಟರು ತಾರಸ್ವರದಿಂದ ಹಾಡಿದರು.

"ಚರ್ಚಿಲ್ಲರೆಂದುದಿ. ಮುಕ್ಕಾಲಂಶ ಸರಿ. ಜರ್ಮನಿಯ ಮುಂದಿನ ವ್ಯವಸ್ಥೆಯ ನಿರ್ಧಾರವಾಗಬೇಕಾದುದು ಆತಿ ಮುಖ್ಯ. ಆಪೈಶಾಚಿಕ ನಾಜಿಗಳು ಈಗ ಕೂಡಾ ನಿಶ್ಚರ್ತ ಶರಣು ಸೂಚನ ಕಳಿಹಿಸಿಲ್ಲವೆಂದು ಮೇಲೆ ಜರ್ಮನ್ ದರ್ಪವೆಂತಹದೆಂಬುದನ್ನು ಊಹಿಸಬಹುದು. ಆದರೆ ಜರ್ಮನಿಯ ಭಾವೀ ನಿರ್ಧಾರದಂತೆಯೇ ಪೋಲೆಂಡ್ ಗ್ರೀನ್, ಮತ್ತು ಇಂಡಿಯಾದ ಕುರಿತೂ ನಿರ್ಧಾರಗಳಾಗಲೇ ಬೇಕು"

ಚರ್ಚಿಲ್ಲರು ಸಟಕ್ಕನೆದ್ದು ಮೇಜಿಗೆ ಕೈ ಬಡಿಯುತ್ತಾ ಹೇಳಿದರು "ಗ್ರೀಸಿನೇನಾಗಿದೆ? ಹಿಂದುಸ್ಥಾನಕ್ಕೇನು ಧಾಡಿ ಬಡಿದಿದೆ? ನಿನ್ನ ರಾಷ್ಟ್ರದ ಪತ್ರಿಕೆಗಳೂ, ನಿನ್ನ ಸ್ಟೇಟ್ ಸಕ್ರೆಟರಿ ಎಡ್ವಾರ್ಡ್ ಸ್ಟೆಟ್ಟಿನಸನೂ ನಮ್ಮ ಗ್ರೀಕ್ ಧೋರಣೆಯ ಕುರಿತು ಅನಗತ್ಯ ರಂಪಾಟವೆಬ್ಬಿಸಿದ್ದಾರೆ 'ಹಿಂದುಸ್ಥಾನದ ಸಮಸ್ಯೆಯ ತೀರ್ಮಾನಕ್ಕಾಗಿ ಅಮೇರಿಕಾ ಸರಕಾರವು ಎಲ್ಲಾ ನಿಧಾನಗಳಿಂದ ಸಹಾನುಭೂತಿ ಪೂರ್ವಕವಾಗಿ ಸಹಕರಿಸಲು ತಯಾರಿದೆ" ಎಂದು ಮೊನ್ನೆ ನಿನ್ನ ಅಂಡರ್ ಸೆಕ್ರೆಟರಿ ಜೋಸೆಫ್ ಗ್ರೂ ಕೂಡ ಚಕ್ಕಂದವಾಡಿದ್ದಾನೆ. ಹಿಂದುಸ್ಥಾನವು ಈ ಯುದ್ಧಾವಧಿಯಲ್ಲಿ ಹುಟ್ಟಿಕೊಂಡ ಸಮಸ್ಯೆಯಲ್ಲ. ಅದು ಆ ವೊದಲೇ ಸಾಮ್ರಾಜ್ಯದ ಅಂಗವಾಗಿದ್ದ ಸಮಸ್ಯೆಯಂಗಣ ಇಂತಹ ಅಧಿಕ ಪ್ರಸಂಗಗಳು ಐಕ್ಯತ್ಯ ಹಾನಿಯಂಬುದನ್ನು ನೀವು ಅರಿಯಬೇಡಿರುವದು ಅತ್ಯಂತ ವಿಷಾದಕರವೆನ್ನುತ್ತೇನೆ!

ರುಸವೆಲ್ಟರೀಗ ಉರಿದೆದ್ದು ನಿಂತರು "ಸ್ವಾಧೀನ ಬಡಲಿಚ್ಛಿಪಿಲ್ಲದಿದ್ದವರು ಒಂದಲ್ಲೊಂದು ನಿಧದ ನೆವ ಹೇಳಲು ಸಾಮ್ಯವಿದ ಗ್ರೀಸಿಗ ನ್ಯಾಯದಾನ ಮಾಡಿತ್ತೇನೆ, ಹಿಂದುಸ್ಥಾನವು ನಮ್ಮ ಮನೆಯಾತ ಎಂದರಿಗದು. ಐಕ್ಯನಿರಬೇಕು ಪ್ರತಿಯೊಂದರಲ್ಲಿಯೂ. . .

ಚರ್ಚಿಲ್ಲರು ನಡುವೆ ಬಾಯಿಹಾಕಿ ಆವರಿಬ್ಬರೊಳಗಿನ ಜರ್ಜರಿಯ ಬಿಸಿ ಪರಮಾನಧಿ ಡಿಗ್ರಿಗೇರಿತು ಆವರ ನಡುವೆ ಸ್ಟಾಲಿನರು ವಿನಸ ಕಾರ್ಯವನ್ನು ಕುಳಿತಿದ್ದರು— ಚರ್ಚಿಲ್ ರುಸವೆಲ್ಟರಿಗೆ ಮೀನೆಯಿಲ್ಲವಾದ್ದರಿಂದ ಆವರು ತನ್ನ ಈ ಭಂಗಿಯನ್ನಾದರೂ ಅಣಕಿಸಲಾರರೆಂದು ಕಾರ್ಪೆಂಡಸಿಗೆ ಗೊತ್ತು.

ಚರ್ಚಿಲ್ ರುಸವೆಲ್ಟರ ದಾಗ್ಯುದ್ಧವು ನೊತನಾಸ್ತ್ರ ಪ್ರಯೋಗದ ಅಂಕಕ್ಕೇರಿದಾಗ ಸ್ಟಾಲಿನರು ನಡುವೆ ಎದ್ದು ಗಂಭೀರವಾಗಿ ನುಡಿದರು.

"ಜರ್ಮನಿಗೆ ಇನ್ನೂ ಆಗಾಧ ಶಕ್ತಿಯಿದ ಆದನ್ನು ನಿರ್ನಾಮ ಮಾಡುವ ನೂದಲೇ ಆದರ ಭವಿಷ್ಯ ನಿರ್ಣಯ ಮಾಡುವರು ಅಪಕಾರ್ಯಕರ. ನೀವು ಸಾಧ್ಯವಿದ್ದಷ್ಟು ಸಟ್ಟಿಮ ಕಡೆಯಿಂದ ಮುಂದೊತ್ತಿರಿ, ನಾವು ಪೂರ್ವ ಕಡೆಯಿಂದೆ ಮುಂದೊತ್ತುತ್ತೇವೆ ಪರಿಣಾಮ ಹೇಗಾಗುವದೋ ನೋಡಿಕೊಂಡು ಕೊನೆಗೆ ನಿರ್ಧರಿಸೋಣ ನನಗೀಗ ತತ್ಯವಸರದು, ಪ್ರಾವಮ್ಯಿಯ ಯುದ್ಧ ಕಾರ್ಯಗಳಿರುವದರಿಂದ, ಈ ರೀತಿ ದೀರ್ಘಚರ್ಚೆ ಮಾಡಿ ಇಲ್ಲಿ ನಾನು ಕುಳಿತುಕೊಳ್ಳಲಾರ."

ಈ ಮಾತುಗಳ ಒಂದೊಂದು ಶಬ್ದಗಳು ಒಂದೊಂದು ಹಿಮಗಡ್ಡೆಗಳಾಗಿ ಚರ್ಚಿಲ್ ರುಸವೆಲ್ಟರ ಬಿಸಿಯೇರಿದ ತಲೆಯನ್ನು ಕೊಕ್ಕು ಥಂಡಾಗಟ್ಟಿಸಿಬಿಟ್ಟವು

ಚರ್ಚಿಲ್ ರುಸವೆಲ್ಟರು ನಾಲ್ಕನೇ ಬಾರಿ ಪರಸ್ಪರ ನೋಡಿಕೊಂಡರು ಆ ದೃಷ್ಟಿಗಳು ಒಂದನ್ನೊಂದು ಪ್ರಶ್ನಿಸಿಕೊಂಡವು "ನೀವೂ ಮುಂದೊತ್ತಿರಿ ನಾವೂ ಮುಂದೊತ್ತುತ್ತೇವೆ; ಕೊನೆಗೆ ಹೇಗಾಗುವದೋ ನೋಡೋಣ' ಎಂಬ ಮಾತಿನ ಅರ್ಥವೇನು? ಮುಂದಾಗಿ ಮುಂದೊತ್ತಲಾಗುವದು ಸ್ಟಾಲಿನನಿಂದಲೇ—ಜಾಗೆ ಮುಂದೊತ್ತಿದವನು ಕೊನೆಗೆ ನೋಡುವದೆಂದರೆ ನಮ್ಮನ್ನೇ!" ಎಂದು ಆ ಪ್ರಶ್ನಿಗುತ್ತರವನ್ನೂ ಚರ್ಚಿಲ್ ರುಸವೆಲ್ಟರು ದೃಷ್ಟಿ ಮೂಲಕ ಪರಿಳಿ ಕೊಂಡರು ಆ ನೇರಿನ ಚರ್ಚಿ ನ ಲ್ಲೇವಾತುಗಳಲ್ಲಿ ಮುಗಿಯಿತು.

ಕಾರ್ಯಕ್ರಮ ಪಟ್ಟಿಯು ಮೊದಲಿನ ಐದು ಐಟಮುಗಳನ್ನೂ ಹೂಡಿದು ಇತಿಹಾಸದಲ್ಲಿ ಅರಸಿಯದಾದ ತ್ರಿಮೂರ್ತಿಗಳ ಒಮ್ಮತದ ಹೇಳಿಕೆಯನ್ನು ತಯಾರಿಸಲಾಯಿತು

"ಲೋಕದ ದುಷ್ಟ ರಕ್ತಿಗಳನ್ನು ಸಮೂಲಾಗ್ರವಾಗಿ ಕಿತ್ತೊಗೆದು ಶಾಶ್ವತ ಶಾಂತಿ ಸ್ಥಾಪಿಸಲು ರಾಷ್ಟ್ರಗಳಿಗೆ ಸ್ವನಿರ್ಧಾರದ ಅಧಿಕಾರವಿರಬೇಕೆಂಬ ಮೂಲತತ್ವಕ್ಕನುಸಾರವಾಗಿ ತ್ರಿರಾಷ್ಟ್ರೀಯ ಪ್ರಮುಖರ ಮೊಸ್ಕೋ ಸಮ್ಮೇಲನವು ಒಮ್ಮತದ ನಿರ್ಧಾರ ಮಾಡಿದೆ ಮೊದಲು ಪ್ರಮುಖರೆಲ್ಲಾ ವಿಕಾಜಿಪ್ಯಾಯ ನಿದ್ದುದರಿಂದ ಹಿಂದೆಂದೂ ಇರವಷ್ಟು ಅನ್ಯೋನ್ಯವಾಗಿ ಜಾಗತಿಕ ಪ್ರಶ್ನೆಗಳ ಕುರಿತು ವಿಕ ತೀರ್ಮಾನಕ್ಕೆ ಬಂದಿದ್ದೇವೆ ಎಂದು ತಿಳಿಸಲು ಸಂತೋಷ ಪಡುತ್ತೇನೆ—

ಸಹಿ-ಸ್ಟಾಲಿನ್,ರುಸವೆಲ್ಟ್ ಚರ್ಚಿಲ್"

ಗುಪ್ತ ಸಭಾಭವನದ ದ್ವಾರ ತೆರೆಯ ಪ್ರಬ್ಬಾಗ ಮೂವರು ಪ್ರಮುಖರೂ ಕಲಕಲ ನಗುತ್ತಾ, ಒತ್ತೊತ್ತಾಗಿ ನಿಂತು ಪತ್ರಿಕಾ ಪ್ರತಿನಿಧಿಗಳ ಕೈಗೆ ಈ ಹೇಳಿಕೆಯನ್ನೊಪ್ಪಿಸಿದರು. ಪತ್ರಿಕೆಯವರ ಸವಾಲುಗಳು ಹಾರುವಾಗ ಚರ್ಚಿಲ್ ರುಸವೆಲ್ಟರ ವಿಮಾನ ...ಟೈ

"ಸ್ವನಿರ್ಧಾರ' 'ವಿಕಾಜಿಪ್ಯಾಯ' ಎಂದರೆ ನಮ್ಮ ಸಮ್ಮೇ ನಿರ್ಧಾರದಂತೆ ನಾವು ನಾವು ಸ್ವೇಚ್ಛೆಯಿಂದ ವರ್ತಿಸವ ಏಪಿಪ್ಯಾಯ" ಎಂದು ಸ್ಪಷ್ಟೀಕರಿಸಿ, ಸ್ಟಾಲಿನರೊಮ್ಮೆ ಕಣ್ಣು ನಿಟಿಸಿದಿ ಜಾಗಿಲಕಡೆ ಕೊಂಡರು

ಉಡುಪಿ ಮಧ್ವಮತ

ಶಿವಳ್ಳಿ ಬ್ರಾಹ್ಮಣರ

ಧರ್ಮ ಛತ್ರ

ಇದೇ ತಾ 8—10—44ರಿಂದ

ರಾಮೇಶ್ವರ ದೇವಸ್ಥಾನದ ಬಡಗು ಬೀದಿಯಲ್ಲಿ ತೆರೆಯಲ್ಪಟ್ಟಿದೆ

ಎಲ್ ನರಸಿಂಗ ರಾವ್, ಪ್ರೊಪ್ರೈಟರ್

ಉಡುಪಿ ಬೋರ್ಡಿಂಗ್ ಎಂಡ್ ಲಾಜಿಂಗ್, ಮಧುರ

ಬಲವಂತಗುಟಿಕಾ (Nerve strengthening Pills)

(ನವ ಜವಾನ ಗುಳಿಗೆಗಳು)

ವನಿಷ ವನಸ್ಪತಿಯಿಂದ ತಯಾರಿ ಮಾಡಿದ ಈ ಗುಳಿಗೆಗಳಿಂದ ರಕ್ತವುದ್ದಿ ನುತ್ತಾ ಬಲವೃದ್ಧಿ ಆಗಿ ಪರಮಾರ್ಜನೆಯಿಂದ ಅಥವಾ ಕೆಟ್ಟ ಚಾಲಿನಿಂದ ಉಂಟಾದ ರೋಗಗಳೆಲ್ಲಾ ಕೋಗುತ್ತವೆ ಈ ವಿಷಧವು ಹೊಗಸರ ಮತ್ತು ಹೆಸ್ಸ ಹುಡುಗರ ಕಣುಜಾದ ರೋಗಗಳ ಮೇಲೆ ಸಹಾ ಬಲ್ಲಿ ಸಿಯೊಕ್ತ ಇರುತ್ತವೆ ಮಾಟ್ಲ ಸಂಗಡ ಇಪ್ಪ ಅನುಪಾನ ಪತ್ರಿಕೆ ಸರಿಯಾಗಿ ವಿಸಿಫ ಸೇವನ ಮಾಡುವಿ ಲಂಘಿಸಿಗಳು ಯಿಂದ ಸಸ್ತಿ ದಲ್ಲಿ ಸಾರವಾಗುತ್ತವೆ ೧ ಸಸ್ತಿಕದ ಒಂದು ಬಾಟ್ಲಿ ಕಿಮ್ಮತ್ತು (೨-೦ ೦) ಎರಡು ರೋಸಿಯ ವಿಪ್ಪಾಲ ಬಿರ್ಜು ಬೇರೆ ಒಮ್ಮೆಲೆ ಐದು ಡಜನ ಬಾಟ್ಲಿಗಳು ತರಿಸಿಕೊಂಡರೆ ಕಿಮ್ಮತ್ತು (೮ ೦ ೦) ಒಪ್ಪತಂ ರೂಪಾಯಿ ಟಪಾಲ್ ಖರ್ಚು ಇಲ್ಲಾ ಪ್ರಿ ಒರುವಸು ಏಜಂಟರಿಗೆ ಯೋಗ್ಯ ಕಮಿಶನ್

ಸೂಚನ — ಎಸ್ ಬಿ ಕದಮ ಮತ್ತು ಸನ್ಸ್,

ಮೂ ಸೊ ಸಿಮಾಜೆ (ಜ ಬೆಂಗಾನಿ)

ENGLISH MADE EASY

ಇಂಗ್ಲಿಷ್ ಏನೂ ತಿಳಿಯದವರು 'ಸುಲಭವಲ್ಲಿ ಇಂಗ್ಲಿಷ್' ಪುಸ್ತಕದಿಂದ ಸುಲಭವಾಗಿ ತಮ್ಮಷ್ಟಕ್ಕೆ ತಾವೇ ಕಲಿತುಕೊಳ್ಳಬಹುದು

ಇಂಗ್ಲಿಷ್ ಅಲ್ಪಸ್ವಲ್ಪ ಬರುವವರು ಚೆನ್ನಾಗಿ ಕಲಿತುಕೊಳ್ಳಬಹುದು

ಸುಲಭವಲ್ಲಿ ಇಂಗ್ಲಿಷ್

ಕೊರಡ್ಕಲ್ಲರ ಇಂಗ್ಲಿಷ್ ಸ್ವಯಂಬೋಧಿನಿ.

ವಯಸ್ಕರಿಗೂ ನಿರ್ಯಾರ್ಥಿಗಳಿಗೂ ಅತ್ಯಂತ ಪ್ರಯೋಜನಕಾರಿ

ಬೆಲೆ ಬರೇ ರೂ 1—1 0 ರೂ 1-೧೦ನ್ನು ಮನಿಯಾರ್ಡರು ಮಾಡಿದರೆ 1 ಪ್ರತಿ ಕಳಿಸಲ್ಪಡುತ್ತೆ.

ನವಭಾರತ ಪುಸ್ತಕ ಭಂಡಾರ,

ರಿಜಿಸ್ಟರ್ಡ್ ಪಬ್ಲಿಷರ್ಸ್ ಎಂಡ್ ಬುಕ್ ಸೆಲ್ಲರ್ಸ್,

ಉಡುಪಿ, ವೈ ಕ

Decorate your home with

Life-like Oil Painting

of those dear and near to you

M S Shirale,

MODERN STUDIO,

UDIPI

ಬಾಲಚಂದ್ರ

ಉಪಾಧ್ಯಾಯರಿಗಾಗಿ ೪ ಪುಟ ವಾಗುವ ವಿದ್ಯಾವಿಷಯಕ ಮಾಸಪತ್ರಿಕೆ.

ವಾರ್ಷಿಕ ಚಂದಾ ರೂ 1 8-0

ಮಾದರಿ ಪ್ರತಿಗೆ ಎರಡಾಣೆ ಸ್ಟಾಂಪು ಏನೊಂದಿಗೆ ಬರೆಯಬೇಕು

ವ್ಯವಸ್ಥಾಪಕ

ಬಾಲಚಂದ್ರ, ಉಡುಪಿ.

The Pangal Nayak Bank Limited.

(Incorporated in 1920)

Registered Office Court Road, UDIPI.

Branches at— **Udipi, Mangalore, Katapadi, Kanhangad, Kinnigoli and Nileshwar, South Canara District**

Discounting of demand and short term negotiable instruments for approved parties, granting of loans and overdraft accommodation on goldware, marketable produce, other merchandise and on other securities, collection of pay, pension or other bills, transmission of monies to upcountry places on moderate terms, acceptance of Fixed, Current, Savings Bank and Cumulative deposits and every other type of up-to-date Banking service is at the disposal of all the sections of the discreet public.

For business proper please enquire at any one of our Offices.,

15th April 1944.

— ಮಕ್ಕಳನ್ನು ಹಡೆಯುವದು ಸಾಕು—

ಆಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಹಪ್ತ ಕೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಶೆರಗು, ಪ್ರದರದೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:— ಹರಿವೀಪಲ್ಲೆ ಬಿಡಬೇಕು. ೭ ದಿವಸ ಸಕಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಷ್ಟ ಚಾರ್ಜು ೧೫ಆಣೆ.

ಮಾಲಕರು:—**ಹಾಲಪ್ಪಾ ಫಕೀರಪ್ಪಾ ಡಾವಣಗೇರಿ**

ಆಯುರ್ವೇದ ಔಷಧಾಲಯ, ಗದಗ-ಸಿಟಿ

ಏಜಂಟರು:—ಹುಬ್ಬಳಿ ಫಾರ್ಮಸಿ,—ಹುಬ್ಬಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪುರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪುರ. ಚಿಕ್ಕೋಡಿಯಲ್ಲಿ:—ಹುಂಬರವಾಡಿ ಸ್ಟೋರ್ಸ್. ಡಾವಣಗೇರಿ:—ಡಾವಣಗೇರಿ ಪ್ರೆಸ್ಸ್. ಆರ್. ಎಲ್. ಕವಲದಾನಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ.

Ayurveda Oushadalaya, GADAG CITY.

ಗನೋರಿಯಾ ಪರನಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗಾರಂಟೀ

ಶರೀರದಿಂದ ಕೇವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ, ...ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಕೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂವು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೀಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. **ಪೋಸ್ಟ ಚಾರ್ಜ ೪ ಆಣೆ.**

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ಡಾವಣಗೇರಿ:ಡಾವಣಗೇರಿ ಪ್ರೆಸ್ಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ದಪ್ಪ ಹಾಲಪ್ಪ ಡಾವಣಗೇರಿ,

ಆಯುರ್ವೇದ ಔಷಧಾಲಯ. ಗದಗ.

Ayurveda Oushadalaya. GADAG.

The best preventive in epidemics of CHOLERA

"BHUVANENDRA"

CHANDRAAMS

Also a sovereign remedy for diarrhoea, Stomachache, Vomiting and Nausea

BHUVANENDRA PRODUCTS LTD., Katapadi.

'ಭುವನೇಂದ್ರ'

ಚಂದ್ರಮಸ್ ಸಾಂತಿಭೇದಿಯಂತಹ ಭಯಂಕರ ಖೀಡೆಗಳಲ್ಲಿ ಕ್ಷತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ

ಮೊದ್ದವರಿಗೆ 40ಂದ 8ಬೊಟ್ಟು, ಸಣ್ಣ ಮಕ್ಕಳಿಗೆ 10ಂದ2ಬೊಟ್ಟು ಲವಂಗ ಯಾ ಏಲಾದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್, ಕಟಪಾಡಿ, ದ ಕ.

ಉಡುಪಿ ಸ್ಟಾಕಿಸ್ಟರು:—ಡಾ. ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ ಶ್ರೀ ಆರ್. ಎಸ್. ಶೆಣೈ, ರಥಬೀದಿ, ಡಾ. ಪಿ. ಜಿ. ಆಚಾರ್ಯ ಫಾರ್ಮಸಿ; ಡಾ. ಕೆ. ಶಾಣಭಾಗ ಸೈ. L. I. M.; ಡಾ. ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ



ಬಾಣಂತಿಯರ ಸಲು ವಾಗಿಯೂ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಆನೇಕ ಮಧುರದ್ರವ ರಸಾಯನ ಅಲ್ಪ ಮೌಲ್ಯದಿಂದ ಒಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ)

೪ ಡ್ರಾಮ್ಸ್ ಬಟ್ಟಿಗಳು ಹೆಚ್ಚು ಕಡಿಮೆ ಉಪಯೋಗಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗೇ ಒಂದು ಬಾಣಂತಿತನಕ್ಕೆ ಸಾಕಾಗುವಷ್ಟು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.೫ ಕೊಡಿಯಾಲಬೈಲು, ದ.ಕ

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ 1—12—0

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನವ ಜನಿಯ ಔಷಧಿಗಳಿಗೆ ದೊರೆಯುತ್ತವೆ. ಕ್ಯಾಟಲಿಗ ಸಂಗ್ರಹ ಬರದಲ್ಲಿ ರೋಗಕ್ಕೆ ತಕ್ಕಹಾಗೆ ಔಷಧ ರವಾನಿಸಲಾಗುವದು. ಉಡುಪಿ ಏಜಂಟರು:—ನವಭಾರತ ಬುಕ್ ಡಿಪೊ

ಅಂತರಂಗದ ಕತೆಗಳು

೧೨ ಕತೆಗಳ ಸಂಗ್ರಹ ಬೆಲೆ ೦—೧೦—೦

ಅಂತರಂಗವನ್ನು ಬೆಳಿಗೆ, ಬಹಿರಂಗವನ್ನು ಹೊಳೆಸಿ ಹರಿಯುವ ಮಾತು.

ಪ್ರೇಮಪ್ರವಾಹವು ಹೇಗೆ ಹರಿಯುತ್ತದೆ? ಪ್ರಣಯದಲ್ಲಿ ಪ್ರಲಯವಿದೆಯೆ?

ಪ್ರೇಮಪ್ರವಾಹ

ಸ್ವಾರಸ್ಯವಾದ ೫ ಕತೆಗಳ ಸಂಗ್ರಹ ಬೆಲೆ ೦ - ೬—೦

ಬಹಿರಂಗವಾಗಿ ಅಲ್ಲವಾದರೂ ಅಂತರಂಗವಾಗಿ ನೋಡತಕ್ಕ

ಆರ್ಟ್ ಚಿತ್ರಗಳು

ಹಲವಾರು ಸುಂದರಿಯರ ನೈಜಚಿತ್ರಗಳ ಕಟ್ಟು. ಬೆಲೆ ೦—೬—೦

ಪಾಪಪೂರಿತ ಪಟ್ಟಣಗಳು

ಪ್ರಪಂಚದ ಬೇರೆ ಬೇರೆ ದೇಶಗಳಲ್ಲಿ ವ್ಯಭಿಚಾರ ಸೂಳೆಗಾರಿಕೆಗಳು ಸಮಾಜವನ್ನು ಹೊಕ್ಕು ಅದನ್ನು ಹೇಗೆ ಕೊರೆದು ತಿಂದು ಹಾಳು ಮಾಡಿದೆ ಎಂಬುದನ್ನು ವಿವರಿಸುವ ಗ್ರಂಥ. ಬೆಲೆ. ೧—೮—೦

ವ್ಯಭಿಚಾರಿಣಿ ಯಾರು?

ಸಾಮಾಜಿಕ ನಾಟಕ. ಬೆಲೆ: ೦—೧೨—೦

ನಾನಾವಂತತನದ ಸೋಗಿನಿಂದ ನಡೆಸಲ್ಪಡುವ ಅನಾಚಾರವನ್ನೂ ಪವಿತ್ರ ಪ್ರೇಮವು ಕರಿಣ ಪರೀಕ್ಷೆಗೊಳಗಾದರೂ ಕಟ್ಟಕಡೆಗೆ ಅದರ ವಿಜಯ ನಿಶ್ಚಯವೆಂಬುದನ್ನೂ ಮನಗಾಣಿಸುವ ವಿಚಾರ ಕ್ರಾಂತಿಕಾರಕ ನಾಟಕ.

ನವಭಾರತ ಪುಸ್ತಕ ಭಂಡಾರ, ಉಡುಪಿ.

EDITED PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA

Regd. No. M/ 3618. ವಾರ್ಷಿಕ ಚಂದಾ ರೂ. 4—8—0 ಬಿಡಿ ನಂಬಿಕೆ 0—1—6. Estd. 1921 ಸ್ಥಾಪನೆ.

ಅಂತರಂಗ

ಉಡುಪಿ

ಅಖಿಲ ಕರ್ನಾಟಕದ ಹೊಸ

ಮಾದರಿಯ ಸಚಿತ್ರ

ವಿನೋದ ವಾರ ಪತ್ರಿಕೆ.

ವಾರ್ಷಿಕ ಚಂದಾ ರೂ. 4—8—0

ಬಿಡಿ ಪ್ರತಿಗೆ ರೂ ೦—1—6



ನವಯುಗ

ವರ್ಷ ೨೪] ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ [Vol. 24

ವಾರ ೨೩] Founder SRIA. K. SHETTY. [No. 23

ಉಡುಪಿ • 15—2—1945 • ಮಂಗಳೂರು.

ದಿ ಜುಪಿಟರ್

ಜನರಲ್ ಇನ್ಶೂರೆನ್ಸ್

ಕಂಪೆನಿ. ಲಿ., ಬೊಂಬಾಯಿ.

ವಿಮೆಯಿಳಿಸ ಬೇಕೆ?

ಏಜಂಟರಾಗುವಿರಾ?

—ಹೀಗಾದರೆ ಕೊಡಲೇ

ಪಿ. ಡಿ. ನಾನಯ್ಯ, ಉಡುಪಿ.

ದಕ್ಷಿಣ ಕನ್ನಡದ ಚೀಫ್ ಏಜೆಂಟ್.

—ಇವರಿಗೆ ಬರೆಯಿರಿ—

1 ಕೋಟಿಗೆ ಮಿಕ್ಕಿ ವ್ಯವಹಾರ!

ಈ ವರುಷವೇ ರಜತೋತ್ಸವ!

The Jupiter General Insurance Company Ltd.

ಅಮೃತಾಂಜನ ತಲೆನೋವನ್ನು, ಶಿರೋವೇದನೆ, ಉಳುಕು, ಕತ್ತಿಗೆ, ಥುಜ, ಹಲ್ಲು ನೋವನ್ನಗಳಿಗೂ ಎಲೆನೋವಿ, ಭಾಯಗಳು ಬಾತು ಕೊರ್ಳುವುದು, ಚೇಳು ವಿಷ ಮುಂತಾದ ಬೇನೆ ಪಕ್ಷವಾತ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧವು ಸಹ ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

SYMPTOMS AND DISEASE.

Often an insurance company refuses to grant insurance cover to an apparently healthy person because, on a medical examination, symptoms of disease are discovered in him. To us the insurance company puts the person on his guard. But then he has very little chance of insuring his life.

Insurance apart, one's health requires constant attention and periodical medical examination. So, do not neglect it till an insurance company focuses your attention on it.

THE CANARA MUTUAL ASSURANCE CO., LTD.,

UDIPI. (S. India)

WANTED.

Travelling Representatives to represent our Medical Specialities in Mysore State, Coorg and South Kanara. Decent terms offered for capable persons. Persons with previous experience in canvassing only need apply.

Apply to:

Manager,

Oriental Pharmaceutical Works,

Guntakal.

ದಿ ಮೂಲ್ಕಿ ಬೇಂಕ್,

ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಒಡ್ಡಿಯನ್ನೂ ನಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಜನರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,

Moolky, S K

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ಇದೀಗ ಮೂರನೇ ಸಂಪುಟ ಆರಂಭವಾಗಿದೆ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸಕ್ಯುಲಾರುಗಳೂ ಪ್ರಕಟವಾಗುತ್ತವೆ

ವಾರ್ಷಿಕ ಚಂದಾ

ರೂ. 1—8—0 ಮಾತ್ರ

ಹೆಚ್ಚಿನ ವಿಚಾರಕ್ಕೆ ಬರೆಯಿರಿ

ಬಾಲಚಂದ್ರ, ಉಡುಪಿ.



ಯಾವತ್ತೂ ವಿಧದ ಬ್ರೈಲಿ, ತಾವು ಹತ್ತಾರಿ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾನ್ಯಿಗಳೂ ರಿಪೈರು ಆಗಿಯೂ ಜಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಂಜೆ ವ್ಯಾಸಾಚಾರ್ಯ,

ರಥಬೀದಿ, ಉಡುಪಿ.

CHAMPAE'S

Snow & Lastrex

Sole Distributers for (India.)

Sukhananda Stores

Santhekatte, UDIPI, S.K.

The Bombay Life Assurance Co. Ltd.

ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ. 1908

1944ನೆ ಇಸವಿಯಲ್ಲಿ 2½ ಕೋಟಿಗೂ ಮಿಕ್ಕಿ ವ್ಯವಹಾರವನ್ನು ಮಾಡಿದ ಸ್ಪಧನಶ್ರೇಣಿ ದೇಶೀ ನಿಮಾಸಂಸ್ಥೆಗಳಲ್ಲೊಂದಾದುದು

ಮದ್ರಾಸ್ ರಾಜ್ಯ ಕಾರ್ಯದರ್ಶಿಯವರ ಬುಕ್ಕ

ಆಶ್ರಿತ ಸಂಸ್ಥಾನಗಳಿಂದ ಕೊಂಡ ದಕ್ಷಿಣ ಭಾರತದ ಪ್ರಾಮುಖ್ಯ ಎಜಂಟರು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಸ್ಥಾಪನೆ 1910

ಕಳವಿನ ವರುಷಗಳಿಂದ ಪೊರೆಸಿನಾರಿಕೆಗೆ, ವ್ಯಕ್ತಿನಿಧಿಗಳಿಗೂ ವಿಶೇಷ ರಿಯಾಯಿತಿ ಅನುಕೂಲತೆಗಳನ್ನು ಒದಗಿಸಿ ದೃಷ್ಟಿಭಕ್ಕೆ ವಿಶ್ವಾಸಗಳಿಂದ ಜನಸಾಕೀನೆಯಲ್ಲಿ ನಿರತರಾಗಿ ಸದಾ ಸರ್ವದಾ ಅದೇ ಧ್ಯೇಯಾಶಾಲನೆಗೆ ಒಪ್ಪರು.

1944ರಲ್ಲಿ 53ಲಕ್ಷ ನಿಮಾ ವ್ಯವಹಾರ ಗಣನೀಯ ಬಿಟ್ಟಾಡೆ

ಕಾರ್ಯಾಲಯಗಳು:—

ಬೊಂಬಾಯಿ, ಬೆಂಗಳೂರು, ಮದ್ರಾಸು, ಮಂಗಳೂರು, ಕಲ್ಲಿಕೋಟೆ, ನುಧುರಾ, ಟ್ರಿವೆಂದ್ರಂ, ಉಡುಪಿ

THE VIJAYA STORES, LTD.,

COONDAPUR, S K.

Vijaya Commercial Cash Certificate

Rs. 100 per Certificate.

Rs 104 will be paid against the production of the Certificate after one year or earlier

Your money is safe.

Do not invest on property Jewels etc. They depreciate. But this will yield 4 o.

ವಿಜಯಾ ಸ್ಟೋರ್ಸ್, ಲಿಮಿಟೆಡ್,

ಕುಂದಾಪುರ.

ವಿಜಯಾ ಕಮರ್ಶಿಯಲ್ ನಗದು ಸರ್ಟಿಫಿಕೇಟುಗಳು

ಒಂದಕ್ಕೆ ರೂಪಾ 100-0-0

ಒಂದು ವರ್ಷ ಕಳೆದ ನಂತರ ರೂ. 104 -ಅನ್ನುವೆ ಧನವು, ಧಂಗಾತಗಳಲ್ಲಿ ಹಾಕಿದ ಹಣದ ಜೀತಿಯು ಇರಿಯುತ್ತದೆ. ಈ ಸರ್ಟಿಫಿಕೇಟುಗಳು ಕೇ. ರಶ್ನು ಬಡ್ಡಿ ಕೊಡುತ್ತವೆ

ಹಲವಾರು ಖರ್ಚಾದುವು ——— ನೀವೂ ಪಡೆಯಿರಿ

ಮುಟ್ಟಾಗುವಿಕೆ

ಪಲತೊಂದರೆಗಳಿಂದ ಕಷ್ಟಾನಿಷ್ಟವನ್ನೂ, ಕಷ್ಟದ ಗರ್ಭಧಾರಣೆ ಆಗುವ ಇನ್ನಾವ ಕಾರಣವಿದ್ದರೂ—'ಕುಮಾರಿ' (Govt Regd) ನಿಶ್ಚಿತ ನಿರುಪದ್ರವಿ—ಒಂದಿನಾತಿಶೀಘ್ರ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಪರಿಯನ್ನೊಡುವುದು; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು; ಸಾವಿರಾರು ನುಡಿ ವೃತ್ತಪತ್ರಿಕಾಗಿದ್ದಾರೆ! ಬೆಲೆ ಮೂ 3|- ಕೈಯಿಂದ ಕೇಸುಗಳಿಗೆ ಮೂ.5,(ವಿ.ಪಿ.12 ಆಣೆ ಆಲಾವುದ) Mrs P. DEVEE, 1. D. 5 (N) Tollygunge, Calcutta, ಸ್ಟಾಕಿಸ್ಟ್: ಪೊಪ್ಯುಲರ್ ಸ್ಟೋರ್ಸ್, ಮಂಗಳೂರು.

ವಾರ್ಧಿವ ಪಂಚಾಂಗ

ಉಡುಪಿ ಪಂಚಾಂಗ

(1945-'46)

ಸಕಲ ಬಂಧುಬಾಂಧವ ನೈತ್ಯನೈಮಿತ್ತಿಕ ಧರ್ಮ ಕಾರ್ಯಗಳಿಗೆಲ್ಲಾ ಶಾಸ್ತ್ರೋಕ್ತ ವೀತಿಯಿಂದ ಪಾರಿಣೀಸಿಯಾಗಿರುವಂತೆ

ಬೆಲೆ ಒಂದಕ್ಕೆ 0—1—0

ವಿಶೇಷ ಸೂಚನೆಗೆ ಬರೆಯಿರಿ:

ಆತ್ಮಾರು ವಾಸುದೇವ ಉಡುಪ.

ಸಂಪಾದಕರು,

ಹೊತ್ತರ್ನ್ ಹಿಂದೂ ಹೊಟೆಲ್,

ಬೊಂಬಾಯಿ ಇಸ್ಲಿಯೂ ಸಿಗುವುದು.

ವ್ಯಂಗ್ಯ ೀಗು ವಿನೋದ

ನವಯುಗದ ನವವಿಧ ಭಕ್ತಿಗಳು

ನಾವು 'ಹೊಸ ಪ್ರಪಂಚ'ವನ್ನು ಕಾಣಲಿದ್ದೇವೆ, ಎಂಬ ಮಾತು ಸುಳ್ಳಲ್ಲ. ಬೇಕಾದರೆ ಈ ಮಾತನ್ನೇ 'ನಿಜ ಪ್ರಪಂಚ'ವನ್ನು ಕಾಣಲಿದ್ದೇವೆ'–ಎಂದು ತಿದ್ದುಪಡಿ ಮಾಡಿಕೊಳ್ಳಿ. ಆದರೆ ಯುದ್ಧವೊಂಆ ಮುಗಿಯುವದೇ ತಡ–ಈಗ ಇರುವದಕ್ಕಿಂತ ಪೂರ್ತಿ ಭಿನ್ನವಾದ 'ಹೊಸ' ಅಥವಾ 'ನಿಜ' ಪ್ರಪಂಚ ನಿರ್ಮಾಣಗೊಳ್ಳುವದು, ವ, ಬೆಳಕಿಗೆ ಬರುವದು ಖಂಡಿತ. ಆ ಪ್ರಪಂಚದಲ್ಲಿ ನಮ್ಮ ಕಣ್ಣು, ಕಿವಿ, ಮನಸ್ಸುಗಳು ಹೊಸ ಹೊಸ ಪರಿಚಯ ಹೊಂದಲಿವೆ. ಕಂಠ, ಕೈ, ಕಾಲುಗಳು ಹೊಸ ಹೊಸ ಕಾರ್ಯ(ಮಾಡಲಿವೆ. ಆ ನವ ಜಗತ್ತಿನಲ್ಲಿ ನವ, ನವವಿಧ ಭಕ್ತಿಗಳು — ಕಥಾಶ್ರವಣ, ಕೀರ್ತನ, ಸ್ಮರಣ, ಸೇವೆ, ಅರ್ಚನ, ವಂದನ, ದಾಸ್ಯ, ಸಖತ್ವ, ಆತ್ಮ ನಿವೇದನ—ಉಂಟಾಗಲಿವೆ. ಯುದ್ಧೋತ್ತರ ಕಾಲ ಕಳೆಯುತ್ತಿದೆ—ಯುದ್ಧೋತ್ತರ ಕಾಲ ಕಾಲಿಡುತ್ತಿದೆ. ಹುಷಾರಾಗಿ ಮುಂದಿನ ನವವಿಧ ಭಕ್ತಿಗಣಿಯ ಗೋಣ'

1 **ಕಥಾಶ್ರವಣ**—ನಮಗೆ ಹೊಸ ಹೊಸ ಕಥೆಯನ್ನು ಕೇಳುವ ಯೋಗ ಬರಬಹುದು. ವೈರಿಗಳ ಯು. ಬೋಟುಗಳಿಂದ ಮುಳುಗಿಸಲ್ಪಟ್ಟ ಮಿತ್ರರಾಷ್ಟ್ರೀಯ ಹಡಗಗಳ ಸರಿಯಾದಲೆಕ್ಕಕೇಳಿ ನಾವಾಗದಂಗು ಬಡೆಯಬಹುದು. ಫ್ರಾನ್ಸಿನಲ್ಲಿಳಿಯುವಾಗ ನಜ್ಜುಗುಜ್ಜಾದ ಮಿತ್ರಯೋಧರ ಸಂಖ್ಯೆ 'ಬಜೆಟ್' ಹೊರಬಿದ್ದು, ಯಾವ ಹೆಲ್ಪಾಫೀಸರಾದರೂ ಇಷ್ಟು ಹುಗಳನ್ನು ಕೊಂಡುದಿದೆಯೇ, ಎಂದು ನಮ್ಮನ್ನು ನಾವೇ ಪ್ರಶ್ನಿಸುವಂತಾಗಬಹುದು. ಹಂಕರ್ಕ್, ಟೋಬ್ರುಕ್, ಪರ್ಲ್‌ಹಾರ್ಬರ್, ಸಿಂಗಾಪುರ ಬರ್ಲಿನ್, ಇತ್ಯಾದಿ ಕದೆಗಳಲ್ಲಿ ಪಿರೋಧಿಗಳು ಮಾಡಿದ್ದ ಭಯಂಕರ ಸಾಹಸಗಳ ಕಥೆಯೂ ಕೇಳಬರಬಹುದು. ಈಗ ಕೇಳುವದುವಾಪ'ವೆಂದಿರುವ ವಿರೋಧಿಸಾಹಸ ಸಾವಿರಗಳನ್ನು ಆಗ ಕೇಳುವಂತಾಗಬಹುದು.

2 **ಕೀರ್ತನ**—ಹೀಗೆ ಗುಟ್ಟನ್ನೆಲ್ಲಾ ತಿಳಿದ ಮೇಲೆ, ಅಷ್ಟೊಂದು ಅದ್ಭುತ ಸಾಹಸ ಮಾಡಿದ ವೈರಿಗಳನ್ನೂ ಆಧಃಪತನ ಕ್ರೀಡುಮಾಡಿದ ಮಿತ್ರರ ಯುಕ್ತಿ, ಚಾತುರ್ಯ, ಸಹನೆಗಳ ಕೀರ್ತನೆ ಮಾಡದಿರಲಾಗುವದೆ? ಪ್ರತಿಯೊಂದು ಮನೆಯಂಗಳದಲ್ಲೂ 'ವಿಜಯೀ ಕಟ್ಟೆ' (ತುಳಸೀ ಕಟ್ಟೆಯ ಸ್ಥಾನದಲ್ಲಿ)ಯೊಂದು ನಿರ್ಮಾಣಗೊಳ್ಳಬಹುದು. ಆದರಲ್ಲಿ 'ಯೂನಿಯನ್ ಜೇಕ್' ನೆಟ್ಟು ಚರ್ಚಿಲ್ ಫೋಟೋ ಇಟ್ಟು 'ಚರ್ಚಿಲ್ ವಿಜಯೀ! ಜೈ! ಜಗ ವಿಜಯೀ!!' ಎಂಬ ಸೊಲ್ಲಿನಿಂದಾರಂಭಿಸಿ, "ಸಮರ ವಿಜೇತ ಚರ್ಚಿಲ್!! ನಮಗೆ ಸ್ವರಾಜ್ಯವ ಕೊಡಲೊಲ್ಲಿ!!" ಎಂದು ಸುತ್ತಲೂ ಕುಣಿ ಕುಣಿದು ಕೀರ್ತಿಸುವಂತಾಗಬಹುದು.

3 **ಸ್ಮರಣೆ**—ಆ ಕಾಲದಲ್ಲಿ ನಾವು ಆಗಾಗ ಸ್ಮರಿಸುವಂತಹ ಮಹತ್ವ ಘಟನೆ :-ಹಿಟ್ಲರನ ಆತ್ಮಹತ್ಯೆ; ಆ ನಾಪಿ ತನ್ನ ಕೊಟಸನ ಕಸೆಯ-ಲ್ಲಿ ಯಾರಿಗೂ ತಿಳಿಯದಂತೆ ಒಂದು ಪಿಸ್ತೂಲನ್ನು ಸದಾ ಇಟ್ಟುಕೊಂಡಿದ್ದುದು. ಬರ್ಲಿನ್ ಪತನವಾಯಿತು–ಆದರಲ್ಲಿ ತನ್ನ ರಿಜರ್ವ್ ಸೇನೆಯೆಲ್ಲಾ ಹತವಾಯಿತು--ಗುಪ್ತಾಸ್ತ್ರ ಕಾರ್ಖಾನೆಗಳೂ ವೈರಿಗಳ ವಶವಾಗಿ ಹೋದವು ಎಂದು ತಿಳಿದೊಡನೆ ಆ ಪಿಸ್ತೂಲನ್ನು ತನ್ನ ಎದೆಗಿಟ್ಟುಕೊಂಡುದು. ಆವನನ್ನು ಬರ್ಲಿನಿನ ಕೇಂದ್ರ ಸ್ಥಳದಲ್ಲಿ ಹುಗಿದು ಆಸುವಾಸಿನ 4 ಮೈಲು ಚಚ್ಚೌಕದ ಸ್ಥಳಕ್ಕೆ ತಂತೀ ಬೇಲಿ ಹಾಕಿ 'ವಿಷವಲಯ--ಯಾರಿಗೂ ಪ್ರವೇಶವಿಲ್ಲ' ಎಂಬ ಬೋರ್ಡು ಹಾಕಿರುವದು. ಹುಗಿದ ಸ್ಥಳದಲ್ಲೊಂದು ಸಮಾಧಿ ಕಟ್ಟೆ ಅದರ ಮೇಲೆ ಕೆಂಪುಧ್ವಜ, ಯೂನಿಯನ್ ಜೆಕ್ ಮತ್ತು ಅಮೇರಿಕನ್ ಧ್ವಜಗಳನ್ನು ಜತೆಯಾಗಿ ನೆಟ್ಟು ಹಿಟ್ಲರನ ಆತ್ಮಕ್ಕೂ ಶಾಂತಿದೊರೆಯದಂತೆ ಮಾಡಿರುವದು. ಆ ಮೇಲೆ ಬಂಗಾಳ ಸೊದಲಾದ ಕಡೆಗಳಲ್ಲಿ ಕೊರಗಿ ಸತ್ತವರ ಸ್ಮರಣೆಯೂ ಬರಬಹುದು. ಯೋಧರಿಗೆ ತಾವು ಯುದ್ಧರಂಗಗಳಲ್ಲಿದ್ದಾಗ ತಮ್ಮ ಪತ್ನಿಯರೂ ಹಲವರನ್ನು ಗೆದ್ದ ವಿಜಯೀಶ್ವರಣೆ ಬರಬಹುದು. ಜನಸಾಮಾನ್ಯರಿಗೆ ಗತಕಾಲದ ರೇಶನ್ ಕಾರ್ಡುಗಳು–ಗೋಧಿ ಅಕ್ಕಿಗಳ—ಸ್ಟೋರ್ ಏಜೆಂಟರ ನೆನಪು ಉಣ್ಣುವಾಗಲಾದರೂ ಬರಬಹುದು.

4 **ಸೇವೆ**—ಈ ಚತುರ್ಥ ಭಕ್ತಿ ನಮ್ಮ ಸಾಲಿಗಿದ್ದದ್ದೇ. ವ್ಯತ್ಯಾಸವಿಷ್ಟೆ:—ಯುದ್ಧಪೂರ್ವದಲ್ಲಿ ನಾವು ಬ್ರಿಟಿಷ್ ಸಾಮ್ರಾಜ್ಯ ಕಟ್ಟಲು ಸೇವೆ ಸಲ್ಲಿಸಿದ್ದೆವು; ಯುದ್ಧೋತ್ತರದಲ್ಲಿ ಅದರ ದುರಸ್ತಿಗಾಗಿ ಶ್ರಮಿಸಿದರಾಯಿತು. ಕುಸಿದುಬಿದ್ದ ಕಟ್ಟಡಗಳು, ಕಡಿದುಹೋದ ರಸ್ತೆ ಸಂಕಗಳು, ಕಳೆದುಹೋದ ಪ್ರತಿಷ್ಠೆ–ಇವೆಲ್ಲವುಗಳ ನಿರ್ಮಾಚನೆಗಾಗಿ ಹಿಂದೀಯರ ಸೇವೆ ಬೇಕಾಗಲಿದೆ. ಸಂತೋಷವೆಂದರೆ ಈ ಬಾರಿ ನಾವು ಏಕಾಂಗಿಗಳಲ್ಲ. ಜರ್ಮನಿ, ಜಾಪಾನು ಮತ್ತು ಇಡೀ ಜಗತ್ತಿನ ಸಣ್ಣ ಪುಟ್ಟ ರಾಷ್ಟ್ರಗಳೂ ನಮ್ಮ ಸಾಲಲ್ಲಿನಿವೆ. ಹಲವು 'ವರ್ಸ್ಸೈಲ್ಸ್ ಮೋರ್'ಗಳನ್ನು ಪಡೆದು ರಂಗದಿಂದ ಒಮ್ಮೆಗೆ ಹೇಗೂ ಬಂದ ನರ್ತಕಿಯ ಕಾಲೊತ್ತುವ ದಾಸಿಯಂತೆ, ರಂಗಭೂಮಿಯಿಂದ ಹೊರಬಿದ್ದ ಬ್ರಿಟನಿಗೆ ಭಾರತವು ಸೇವೆ ಸಲ್ಲಿಸಿದರಾಯಿತು.

5 **ಅರ್ಚನೆ**—ಭಾರತವು ತನ್ನ ಹಿಂದಿನ ಸಾಲಗಳನ್ನೆಲ್ಲಾ ಪೂರ್ತಿಯಾಗಿ ತೀರಿಸಿ, ಬ್ರಿಟನಿಗೆ ಕೊಟ್ಟುರುವ ಹೇರಳ 'ಸ್ಟರ್ಲಿಂಗ್ ಸಾಲ'ಗಳಿವೆ. ಅದನ್ನು 'ಕೃಷ್ಣಾರ್ಪಣಮಸ್ತು' ಎಂದು ಕಣ್ಣೀರೋದಕದಿಂದ ಅರ್ಚನೆ ಬಿಟ್ಟರಾಯಿತು. 'ಪುನರ್ರಚನಾ ನಿಧಿ', 'ಮಾಜೀ ಯೋಧನಿಧಿ', 'ಚರ್ಚಿಲ್ ಪಾದಕಾಣಿಕೆ'ಯ ಹರಿಪಾಣ'–ಇತ್ಯಾದಿಗಳು ಮುಂದೆ ಬರಬಹುದು; ಅರ್ಚನೆಗೆ ನಾವು ಸಂತೋಷಪೂರ್ವಕ ತಯಾರಿರಬೇಕು.. ಲೋಕಶಾಂತಿ ಹೋವ್ಯ

ಕಾ. ಸ್ಟಾಲಿನ್.
ಮೀಸೆಯ ಕುಡಿ ಮೇಲಾಯಿತು!

ನಡೆದಿದೆಯಂತೆ—ಕೊನೆಯ ಅರ್ಪಣೆಯಲ್ಲೊಮ್ಮೆ ಕೃಪಣತ್ವ ತೋರುವಷ್ಟು ನಾವು ಪಾಪಿಗಳಲ್ಲ.

6 **ವಂದನೆ**—ಆರ್ಘಾತ್ ಸಲಾಂ ಕೊಟ್ಟು ಸಂತೈಸುವದು. ನೀವೆಂದುದನ್ನೆಲ್ಲಾ ಶಿರಸಾವಹಿಸಿದೆವೆಂದು ಹೆಣಿಗೆ ಕೈ ಮುಟ್ಟಿ ಸೂಚಿಸುವದು. ಪ್ರತಿಯೊಂದು ಊರಿನಿಂದಲೂ ಸೇನೆಗೆ ಸೇರಿದವರಿದ್ದಾರೆ. ಅವರು ಅಲ್ಲಿರುವಾಗ ದಳನಾಯಕರಿಗೆ, ಗೌರವಾರ್ಹ ಸಂದರ್ಶಕರಿಗೆ, ಮತ್ತು ಇತರ ಅಧಿಕಾರಿಗಳಿಗೆಂದು, ದಿನಕ್ಕೆಷ್ಟತ್ತರಂತಾದರೂ ಸೆಲ್ಯೂಟ್ ಕೊಟ್ಟಿದ್ದಾರೆ. ಹಾಗೆ ಅಲ್ಲಿ ಕೊಟ್ಟಿಟ್ಟುದನ್ನೆಲ್ಲಾ, ಇಲ್ಲಿ ಊರಿನವರಿಂದ ಪಡೆಯಬೇಕು. ಅದ್ದರಿಂದ 'ಮಾಜೀ ಸೋಲ್ಜರರು ವಂದನೆಗರ್ಹರು' ಎಂಬ ನಿಯಮ ಜ್ಯಾರಿಗೆ ಬರಬಹುದು. ಅವರನ್ನು ವಂದಿಸಿದರೆ ನಾವಿ ಯುದ್ಧ ವಿಜಯವನ್ನು ಗೌರವಿಸಿದಂತಾಯಿತು. ಇನ್ನು ದೂರದಿಂದಲೇ ನಮಸ್ಕಾರ ಕೊಡುವ ಕೆಲವರ ದಳಗಳೇ ಉಳಿಯಬಹುದು. ಧಾನ್ಯ ರೇಶ್ಡಿ ಶಿಪನಿಗಾಗಿ ವಿಶೇಷವಾಗಿ ನೇಮಕಗೊಂಡಿದ್ದ ವಿವಧಾಧಿಕಾರಿಗಳು, ಮಾಜೀ ರೇಶನಿಂಗ್ ಆಫೀಸರರು, ಮಾಜೀ ಸ್ಟೋರುಗಳವರು—ಇವರಿಗೆಲ್ಲಾ ಆಗ ದೂರದಿಂದಲೇ ನಮಸ್ಕಾರ

7 **ದಾಸ್ಯ**—ಈ ಸೇವೆ ವ್ಯಾಯಶಃ ಹಿಂದಿನ ರೀತಿಯದೇ. ಮೊದಲಿನಂತೆಯೇ ಗುಲಾಮರಾಗಿ ಇದ್ದರಾಯಿತು. 'ನಾವು ಸ್ವತಂತ್ರರಂತೆ ವರ್ತಿಸಬೇಕು' ಎಂದು ದುರ್ಬೋಧನೆ ಕೊಡುವವರು ಗತ ಕಾಲದಲ್ಲಿದ್ದರು. ಯುದ್ಧೋತ್ತರ ರಚನೆಯು ಈ ಹವ್ಯಾಸವನ್ನು ನಿವಾರಿಸಬಹುದು. ಯುದ್ಧ ಗೆದ್ದ ಪಾಠವಿದೆ—ಸ್ವತಂತ್ರರಂತೆ ವರ್ತಿಸಿದವನಿಗೆ ಪತನ, ಕುತಂತ್ರರಂತೆ ವರ್ತಿಸಿದನೇನೇ ಫಲ, ಎಂಬುದನ್ನದು ಕಲಿಸಿದೆ. ಇದರ ಮೇಲಿಂದ ಇನ್ನು ಮುಂದೆ ಯಾರೂ ಆ ನಿರರ್ಥಕ ಬೋಧೆ ಕೊಡಲು

(೧೧ನೇ ಪುಟ ನೋಡಿರಿ)

ಮೈಸೂರು ಶ್ರೀಮನ್ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ
ಖಾಸ್ ವೈದ್ಯ ಅಂಬಳೆ ನರಸಿಂಹ ಪಂಡಿತರ ಮನೆತನದ

ಸಂತಾನ ಸಿಂಧೂರ

ಶೋಭನವಾಗಿ ಎಷ್ಟು ವರ್ಷವಾದರೇನು? ಬಹಿಷ್ಪ ಸಂಬಂಧದ ಹೊಟ್ಟೆ ನೋವು ಪೂರ್ಣ ಗುಣವಾಗದ ಹೊರತು ಖಂಡಿತ ಸಂತಾನವಾಗುವುದಿಲ್ಲ. ಸುರಾರು ದಿವಸದಲ್ಲಿ ಗುಣವಾಗಿ, ಜಾಗ್ರತೆ ಸಂತಾನ ಫಲ ಬೇಕಾದರು, ಈ ವರ್ಷಗಳಿಂದ ಪ್ರಖ್ಯಾತವಾದ ಮೇಲ್ಕಂಡ ಸಿದ್ಧೌಷಧ ಒಂದು ಸೆಟ್ ಸೇವಿಸಿರಿ, ಸಾಕು. ತೋಷನವಾದ ೧೫ ೧೬ ವರ್ಷ ಮಕ್ಕಳಿಲ್ಲದವರಿಗೂ ಮಕ್ಕಳಾಗಿವೆ. ಇಂಗ್ಲಿಷ್, ಆಯುರ್ವೇದಿಕ್ ಡಾಕ್ಟರುಗಳ ಶಿಫಾರಸನ್ನೂ ಅನೇಕ ಪ್ರಶಂಸಾ ಪತ್ರಗಳನ್ನೂ ಪಡೆದಿದೆ.

ಕ್ರಯ– ೧ ಸೆಟ್ 2 ರೂ. ಪ್ಯಾಕಿಂಗ್ ಮತ್ತು ಟಪ್ಪಾಲು ಖರ್ಚು ೧೦ ಆಣೆ ರೂ. ೨ ೧೦.೦ ಮಿಶಿಯಾರ್ಡರ್ ಮಾಡಿರಿ. ಕೂಡಲೇ ರಿಜಿಸ್ಟರ್ ಪಾರ್ಸೆಲ್ ರವಾನೆ ಪಿ. ವಿ. ಇಲ್ಲ. ಕಮೀಷನ್ ಏಜೆಂಟರು ಬೇಕಿಲ್ಲ. ಪತ್ರವ್ಯವಹಾರ ಗುಪ್ತ. ಕ್ಯಾಟ್ಲಾಗ್ ಉಚಿತ. ಅನುಪಾನ ಪತ್ರ ಔಷಧಿ ಸಂಗಡ

A. Ramaswami Aiyar,
Ambley, Yelandur P. O
(MYSORE Dt.)

ಎ. ರಾಮಸ್ವಾಮಿ ಅಯ್ಯರ್,
ಅಂಬಳೆ, ಯಳಂದೂರು ಪೋಸ್ಟು,
(ಮೈಸೂರು ಡಿಸ್ಟ್ರಿಕ್ಟ್)

ಉಡುಪಿ ಮಧ್ವಮತ

ಶಿವಳ್ಳಿ ಬ್ರಾಹ್ಮಣರ

ಧರ್ಮ ಛತ್ರ

ಇದೇ ತಾ. **8–10–44**ರಿಂದ

ರಾಮೇಶ್ವರ ದೇವಸ್ಥಾನದ ಬಡಗು ಬೀದಿಯಲ್ಲಿ ತೆರೆಯಲ್ಪಟ್ಟಿದೆ.

ಎಲ್. ಪರಸಿಂಗ ರಾವ್, ಪ್ರೊಪ್ರೈಟರ್.

ಉಡುಪಿ ಬೋರ್ಡಿಂಗ್ ಎಂಡ್ ಲಾಜಿಂಗ್, ಮಧುರ.

ದ. ಕ. ಜಿಲ್ಲೆಯ ಬೆಳೆಸುಧಾರಣೆಗಾಗಿ ಮುಖ್ಯ ಸೂಚನೆಗಳು

ದ. ಕ ಜಿಲ್ಲೆಯಲ್ಲಿ ಬೆಳೆಸಲ್ಪಡುವ ಮುಖ್ಯ ಬೆಳೆಗಳನ್ನು ಅವು ಬೆಳೆಸಲ್ಪಡುವ ಎಕ್ರೆವಾರು ವಿಸ್ತೀರ್ಣಗಳೊಡನೆ ಕೆಳಗಡೆ ನಮೂದಿಸಲಾಗಿದೆ—

1 ಭತ್ತ–5,86,000 ಎಕ್ರೆ.
2 ತೆಂಗು–48,000 ಎಕ್ರೆ.
3 ಹುರುಳಿ–23,700 ಎಕ್ರೆ
4 ಉದ್ದು–12,000 ಎಕ್ರೆ
5. ಹೆಸರು–8,180 ಎಕ್ರೆ.
6 ರಾಗಿ–6,400 ಎಕ್ರೆ.
7. ಕಬ್ಬು—4,120 ಎಕ್ರೆ.

ಮೇಲಿನ ಅಂಕಿಗಳ ಕಡೆಗೊಮ್ಮೆ ದೃಷ್ಟಿಯೋಡಿಸಿದೊಡನೆ, ದಕ್ಷಿಣ ಹಿಂದು ಸ್ಥಾನದ ಸರ್ವ ಪ್ರಧಮ ಆಹಾರ ಧಾನ್ಯವಾದ ಭತ್ತದ ಬೆಳೆಯ ಪ್ರಾಮುಖ್ಯತೆಯು ಒಡೆದು ಕಾಣುತ್ತದೆ

ಭತ್ತ ವ್ಯವಸಾಯದಲ್ಲಿರುವ ಸದ್ಯದ ದೋಷವೇನು? ಮತ್ತದನ್ನು ಹೇಗೆ ಸುಧಾರಿಸಬಹುದು?

(ಎ) ಬೀಜದ ಪರಿವರ್ತನವನ್ನು ತಗ್ಗಿಸಿ ಆನಾವ್ರಯವನ್ನು ನಿಲ್ಲಿಸಿರಿ-

ದಕ್ಷಿಣ ಕನ್ನಡದ ರೈತರು ವಾಡಿಕೆಯಂತೆ ಒಂದು ಎಕ್ರೆ ಹೊಲವನ್ನು ನೆಡುವ ನೇಜಿಗಾಗಿ, ಒಂದರಿಂದ ಒಂದೂವರೆ ಮುಡಿ ವರೆಗಿನ ಬೀಜದ ಬತ್ತವನ್ನು ಕಳದಲ್ಲಿ ಬತ್ತುತ್ತಾರೆ ಇದು ಅತಿದೊಡ್ಡ ಅನಾವ್ರಯ. ಯಾತಕಂದರೆ ಸರಿಯಾಗಿ ಹಸನಾದ ಕಳದಲ್ಲಿ ಮೇಲಿನ ಅಳತೆಯ ಸರೀ ಅರ್ಧ ದಷ್ಟು ಬೀಜವನ್ನು ಬಿತ್ತಿದರ ಸಾಕಾಗುತ್ತದೆ ಜಿಲ್ಲೆಯ ಎಲ್ಲಾ ರೈತರೂ ಇದೇ ಪರಿಮಾಣದಲ್ಲಿ ಬಿತ್ತುವ ಬೀಜವನ್ನು ಕಡಿಮೆಮಾಡಿಕೊಂಡಲ್ಲಿ ಎಷ್ಟು ದೊಡ್ಡ ಉಳಿತಾಯಮಾಗಬಹುದು! ೪/೫ಲಕ್ಷ ಆಥವಾ ೪½ಲಕ್ಷ ಮುಡಿ ಭತ್ತವು ಆ ಮೂಲಕ ಉಳಿಸಲ್ಪಟ್ಟು 'ಕೊರತೆಯಿರುವ ಜಿಲ್ಲೆ' ಎಂದು ನಮ್ಮಲ್ಲಿಗೆ ತಟ್ಟಿರುವ ಅಪವಾದವನ್ನೇ ತೊಡೆದುಬಿಡಬಹುದು.

(ಬಿ) ಅಂತಹ ನೇಜಿಗಳಿಂದ ಇಮ್ಮಡಿ ಮುನಾಫೆಯಿದೆ— ಹೀಗೆ ಕಡಿಮೆ ಬೀಜದ ನೇಜಿಯನ್ನು ನೆಡುವ ಕಾಲಾವಧಿ, ಮಣ್ಣಿನ ಸ್ಥಿತಿಗತಿ ಮತ್ತು ಭತ್ತದ ವೈವಿಧ್ಯ ಇತ್ಯಾದಿಗಳಿಗನುಗುಣವಾಗಿ ನೆಡುವಾಗ ದೂರದ ಒಂದು ಮಿತಿಯನ್ನಿಟ್ಟುಕೊಳ್ಳುವದು ಆಗತ್ಯ. ಸ್ಥಳೀಯ ವಿವರಗಳನ್ನೆಲ್ಲ ಆಯಾಯಾ ತಾಲೂಕಿನ ಜೆನೋನ್‌ಸ್ಟೇಟರರು ಸಂತೋಷಪೂರ್ವಕ ತಿಳಿಸಲು ಸಿದ್ಧರಿದ್ದಾರೆ

(ಸಿ) ಸ್ಥಳೀಯ ಹಾಳು ಬೀಜಗಳ ಬದಲಿಗೆ ಸುಧಾರಿತ ಹಾಗೂ ಕವಲೊಡೆವ ಗುಣವುಳ್ಳ ಬೀಜಗಳನ್ನೇ ಉಪಯೋಗಿಸಿರಿ— ದಕ್ಷಿಣ ಕನ್ನಡದ ಬೇಸಾಯಕ್ಕಾಗುವಂತಹ ವಿಶೇಷ ಹರಡುವ ಗುಣವುಳ್ಳ ಹಲವು ಸಿದ್ದ ನೇಜಿಗಳು ಭತ್ತ ಸಂಬಂಧದ ತಜ್ಞರಿಂದ ಮುಂದೆ ಬಂದಿದೆ. ಇವುಗಳ ಗುಣಾಂಶವನ್ನು ಕಂಡು ಹಿಡಿಯುವದಕ್ಕೂ ರೈತರ ಸಾಗುವಳಿಗು ಪಯೋಗಿಸಿ ಅಭಿವೃದ್ಧಿಗೊಳಿಸುವದಕ್ಕೂ ಆವುಗಳ ಬೀಜಗಳನ್ನು ಪಡೆಯಬಹುದು ಒಂದನೇ ಎರಡನೇ ಮತ್ತು ಮೂರನೇ ಬೆಳೆಗಳಿಗಾಗುವ ವಿವಿಧ ತರಗತಿಯ ಬಿತ್ತುಗಳಿವೆ. ಅಂತೆಯೇ ನೀರು ನಿಲ್ಲುವ ತಗ್ಗು ಕ್ಷೇತ್ರಗಳಂತಹ ವಿಲಕ್ಷಣ ಭೂಮಿಗಳಿಗೂ ಆಗುವ ಬೀಜಗಳೂ ಇವೆ ಈ ನೇಜಿಗಳನ್ನು ಅಧಿಕವಾಗಿ ಉತ್ಪಾದಿಸಿದಲ್ಲಿ ತತ್ಫಲವಾಗಿ ಶೇಕಡಾ 15ರಷ್ಟು ಧಾನ್ಯೋತ್ಪತ್ತಿ ಯಧಿಕವಾಗುತ್ತದೆ. ನರ್ಚಸ್ಯುಳ್ಳ ವರ್ಗದವರು ಮುಂದೆ ಬಂದು ಈ ಉತ್ತಮ ವರ್ಗದ ನೇಜಿ ಬೆಳೆಸುವರೆ ಕಳಗಳನ್ನು ನಿರ್ಮಿಸಿ, ಅವುಗಳು ಸರ್ವತ್ರ ಪ್ರಚಾರಗೊಳ್ಳುವಂತೆ ಸಹಾಯ ಮಾಡಿದಲ್ಲಿ ಅದೆಂತಹ ಅಮೂಲ್ಯ ಕಾರ್ಯವಾದೀತು! ಬೇರೆಬೇರೆ ಕಾಲದಲ್ಲಿ ಬೆಳೆಸಲುಗುವ ಕೆಲವು ಸುಧಾರಿತ ನೇಜಿಗಳನ್ನು ಕೆಳಗಡೆ ನಮೂದಿಸಲಾಗಿದೆ.

ಪ್ರಥಮ ಬೆಳೆಗೆ— ಬೆಳ್ತರಿ, ಬಿಳಿಯಕ್ಕಿಯ ತವಲಕನ್ನಡಿ, ಬಿಳಿಯಕ್ಕಿಯ ಹುಲ್ಲುಗ, ಬಿಳಿಯಕ್ಕಿಯ ಮಸ್ಕತಿ, ಕೆಂಪಕ್ಕಿ ಹುಲ್ಲುಗ

ದ್ವಿತೀಯ ಬೆಳೆಗೆ— ಅತಿಕಾಯ, ಕಾವಿಂಗನ್ ಪೂತಲ, ವೆಲ್ಲಸಾಂಬಾದ ಬೆರಕೆ ಬೀಜ, ಕೆಬಿಲಿನಾಯಾ, ಅತಿಕ್ರಾಯ, ಜಡ್ಡು ಹುಲ್ಲುಗ, ಕಾರ್ತಿಗ್ಯಾಸಂಬಾ.

ಮೂರನೇ ಬೆಳೆಗೆ— ತೆಕ್ಕಂಜೀರ, ಚಿತ್ರಕಾಳಿ, ಕಾಮಿಸಿಟೋಡಿ

(ಡಿ) ಯೋಗ್ಯ ಗೊಬ್ಬರ ಉಪಯೋಗಿಸಿರಿ; ಅಧಿಕ ಫಲ ಪಡೆಯಿರಿ

1. ಹಿಂಡೀ ಗೊಬ್ಬರಗಳು— 7 ರಿಂದ 8%ರಷ್ಟು ನೈಟ್ರೋಜನ್ ಇರುವ ಗೆಡ್ಡೆಗೆಣಸುಗಳ ಹಿಂಡೀ ಗೊಬ್ಬರಗಳು ಭತ್ತದ ಬೆಳೆಗೆ ಅತ್ಯುತ್ತಮವಾದುವು. ಆದ್ದರಿಂದ ಜಿಲ್ಲೆಯಲ್ಲಿ ಸುಲಭವಾಗಿ ದೊರೆಯುತ್ತದಲ್ಲದೆ, ಸರಕಾರದ ಬೇಸಾಯ ಖಾತೆಯ ಡಿಪ್ಲೋಮೀಗಳಲ್ಲೂ ವಿತರಣೆಗಾಗಿ ಸಂಗ್ರಹಿಸಲ್ಪಟ್ಟಿವೆ. ಈ ಗೊಬ್ಬರಗಳನ್ನು ಸರ್ವತ್ರ ಪ್ರಸಾರ ಮಾಡಿದಲ್ಲಿ ಲಾಭದಾಯಕ ರೀತಿಯಲ್ಲಿ ಧಾನ್ಯೋತ್ಪತ್ತಿಯು ಅಧಿಕವಾಗುವದು.

2 ಎಮ್ಮೋನಿಯಮ್ ಸಲ್ಫೇಟ್— ಈ ರಾಸಾಯನಿಕ ಗೊಬ್ಬರವನ್ನೀಗ ಭತ್ತ ಸಾಗುವಳಿದಾರರಿಗೆ ಕಡಿಮೆ ಬೆಲೆಯಲ್ಲಿ, ಸರಕಾರಿ ಎಗ್ರಿಕಲ್ಚರಲ್ ಡಿಪ್ಲೋಗಳಲ್ಲಿ ಮಾರಲ್ಪಡುತ್ತಿದೆ. ಇದರಲ್ಲಿ 20%ರಷ್ಟು ನೈಟ್ರೋಜನ್ ಇದೆಯಲ್ಲದೆ ವೈದ್ಯನ್ನಿದು ಬೇಗ ಬೆಳೆಯುವಂತೆ ಮಾಡುತ್ತದೆ. ಭತ್ತ ಸಾವಳಿಗೆ ರೂ 10-8-0 ಬೆಲೆಯ 100ರಾತ್ಲು ಎಮ್ಮೋನಿಯಮ್ ಸಲ್ಫೇಟನ್ನು ಹಾಕಿದರೆ ತದರಿಂದ ರೂ. 30-0-0 ಬೆಲೆಬಾಳುವ 6½ಮುಡಿಯಷ್ಟು ಧಾನ್ಯವು ಹೆಚ್ಚು ಉತ್ಪತ್ತಿಯಾಗುವುದು.

(3) ಹುಲುಸಾದ ಬೆಳೆಪಡೆಯುವದಕ್ಕಾಗಿ ಗೊಬ್ಬರ ಸಸಿಗಳನ್ನು ಕ್ರಮಬದ್ಧವಾಗಿ ಬೆಳೆಸಿರಿ- ನಡುವ ಮೊದಲು ಕಾಡುಗಳ ಹಸಿಯೆಲೆಯ ಗೊಬ್ಬರಹಾಕುವದರ ಪರಿಣಾಮವೇನೆಂಬುದನ್ನು ಎಲ್ಲಾ ರೈತರೂ ಬಲ್ಲರು. ಆಗಾಗ ಕಾಡುಗಳು ಬರಿದಾಗುವದನ್ನು ಬಿಟ್ಟರೂ, ಹಸಿಯೆಲೆಗಳ ಸಂಗ್ರಹ ಸಾಗೂ ಸಾಗೋಣಕ್ಕೆ ತಾಗುವ ಖರ್ಚುಗಳಿಂದಾಗಿ ಇಂತಹ ಗೊಬ್ಬರದ ಉಪಯೋಗಕ್ಕೆ ತೊಂದರೆಯಿದೆ. ಇದಕ್ಕೆ ಪ್ರತಿಯಾಗಿ ಇರುವ ಪರಿಣಾಮಕಾರಿಯೂದ, ಆಗ್ಗವಾದ ಮತ್ತು ಸುಲಭವಾದ ಒಂದು ಉಪಾಯವೆಂದರೆ ಕೋಲಿಂಜೆ, ಡಾಯಿಂಚಾ, ಸನ್ನೆಂಪ್, ಅಥವಾ ಸೆಸ್ಬೇನಿಯಾ ಸ್ಪೇಸಿಯಾ ಮೊದಲಾದ ಗೊಬ್ಬರ ಸಸಿಗಳನ್ನು ಬೆಳೆಸುವದು. ಈ ಜಿಲ್ಲೆಯಲ್ಲಿ ಬಹಳವಾಗಿ ಬೆಳೆಸಲ್ಪಡುವ ದ್ವಿದಳ ಧಾನ್ಯಗಳೊಂದಿಗೆ ಬೆರಕೆಯಾಗಿ ಬೀಜದ ಗೊಬ್ಬರ ಸಸಿಗಳನ್ನು ಬಿತ್ತಿದರೆ ಸೊಗಸಾಗಿ ಬೆಳೆಯುತ್ತವೆ. ಹೀಗೆ ಮಾಡಿದಲ್ಲಿ ಸಾಕಷ್ಟು ಗೊಬ್ಬರ ಸಸಿಯ ಬೀಜಗಳು ದೊರೆತು ಹೊರಗಿನ ಆಶ್ರಯವೇ ಬೇಡವಾಗುವದು.

ಸುಧಾರಿಸಲ್ಪಡಬೇಕಾದ ಇತರ ವಿಷಯಗಳೂ ಇವೆ. ಜಾನುವಾರುಗಳ ಗೊಬ್ಬರದ ಸಂಗ್ರಹ ವ್ಯವಸ್ಥೆ, ಹಕ್ಕಿ ಪ್ರಾಣಿಗಳ ಕಸ್ತೂರಿ ಇತ್ಯಾದಿಗಳು ಅನಾವ್ರಯವಾಗದಂತೆ ಸಂಗ್ರಹಿಸುವದು, ಮಣ್ಣನ್ನು ಉತ್ಕೃಷ್ಟವಾಗಿ ಹದವಾಡುವ ಸುಧಾರಿತ ಉಪಕರಣಗಳ ಉಪಯೋಗ ಮತ್ತು ಬೆಳೆಗಳಿಗೆ ತಾಗುವ ರೋಗ, ಹುಳ, ಕಳೆಗಳಿಗೆ ಪರಿಹಾರೋಪಾಯಗಳು- ಇತ್ಯಾದಿಗಳಿಗೆ ಪ್ರತಿಯೊಂದು ತಾಲೂಕಿನಲ್ಲಿಯೂ ನೇಮಿಸಲ್ಪಟ್ಟಿರುವ ಜೆನೋನ್‌ಸ್ಟೇಟರರ, ಆವರ ಫೀಲ್ಡ್ ಮೇಸ್ಟ್ರಿಗಳ ದಳದೊಂದಿಗೆ ತಮ್ಮಿಂದ ಸಲಹೆ ಕೇಳುವ ಎಲ್ಲಾ ರೈತರಿಗೂ ಸಹಾಯವೀಯುವದಕ್ಕೂ ಮಾರ್ಗದರ್ಶಕರಾಗುವದಕ್ಕೂ ಸದಾ ಸಿದ್ಧರಿದ್ದಾರೆ

—ಕೆ. ವೆಂಕಟರಾಮನ್,
ಡಿಸ್ಟ್ರಿಕ್ಟ್ ಎಗ್ರಿಕಲ್ಚರಲ್ ಆಫೀಸರ್,
ಮಂಗಳೂರು

ನೋಟೀಸು

ತಾರೀಕು 8 2-1945ನೇ ಸಮಯುಗದ ಸಂಚಿಕೆಯಲ್ಲಿ ನಾನು ಕೊಟ್ಟಿರುವ ಪ್ರಕಟನೆಯಲ್ಲಿ ಉಡ್ಪಿ ಮುನಸಿಪಾಲಿಟಿಯ ಬೆಲ್ಲಾಳೆ ಕೃಷ್ಣ ಇಬ್ರಾಹಿಂ ಸಹೋದರು ನಗ್ಗರೀದು ತಾರೀಕು 29-1-1945ರಲ್ಲು ನನ್ನನ್ನು ದಾರಿಯಲ್ಲಿ ಅಡ್ಡಕಟ್ಟಿ ಬೆಳ್ಳಿ ತಿರಿಯಣ್ಣಯ್ಯನವರ ಸೊಸ ಜಗಲಿಯಲ್ಲಿ ಕುಂಜಿಬೆಟ್ಟು ಪಂಚಕಟ್ಟು ಮಣ ನ್ಯಾಕರ ಹೆಸರಲ್ಲಿ ಒಂದು ಪ್ರೊ ನೋಟು ಬರ್ಸಿಕೊಂಡಿರುತ್ತಾರಾಗಿ ಪ್ರಕಟಿಸಿದ್ದರೂ ಸದ್ರಿ ಇಬ್ರಾಹಿಂ ಸಹೋದರು ಸದ್ರಿ ದಿನವೆ ಸದ್ರಿ ಬೆಳ್ಳಿ ತಿರಿಯಣ್ಣಯ್ಯನವರಿಗೆ ಸುನಸಿಹಲ್ ನೋಟೀಸು ಜ್ಯಾರಿಮಾಡುವ ಉದ್ದಿಶ್ಯ ಅಲ್ಲಿಗೆ ಬಂದವರೆಂತೆಲೂ ಮತ್ತು ಸದ್ರಿ ನೋಟಿನ ವಹಿವಾಟಿಕ್ಕೆ ಅವರು ಸೇರಿದವರಲ್ಲವೆಂತಲೂ ನನಗೆ ಆಗ ಸಮಾಧಾನವಾಗಿರುತ್ತದೆ ಸದ್ರಿ ಪ್ರಕಟಣೆಯಲ್ಲಿ ಇಬ್ರಾಹಿಂ ಸಹೋದರು ಕೇರಿದವರೆಂತ ಪ್ರಕಟಿಸಿದ್ದು ತಪ್ಪು ಅಭಿಪ್ರಾಯದಿಂದಾಗಿರುತ್ತದೆ ಸದ್ರಿ ನೋಟಿನ ವಿಷಯ ನೋಟು ಬರ್ಸಿಕೊಂಡವರೂ ಸಾನೂ ಸದ್ರಿ ನಿವಾದವನ್ನು ರಾಜಿಯಿಂದ ತೀರ್ಮಾನಿಸಿಕೊಂಡಿರುತ್ತೇವೆ

ಪಿ. ಶ್ರೀನಿವಾಸಾಚಾರ್ಯನ ರುಜು
ಉಡುಪಿ, ಪಣಿಯಾಡಿ ಮನೆ
ತಾ. 12-2-1945

CANARA BANK LIMITED.

(Incorporated in British India with limited liability)

(ESTD. 1906)

General Manager **P. S. Nayak,** B. A. (Hons.) (Cantab.)

LIABILITIES	Dec 31 1944 Rs	1943 Rs
Capital Subscribed	29,00,000	29 00,000
Capital Paid up	26,33,583	22,49,439
Reserves	10,34 403	8 54,186
Deposits	2,30,09,445	1,97 85,847
Due to Bankers	34,37,515	20,00,000
Call Deposits from Banks	8 50,800	
Branch Adjustments	13,83,632	10 08,553
Bills for collection and Foreign Bills negotiated	18,31,405	26,27,394
Other Liabilities	1,30,643	15,766
Profit for the Year	2 75,195	2,68 576
TOTAL.	3,46,45,816	2,68 09,762

ASSETS	Dec 31 1944 Rs	1943 Rs
Cash	38 97,414	73,51,050
Govt Securities	1,17 93 035	90,47 653
Advances to Customers	1 43 10 118	22,99,429
Bills for Collection and Foreign Bills negotiated	18 31 405	26,27,394
Landed Properties	30,30,174	70,736
Bank Premises & Furniture & Fixtures	1 17 250	93,993
Other Assets	6,40 357	3,13,497
	3,46 15 816	2,68 09 762

NOTICE
IN THE COURT OF THE DISTRICT MUNSIF OF MANGALORE

S. C. No. 460 of 1944

Between.—

R. B. C. D. Andrade ..Plaintiff
and
Mammi Beary & another
Defendants

To

1st Deft Mammi Beary, son of Khadri Beary, 2nd Deft. Hammade Kutti Beary, son of Kalandan Beary – Both residing at Kalnad village and Chamnad village of Kasaragod Taluk respectively

Please take notice that the above suit filed by the plaintiff for the recovery of Rs. 263 8-8 being the amount due under the demand promissory note dt. 200 0 0 executed by you on 7 5-1942 in favour of the plaintiff, together with interest and costs of suit, will come on for hearing on 28 2 1945 in the above Court. You are hereby called upon to appear in person or through a Lawyer on the said date failing which the suit will be decided in your absence

Mangalore | M. Annappa Kamath,
6 2-1945 | Vakil for plaintiff

★ ಯುದ್ಧ ಸಾಲ ಸಂಗ್ರಹದ ದುರ್ವಿಧಾನಗಳು! ★

ನವಢಿಲ್ಲಿಯಲ್ಲಿ ನಡೆಯುತ್ತಿರುವ ಈ ಬಾರಿಯ ಕೇಂದ್ರ ಎಸೆಂಬ್ಲಿ ಅಧಿವೇಶನದ ಚರ್ಚೆಗಳಲ್ಲಿ ಜೀವಕಳೆ ಕಂಡು ಬರುತ್ತಿದೆ. ಇಡೀ ರಾಷ್ಟ್ರದ ಜನ ಸಾಮಾನ್ಯರ ಹೃದಯದ ಕೂಗು ಎಸೆಂಬ್ಲಿ ಭವನದಲ್ಲೂ ಪ್ರತಿಧ್ವನಿಸಿ, ಸ್ವಾರಸ್ಯವುಳ್ಳ ಸಂಗತಿಗಳನ್ನು ಬೆಳಕಿಗೆ ತಂದಿದೆ.

ಸರಕಾರದ ಪ್ರಭುವು ಸೋಲು

ಒಂದೀಯರ ಮೇಲೆ ಅಸಂಬದ್ಧ ನಿರ್ಬಂಧ ಹೇರಿರುವ ದಕ್ಷಿಣ ಆಫ್ರಿಕದ ಸರಕಾರದ ಮೇಲೆ ಆರ್ಥಿಕ ಪ್ರತೀಕಾರೋಪಾಯಗಳನ್ನು ಕೈಕೊಳ್ಳಲು ಶಂಕಿಸುತ್ತಿರುವ ಸರಕಾರದ ವರ್ತನೆಯನ್ನು ನಿಷೇಧಿಸಲು ಶ್ರೀಲಾಲ್‌ಚಂದ್ ನವಲ್‌ರಾಯಿಯವರು ತಂದ ನಿಲುವಳಿ ಸೂಚನೆಯ ಮತಕ್ಕೆ ಬೀಳದೇನೇ ಮುಂಜೂರಾಯಿತು ಹಿಂದೀ ಸರಕಾರದ ದಾಕ್ಷಿಣ್ಯ, ದೌರ್ಬಲ್ಯ ಮತ್ತು ಲಂಡನಿನ ಒತ್ತಾಯಕ್ಕೊಳಗಾದ ನಿಷ್ಕ್ರಿಯೆಗಳು ಕಾಂಗ್ರೆಸ್ ಸದಸ್ಯರಾದ ಸಿ. ಅಬ್ದುಲ್ ರ್ಹಯವರಂತೆಯೇ ಸರ್ ಕವಾಸ್ಜಿ ಜಹಾಂಗೀರರಿಂದಲೂ ಖಂಡಿಸಲ್ಪಟ್ಟವು ಕಾಮನ್‌ವೆಲ್ತ್ ಸಂಬಂಧದ ಸದಸ್ಯರಾದ ಡಾ! ಖರೆಯವರು ಈ ವಾಗ್ಬಹಿಷ್ಕಾರಗಳಿಂದ ತಪ್ಪಿಬ್ಬಾಗಬೇಕಾಯಿತು 'ಕಾರ್ಯಾಚರಣೆಗಾಗಿ ಸರಕಾರಕ್ಕೆ ಸಮಯ ಬೇಕಾಗಿದೆ' ಎಂಬ ಸೊಲ್ಲೊಂದಲ್ಲದೆ ಬೇರೆ ಪ್ರತಿವಾದ ಅವರ ಬಾಯಿಯಿಂದ ಬರಲಿಲ್ಲ.

ರಾಷ್ಟ್ರೀಯ ಯುದ್ಧ ಮುಖಕ್ಕೆ (National War Front) ಮಂಗಳಾರತಿ!

ರಾಷ್ಟ್ರೀಯ ಯುದ್ಧ ಮುಖವನ್ನೇ ರದ್ದುಗೊಳಿಸಬೇಕೆಂದು ಸರ್. ಯಾಮಿನ್ ಖಾನರು ತಂದ ಠರಾವಿಗೆ, ಆ ಕುರಿತು ಹರ್ಷೋತ್ಕರ್ಷ ನಾರ್ಚಿ ಪ್ರಥಮ ನಾರದಲ್ಲಿ ತಿಳಿಸುವೆವೆಂದು ಸುದ್ದಿಪಾತೆಯ ಸದಸ್ಯ ಸರ್. ಸುಲ್ತಾನ ಅಹಮ್ಮದರು ಭರವಸೆ ಕೊಟ್ಟುದೊಂದೆ ಸೂಚನೆ ತಂದವರು ಹಿಂದೆಗೆದುಕೊಳ್ಳಲು ತಯಾರು. ಆದರೆ ಸಭೆಯದಕ್ಕೊಪ್ಪದೆ ಯುದ್ಧಮುಖದ ಪ್ರಚಾರ ವಿಧಾನಗಳ ಮೇಲೆ ತೀವ್ರ ಬಾಣಗಳನ್ನು ಪ್ರಯೋಗಿಸಿ ಛಾಡಿಸಿತು! 'ಯುದ್ಧಮುಖವೆಂದರೆ ಜೋಹುಕುಂಪಾಲರ ದೆಸೆಂದು ತಂಡ. ಸರಕಾರದ ಪಿತ್ಥರಿಗೆ ಉದ್ಯೋಗ-ಸರಕಾರೀ ಪಕ್ಷಪಾತೀ ಪತ್ರಿಕೆಗಳಿಗೆ ಹಣಕೊಡವದೇ ಅದರ ಕೆಲಸ' ಎಂದದಕ್ಕೆ ಸರ್ದಾರ್ ಮಂಗಲಸಿಂಗರ ನಾಮಕರಣ ಶ್ರೀ.ಬದ್ರಿದತ್ತರಿಶ್ತ ಬಿರುದುಗಳು ಅದಕ್ಕಿಂತಲೂ ದೊಡ್ಡವು-'ಒಂದು ಸುಳ್ಳುಗಾರರ ಸಂಸ್ಥೆ! ಸುಮಾರು ಒಂದು ಕೋಟಿ ರೂ ಸಾರ್ವಜನಿಕ ಹಣದ ಅನಾವ್ಯಯ'. ಮಂದಗಾಮಿ ಶ್ರೀಮಂತ ಸರ್. ಕವಾಸ್ಜಿ ಜಹಾಂಗೀರರು ಕೂಡ, ಯುದ್ಧ ಮುಖದ ಆವಶ್ಯಕತೆಯನ್ನು ಸಮರ್ಥಿಸಿದರೂ ಯಾವುದಾದರೊಂದು ಪಕ್ಷದ ಸನ್ಮರ್ಥನೆಗಾಗಿ ಅದರ ಉಪಯೋಗವಾಗಬಾರದೆಂದರು. ಹಿಂದೊಮ್ಮೆ ಯುದ್ಧ ಮುಖದ ನಾಯಕರಾಗಿದ್ದ ಮಿ. ಜಿತ್ ಚೌಧರಿಯವರು 'ಅದರ ದೊಡ್ಡ ಕೆಲಸವೆಂದರೆ ಇದ್ದ ಹಣವನ್ನು 'ರ್ಯಾಲಿ'ಗೆ ಖರ್ಚುಮಾಡುವದೊಂದೇ' ಎಂದು ತನ್ನ ಸ್ವಾನುಭವವನ್ನು ನಿವೇದಿಸಿಕೊಂಡರು. ಯುದ್ಧ ಮುಖದ ಆವಶ್ಯಕತೆಯನ್ನು ಗಂಭೀರವಾಗಿ ವರ್ಣಿಸಿ, ಕಾಂಗ್ರೆಸ್ಸನ್ನು ಹೀನಾಯವಾಗಿ ದೂಷಿಸಿ ನಂಜನ ನಗೆಯೆಬ್ಬಿಸಿದ ಕೀರ್ತಿ ಶ್ರೀ ಜಮುನಾದಾಸ ಮೆಹತರದ್ದು. 'ಅನ್ಯಥಾ ಅವಾಯಕಾರಿಗಳಾಗುತ್ತಿದ್ದ ನಮ್ಮವರೇ ಆದ ನಿರುಪದ್ರವೀ ಜನರು ಕಾರಿನಲ್ಲಿ ಧ್ವನಿವಾಹಕ ಯಂತ್ರಗಳ ಮುಂದೆ ಹಾಡುತ್ತಾ ಹೋಗುವದರಿಂದ ಹಾನಿಯೇನು?'ಎಂಬ ದುರ್ಬಲವಾದೊಡನೆ ಯುದ್ಧಮುಖ್ಯವನ್ನು ಸಮರ್ಥಿಸಿ ಪರಿಹಾಸ್ಯದ ನಗೆಯೆಬ್ಬಿಸಿದ ಶ್ರೀ ಕೈಲಾಸ್ ಬಿಹಾರಿಲಾಲರಂಥವರೂ ಇದ್ದರು ಈ ಸಂಬಂಧದ ಚರ್ಚೆ ಮುಂದುವರಿಸಲ್ಪಟ್ಟಿದೆ

ಕ್ರೌನ್

ರಬ್ಬರ್ ಸ್ಟ್ಯಾಂಪ್ ಕಂಪೆನಿ

18 ಬಲ್ಮಠ ರಸ್ತೆ, ಮಂಗಳೂರು.

ರಬ್ಬರ್ ಮೊಹರು ಸೈನ್ ಬೋರ್ಡ್ ಪ್ರಸ್ತುತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co.

18 Balmat Road, MANGALORE.

Approved firm by the Govt. of Mysore, Certified by the Agent of the Govt. of India in Ceylon. ESTD 1906

ಎಸೆಂಬ್ಲಿಯಲ್ಲಿ ಸರಕಾರಕ್ಕೆ ಪ್ರತಿಭಟನೆ-ಪರಿಹಾಸ್ಯ-ಪರಾಭವ!

❖

ಯುದ್ಧ ಸಾಲ ಸಂಗ್ರಹದ ಅತಿರೇಕಗಳು.

ಮಾತುಬಾಣ ಮತ್ತು ಮತದಾನದ ಮೂಲಕ ಸರಕಾರಕ್ಕೆ ಸೋಲೊಡ್ಡಿದ ಮತ್ತೊಂದು ಸೂಚನೆಯೆಂದರೆ 'ಯುದ್ಧ ಸಾಲ (War loans)ಗಳ ಮತ್ತು ರಾಷ್ಟ್ರೀಯ ರಕ್ಷಣಾ ಪತ್ರ (National Savings Certificates) ಗಳ ಸಂಗ್ರಹ ಕಾರ್ಯಗಳಲ್ಲಿ ಆಯೋಗ್ಯ ಹಾಗೂ ಅಕ್ರಮವಿಧಾನಗಳನ್ನು ಕ್ಷಮಿಸುವ ಹಾಗೂ ಪ್ರೋತ್ಸಾಹಿಸುವ ಸರಕಾರದ ವರ್ತನೆಯ ನಿಷೇಧಾರ್ಥನಾದ ನಿಲುವಳಿ ಸೂಚನೆ'. ಮುಸ್ಲಿಂ ಲೀಗ್ ಸದಸ್ಯರಾದ ಬಿಹಾರಿನ ಮೌಲ್ವಿ ಅಬುಲ್ ಘನಿಯವರು ಈ ಸೂಚನೆ ತಂದಿದ್ದರು. ತಟಸ್ಥರಾಗಿ ನಿಂತ ಫೆಜ್ಲಾವಿ ಮತ್ತು ನೇಥಾರನ್ನು ಬಿಟ್ಟು ಕಾಂಗ್ರೆಸ್, ಮುಸ್ಲಿಂ ಲೀಗ್, ರಾಷ್ಟ್ರೀಯ ಪಕ್ಷದ ಸರ್ವ ಸದಸ್ಯರೂ ಈ ಸೂಚನೆಗೆ ಬೆಂಬಲ ಕೊಟ್ಟರು.ಆದು 47ಅನುಕೂಲ, 10 ಪ್ರತಿಕೂಲ ಮತ ದೊರೆತು ಮುಂಜೂರಾಯಿತು.

ಬಿಹಾರಿನ ನಿದರ್ಶನಗಳು

ಮೇಲಿನ ಕಡಿತ ಸೂಚನೆ ತಂದ ಮೌ. ಘನಿಯವರು ಸಾಧಾರವಾಗಿ ಮಾತಾಡಿದರು. ಬಿಹಾರಿನಲ್ಲಿ ರೂ. 10ರ ಸೇವಿಂಗ್ಸ್ ಸರ್ಟಿಫಿಕೇಟು ಪಡೆಯದವರ ಮಕ್ಕಳನ್ನು ಶಾಲೆಗಳಿಂದೋಡಿಸಲಾಗುತ್ತದೆ. ಕೋವಿ ಲೈಸನ್ಸ್‌ದಾರರು ವರ್ಷಕ್ಕೆ ರೂ. 200ರಿಂದ 500ರ ವರೆಗೆ ತೆರಲೇ ಬೇಕು. 1ರೂಪಾಯಿ ತೀರ್ವೆ ಕೊಡುವವರು 20 ರೂಪಾಯಿಯಂತೆ ಸರ್ಟಿಫಿಕೇಟು ಪಡಕೊಳ್ಳತಕ್ಕದ್ದೆಂದು ಹಳ್ಳಿಗಳಲ್ಲಿ ಡಂಗುರ ಮೂಲಕ ಸಾರಲಾಗಿದೆ. ಅಧಿಕಾರಿಗಳ ಅಪೇಕ್ಷೆಯನ್ನು ಮನ್ನಿಸದವರಿಗೆ ಎಲ್ಲಾ ವಿಧದ ಕೊಂದರೆಯೆಯಲಾಗುತ್ತಿದೆ. ರಾಜಮಹಾಲಿನ ಇಬ್ಬರು ಸಾಹುಕಾರರನ್ನು ರೂ. 10,000ದ 'ಬೋಂಡು'ಗಳನ್ನು ಪಡೆಯಬೇಕೆಂದು ಒತ್ತಾಯಿಸಲಾಯಿತು. ಅವರು ಒಂದು ಸಾವಿರದ್ದನ್ನು ಮಾತ್ರ ಕೊಂಡುಕೊಳ್ಳಲಿಚ್ಛಿಸಿದರು ಕೂಡಲೇ ಅವರ ಲೆಕ್ಕಪತ್ರಗಳ ತನಿಖೆನಡೆಯಬೇಕೆಂದು ಅಲ್ಲಿಯ ಸಬ್ ಡಿವಿಜನಲ್ ಆಫೀಸರರ ನೋಟೀಸು ಹೋಯಿತು. ಇದು ಹೈಕೋರ್ಟಿಗೆ ಹೋದಾಗ ಜಡ್ಜರು ಈ ಕುರಿತು ತೀಕ್ಷ್ಣೋಪಾಯ ಪ್ರಕಟಿಸಿ, ಕಾನೂನು ಕರ್ತವ್ಯದ ಅಧಿಕಾರಿಗಳ ಅಕ್ರಮ ವರ್ತನೆಗಳಿಂದ ನಾಗರಿಕರನ್ನು ರಕ್ಷಿಸುವದು ಕೋರ್ಟುಗಳ ಕರ್ತವ್ಯವೆಂದಿದ್ದಾರೆ-ಎಂದು ಮೌ. ಘನಿಯವರ ಉದಾಹರಣೆ.

'ಸರ್ಟಿಫಿಕೇಟು ಪಡೆಯದ ಗೃಹ ಸದಸ್ಯರಿಗೂ ಕುಕ್ಕುಟಾಸನವಿರಲಿ'

ಯುದ್ಧ ಸಾಲ ಮತ್ತು ಸೇವಿಂಗ್ಸ್ ಸರ್ಟಿಫಿಕೇಟುಗಳಿಗೆ ಜವಾಬ್ದಾರಿಯಾಗಿರುವ ಕೇಂದ್ರ ಸರಕಾರವೇ ಸಂಗ್ರಹದ ದುರ್ವಿಧಾನಗಳಿಗೂ ಕೊಡೆಯಲ್ಲದೆ ಪ್ರಾಂತೀಯ ಸರಕಾರಗಳಲ್ಲವೆಂದು ಶ್ರೀ. ಕೆ. ಸಿ. ನಿಯೋಗಿಯವರ ಅಧಿಕಾರಯುಕ್ತವಾದ. ಅವರು ಸಂಯುಕ್ತ ಪ್ರಾಂತ್ಯದ ಒಂದು ಸ್ವಾರಸ್ಯಮಯ ನಿದರ್ಶನವನ್ನು ತೋರಿದರು. ಒಬ್ಬ ಬಡಮನುಷ್ಯನನ್ನು ಸರ್ಟಿಫಿಕೇಟು ನಿರಾಕರಣೆಗಾಗಿ ಕುಕ್ಕುಟಾಸನ (ಕೋಳಿಯಂತೆ ತಲೆಯನ್ನು ನೆಲಕ್ಕೆ ತಾಗಿಸಿ ಕುಳಿತುಕೊಳ್ಳುವದು) ದಲ್ಲಿ ಕುಳ್ಳಿರಿಸಲಾಯಿತಂತೆ. ಶ್ರೀ ನಿಯೋಗಿಯವರು ಸಭಿಕರ ಹೊಟ್ಟೆ ತುಂಬಾ ನಗುವಿನ ನಡುವೆ ಗೃಹಸದಸ್ಯರನ್ನು ಸಂಬೋಧಿಸಿ ಹೇಳಿದರು--"ಸೇವಿಂಗ್ಸ್ ಸರ್ಟಿಫಿಕೇಟುಗಳನ್ನು ಕೊಂಡುಕೊಳ್ಳದ ಗೃಹ ಸದಸ್ಯರೂ ಈ ಸಭಾಭವನದಲ್ಲೊಮ್ಮೆ ಕುಕ್ಕುಟಾಸನ ಹಾಕಿ ತೋರಿಸಲಿ!" ಆ ಬಡ ಮನುಷ್ಯನು ರೂ. 15ಕೊಡಲೊಪ್ಪಿದ ಮೇಲೆಯೇ ಆ ಸನ ಬಿಡುಗಡೆಗೊಂಡನಂತೆ! "ಬೇಂಕುಗಳಲ್ಲಿ ಸಾಲ ಮಾಡಿ ಜನರು ಸರ್ಟಿಫಿಕೇಟುಗಳನ್ನು ಪಡೆದುಕೊಳ್ಳುತಿದ್ದಾರೆ; ಆದ್ದರಿಂದ ಅದು ಉಳಿತಾಯದ ಹಣವಲ್ಲ, ಸಾಲದ ಹಣ" ಎಂದರು ಶ್ರೀ ನಿಯೋಗಿ.

ಅಧಿಕಾರಿಗಳ ಅತಿರೇಕ ಜುಲುಮೆ.

ಈ ಕುರಿತು ಕೆಲವು ಅಧಿಕಾರಿಗಳ ಒತ್ತಾಯವೇ ವಿಶೇಷವೆಂದು ಸರ್. ಮಹಮ್ಮದ್ ಖಾನರು ದೂರು, ಒಬ್ಬ ಬಡ ಹಾಲುಮಾರಾಟದವನಿಂದ ರೂ. 2,000ದ ಸೇವಿಂಗ್ಸ್ ಸರ್ಟಿಫಿಕೇಟು ಪಡಕೊಳ್ಳುವಂತೆ ಕೇಳಲಾಯಿತು. ತೀರ್ವೆ ತೆರಲು ಹೋದಾಗ ಸರ್ಟಿಫಿಕೇಟು ಪಡಕೊಳ್ಳು

ಲಲಿತಕಲಾ ಕರ್ನಾಟಕ ಸಂಗೀತ ಸಭಾ, ಮುಂಬಯಿ

ಇವರು ಉಡುಪಿ ಬೋರ್ಡ್ ಹೈಸ್ಕೂಲಿನ 'ಪೀಪಲ್ಸ್ ಹಾಲಿ'ನ ಸಹಾಯಾರ್ಥವಾಗಿ ಇದೇ ಫೆಬ್ರವರಿ ತಾ. ೧೪ ರವಿವಾರ ಬೆಳಿಗ್ಗೆ ೯-೩೦ಕ್ಕೆ ಪರೇಲ್ ಜಂಕ್ಷನಿನ ಬಳಿ ದಾಮೋದರ ಥೆಕರ್ಸೀ ಹಾಲಿನಲ್ಲಿ

ಸಂಶಯ ಸಾಮ್ರಾಜ್ಯ

ನೆಂಬ ನೂತನ ಸಂಗೀತ ನಾಟಕವನ್ನು ಅಭಿನಯಿಸುವರು.

ಮುಂಬಯಿಯಲ್ಲಿರುವ ಕನ್ನಡಿಗರೆಲ್ಲ ಪ್ರೋತ್ಸಾಹಿಸಬೇಕಾಗಿ ವಿನಂತಿ

ಕಾರ್ಯದರ್ಶಿ,
ಪೀಪಲ್ಸ್‌ಹಾಲ್ ರಕ್ಷಣಾ ಸಮಿತಿ, ಬೋರ್ಡ್ ಹೈಸ್ಕೂಲ್, ಉಡುಪಿ.

ಬಲವಂತಗುಟಿಕಾ (Nerve strengthening Pills)

(ನವ ಜವಾನ ಗುಳಿಗೆಗಳು)

ಪೇಣಿ ವನಸ್ಪತಿಯಿಂದ ತಯಾರು ಮಾಡಿದ ಈ ಗುಳಿಗೆಗಳಿಂದ ರಕ್ತಶುದ್ಧಿ ಮತ್ತು ಬಲವೃದ್ಧಿ ಆಗಿ ಪರಮಾಗರಮಿಯಿಂದ ಆಫವಾ ಕೆಟ್ಟ ಚಾಲಿನಿಂದ ಉಂಟಾದ ರೋಗಗಳು ಯಶ್ಶಾ ಹೋಗುತ್ತವೆ. ಈ ಔಷಧವು ಹೆಂಗಸರ ಮತ್ತು ಚಿನ್ನ ಹುಡುಗರ ಕಡಿತ ಮುಂತಾದ ರೋಗಗಳ ಮೇಲೆ ಸಹಾ ಒಳ್ಳೆ ಉಪಯುಕ್ತ ಇರುತ್ತದೆ. ಬಾಟ್ಲಿ ಸಂಗಡ ಇದ್ದ ಅನುಪಾನ ಪತ್ರಿಕೆ ಸರಿಯಾಗಿ ಔಷಧ ಸೇವನೆ ಮಾಡಿದರೆ ಆ ರೋಗಗಳು ಒಂದೆ ಸಪ್ತಕ್ಕೆ ದಲ್ಲಿ ಶಾಶ್ವತಾಗುತ್ತವೆ. ೧ ಸಪ್ತಕದ ಒಂದು ಬಾಟ್ಲಿ ಕಿಮ್ಮತ್ತು (೩-೦-೦) ಎರಡು ರೂಪಾಯಿ. ಟಪ್ಪಾಲ ಖರ್ಚು ಬೇರೆ. ಒಮ್ಮೆಲೆ ಒಂದು ಡಜನ ಬಾಟ್ಲಗಳು ತರಿಸಿಕೊಂಡರೆ ಕಿಮ್ಮತ್ತು (೩೦-೦ ೦) ಇಪ್ಪತ್ತು ರೂಪಾಯಿ. ಟಪಾಲ ಖರ್ಚ ಇಲ್ಲಾ. ಫ್ರಿ ಇರುವದು ಏಜಂಟರಿಗೆ ಯೋಗ್ಯ ಕಮಿಶನ್.

ವಿಳಾಸ:— **ಎಸ್. ಬಿ ಕದಮ ಮತ್ತು ಸನ್ಸ್,**
ಮೂ. ಪೊ ನಿಪಾಣಿ (ಜ. ಬೆಳಗಾವಿ).

ಬಾಡಿಗೆಗೆ ದೊರಕುತ್ತವೆ.

ಹೊಸ ಉಡುಪುಗಳು ಹೊಸ ಪರದೆಗಳು

ಹೊಸ ಇತರ ಉಪಕರಣಗಳು

ಕಾಲಾಮಕ್ಕಳ ಮತ್ತು ಎಮೆಚೂರ್ಸ್ ನಾಟಕ ಕಥಾಭಾಗದಲ್ಲಿ ಬರಬಹುದಾದ ವಿವಿಧ ಭೂಮಿಕೆಗಳಿಗನುಕೂಲವಾದ ಎಲ್ಲಾ ತರದ ಸರದೆ ಉಡುಪು ಸಹಿತ ಉಪಕರಣಗಳು ಬಹಳೇ ಕಡಿಮೆ ಬಾಡಿಗೆಗೆ ದೊರಕುತ್ತವೆ. ಆಗತ್ಯವಿದ್ದಲ್ಲಿ ಪೌಡರ್ ಕೆಲಸವನ್ನು ಸಹ ಮಾಡಿ ಸೋಣಾಗುವುದು. ಹೆಚ್ಚಿನ ವಿವರಕ್ಕೆ ಈ ಕೆಳಗಿನ ವಿಳಾಸಕ್ಕೆ ಎಂಟು ದಿವಸಗಳ ಮುಂಚಿತವಾಗಿ ಬರೆದುಕೊಳ್ಳುವುದು.

B Budan Basha Saheb,
P. V. I., B. H. E. Boys School, Barkur,
P. O. Barkur.

ವಂತೆ ಜನರನ್ನು ಒತ್ತಾಯಿಸಲಾಗುತ್ತಿದೆ. ಈ ಹಣದ ಸಂಗ್ರಹವೇಕೆ-ಅದು ಸಾಲವೋ ದಾನವೋ ಎಂಬುದನ್ನು ಕೂಡಾ ಸರಿಯಾಗಿ ತಿಳಿಸುವುದಿಲ್ಲ. ತೆರಲುಸಮರ್ಥರಾದವರ ಮೇಲೆ ಸರಕಾರದ ಜುಲುಮೆ ಬೇಳಬಾರದು ಎಂದು ಸರ್. ಮಾನವ ವಿಜ್ಞಾನಸನೆ. 'ಅತಿ ಪ್ರಸರಣವನ್ನು ತಡೆಗಟ್ಟುವದಕ್ಕೆ ಸೇವಿಂಗ್ಸ್ ಪದ್ಧತಿಬೇಕು-ಆದರೆ ಇಂತಹ ದುರ್ನಡತೆಗಳಿಂಬಾರದು'-ಎಂದು ಸರ್ದಾರ್ ಸಂತ ಸಿಂಗರು ಮಾತು. ಸಾಲವೆತ್ತುವದನ್ನು ಯಾರೂ ಅಕ್ಷೇಪಿಸದಿದ್ದುದಕ್ಕಾಗಿ ದುರ್ಬಾಣದಂತಹ ಮನುಷ್ಯಶ್ರೀ ಶ್ರೀ ಜಮುನಾದಾಸ ಮೆಹತಾರಿಂದ ಶಹಭಾಸು ಬಂತು. 40ಕೋಟಿಯಿರುವ ಈ ದೇಶದಲ್ಲಿ ಸರಕಾರಕ್ಕೆ ಸಾಲಕೊಡಬಲ್ಲವರಿರುವದು 30ಲಕ್ಷಮಂದಿ ಮಾತ್ರ. ಬಡವರ ನಡುವೆ ಯುದ್ಧ ಸಾಲಕ್ಕೆ ಹೋಗದ ಬೊಂಬಾಯಿ ಸರಕಾರದ ಮಾದರಿಯನ್ನೇ ಮಿಕ್ಕ ಪ್ರಾಂತ್ಯಗಳೂ ಅನುಸರಿಸಬೇಕು. ಶ್ರೀಮಂತ ದಲ್ಲಾಲಿಗಳಿಂದ ಹೆಚ್ಚು ಸಂಗ್ರಹಿಸಬೇಕು ಎಂದು ಅವರ ವಾದ.

ಅಲೀಖಾನ್, ದೇಸಾಯಿಗಳ ಸ್ಪಷ್ಟ ಎಚ್ಚರಿಕೆ

ಮುಸ್ಲಿಂಲೀಗಿನ, ದ್ವಿತೀಯ ಜಿನ್ನರಂತಿರುವ ನವಾಬಝುಡಾಲಿಯಾಖತ್ ಅಲೀ ಖಾನರು ಅವೇಧಭಾಷಣದಿಂದ ಚಾತುರ್ಯಗಳಿಗೆ ಪ್ರಾಂತಿಕ ಸರಕಾರಗಳನ್ನು ಹೊಣೆಮಾಡುವ ಕೇಂದ್ರಸರಕಾರದ ವರ್ತನೆಯನ್ನು ಖಂಡಿಸಿದರು. ಅತಿಪ್ರಸರಣದ ಸೇಕಡಾ 75ರಷ್ಟು ಹಣವು ಕೇಂದ್ರಸರಕಾರದ ಆಶ್ರಯದಿರುವ ಕಂಟ್ರಾಕ್ಟರರು, ಲಂಚಕೋರರು ಹಾಗೂ ಲಾಭಕೋರರ ವಶದಲ್ಲಿದೆ. ಇವರಿಂದ ಅಪಹರಿಸಿಯೇ ಅತಿಪ್ರಸರಣವನ್ನು ತಡೆಗಟ್ಟಬೇಕು. ಪ್ರಾಂತಿಕ ಸರಕಾರಗಳ ಏಜಂಟರು ಮರ್ಕಟತನ ಮತ್ತು ಗಾರ್ದಭತನವನ್ನೂ ಪ್ರದರ್ಶಿಸುತಿದ್ದಾರೆ. 'ಥಿಲ್ಲಯ ಒಂದು ಅನಾಥಾಲಯದ ಮಕ್ಕಳಿಗೆ' ಮೆನೇಜರರು ರೇಶನ್ ಕಾರ್ಡು ಪಡೆಯಲು ಹೋದಾಗ, ನೇಶನಲ್ ಸೇವಿಂಗ್ಸ್ ಸರ್ಟಿಫಿಕೇಟುಗಳನ್ನು ಪಡೆಯಲೇಬೇಕೆಂಬ ಸೂಚನೆ ಬಂದಿತ್ತು' ಎಂದು ನವಾಬ ಝುಡಾರಂದಾಗ 'ಇದರ ವಿವರ ಕೊಡಬಲ್ಲಿರಾ? ಎಂದು ಆರ್ಥಿಕ ಸದಸ್ಯರು ಪ್ರಶ್ನಿಸಿದರು. ನವಾಬ ಝುಡಾರದಕ್ಕೊಪ್ಪಿಗೆ ಸೂಚಿಸಿ ಸರಕಾರಕ್ಕೆ ಎಚ್ಚರಿಕೆಕೊಟ್ಟರು-"ಸಣ್ಣ ಸಣ್ಣ ಸೇವಿಂಗ್ಸ್ ಸರ್ಟಿಫಿಕೇಟುಗಳ ಹೂಡಿಕೆಯವು ಬಡವರನ್ನೂ ಹೊಡೆದಟ್ಟುತ್ತಿದೆ; ನಿಮ್ಮ ಶವಹಲಗೆಗೆ ಹೆತ್ತು ಹಲವು ಮೊಳೆಗಳನ್ನೂ ಹೊಡೆಯುತ್ತಿದೆ. ಸಮಯ ಮಿರುವ ಮೊದಲೇ ಜಾಗ್ರತೆವ ಹಿಸಿರಿ!" ಬಡವರನ್ನು 'ಝುಲುಮೆ'ಮಾಡಬಾರದೆಂದು ಸರ್. ಕವಾಷ್ಜಿಯವರೂ ಸೂಚಿಸಿದರು 'ಬೊಂಬಾಯಿಯಲ್ಲಿ ತೆರಿಗೆ ಕೊಡುವಾಗ ಪ್ರತೀ 20ರೂಪಾಯಿಗಳಿಗೆ ನಾ. ಗಳಂತೆ ನೇ. ನೇ. ಸರ್ಟಿಫಿಕೇಟುಗಳಿಗಾಗಿ ತೆಗೆದು ಉಳಿಕೆಯದ ಪೂರ್ತಿ ಹಣ ಕೊಡದೆ ರತಿಂದಿ ಕೊಡುವದಿಲ್ಲ ಎಂಬುದನ್ನು ಶ್ರೀ ಭುಲಾಭಾಯಿದೇಸಾಯಿಗಳು ಉದಾಹರಿಸಿ "ಒಡವರನ್ನು ಒಮ್ಮೊಮ್ಮೆಯಾದರೂ ಸ್ಮರಿಸೋಣ, ಅನ್ಯಾಯವು ಅತಿ ಆಳಕ್ಕೆ ಹೋಗಿದೆ. ಯುದ್ಧ ಮಾತ್ರ ಪಾಸಲ್ಲಯಂದ್ಧ ಪ್ರಯತ್ನವೂ ಪಾಸವೆಂದು ಜನರು ನಂಬುವಂತಾಗಿದೆ" ಎಂದರು.

ಸರಕಾರದ ವಾದ

ಈ ಟೀಕೆಗಳನ್ನು ಪ್ರತಿಭಟಿಸಿದವರಂದರೆ ರೆಗ್ಯುಲಸದಸ್ಯ ಸರ್. ಫ್ರೆನ್ಸಿಸ್ ಮುಡಿ ಮತ್ತು ಹಣಕಾಸಿನ ಸದಸ್ಯ ಸರ್. ಜೆರಿ ಪಿರ್ಮೈನ್. ಸರ್ ಮುಡಿಯವರು, ಕಳದ ಸರಹ ತಾನು ಬಿಹಾರಿನ ಗವರ್ನರ್ ಆಗಿದ್ದಾಗ ಅಧಿಕಾರಿ ಸ್ವತಿಷ್ಠಾವಂತರ ಸಮಿತಿಗಳ ಮೂಲಕವೇ ಹಣ ಸಂಗ್ರಹಿಸಿದ್ದ ನಿದರ್ಶನ ಕೊಟ್ಟರು. ಸ್ವಧಮತಃ ಎಲ್ಲಾ ಜವಾಬ್ದಾರಿಯನ್ನು ಪ್ರಾಂತಿಕ ಸರಕಾರಗಳ ಮೇಲೆ ಹೇರಲುನೋಡಿದ ಸರ್. ರೈಸ್‌ಮೇನರು ಕೊನೆಗೆ ಹಣದಅತಿಪ್ರಸರಣವನ್ನು ತಡೆಯುವದಕ್ಕಾಗಿ ಸೇವಿಂಗ್ಸ್ ಸರ್ಟಿಫಿಕೇಟುಗಳಲ್ಲಿ ಸಣವಿಡುವಂತೆ ಜನರನ್ನು ಮೇಲಿಂದ ಮೇಲೆ ಪ್ರೇರೇಪಿಸುವದು ಅಗತ್ಯವೆಂದು ವಾದ ಹೂಡಿದರು. 'ಇಂತಹ ಸಂಗ್ರಹ ಪ್ರಯತ್ನಗಳನ್ನು ಸರಕಾರವು ನಿರುತ್ಸಾಹಗೊಳಿಸುವಂತೆಯೂ ಇಲ್ಲ; ಆಕ್ರಮಣ ವರ್ತನೆಗಳನ್ನು ಪ್ರೋತ್ಸಾಹಿಸುವದೂ ಇಲ್ಲ'-ಎಂದು ಸರ್. ಜೆರಿಮಿಯವರ ವಾದ.

47-40 ಪತಗಳು ಬಿದ್ದುಃ ಸರಕಾರಕ್ಕೆ ಸೋಲಾಯಿತು.

NOTICE
THE
Bombay Life Assurance Company, Limited.

Notice having been given of the Loss of Policy No. 100641 on the Life of K. Gopal Krishna Nayak a duplicate policy will be issued and the claim will be paid unless objection is lodged with us within one month from this date.

K. Balasubrahmanyam,
Manager & Actuary,
Bombay, 9—2—1945

ನೀವು..

ನಿಮ್ಮ ಧನ..

ಮತ್ತು ನಿಮ್ಮ ಭವಿಷ್ಯತ್ತು

* "ನನ್ನ ಧನ, ನನ್ನದು. ಅದನ್ನು ನನ್ನ ಮನಸ್ಸು ಬಂದಂತೆ ಏಕೆ ವೆಚ್ಚಮಾಡ ಕೂಡದು?" ಎಂಬದಾಗಿ ನೀವು ಕೇಳಬಹುದು ನಿಮ್ಮ ಹಣವನ್ನು ನಿಮ್ಮ ಮನಬಂದಂತೆ ನೀವು ಧಾರಾಳವಾಗಿ ಖರ್ಚುಮಾಡಲು ಯಾರೂ ಆಕ್ಷೇಪಮಾಡುಸಹಾಗಿಲ್ಲ—ಆದರೆ, ನೀವು ಶ್ರಮಪಟ್ಟು, ಎದೆಯರಕ್ತವನ್ನು ಬಸಿದು, ಆಹಣವನ್ನು ಸಂಪಾದಿಸಿದ್ದೇ ಆದರೆ, ಅದನ್ನು ನಿರರ್ಥಕವಾಗಿ ಚೆಲ್ಲಿಬಿಡಲು, ನೀವು ಎಂದಿಗೂ ಸಮ್ಮತಿಸಲಾರಿ. ಆದರೆ, ಪ್ರತಿಯೊಂದುಪಲ ಅನಸರ್ಶಕವಾದ ಪದಾರ್ಥಗಳಿಗೆ ಮಿತಿಮೀರಿದ ಬೆಲೆಯನ್ನು ಕೊಟ್ಟು, ಕೊಂಡುಕೊಳ್ಳುವಾಗಲ್ಲಾ, ನೀವು ಹೀಗೆಯೇ ವಾದುತ್ತಿರುತ್ತಿರಿ. ಧಾರಣಾಸಾಯಿಯು ಮಾಮೂಲ್ ಪ್ರ [illegible] ವರಿವಿಗೂ, ನೀವು ಕೊಳ್ಳುವುದನ್ನು ನಿಲ್ಲಿಸುವುದು ಉತ್ತಮ.

ಆದಾ ಇಲ್ಲದೆ ಭವಿಷ್ಯತ್ತನ್ನು ಮನದಿಟ್ಟುಕೊಂಡು ಸಂಯುಕ್ತ ರಾಷ್ಟ್ರಸಕ್ಷದವರಿಗೆ ಜಯವುಂಟಾಗಿ, ಭರತಖಂಡದ ಶಕ್ತಿ ಮತ್ತು ಸ್ವಾಭಾವಿಕ ಸಂಪತ್ತು, ಶಾಂತಕಾಲದಲ್ಲಿ ನಡಿಸಬಹುದಾದ ಉದ್ಯೋಗಗಳಲ್ಲಿ ಉಪಯೋಗಿಸಲು ಅವಕಾಶವಾಗುತ್ತದೆ. ಈ ಭರತಖಂಡದ ಸ್ವಯೋಭಿವೃದ್ಧಿಗಾಗಿ ನಾವಾರು ಏರ್ಪಾಟುಗಳಿಗೆ. ಎಷ್ಟುಹಣವಾಗಿ ದೊರೆತರೂ ಜನ್ಮಾವೇಕಾಗುವುದು. ಆದುದರಿಂದ ಈಗ ಎಷ್ಟಿಷ್ಟನ್ನು ಟ್ಟಿಗೆ ನೀವು ಹಣವನ್ನು ಉಳಿಸುವಿರೋ, ತೆಷ್ಟನ್ನು ವಟ್ಟಿಗೆ, ನಿಮ್ಮ ಭವಿಷ್ಯನಿಧಿಗೆ ಕಟ್ಟಿದಂತೆ ಕಳಹದಿಯು ಬಲವಡುವುದು.

★ ಇನ್ಸೂರೆನ್ಸ್, ಗವರ್ನಮೆಂಟ್ ಲೋನುಗಳು ನ್ಯಾಷನಲ್ ಸರ್ಟಿಫಿಕೇಟುಗಳು, ಪೋಸ್ಟಾಫೀಸ್ ಸೇವಿಂಗ್ಸ್ ಬೇಂಕುಗಳು, ಕೋಆಪರೇಟಿವ್ ಬೇಂಕು ಖಾತೆಗಳು, ಕೋ ಆಪರೇಟಿವ್ ಬೇಂಕ್ ಶೇರುಗಳು, ಇವ್ಯಾಗಳು ಧನ ವಿನಿಯೋಗಕ್ಕೆ ಉತ್ತಮವಾದಾಗಳು ಇವುಗಳಲ್ಲಿ ಕಾಣಿಕೆ ಬಂಡವಾಳವು ಭದ್ರವಾಗಿರುವುದಲ್ಲದೆ, ನಿಮಗೆ ನ್ಯಾಯವಾದ ಬಡ್ಡಿಯೂ ದೊರೆಯುವುದು.

ಹಣವನ್ನು ಕೈಲಾದ ಮಟ್ಟಿಗೂ ಉಳಿಸಿರಿ
ಉಳಿಸಿದ್ದನ್ನು ವಿವೇಕಮಾರ್ಗಗಳಲ್ಲಿ ವಿನಿಯೋಗಿಸಿರಿ.

ಇದು ರಾಷ್ಟ್ರೀಯ ಯುದ್ಧ ನಿಮ್ಮ ಭಾರತೀಯರ ಸಮಕ್ಷಮದಲ್ಲಿ ಮಾಡುವ ಅರಿಕೆ.

AAA 1116 KN.

The Canara Banking Corporation Limited.
(Incorporated in British India, with limited Liability.)
Estd: 1906.
Head Office: **UDIPI**, (S. K.)

Authorised Capital	Rs. 25,00,000/-
Issued & Subscribed Capital	Rs. 16,00,000/-
Paid up Capital	Rs 14,76,535/-
Reserves	Rs. 4,14,302/-
Total working Capital	exceed one crore & 35 lakhs.

ಉಡುಪಿ, ಗುರುವಾರ ೧೫ನೇ-೨-೧೯೪೫

ಮುಂದೇನು?

ಈಗಿನ ಯುದ್ಧಸ್ಥಿತಿಯು ಶಾಂತಿಪ್ರಿಯ ಜಗತ್ತನ್ನೇ ಆನಂದಾವೇಗಕ್ಕೀಡು ಮಾಡಿದೆ. ಪೂರ್ವ ಮತ್ತು ಪಶ್ಚಿಮ ದಿಕ್ಕುಗಳ ಒತ್ತಡಕ್ಕೊಳಗಾದ ಜರ್ಮನಿಯಿಂದು ಕತ್ತರಿಯ ನಡುವೆ ಸಿಕ್ಕಿದಂತಿದೆ. ಜರ್ಮನಿಯ ಓಡರ್ ಹೊಳೆಯ ವರೆಗೆ ವಾಯುವೇಗದಿಂದ ಧಾವಿಸಿ ಬಂದು, ಆಲ್ಲಿ ಪೂರ್ವ ಸಿದ್ಧತೆಗಳನ್ನು ಮುಗಿಸಿಕೊಂಡ ಮಾರ್ಷಲ್ ಝುಕೋವನ ಟೀಂಕು ಪಡೆಯೊಗ ಬರ್ಲಿನ್ನಿಗೆ ಮುಖವಾಗಿ ನುಗ್ಗಲಾರಂಭಿಸಿದೆ. ಪಶ್ಚಿಮ ರಂಗದಲ್ಲಿ ಸಿಸ್-ಫೈಡ್ ಕೋಟೆಯ ಹೊರವ್ಯೂಹವನ್ನು ಒಂದೆರಡುಕಡೆ ಭೇದಿಸಿದ ವಾರ್ತೆಯೂ ಬಂದಿದೆ; ನಾಜಿಗಳ ಕಾರ್ಯಾನೆಗಳ ಕೇಂದ್ರ ನೆಲೆ ರ್ಹ್ರ್ ಗಂಡಾಂತರಕ್ಕೊಳಗಾಗಿದೆ. ಬರ್ಲಿನ್ನಿನ ಮೇಲೆ ರಶ್ಯನರ ಧಾಳಿ ನಡೆಯುವಾಗಲೇ, ರ್ಹ್ರಿನ ಮೇಲೆ ಮಿತ್ರರ ಹೊಡೆತ ಬಿದ್ದರೆ ನಾಜೀ ಜರ್ಮನಿಯ ಎದೆಗೂ ಅಳ್ಳೆಗೂ ಏಕಬಾಣ ಗುದ್ದಿದಂತೆ! ಪ್ರಕೃತ ನಾಜಿಗಳು ಪ್ರಾಣಾಪತ್ತಿಗೊಳಗಾಗಿದ್ದಾರೆ ಎಂಬುದು ನಿರ್ವಿವಾದ. ನಿಜವಾದ ಹಿಕಾರಿಯಂತೆ ಪೂರ್ವದಿಂದಲೂ ಪಶ್ಚಿಮದಿಂದಲೂ ಮಿತ್ರರು ಜರ್ಮನಿಯ ಮೇಲೇರಿ ಬಂದಿದ್ದಾರಾದರೂ ನಾಜಿಗಳು ಮಾತ್ರ ಬೆದರಿದ ಹುಲ್ಲೆಯಂತಾಗಿಲ್ಲವೆಂಬುದನ್ನು ಮರೆಯಬಾರದು. ಅವರ ಆತ್ಮ ವಿಶ್ವಾಸವು ಹಿಂದಿನಷ್ಟೇ ಅಚಲವಾಗಿದೆ; ಆತ್ಯಾಭಿಮಾನವು ಹಿಂದಿಗಿಂತಲೂ ಪ್ರಜ್ವಲಿಸಿದೆ. ಮಾರ್ಗದಲ್ಲಿ ಹೊಡೆಯುವದಕ್ಕೂ ಮನೆ ನಗ್ಗಿ ಹೊಡೆಯುವದಕ್ಕೂ ಇರುವ ಅಭ್ಯಂತರವನ್ನು ಜರ್ಮನ್ ಯುದ್ಧಕ್ಕೂ ಹೊಂದಿಕೆಯಾಗುತ್ತದೆ. ಈಗಿನ ನಿಜವಾದ ಹೊಡೆತವೆಂದರೆ ಕೆಂಪುಸೇನೆಯದು. ಪಶ್ಚಿಮ ರಂಗವಲ್ಲಿ ಕಾಲ್ಚುರುಕುತನ ತೋರಿಸುತ್ತಿದ್ದ ಮಿತ್ರಸೇನೆಗಳು ನುಸಿ ಕೈಚಳಕತೋರಿಸುವಂತೆ ಮಾಡಿಬಿಡುವ ಕೂಡಾ ರಶ್ಯನರ ಸಂಘಟಿತ ಧಾಳಿಯೇ ಆದರೆಈ ತನಕ ಹಿಡಿಸಿಕೊಂಡು ಬಂದಷ್ಟು ಸುಲಭವಾಗಿ ಇನ್ನು ಮುಂದೆ ಮುನ್ನುಗ್ಗುವದು ರಶ್ಯನರಿಗೂ ಅಸಾಧ್ಯ. ಅವರ ಹಿಂಭಾಗದ ಸರಬರಾಯಿ ಪಥವೀಗ ದೀರ್ಘವಾಗಿದೆ; ಸರಬರಾಯಿಗಳನ್ನು ಕೈಯಿಂದೆಟ್ಟಕುವ ಬದಲು ಕೋಲಿನಿಂದೆಟ್ಟಕಬೇಕಾಗಿದೆ ಇದು ವರೆಗೆ ಅನುಕೂಲವಾಗಿ ಗಟ್ಟಿಕಟ್ಟಿದ್ದ ಹಿಮಗಡ್ಡೆ ಕರಗಿ ಅಡಚಣೆಯಾಗುವ ಕಾಲ ಬರುತ್ತಿದೆ. ಸಾಲದುದಕ್ಕೆ ಅವರೀಗ ಬಂದಿರುವದು ಲೋಕದಲ್ಲೇ ಅಸಾಮಾನ್ಯವಾದ ನಾಜಿಗಳ ಅಭೇದ್ಯ ಕೋಟೆಗಳು, ಆಜೇಯ ರಕ್ಷಣಾವ್ಯೂಹಗಳಿರುವ ಕ್ಷೇತ್ರಕ್ಕೆ. ಪಡುವಲಯದ ಮಿತ್ರ ಸೇನಾ ಶಿಬಿರದಿಂದ ನಾನಾ ಕೇಳುತ್ತಿರುವ ಹೆಗ್ಗಳಿಕೆಯ ವಾರ್ತೆಯೆಂದರೆ ಸಿಗ್‌ಫ್ರೆಡ್ ದುರ್ಗದ ಹಾದಿ ತುಳಿದು ದೊಂದೇ-ಹಾದು ಹೋದ ವಾರ್ತೆ ಕೇಳುವ ಪುಣ್ಯವೀ ತನಕ ಬಂದಿಲ್ಲ ನಾಜೀ ಪ್ರಮುಖರೀಗ, ರಶ್ಯನ್ ಧಾಳಿಯ ವಾರ್ತೆಯನ್ನು ಮಾತ್ರ ಕಂಪಿತ ಕಂಠದಿಂದ ಹೇಳುತ್ತಿದ್ದಾರೆ; ಪಶ್ಚಿಮ ರಂಗವನ್ನು ಕಡೆಗಣಿಸಿದಂತಿದೆ. ಆ ಕಡೆಯ ಆಪಾಯವು ಈ ತನಕ ಅಗಣ್ಯವಾಗಿಯೇ ಇದೆ ಎಂಬುದರ ನಿದರ್ಶನವಿದು. ಮಿಕ್ಕವರಂತಿದ್ದರೆ ಬೋನಿನಲ್ಲಿ ಬಿದ್ದಂತಾಗಿರುವ ಜರ್ಮನರೀಗ ಧೃತಿಗೆಡಬೇಕಿತ್ತು; ಇದು ವರೆಗೆ ಹಾಗಾಗಿಲ್ಲ ಅವರ ಕೈಯಲ್ಲಿ ಇನ್ನೂ ಕಾರ್ಡುಗಳುಳಿದಿವೆ ಎಂಬುದನ್ನು ನಿರೀಕ್ಷಿಸಬೇಕು; ಇಕ್ಕಡೆಗೂ ಡೆಲ್ಲುವ ಬಿಸಿಯೆಣ್ಣೆಯೊಗ ಆಲ್ಲಿ ಕುದಿಯುತ್ತಿದೆ ಎಂಬುದನ್ನು ಊಹಿಸಬೇಕು.

ಈ ಸಂಧಿಗ್ಧ ಕಾಲದಲ್ಲಿಯೇ ಕಪ್ಪು ಸಮುದ್ರವಲಯದಲ್ಲಿ ತ್ರಿಮೂರ್ತಿ ಸಮ್ಮೇಲನ ನೆರೆದಿದೆ ಜರ್ಮನ್ ಸಮಸ್ಯೆಯು ಮೊದಲನೆಯದಾಗಿ ಅಲ್ಲಿ ಚರ್ಚಿಲ್ಪಡಬಹುದು. ಜರ್ಮನಿಯ ಪಾಲಿನ ಯುದ್ಧದಂಡವನ್ನೆಷ್ಟೇ ವ್ಯವಹಾರರಂಗವೂ ಜಿಡುವುಗಟ್ಟಿಹೋಗಿದೆ. ಥೋಣೆಯ ಮಟ್ಟಿಗೆ ಪೋಲೆಂಡಿಗೊಂದನ್ನು ಜರ್ಮನಿಗೆನ್ನೊಂದನ್ನು ರಶ್ಯವಂಗೀಕರಿಸುವಂತಿಲ್ಲ. ಇಂಗ್ಲಾಂಡು ಅಮೇರಿಕಗಳ ಥೋಣೆ ಮಾತ್ರ ಅನೆರಡು ರಾಷ್ಟ್ರಗಳ ಮಟ್ಟಿಗೆ ಭಿನ್ನವಾದುದು. ಅವುಗಳ ದೃಷ್ಟಿ ಜರ್ಮನ್ ನೆಲದ ಮೇಲೂ, ರಶ್ಯದ ದೃಷ್ಟಿ ಜರ್ಮನ್ ಸರಕಾರದ ಮೇಲೂ ಬಿದ್ದಿದೆ ಎಂದೂಹಿಸಬಹುದು. ಪ್ರಕೃತ ಸಮಿಷದ ನೋಟ ರಶ್ಯನರದೇ; ಮೂವರ ದೃಷ್ಟಿಯೂ ಒಂದುಗೂಡಬೇಕಾದರೆ ಇಂಗ್ಲಾಂಡು ಅಮೇರಿಕಗಳೂ ರಶ್ಯ ನೋಡಿದತ್ತ ನೋಡಬೇಕಾಗುವದು. ತತ್ಪರಿಣಾಮವಾಗಿ ಜರ್ಮನಿಗೆ ತುಸು ರಿಯಾಯಿತಿಯ ಶರಣು ಶರ್ತಗಳು ತಯಾರಾಗಬಹುದೆಂಬ ಊಹೆಯಿದೆ. ಮಧ್ಯ ಪೂರ್ವದ ರಾಷ್ಟ್ರಗಳಲ್ಲಿ ರಶ್ಯಾ ಮತ್ತು ಇಂಗ್ಲಾಂಡಿನ ಹಿತಸಂಬಂಧಗಳ ಘರ್ಷಣೆ, ಪೋಲೆಂಡು ಪ್ರಶ್ನೆ, ಇತ್ಯಾದಿ ಸಮಸ್ಯೆಗಳಂತೂ ಪ್ರತ್ಯೇಕವಿನೆ. ಲೋಕ ವ್ಯವಸ್ಥೆಗಾಗಿ ನೇರಿರುವ ತ್ರಿಮೂರ್ತಿ ಸಮ್ಮೇಲನದಲ್ಲಿ ಸ್ಟಾಲಿನರ ಬಯಕೆಯಂತೆ ಜಪಾನ್ ಪ್ರಶ್ನೆಯನ್ನೇ ಬಿಡಲಾಗಿದೆ ಎಂಬ ವಾರ್ತೆಯಿದೆ—ಆಗಲೇ ಅರ್ಧ ಪ್ರಪಂಚವನ್ನಾದು ಬಿಟ್ಟಂತೆ. ಈ ರೀತಿ ಯುದ್ಧರಂಗ, ವ್ಯವಹಾರರಂಗ-ಎರಡರಲ್ಲೂ ಅನಿಶ್ಚಿತತೆಯಿರುವಾಗ ಏನೇನೋ ಗಾಳಿಗೋಪುರಗಳನ್ನು ಕಟ್ಟುವ ಬದಲಿಗೆ, ಎಲ್ಲವುಗಳ ತಿರುಳಾಗಿ ನೇರಿಕೊಂಡಿರುವ ನ್ಯಾಯವನ್ನು ಆಧರಿಸಿಯೇ ಶಾಂತಿಸ್ಥಾಪನೆಯಾಗಬೇಕು.

ಸ್ವದೇಶ—ವಿದೇಶ

ಫ್ರಾಂಕೋನಪತ್ರ

ಸ್ಪೈನಿನ ಜನರಲ್ ಫ್ರಾಂಕೋ ಮಿ. ಚರ್ಚಿಲ್ಲರಿಗೊಂದು ಗುನ್ನ ಪತ್ರ ಬರೆದು ಯುರೋಪಿನ ಮೂರು ಮಹಾ ಶಕ್ತಿಗಳಿಂದರೆ ಇಂಗ್ಲಾಂಡು, ಸ್ಪೈನು ಮತ್ತು ಜರ್ಮನಿಯೆಂದೂ, ರಶ್ಯದ ವಿರುದ್ಧವಾಗಿ ತಾವೆಲ್ಲಾ ಒಟ್ಟಾಗಬೇಕೆಂದೂ ಕೇಳಿಕೊಂಡಿದ್ದ ನಂತೆ. ಮಿ. ಚರ್ಚಿಲ್ಲರು ಫ್ರಾಂಕೋನ ಸೂರ್ವ ವರ್ತನೆಗಳನ್ನು ಉದಾಹರಿಸಿ, ಅವನ ನಿಸ್ತಂತಿಯನ್ನು ಖಂಡಕುಂಡವಾಣಿಯಿಂದ ಧಿಕ್ಕರಿಸಿ ಉತ್ತರವಿತ್ತಿದ್ದರಂತೆ. ಈ ಪತ್ರವ್ಯವಹಾರವು ಪ್ರಕಟಿಸಲ್ಪಟ್ಟಿಲ್ಲ.

ಗ್ರೀಸ್ ಒಪ್ಪಂದ

ಗ್ರೀಕ್ ಸರಕಾರ ಮತ್ತು ಅಲ್ಲಿ ಅಂತರ್ಯುದ್ಧ ಹೂಡಿರುವ ಇಎಮ್ ಪಕ್ಷದ ಪ್ರತಿನಿಧಿಗಳೊಳಗೆ ಸಂಧಾನ ಮಾತುಕತೆ ನಡೆದು, ಗ್ರೀಸ್ ಸರಕಾರದ ರಜನೆ, ವಿರುದ್ಧಪಕ್ಷೀಯ ಸೇನೆಗಳ ನಿಶ್ಶಸ್ತ್ರೀಕರಣ ಮೊದಲಾದ ಎಲ್ಲಾ ಪ್ರಶ್ನೆಗಳಲ್ಲೂ ಒಂದು ಒಪ್ಪಂದಕ್ಕೆ ಬಂದಿದ್ದಾರೆ. ಗ್ರೀಸ್ ಅಂತಃಕಲಹವು ನಿಲ್ಲುವ ನಿರೀಕ್ಷೆಯಿದೆ.

ತಟಸ್ಥರ ಅಸಾಮಾಧಾನಕರ ನಡತೆ

ಯುದ್ಧ ಭಾಗಿಯಾಗದೆ ತಟಸ್ಥರಾಗಿದ್ದ ರಾಷ್ಟ್ರಗಳ ಪೈಕಿ ಕೆಲವು ದೇಶಗಳ ವರ್ತನೆಯಿಂದ ತಾವು ಸಮಾಧಾನಗೊಂಡಿಲ್ಲವೆಂದು ಅಮೇರಿಕದ ತಾತ್ಕಾಲಿಕ ಸ್ಟೇಟ್ ಸೆಕ್ರೆಟರಿ ಮಿ. ಜೋಸೆಫ್ ಗ್ರೂ ಹೇಳಿದ್ದಾರೆ. ಅವರು ಆ ರಾಷ್ಟ್ರಗಳ ಹೆಸರನ್ನು ಮಾತ್ರ ಹೇಳಿಲ್ಲ. ಬ್ರಿಟಿಷ್ ಕಾಮನ್‌ವೆಲ್ತಿನಿಂದ ಅಮೇರಿಕಕ್ಕೆ ಲೆಂಡ್-ಲೀಸಿನ ಪ್ರತಿಯಾಗಿ ವರುಷಕ್ಕೆ 2,500 ಮಿಲಿಯ ಡೋಲರುಗಳಷ್ಟು ಹೋಗುತ್ತಿದೆಯೆಂದು ಪ್ರಕಟವಾಗಿದೆ

ತ್ರಿಮೂರ್ತಿ ಸಮ್ಮೇಲನ

ಕಪ್ಪು ಸಮುದ್ರ ವಲಯದ ಗುಪ್ತಸ್ಥಳದಲ್ಲೀಗ ನಡೆಯುತ್ತಿರುವ ತ್ರಿಮೂರ್ತಿ ಸಮ್ಮೇಲನದಲ್ಲಿ ಜರ್ಮನಿಯ ಪರಾಭವದ ವರೆಗೆ ಕಾರ್ಯ ಕೈಕೊಳ್ಳುವ ತ್ರಿರಾಷ್ಟ್ರೀಯ ಮಿಲಿಟರಿ ಬೋರ್ಡನ್ನೂ, ಜರ್ಮನಿ ಸೋತ ಮೇಲೆ ಆಳುವ ತ್ರಿರಾಷ್ಟ್ರೀಯ ಆಡಳಿತ ಮಂಡಳಿಯನ್ನೂ ಸ್ಥಾಪಿಸಲಾಗಿದೆಯೆಂದು ವಾರ್ತೆಯಿದೆ. ಡಿ. ಗೋಲೆಯವರ ಆಪೇಕ್ಷೆಯಂತೆ ಫ್ರಾನ್ಸಿಗೂ ಸಮ್ಮೇಲನದಲ್ಲಿ ಪ್ರಾತಿನಿಧ್ಯವಿಯಲಾಗಿದೆ ಎಂಬ ಸುದ್ದಿ ನಿರಾಕರಿಸಲ್ಪಟ್ಟಿದೆ.

ಬರ್ಲಿನ್ ಟೋಕಿಯೋಗಳ ಮೇಲೆ ಮಿತ್ರ ವಿಮಾನಗಳ ಸಾಮೂಹಿಕ ಹಾರಾಟ

ಭೀಕರ ಆಕಾಶಧಾಳಿಗಳು ನಡೆದಿವೆ. ಕಳೆದ ಶನಿವಾರ ಬರ್ಲಿನ್ನಿನ ಮೇಲೆ ಅಮೇರಿಕನ್ ವಿಮಾನಗಳು ನಡೆಸಿದ ಧಾಳಿಯಿಂದ ಫೈಟ್ಸೇನ್ಬೆನ್ಗಳು, ಕಾರ್ಖಾನೆಗಳಲ್ಲದೆ ಹಿಟ್ಲರ್ ಮತ್ತು ಗೋರಿಂಗರ ಆಫೀಸುಗಳ ಸಮೇತ ಸರಕಾರೀ ಕಟ್ಟಡಗಳೂ ಬೋಂಬಿಗೆ ಬಲಿಯಾದುವು. ಜಪಾನಿನ ರಾಜಧಾನಿ ಟೋಕಿಯೋ ಮತ್ತು ಹಲವು ಕಾರ್ಖಾನೆಗಳ ಊರುಗಳಿಗೂ ಅಧಿಕ ಪರಿಮಾಣದಲ್ಲಿ ಬೋಂಬೊಗೆಯಲಾಗಿದೆ.

ಜಾಗತಿಕ ಟ್ರೇಡ್‌ಯೂನಿಯನ್ ಸಮ್ಮೇಲನ

ಲಂಡನಿನಲ್ಲಿ ನಡೆಯುತ್ತಿದೆ. ಜಗತ್ತಿನ ಸರ್ವ ಮಿತ್ರ ರಾಷ್ಟ್ರಗಳ ಕೆಲಸಗಾರ ಪ್ರತಿನಿಧಿಗಳೂ ಹಾಜರಿದ್ದಾರೆ ಹಿಂದಿನ ನೈರಿ ರಾಷ್ಟ್ರಗಳಿಗೆ ಹಾಗೂ ಪೋಲೆಂಡಿನ ಲುಬ್ಲಿನ್ ಟ್ರೇಡ್ ಯೂನಿಯನಿಸಿಗೆ ಪ್ರಾತಿನಿಧ್ಯವಿಯುವ ಕುರಿತು ತೀವ್ರ ತಿಕ್ಕಾಟಗಳಿದ್ದರೂ ಈಗ ತೀರ್ಮಾನಗೊಂಡಿದೆ.

ಡಚ್ಚ್ ಮಂತ್ರಿಮಂಡಲದ ರಾಜೀನಾಮೆ

ಲಂಡನಿನಲ್ಲಿರುವ ನೆದರ್ಲೇಂಡ್ ಮಂತ್ರಿಮಂಡಲವು ರಾಣಿ ಎಲ್ಲೆಲ್ಮಿಯರಿಗೆ ರಾಜೀನಾಮೆಯೊಪ್ಪಿಸಿದೆ. ರಾಣಿಯವರು ಪ್ರೊಫೆಸರ್ ಗೆಬ್ರಾಂಡಿಯವರನ್ನು ಸರಕಾರ ರಚನೆಗೆ ಕೇಳಿಕೊಂಡಿದ್ದಾರೆ. ಹೊಲ್ಲೆಂಡಿಗೆ 100ಮಿಲಿಯ ಡೋಲರನ್ನು ಸಾಲ ಕೊಡುವ ಕರಾರೊಂದು ಹೊಲ್ಲೆಂಡು ಸರಕಾರದ ಪ್ರತಿನಿಧಿ ಮತ್ತು ಅಮೇರಿಕದ ನ್ಯೂಯೊರ್ಕಿನ ಹನ್ನೊಂದು ಬೇಂಕುಗಳೊಳಗೆ ಆಗಿದೆ.

ಚರ್ಚಿಲ್ಲರಿಗೆ ಶಿಷ್ಟಮಂಡಲ

ನೆಹರು ಮೊದಲಾದ ರಾಜಕೀಯ ಮುಖಂಡರ ಬಿಡುಗಡೆ ಹಾಗೂ ಪ್ರಾಂತ್ಯ ಮತ್ತು ಕೇಂದ್ರ ಎಸೆಂಬ್ಲಿಗೆ ಹೊಸ ಚುನಾವಣೆ ನಡೆಸುವಂತೆ ಕೇಳಿಕೊಳ್ಳಲು ಬ್ರಿಟಿಷ್ ಕೂಲಿಗಾರ ಪಕ್ಷದ ಮಿ. ಆರ್ಥರ್ ಗ್ರೀನ್‌ವುಡ್, ಮಿ. ವಿಲಿಯಮ್ಸ್ ಡೋಬ್ಸ್, ಪ್ರೊ. ಲಸ್ಕಿ, ಮಿ. ರೆಜಿನಾಲ್ಡ್ ಸೋರೆನ್ಸ್ ನರಿರುವ ಶಿಷ್ಟಮಂಡಲವೊಂದು ಮಿ. ಚರ್ಚಿಲ್ಲರನ್ನು ಕಾಣಲಿದೆ.

ಸಂಸ್ಥಾನಿಕರ ವಿಜ್ಞಾಪನೆ

ಹಿಂದೀ ಆಶ್ರಿತ ರಾಜಮಂಡಲಿಯಿತ್ತಿದ್ದ ರಾಜೀನಾಮೆಯು ಇದು ವರೆಗೂ ಅಂಗೀಕರಿಸಲ್ಪಟ್ಟಿಲ್ಲವಂತೆ. ಆಶ್ರಿತರ ವಿಶೇಷ ಸಮಿತಿಯೊಂದು ಜಿಂಬಾಬಾಯಿಯಲ್ಲಿ ನೆರೆದು ತಮ್ಮ ಸಂಬಂಧದಲ್ಲಿ ನ್ಯಾಯ ಮತ್ತು ಯೋಗ್ಯ ವರ್ತನೆ ತೋರಿಸಬೇಕೆಂದೂ ಸಾಮ್ರಾಟರಿಗೂ ತಮಗೂ ಇರುವ ಕರಾರು ಸಂಬಂಧಗಳ ಕುರಿತು ಭಿನ್ನಾಭಿಪ್ರಾಯ ಬಂದಲ್ಲಿ ನಿಷ್ಪಕ್ಷಪಾತಿ ಮಧ್ಯಸ್ಥ ಮಂಡಲಿಯಿಂದ ತೀರ್ಮಾನಿಸಲ್ಪಡಬೇಕೆಂದೂ ನಿವೇದಿಸಿಕೊಂಡಿದೆ.

ಗೋಧಿಗೆ ಮದ್ರಾಸ್ ವಿರೋಧ.

ಗೋಧಿಯು ಕಡ್ಡಾಯವಾಗಿ ಕೊಡಲ್ಪಟ್ಟುದಿನಿಂದ ಇದು ವರೆಗೂ ಮದ್ರಾಸ್ ಪ್ರಾಂತ್ಯದಲ್ಲದು ಅಸಿಯವಾಗಿದೆ ಎಂದು ವಿಚಾರಣೆಯಿಂದ ತಿಳಿದು ಬಂದಿದೆ ಸರಕಾರನೇನೇ ಪ್ರಚಾರ ಮಾಡಿದರೂ ಮದ್ರಾಸ್ ನಗರದಲ್ಲೇ ದೇಶನ್ ನಿರ್ಣಯದ ಗೋಧಿಯ ಅರ್ಧದಷ್ಟನ್ನೂ ಜನರು ಪಡಕೊಂಡಿಲ್ಲ. ಧಾನ್ಯದ ಅಭಾವ ಅತಿಯಾಗಿರುವ ಮಲಬಾರಿನ ಹಳ್ಳಿಗರು ಕೂಡಾ ಗೋಧಿ ಪಡೆಯಲು ಹಿಂದೆಗೆಯುತ್ತಿದ್ದಾರೆ. ಪೂರ್ವ ಸಂಸ್ಥಾನಗಳಿಂದ ಅಧಿಕ ಪರಿಮಾಣದಲ್ಲಿ ಮದ್ರಾಸಿಗೆ ಅಕ್ಕಿ ಬರಲಿದೆ ಎಂದು ತಿಳಿದು ಬರುತ್ತದೆ.

ಕೆಂಪು ಸೇನೆಯು ಓಡರ್ ದಡದಿಂದ ಧಾಳಿಯಾರಂಭಿಸಿದೆ.

ಜಾಪಾನೀ ಸಾಮ್ರಾಜ್ಯಕ್ಕೆ ಅದ್ಭುತ ಗೋಡೆ!

ಬರ್ಲಿನಿನ ಕಡೆಗೆ—

ನುಗ್ಗಲಿಂದು ಓಡರ್ ಹೊಳೆಗೆ ಸಂಕ ತೆರಗಳನ್ನು ರಚಿಸಿ ದಾಟಿದ ಮಾರ್ಷಲ್ ಝುಕೋವನು ಟೀಂಕು ಧಾಳಿಯಾರಂಭಿಸಿದ್ದಾನೆ. ಜರ್ಮನರು ಪ್ರಬಲವಾಗಿ ಪ್ರತಿಭಟಿಸುತಿದ್ದಾರೆ. ಇನ್ನೊಂದೆಡೆಯಿಂದ ಮಾರ್ಷಲ್ ಕೋನೀವನ ಸೇನೆಯೂ ಬ್ರೆಸ್ಲಾವು ಸಮೀಪದಲ್ಲಿ ಓಡರ್ ಹೊಳೆಯನ್ನು ದಾಟಿದೆ ಕೆಲವೆಡೆ ಬಹಳ ವಿಶಾಲವಾಗಿದ್ದು ಪಶ್ಚಿಮ ದಡದಲ್ಲಿ ಜರ್ಮನರ ಪ್ರಬಲ ಸಂಪ್ರತಿಣಾ ಕೋಟೆ, ವ್ಯೂಹಗಳಿರುವ ಓಡರ್ ಹೊಳೆಯನ್ನೀ ರೀತಿ ದಾಟಿದುದೇ ರಶ್ಯಾನರ ಮಹಾ ಯುದ್ಧ ಸಾಹಸವೆನ್ನಬೇಕು. ಒರ್ಲಿನ್ ಮತ್ತು ಬ್ರೆಸ್ಲಾವು ನಗರಗಳ ಮಧ್ಯ ಪಥವನ್ನು ಕೊನೀವನ ಸೇನೆ ತುಂಡರಿಸಿದೆ.

ಡಾನ್ಜಿಗ್‌ನ ಮೇಲೆ ಧಾಳಿ

ನಾಜಿಗಳ ನಾಲಿಗೆ ಯಮಸದೃಶಂತಾದ ರಶ್ಯನ್ ಸೇನಾನಿತ್ಯಯಗಳಮೇಲಿನಇಬ್ಬರು ಪೈಕಿ ಓಡರ್ ದಾಟಿ ಬರ್ಲಿನಿನತ್ತ ಸಾಗುತ್ತಿರುವಾಗ ಮಾರ್ಷಲ್ ರೊಕೊಸ್ಸೋವ್‌ಸ್ಕಿಯು ಡಾಲ್ಟಿಗ್ ಬಂದರಕ್ಕೆ ಬಹಳಸಮೀಪದವರೆಗೆ ಬಂದಿದ್ದಾನೆ 'ಸ್ವತಂತ್ರ ನಗರ' ವೆಂಬ ನಾಮಕರಣವಿರುವ ಈ ಬಂದರದ ಆಯುಷ್ಯವೀಗ ದಿನ ಸಂಖ್ಯೆಯಲ್ಲಿ ಗಣಿಸಲ್ಪಡುತ್ತಿದೆ. ಪೂರ್ವಪ್ರಶ್ಯದಲ್ಲಿ ಮೊರುಗಡೆಯಿಂದ ಸುತ್ತುಗಟ್ಟಲ್ಪಟ್ಟು ಸಮುದ್ರ, ಕೈ ಬೆಂಗೊಟ್ಟು ಹೋಗಲಾಡುತ್ತಿರುವ ನಾಜೀ ಸೇನೆಯ ಭವಿಷ್ಯವೀ ತನಕ ನಿರ್ಧರಿಸಲ್ಪಟ್ಟಿಲ್ಲ ಒರ್ಲಿನ್ ಧಾಳಿಯ ಪ್ರಗತಿಗೆ ಈ ತನಕ ಪ್ರಬಲ ಪ್ರತಿಬಂಧವೇನೂ ಒಂದಿಲ್ಲವಾದರೂ ವಿಸ್ತುಲಾದಿಂದ ಒಡರ್ ವರೆಗಿನ 300 ಮೈಲು ಉದ್ದಕ್ಕೆ ಓಡಿಸಿಕೊಂಡು ಬಂದ ರಶ್ಯನ್ ಸೇನಗಳಿಗೆ ಸಂಗ್ರಹ ಮತ್ತು ಸಂಘಟನೆ ಬೇಕಾಗಿದೆಯೆನ್ನಬಹುದು.

ಪಶ್ಚಿಮ ರಂಗದಲ್ಲಿ

ಪಶ್ಚಿಮ ರಂಗದಲ್ಲಿ ಮಿತ್ರ ಸೇನಾವಿಭಾಗಗಳು ಒಂಬೆರಡು ಕಡೆಗಳಲ್ಲಿ ಸಿಗ್‌ಫ್ರೈಡ್ ಕೋಟೆಯೊಡೆದು ಒಳನುಗ್ಗಿದ ವಾರ್ತೆಯಿದ್ದಿತು ಆದರೆ ಈಗ ಆ ವಲಯದ ಪ್ರಕೃತಿ ಪ್ರತಿಕೂಲತೆ ಮತ್ತು ಜರ್ಮನರ ಪ್ರತಿಭಟನೆಯಿದಿರಲ್ಲಿ ಮಿತ್ರರ ಧಾಳಿಯ ಗತಿ ಮಂದವಾದ ವಾರ್ತೆ ಬಂದಿದೆ ಹ್ಯೆಗೆನ್‌ಹೊಳೆಯತ್ತ ಸಾಗುವ ಸಿಗ್‌ಫ್ರೈಡ್ ಕೋಟೆಯ ಹೆಬ್ಬಾಗಿಲಂತಿರುವ ಕ್ಲೆನೆಯ ಸುತ್ತುವಲಯದಲ್ಲಿ ಕರೋರ ಕಾಳಗ ನಡೆಯುತ್ತಿದೆ ಕ್ಲೈವ್‌ನಿನ ಕೆಂಬ್ಸ್ ಆಕೆಟ್ಟನ್ನು ಜರ್ಮನರೊಡೆದು ಹಾಕಿ ಮಿತ್ರರ ಕಡೆಗೆ ಜಲಪ್ರಳಯವನ್ನೇ ಹರಿಸಿರುವರು. ಜರ್ಮನ್ ಕೆಲಸಗಾರರು ರೈಲ್ವೇ ಲೈನುಗಳನ್ನ ಕಡಿದು ಸಹಕರಿಸಬೇಕೆಂದು ಬ್ರಿಟಿಷ್ ರೇಡಿಯೋದ ಬೋಧನ.

ಶಾಂತ ಸಮುದ್ರದಲ್ಲಿ

ಲುಝೋನಿನಲ್ಲಿ ಅಮೇರಿಕನ್ ಸೇನೆಯು ಪ್ರಗತಿ ಪಡೆಯುತ್ತಲೇ ಇದೆ ಶಾಂತ ಸಮುದ್ರದಲ್ಲಿ ಜಾಪಾನ್ ವಶವಿರುವ ದ್ವೀಪಗಳ ಮೇಲೆಲ್ಲಾ ಬೋಂಬು ಧಾಳ ನಡೆದಿದೆ. ಮಲಯವನ್ನೂ ತ್ಯಜಿಸಿಬಿಟ್ಟು ತಮ್ಮ ರಕ್ಷಣಾ ಭಾವನ್ನು ಕಡಿಮೆ ಮಾಡಿಕೊಂಡು ತೀವ್ರ ಪ್ರತಿಭಟನಾ ಯೋಜನೆ ತಯಾರಿಸುವ ಹಂಚಿಕೆಯಲ್ಲಿ ಜಾಪಾನಿರಿದ್ದಾರೆಂದು ತಿಳಿದುಬರುತ್ತಿದೆ ಒಟ್ಟಿನ ಎಲ್ಲೆಡೆಗಳಲ್ಲಿಯೂ ಮಿತ್ರ ಸೇನಾ ಪ್ರಗತಿ ಸಾಗಿವೆ ಇದ್ರವಾಡಿ ಸರಹದ್ದಿನಲ್ಲಿ ಒಂದೊಂದೇ ಊರುಗಳು ಮಿತ್ರ ಸೇನೆಯ ವಶವಾಗುತ್ತಿವೆ.

ಜಾಪಾನರ ನೈ ಪೂರ್ವಗೋಡೆ'

ಜಾಪಾನರೀಗ, ಪೂರ್ವ ಆಸ್ಯಾದ ತಮ್ಮ ಮೂಲನೆಲೆಕ್ಕೆ ಆ ತುದಿಯಿಂದ ಈ ತುದಿಯ ವರೆಗೂ ಅದ್ಭುತ ಗೋಡೆ ಕಟ್ಟುತಿದ್ದಾರೆಂದು ತಿಳಿದು ಬರುತ್ತದ. ಈ ಕೋಟೆಯು ಕೊರಿಯದ ಈಶಾನ್ಯ ಮೂಲೆಯಿಂದಾರಂಭಿಸಿ ಮ್ಯಾಂಡಲೇಸ್ಟಕ್ಕಿನಿಂದ ಸಿಂಗಾಪುರದ ವರೆಗೆ ಸುಮಾರು 10,000ಮೈಲು ಉದ್ದಕ್ಕೆ ಹರಡಿದೆ ಚಕ್ರವರ್ತಿ ಹೀರೋಹೀಟೋರವರು ಚೀನದ ನವ ಸೇನಾನಿಯಾದ ಫೀಲ್ಡ್ ಮಾರ್ಷಲ್ ಓಕಮುರಾ, ದಕ್ಷಿಣ ಸಮುದ್ರ ವಲಯದ ಸರ್ವಸೇನಾಧಿಪೀಲ್ಡ್ ಮಾರ್ಷಲ್ ಟೆರಾವ್ಚಿ ಮೊದಲಾದ ಸಮರ್ಥ ಯುದ್ಧತಜ್ಞರೊಂದಿಗೆ ಲಝೋನಿನಲ್ಲಿ ತಾಗಿ ಇರುವ ಚೀನಾ ಮತ್ತು ಇಂಡೋಚೀನಾ ಕರಾವಳಿಯಲ್ಲೆಲ್ಲಾ ಅನುಸರವಸರದಿಂದ ಅದ್ಭುತ ರಕ್ಷಣಾ ವ್ಯೂಹ ರಚಿಸಿದ್ದಾರೆ.

ಎಲ್ಲೆಲ್ಲೂ ಪ್ರಬಲ ಸಿದ್ಧತೆ

ಶಾಂತ ಸಮುದ್ರದ ಸರಾಭವಗಳಿಂದ ಸಕಾಲದಲ್ಲಿ ಕಣ್ಣುತೆರೆದ ಜಪಾನರು ಈಗ ತಮ್ಮ ಮಾರ್ಮಿಕ ನೆಲಗಳೆಲ್ಲೆಲ್ಲಾ ಭದ್ರವಾದ ರಕ್ಷಣಾಸಿದ್ಧತೆ ಮಾಡಿದ್ದಾರೆ. ಶಾಂಗಾಯಿ ಹಾಂಗ್ಕೆವಲಯದಲ್ಲಿ 150 000ಸೇನೆ ನಿಲ್ಲಿಸಿದ್ದಾರಲ್ಲದೆ ಅಲ್ಲಿಯ ವಿಮಾನ ನಿಲ್ದಾಣಗಳನ್ನೆಲ್ಲಾ ಅಭೇದ್ಯ ಗೊಳಿಸಿದ್ದಾರೆ ಚೀನದ ದೇನೆಕಡೆಯ ಸೇನೆಗಳೂ ಸಮೃದ್ಧಿಗೊಂಡಿವೆ ಕರಾವಳಿ ತೋಪುಗಳನ್ನು ಬಹಳವಾಗಿ ಹೆಚ್ಚಿಸಲಾಗಿದೆ. ಹೋಂಗ್‌ಕೋಂಗ್-ಕೇಂಟೋನ್ ವಲಯದಲ್ಲಿ 5 ಡಿವಿಜನ್ ಜಾಪಾನೀ ಸೇನೆಗಳು ತಯಾರಾಗಿ ನಿಂತಿವೆ ಕರಾವಳಿ ವಲಯದಿಂದ ಚೀನೀ ಸೇನೆಗಳನ್ನು ತೀವ್ರವಾಗಿ ಒಳಗಡಯ ಸರ್ವತ ವಲಯಕ್ಕೆ ಹೊಡೆದೋಡಿಸುತಿದ್ದಾರೆ. ಅಮೆರಿಕನರು ಇಳಿಯಬಹುದೆಂಬುದರ ನಿರೀಕ್ಷೆಯಿಂದಲೇ ಇವೆಲ್ಲಾ ಸಿದ್ಧತೆಗಳು.

ರಶ್ಯದೊಡನೆ ಯುದ್ಧ ಹೂಡುವ ಪ್ರಸಂಗ

ರಶ್ಯನ ಬದ್ಧ ವಿರೋಧಿ ಡ್ಯೂರ್ ಓಫ್ ಬೆಡ್‌ಫೋರ್ಡರು ಇಂಗ್ಲಾಂಡಿನಲ್ಲಿ ಗ್ಲಾಸ್ಗೋ ಎಂಬಲ್ಲಿ ಭಾಷಣವೀಯುತ್ತಾ, ಏಸ್ಯಾ ಮತ್ತು ಯುರೋಪಿನಲ್ಲಿ ಜಗ್ಗುಗ್ಯಾವಾಗಲಿರುವ ಕರೋರ ಸರ್ವಾಧಿಕಾರಿ ರಶ್ಯದೊಡನೆ ಭವಿಷತ್ಕಾಲದಲ್ಲಿ ಯುದ್ಧ ಹೂಡಬೇಕಾಗಿ ಒರುವ ಆಪಾಯದ ಕುರಿತು ಎಚ್ಚರಿಕೆಯಿತ್ತಿರುವರು. "ನಾವು ಪೋಲೆಂಡನ್ನು ರಕ್ಷಿಸಲು ಯುದ್ಧಕ್ಕಿಳಿದೆವು ಆದರೀಗ ಹಿಟ್ಲರನು ಸ್ವಾಹಾ ಮಾಡಿದುದಕ್ಕೆಂತಲೂ ಹೆಚ್ಚಿನದನ್ನು ರಶ್ಯವನ ಹರಿಸುವದಕ್ಕ ಒಪ್ಪಬೇಕಾಗಿದೆ" ಎಂದು ಹೇಳಿ ಯುದ್ಧಾನಂತರ ಇಂಗ್ಲಾಂಡು ಎರಡನೇ ವರ್ಗಕ್ಕೆಳೆಯುವದೆಂದೂ, ನಿಜವಾದ ಸ್ವಜಾಪ್ರಭುತ್ವ ಸ್ಥಾಪನೆಗೆ ಸರ್ವತಶಸ್ತ್ರತ್ಯಾಗ ಮಾಡಿ ಹಣವನ್ನು ಸಾರ್ವಜನಿಕೋಪಯೋಗಕ್ಕೆ ವಿನಿಯೋಗಿಸುವದೂ ಹಿತವೆಂದೂ ಬಾಧಿಸಿದರು.

ಸ್ಮಾರಕ ದಿನ

ಕಳೆದ ತಾ 11ರಲ್ಲಿ ದೇಶದ ನಿವಿಧ ಕಡೆಗಳಲ್ಲಿ ಕೆಸ್ತೂರಿಬಾ ಗಾಂಧಿಯವರ ವಾರ್ಷಿಕ ಸ್ಮಾರಕ ಸಭೆಗಳು ನಡೆದಿವೆ ಸೇವಾ ಗ್ರಾಮದಲ್ಲಿ ನೂಲುವದೇ ಮೊದಲಾದ ಕಾರ್ಯಕ್ರಮಗಳೊಡನೆ ಅದು ಆಚರಿಸಲ್ಪಟ್ಟಿತು. ಹಿಂದೀ ಮತ್ತು ಉರ್ದೂ ಕಲಿತು ಹಳ್ಳಿಗರೊಡನೆ ಬೆರೆತು ಗ್ರಾಮೋದ್ಧಾರ ಕಾರ್ಯ ಮಾಡಬೇಕೆಂದು ಸ್ವಯಂ ಸೇವಕರಿಗೆ ಗಾಂಧಿಯವರ ಬೋಧೆಯಾಯಿತು. ಕಲ್ಕತ್ತೆದಲ್ಲಿ ಜಮುನಾಲಾಲ ಬಜಾಜರ ವಾರ್ಷಿಕ ದಿನಾಚರಣೆ ನಡೆಯಿತು ಅಖಿಲ ಭಾರತ ವಾಗೋರ್ ನಿಧಿಯೊಂದರ ರಚನೆಗಾಗಿ ಸರ್. ಸುಬ್ಬು ಮೊದಲಾದ ಪ್ರಮುಖರು ದೇಶೀಯರೊಡನೆ ವಿಜಾ ಸಿಸಿಕೊಂಡಿದ್ದಾರೆ ಸಂಯುಕ್ತ ಪ್ರಾಂತೀಯ ನ್ಯಾಯನಿರ್ವಾಯಕಸಭೆಯ ಮಾಜಿ ಅಧ್ಯಕ್ಷರಾದ ಶ್ರೀ ಪುರುಷೋತ್ತಮದಾಸ ಧಂಡನರು ದೇಶ ರಕ್ಷಣಾ ಶಾಸನದನ್ವಯ ದಸ್ತಗಿರಿ ಮಾಡಲ್ಪಟ್ಟಿದ್ದಾರೆ

ವಿಜಯಲಕ್ಷ್ಮಿ ಪಂಡಿತರ ಅಕ್ಕಾಸನೆ

"ಸ್ವಾತಂತ್ರ್ಯದ ಕುರಿತು ಸ್ಪಷ್ಟ ಭರವಸೆ ದೊರೆತು ವಿಚಾರಣೆಯಿಲ್ಲದೆ 1942 ರಿಂದ ಈ ವರೆಗೂ ಜೈಲಲ್ಲಿರುವ 18000 ಮಂದಿಯ ಬಿಡುಗಡೆಯಾದಲ್ಲಿ ನಮ್ಮ ಜನ ಮತ್ತು ಧಂಡವಾಳ ಸರ್ವಸ್ವವನ್ನೂ ಜಾಪಾನರ ವಿರುದ್ಧವಾಗಿ ಪ್ರಯೋಗಿಸಲು ಸಿದ್ಧರಿದ್ದೇವೆ ಈಗ ಯುದ್ಧಕ್ಕೆ ಸೇರಿರುವ 2ಮಿಲಿಯ ಜನರೆಂದರೆ-ಅಕ್ಕೆಯೋಧರು ನಿಮ್ಮದ್ಯೋಗ ಪೀಡೆಯಿಂದಾಗಿ ಸೇನೆಗೆ ಸೇರಿದವರು. ಅವರ ಮಾತ್ರ ನಾಗರಿಕರಿನ್ನುವ ಬ್ರಿಟಿಷ್ ಬಡಾಯಿಯಿಂದ ನಾವು ಜಗ್ಗುವ್ಯೆಗೊಂಡಿದ್ದೇವೆ. ಏವರು ಪ್ರಮುಖರಿಂದ ಲೇ ಲೋಕಸ್ಥವಸ್ಥೆ ನಿರ್ಮಾಣವಾಗಲಿದೆಯೆಂಬ ಮಾತು ಕೇಳಲುರುತ್ತಿದೆ. ಇಡಿಯ ಲೋಕತ್ಕೆ ಬೇಕಾದುದನ್ನು ನಿರ್ಧರಿಸಬಲ್ಲ ಆ ಏವರು ಅಸಾಮಿಗಳೆಂದರೆ ಅದಾರು? ಸ್ವತಂತ್ರಭಾರತವಿಲ್ಲದೆ ಶಾಂತಸಮುದ್ರದ ಸಮಸ್ಯೆಗೂಂದು ಪರಿಹಾರವೇ ಇಲ್ಲ"-ಎಂದು ಅಮೇರಿಕದ ಬೊಸ್ಟೊನಿನ ಒಂದು ಸಂಭಾಷಣೆಯ ವೇಳೆ ಶ್ರೀಮತಿ ವಿಜಯಲಕ್ಷ್ಮಿಯವರಂದಿದ್ದಾರೆ

ವಿವಿಧ ವಾರ್ತೆಗಳು

ಲೋರ್ಡ್ ವೇವೆಲರು ಸಪತ್ನೀಕರಾಗಿ ವೈಸೂರಿನಿಂದ ತಿರುವಾಂಕೂರಿಗೆ ವಿಮಾನ ಮೂಲಕ ಹಾರಿ ಸಂಭ್ರಮದ ಸ್ವಾಗತ ಪಡೆದಿದ್ದಾರೆ. ಬಾಲ್ಕಿಕ್ ರಾಷ್ಟ್ರಗಳ ಕುರಿತು ರಶ್ಯ ವಹಿಸಿರುವ ಧೋರಣೆಯನ್ನು ಇಂಗ್ಲಿಷ್ ಬಿತೋವೆನ್‌ರೆವೆ. ಹೆಡ್ ಲಾಮರು ಖಂಡಿಸಿದ್ದಾರೆ ಜರ್ಮನರಯು. ಬೋಟು ಹಾವಳಿಯೀಗ ಪುನಃ ಅಧಿಕವಾಗಿದೆ, ತಾನು ಲಂಡನಿಗೆ ಹೋಗಲಿದ್ದೇನೆ ಎಂದು ಪ್ರಚಾರವಾಗಿರುವ ವಾರ್ತೆಯನ್ನು ಪ್ರೆ ರುಸನೆಲ್ಲರು ಅಲ್ಲಗಳೆದಿದ್ದಾರೆ

ಬ್ರಿಟಿಷ್ ನಾಗರಿಕರ ಪ್ರಾಣಹಾನಿ.

ಯುದ್ಧಾರಂಭದಿಂದ 1945ನೇ ಸೆಪ್ಟೆಂಬರ್ ಅಂತ್ಯದ ವರೆಗೆ ಆಕಾಶ ಧಾಳಿ ನಿಮಿತ್ತ ಹುತಿಗೊಂಡ ಬ್ರಿಟಿಷ್ ನಾಗರಿಕರ ಸಂಖ್ಯೆ 1,36,642. ಎಂದು ಕಾಮನ್ಸ್ ಸಭೆಯಲಿ ಪಕಟವಾಯಿತು ಈ ಅವಧಿಯಲ್ಲಿ ನಿಂಬಾಂಬು ಪ್ರೈ 1,90 000 ಜಖಮಿಗೊಳಗಾದವರೆ ದುರಸ್ಥಾದ್ಯವಿರುವ ಒಟ್ಟು ಮನೆಗಳ ಸಂಖ್ಯೆ 4 ಮಿಲಿಯ.

ಮೈಸೂರು ಪತ್ರ

ನಮ್ಮ ಸಂಚಿಕಾವಾರಿಣಿ

ಸಂಸ್ಥಾನದಲ್ಲಿ ಶ್ರೀ ದಾಸಪ್ಪನವರ ಪ್ರವಾಸ-ಮೈಸೂರು ಕಾಂಗ್ರೆಸ್ಸಿನ ಮಾಜಿ ಅಧ್ಯಕ್ಷರಾದ ಶ್ರೀ ಕೆಚ್. ಸಿ ದಾಸಪ್ಪನವರು ಕೆಲವು ತಿಂಗಳಿಂದ ಸೇವಾ ಗ್ರಾಮ ಆಶ್ರಮವಾಸಿಗಳಾಗಿದ್ದು ಚುನಾವಣಾ ಪ್ರಚಾರಕ್ಕಾಗಿ ಒಂದಿದ್ದರು. ಬಂದವರು ಹಾಸನ, ಶಿವಮೊಗ್ಗಾ, ತುಮಕೂರು, ಬೆಂಗಳೂರು, ಮಂಡ್ಯ ಜಿಲ್ಲೆಗಳಲ್ಲಿ ಪ್ರವಾಸ ಮಾಡಿ ಕಾಂಗ್ರೆಸ್ ಉಮೇದುವಾರರ ಪರ ಪ್ರಚಾರ ನಡೆಸಿದರು.

ಆರಕ್ಷ ಪೋಷಕ ಸಭೆ-ಮೈಸೂರಿನಲ್ಲಿ ಒಂದು ಆರಕ್ಷ ಪೋಷಕ ಮಂಡಿರವನ್ನು ಕಟ್ಟಲು ಸರ್ವಾಡುಗಳು ನಡೆಯುತ್ತಿವೆ ಆದಕ್ಕಾಗಿ ತಾ 10-2-45ರಲ್ಲಿ ಪೌರ ಸಭಾ ಭವನದಲ್ಲಿ ಸೌರಸಭಾಧ್ಯಕ್ಷರಾದ ಶ್ರೀ ರಮಚಂದ್ರರಾವ್ ಜೋಯಿಸರವರ ಅಧ್ಯಕ್ಷತೆಯಲ್ಲಿ ನಗರದ ಪ್ರಮುಖ ಸಭೆ ಸೇರಿದ್ದಿತು. ಸಭೆಯಲ್ಲಿ ಸುಮಾರು ೨೮ ಸಾವಿರ ರೂಪಾಯಿಗಳ ವಾಗ್ದಾನವಾಗಿದೆ

ANNOUNCEMENT.

We have pleasure to announce that the following new branches will be opened on 21st February, 1945

COIMBATORE SALEM
ERODE MADURA

Other Branches at

Quilon	**Mangalore**
Alleppey	**Bangalore**
Ernakulam	**Belgaum**
Cochin	**Dharwar**
Calicut	**Hubli**
Cannanore	**Chikmangalur etc. etc**

4 Branches in Bomay City

Capital 26 Lakhs Reserves 10 Lakhs

ESTD 1906

Canara Bank, Limited.

(Incorporated in British India Liability of members limited)

ದಕ್ಷಿಣ ಕನ್ನಡ.

ಉಡುಪಿ

ಸಿಟಿ ಬಸ್ ಸರ್ವಿಸಿನ ಆವಶ್ಯಕತೆ

ಮೋಟಾರ್ ಬಸ್ಸ್ ಸರ್ವಿಸುಗಳ ಸಂಖ್ಯೆಯು ಕಡಿಮೆಯಾದುದರ ಹಿನ್ನಾಲೆಯಾಗಿ ನಾಲ್ಕೈದಾರು ಮೈಲು ದೂರದ ಸ್ಟೇಶನುಗಳಿಗೆ ಬಿಕ್ಕಟ್ಟು ಹೆಚ್ಚಾಗುತ್ತಾ ಬರುತ್ತಿದೆ ಮತ್ತು ಕಷ್ಟ ಸಾಧ್ಯವಾಗಿದೆ. ಭಂಡಾರಿಗಳಾರಾಗಲೀ ಬಸ್ ಕಂಪೆನಿ ಮ್ಯಾನೆಜರಾಗಲಿ ಸಿಟಿ ಬಸ್ ಸರ್ವಿಸನ್ನು ತೆರೆಯುವ ಏರ್ಪಾಡನ್ನು ಕೂಡಲೇ ಮಾಡಿದರೆ ಉದ್ಯೋವರ್ಗ, ಶಾಲೆ-ಕಾಲೇಜು, ಕಲ್ಯಾಣಪುರ, ಮಲ್ಪೆ ಮೊದಲಾದ ಕಡೆಗಳಿಗೆ ಹೋಗಿ ಬರಲು ಸರ್ವರಿಗೂ ಅನುಕೂಲತೆಗಳನ್ನು ಒದಗಿಸಿದಂತಾಗುವುದು. ಹ್ಯಾಸ್ಕೂಲುಗಳಲ್ಲಿ ಓದುವ ವಿದ್ಯಾರ್ಥಿಗಳಿಗೂ ತುಂಬಾ ಅನುಕೂಲವಾಗುವುದು. ಮಣ್ಣಾಕೃ ರಾರಾದರೂ ಕನ್ಸರ್ನೆಯವರೇ?

× × ×

ಜಟಕಾ ಗಾಡಿಗಳ ಬಾಡಿಗೆ ದರವನ್ನೂ ಹತೋಟಿಗೆ ಬಂದಿಲ್ಲ. ಜಟಕ ಮಾಲಿಕರು ಹೇಳಿದುದೇ ದರ. ಬಾಡಿಗೆ ದರವನ್ನು ನಿರ್ಣಯಿಸುವಂತೆ ಜಿಲ್ಲಾ ಕಲೆಕ್ಟರವರನ್ನು ಪ್ರಾರ್ಥಿಸುವ ಸರ್ಕಾರಿಯೇತರ ನಗರ ಸಭೆಯಲ್ಲಿ ಪಂಜಾರಾಗಿತ್ತು. ಆದರೆ ನಿರ್ಣಯದ ಫಲಿತಾಂಶ ಕಾರ್ಯರೂಪದಲ್ಲಿ ಬಂದಂತೆ ತೋರುವುದಿಲ್ಲ. ಜಿಲ್ಲಾ ಧಿಕಾರಿಗಳು ಈ ಕಡೆ ಕಣ್ಣು ಹಾಯಿಸಿ ಕೊಡುವರೆಂದು ನಂಬಿಕೆಯಿದೆ. ಕಂಟ್ರೋಲ್ ದರದಲ್ಲಿ ಟಾಯರು ಪೆಟ್ರೋಲ್ ಡೀಲರರೂ ಮೋಟಾರ್ ಕಾರುಗಳ ಬಾಡಿಗೆ ಮಾತ್ರ ಮೇಲ್ಮಟ್ಟಕ್ಕಾಗಿಯೇ ಇದೆ.

× × ×

ಹೋಲ್ ಸೇಲ್ ಕ್ಲೋಥ್ಸ್ ನ ಅದರ ಡಿಪೊಗಳಿಗೆ ಒಪ್ಪಿಸುವ ಅತ್ಯಾ ಸಾಹಸ್ಯ ಕೃತ್ಯಕರವಾಗಿಲ್ಲವೆಂಬುದು ಪಡಿಯಕ್ಕೆ ಪದೆಯುವವರ ಸ್ವಾನುಭವವಾಗಿದೆ. ಡಿಪೊ ನಿಜಂದರು ಈ ಭಾಗದಲ್ಲಿ ಜಾಗರೂಕರಾಗಿರಬೇಕಾಗಿದೆ. ನಿಯಮಿತ ಅಳತೆಗಿಂತ ಕಡಿಮೆಯಾದ ಮಿಡಿಯ ಕೃಯದಲ್ಲಿ ಕಡಿಮೆಯಾದ ಅಂಕದ ಮೌಲ್ಯವನ್ನು ವಜಾ ಮಾಡುವಂತೆ ಮಿಡಿಲ್ ಜಾಸ್ತಿ ಬಂದ ಅಕ್ಕಿಯ ದಾಖಲೆಯ ಹಣವನ್ನು ಡಿಪೊ ಏಜಂಟರು ಕೊಡಲು ಮರೆಯಬಾರದು. ಜಾಸ್ತಿ ಬಂದ ಅಕ್ಕಿ ಯಾದಾಸ್ತಿನಲ್ಲಿ ಸಮಾವಿಸಲಾಗುವುದಿಲ್ಲವೆಂದೂ ಆ ಬಾಬ್ತು ಹಣ ಸಿಗುವುದಿಲ್ಲವೆಂದೂ ಸದೇ ನದೇ ದೂರು ಕೇಳಲ್ಪಡುತ್ತದೆ. ಹೋಲ್ ಸೇಲ್ ಸ್ಟೋರ್ಸಿನ ಡಿಪೊ/ಇನ್ಸ್ ಪೆಕ್ಟರಿದ್ದಾರೆ. ರವಿಸ್ಯೂ ಅಧಿಕಾರಿಗಳಿದ್ದಾರೆ. ಡಿಪೊಗಳಿಗೆ ಅಳಸ್ಮಿಕ ಸಂದರ್ಶನೆಯಿತ್ತು ಆ ದಿನ ಜನಿಬನದ ಅಕ್ಕಿಯನ್ನೂ ಯಾದಾಸ್ತುಗಳನ್ನೂ ಪರೀಕ್ಷಿಸಿ ನೋಡಿದರೆ ನಿಜಾಂಶ ಬಯಲಾಗುವುದು. ಮಾತ್ರವಲ್ಲದೆ ದೂರುಗಳು ಬರಬೇಕಾಗಿ ಇರುವುದಿಲ್ಲ. ತಪ್ಪಿ ಕಕ್ಷರು ಯಾರೆಂಬುದು ಜನತೆಗೂ ತಿಳಿದಂತಾಗುವುದು.

ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದ ವರ್ಧಂತ್ಸವ ದ 10-2-45ನೇ ಆಕರಾಜ್ಞ ಶ್ರೀ. ಪಿ. ಎಸ್. ತಿಮ್ಮಪ್ಪ ಶೆಟ್ಟಿ, ಬಿ. ಎ. ಡಿಪ್ಯುಟಿ ಕಲೆಕ್ಟರ್ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಭವನದ ಕಾರ್ಯದರ್ಶಿಯವರು ವರದಿಯನ್ನೀದಿದ ಮೇಲೆ ಶ್ರೀ. ಬಿ. ಶ್ಯಾಮರಾಯ ಶೆಟ್ಟಿ ಬಿ- ಎ- ಎಲ್- ಬಿ, ಇವರು ಸುಶ್ರಾವ್ಯ ಸ್ವರಸ್ತಿ ಭಾಷಣ ಮಾಡಿದರು ಶ್ರೀ- ಗೋಪಾಲ ಶೆಟ್ಟಿಯವರು ಅದನ್ನು ಯಥೋಚಿತವಾಗಿ ಉತ್ತರಿಸಿದ ಮೇಲೆ ಅಧ್ಯಕ್ಷರು ಭವನದ ಹಾಗೂ ಸಮಾಜದ ಏಳಿಗೆಯ ಉಪಯುಕ್ತ ಸೂಚನೆಗಳುಳ್ಳ ಭಾಷಣವನ್ನು ಬಹುಮಾನ ಹಂಚಿದರು. ಭವನದ ಕಟ್ಟಡ ಮತ್ತು ಬಾವಿ ದುರಸ್ತಿಯ ಆವಶ್ಯಕತೆಯನ್ನು ಅಧ್ಯಕ್ಷರು ಒತ್ತಿ ಹೇಳಿದರು, ಆ ವೇಳೆ ನಾಡಕಚೇರಿ, ಪ್ರಣಾಳಿಕೆ, ಆಧಾರ ಕಾರ್ಡುಗಳ ಇತ್ಯಾದಿ ವಿಷಯಗಳು ಪ್ರದರ್ಶಿಸಲ್ಪಟ್ಟವು. ಆಭಿನಯಗಾರರಿಗೆ ಬಹುಮಾನಗಳು ಹಂಚಲ್ಪಟ್ಟವು. ಕೊನೆಯಲ್ಲಿ ಕೆಲವು ವಿದುಷಿಗಳಿಂದ ನೃತ್ತನ ಪ್ರದರ್ಶನಗಳನ್ನು ಬರಿದುಕೊಟ್ಟ ಶ್ರೀ. ಎಂ. ವಿ. ಹೆಗ್ಡೆಯವರಿಗೆ ಒಂದು ಸುವರ್ಣ ಪದಕವನ್ನಿಯಲಾಯಿತು. ಶ್ರೀ. ಬಿ. ರಾಮಣ್ಣ ಶೆಟ್ಟಿ, ಬಿ. ಎ. ಎಲ್- ಬಿ, ಇವರು ಧನ್ಯವಾದಗಳನ್ನಿತ್ತರು.

ಬೈಂದೂರು—ಬೋರ್ಡ್ ಮಿಡಲ್ ಸ್ಕೂಲ್ ಬಲ್ಟಂಗ್ ಕಮಿಟಿಯ ಕಾರ್ಯದರ್ಶಿ ಡಾಕ್ಟರ್ ಎಮ್. ಎಸ್. ಹೊಳ್ಳರು, ತಮ್ಮ ತೀರ್ಥರೂಪರಾದ ಕೇರ್ತಿಶೇಷ ಶ್ರೀ ಶಂಕರ ಹೊಳ್ಳರ ಸ್ಮಾರಕಾರ್ಥವಾಗಿ, ತಾಲೂಕಿನ ವಿದ್ಯಾರ್ಥಿಗಳಿಗೆ ಬಹುಮಾನವಾಗಿ ಯಿಬ್ಬಗೆ ಸುಮಾರು ಒಂದು ಸಾವಿರ ರೂಪಾಯಿ ವೆಚ್ಚ ತಗಲುವ ಒಂದು ಕಟ್ಟಡವನ್ನು ಕಟ್ಟಿಸುವುದಾಗಿ ವಾಗ್ದಾನವಿತ್ತು, ಆ ಕಟ್ಟಡದ ಶಂಕು ಸ್ಥಾಪನೆಯನ್ನು ತಾ 9—2—45ರಲ್ಲು ತಮ್ಮ ದಿವ್ಯ ಹಸ್ತದಿಂದ ನೆರವೇರಿಸಿರುವರು.

ಮೊಲ್ಲಿ—ನಿನ್ನಕ್ಕರಾಗಲಿರುವ ತಮ್ಮ ಸ್ಥಳೀಯ ಸ್ವಾಧಿಮಿಕ ಶೀಲಾಧ್ಯಾಪಕ ಶ್ರೀ. ಯಂ ರಾಮರಾಯ ಕಾಮತರಿಗೆ ವಿದಾಯ ಸತ್ಕಾರ ಕೊಡುವೆಂದು ಡಾ। ಯಂ. ಆರ್- ಕಾಮತರ ಅಧ್ಯಕ್ಷತೆಯಲ್ಲಿ ಗುಣ ಕಥನಗಳಿಂದಿಗೆ ತಾ 11ರಲ್ಲಿ ಜರಗಿತು.

ಸ್ಥಳೀಯ ಸಹಕಾರಿ ಡಿಪೊವಿಗೆ ಗೋಧಿ ಬಂದು ತಿಂಗಳಾದರೂ ಕ್ರಯದ ಪಟ್ಟಿ ಬರಲಿಲ್ಲವಂತೆ. ಈ ಅವ್ಯವಸ್ಥೆಯಿಂದ ಗೋಧಿ ಕೊಡಲ್ಪಡದೆ ಜನರ ಗೋಳು ಹೆಚ್ಚಾಗಿದೆ.

ಶಿರ್ವ—ಶಿರ್ವ ಬಂಟರ ಯಾನೇ ನಾಡವರ ವಿದ್ಯಾವರ್ಧಕ ಸಂಘದ ನೇತೃತ್ವದಲ್ಲಿ ತಾ 4ರಲ್ಲು "ವಿದ್ಯಾವರ್ಧಕ ಕ್ಲಬ್ಬಿ" ಶ್ರೀ. ಸಲೋದರ ಮಾತಾಯಿನ್, B- A., L- T; ಯರ್ರ್ಜಿಸನ್ನು ದಿಂದ ತೆರೆಯಲ್ಪಟ್ಟಿದೆ. ವಿದ್ಯಾವರ್ಧಕ ಸಂಘದವರು ಬಡ ಜನರ ಮಧ್ಯೆ ಇತ್ಯಾದಿಗಳಿಗೆ ಬೇಕಾದ ಅನುಕೂಲತೆಗಳನ್ನು ಕೊಡ್ಲು ಜಾತಿ ಮತ ಭೇದವಿಲ್ಲದೆ ಜನತಾ ಸೇವೆಯಲ್ಲಿ ನಿರತರಾಗಿರುವುದು ತುಂಬಾ ಶ್ಲಾಘನೀಯ

ಮೂಲ್ಕಿ—ಮೂಲ್ಕಿ ಬಿಲ್ಲವ ಸಮಾಜ ಸೇವಾ ಸಂಘಕ್ಕೆ ಮುಂಬಾಯಿಯಲ್ಲಿ ತುಂಬಾ ಶ್ರದ್ಧಾಪೂರ್ವಕ ಧನ ಸಂಗ್ರಹಿಸಿಕೊಟ್ಟ ಶ್ರೀಮಾನ್ ಯನ್ನಾ ಎ. ಸುವರ್ಣರವರಿಗೆ ತಾ 4-2-1945ರಲ್ಲು ಸದ್ರಿ ಸಂಘದಲ್ಲಿ ಒಂದು ಸತ್ಕಾರ ಕೂಟವನ್ನು ಏರ್ಪಡಿಸಲಾಗಿತ್ತು.

ನೊಗವೀರ ಸಮಾಜ ಸೇವಾ ಸಂಘ

ಮುಂಬಯಿ, "ಸತ್ಕಾರ್ಯಕ್ಕಾಗಿ ಮಹಸೀಯರಲ್ಲಿ ವಿನಂತಿ" ಮಾಡಿದ ನಾಲ್ಕು ಪಟ್ಟಿ ಸಭೆಯವರು ಮೊಲ್ಕಿಯಲ್ಲಿ ನೊಗವೀರ ಸಮಾಜ ಸೇವಾ ಸಂಘವನ್ನು ಸ್ಥಾಪಿಸಿ, ಬಡ ವಿದ್ಯಾರ್ಥಿಗಳ ವಿದ್ಯಾಭ್ಯಸ್ಥಿಯನುಕೂಲಕ್ಕಾಗಿ "ವಿದ್ಯಾರ್ಥಿ ಭವನ"ವನ್ನು ಕಟ್ಟಿಸುವ ಕಾರ್ಯಾರಂಭವನ್ನು ಕೈಕೆಂದು ತಾ 21-2-45ರಲ್ಲು ಕಟ್ಟಿಡಾದ ತಳಹದಿಯನ್ನು ಕ.ಲ ಗುರುಗಳಾದ ಶ್ರೀ. ವಾಧವ ತಂಗಳ ಪೂಜಾರಿಯವರಿಂದ ಹಾ ಕೆಸುವ ಸಮಾರಂಭವನ್ನು ನೆರವೇರಿಸಲಿರುವರು. ಯಾವುದೊಂದು ಸಮಾಜದ ಏಳಿಗೆಯನ್ನು ಹೊಂದಬೇಕಾದರೆ ಅದು ಸುಶಿಕ್ಷಿತವೂ ಸುಸಂಸ್ಕೃತವೂ ಆಗಬೇಕು. ಆಲ್ಪಸ್ಪ ಸಮಾಜದ ಆರ್ಥಿಕ ಅಭಿವೃದ್ಧಿಯೇ ಮುಖ್ಯ ಕಾರಣವಾಗಿದೆ. ವಿದ್ಯಾ ವ್ಯಾಸಂಗಕ್ಕೆ ಎಷ್ಟು ಪ್ರೋತ್ಸಾಹವ ಸಿಕ್ಕುವುದೋ ಅಷ್ಟೇ ಸಮಾಜದ ಉನ್ನತಿಯುಂಟಾಗುವುದು. ಈ ನಿಟ್ಟಿನಲ್ಲಿ ವಿದ್ಯಾರ್ಥಿ ಭವನದಿಂದ ವಿದ್ಯಾರ್ಥಿಗಳಿಗೆ ತಕ್ಕ ಅನುಕೂಲತೆಯುಂಟಾಗುವುದೆಂದು ತಿಳಿಸಲು ಸಂತೋಷಪಡುತ್ತೇವೆ. ಈ ಸದುದ್ದೇಶವು ಈಡೇರುವಲ್ಲಿ ಭವನಾಭಿವೃದ್ಧಿಗಾಗಿಯೂ ಮಜಾ ಜನರ ಉದಾರಂತಃಕರಣದ ಸಹಕಾರ ಸಹಾನುಭೂತಿಯನ್ನು ಹೊಂದಿಕೊಂಡಿದೆ. ಈ ಸತ್ಕಾರ್ಯವನ್ನು ಮನಗಂಡು ಉದಾರ ಧನ ಸಹಾಯವನ್ನು ಮಾಡಿ ಭಾವೀ ಜನತೆಯ, ಭಾರತ ಮಾತೆಯ ಅಲ್ಲದೆ ಜಗದೀಶ್ವರನ ಆಶೀರ್ವಾದಗಳಿಗೆ ಪಾತ್ರರಾಗಬೇಕಾಗಿ ಅಪೇಕ್ಷಿಸುತ್ತೇವೆ.

ಹೆರ್ಗ—ಸ್ಥಳೀಯ ಶ್ರೀ ದುರ್ಗಾಪರಮೇಶ್ವರಿ ಅಮ್ಮನವರ ಸನ್ನಿಧಿಯಲ್ಲಿ ತಾ 26-1-45ರಿಂದ 30-1-45ರ ತನಕ ವಿಶ್ವೇಶ್ವರ ಪ್ರಾರ್ಥನೆ, ಧ್ವಜಾರೋಹಣ, ಗಜವಾಹನೋತ್ಸವ, ಮಹಾರಥೋತ್ಸವ, ಅವಭೃತ ಚೂರ್ಣೋತ್ಸವ, ಮುಂತಾದ ಶ್ರೀ ದೇವಿ ಕಾರ್ಯಕ್ರಮಗಳು ಹೆರ್ಗ ಶ್ರೀ ಲಕ್ಷ್ಮೀನಾರಾಯಣ ತಂತ್ರಿಗಳವರ ನೇತೃತ್ವದಲ್ಲಿ ಅತೀ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು.

ವೈಸರಾಯ್ ದಂಪತಿಗಳ ಆಗಮನ-ಮೈಸೂರಿಗೆ ವೈಸರಾಯ್ ದಂಪತಿಗಳು ಬಂದಿದ್ದು ಇಲ್ಲಿಯ ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿಯಿತ್ತು ಹೊರಟು ಹೋದರು. ಶ್ರೀ ನಮ್ಮಹಾರಾಜರವರು ವೈಸರಾಯರ ಆಗಮನದ ಪ್ರಯುಕ್ತ ಯುದ್ಧ ನಿಧಿಗೆ ೫ ಲಕ್ಷ ರೂಪಾಯಿಗಳನ್ನು ಕೊಟ್ಟಿರುತ್ತಾರೆ.

Sri Narayan Guru Bank, Ltd.,

(Incorporated in British India. Liability of Members is Limited)

Regd. Head Office. HAMPANKATTA,

MANGALORE.

Branches: UDIPI, COONDAPUR & COIMBATORE

Authorised Capital	Rs. 2,00000
Issued Capital	,, 1,00000
Paid-up Capital	,, 1,00000

No further shares available. All kinds of Banking business undertaken.

Short term Hundi Loans a speciality. Fixed Deposits for varied terms accepted at favourable rates.

MANGALORE JARAPPA,
President & Managing Director.

ಮುಂಬಯಿಯಲ್ಲಿ ಕನ್ನಡ ನಾಟಕ!

ತಾರೀಕು 18-3-45ನೇ ರವಿವಾರ ಸಾಯಂಕಾಲ ಗಂಟೆ 10ಕ್ಕೆ

"ಬಾಲಿವಾಲಾ ಗ್ರೌಂಡ್ ಥಿಯೇಟರ್ಸ್" (ತಾರ್‌ದೇವ್)

ಮಾಸ್ಟರ್ ದೇವದಿಗಾರ್ ಮತ್ತು ಪಾರ್ಟಿ

ಇವರಿಂದ

★ ಪ್ರೇಮ ಪಾಶ ★

ಎಂಬ ಹಾಸ್ಯರಸಪ್ರಧಾನ ಸಾಮಾಜಿಕ ನಾಟಕವು "ಮಂಗಳೂರು ಆನಂದ ಸಂಗೀತ ವಿದ್ಯಾಲಯ" ದ ಸಹಾಯಾರ್ಥವಾಗಿ ಅಭಿನಯಿಸಲ್ಪಡುವುದು

ಏನೋದ ನಟನಾ ಪ್ರವೀಣ **ಶ್ರೀ. ಬಿ ನರಸಿಪ್ಪ** (ಬಡವರ ಬಂಧು)

ಇವರ "ಜೆಡ್ಡ ತಿಮ್ಮ" ನ ಪಾತ್ರವನ್ನು ನೋಡಲು ಮರೆಯದಿರಿ!

"ಕಾಲಚಕ್ರ" ದಲ್ಲಿ ಅಭಿನಯಿಸಿ ನಿಮ್ಮನ್ನು ಕುಷ್ಟಿಗೊಳಿಸಿದ ನಟವರ್ಗದ

ನಟನಾ ಚಾತುರ್ಯವನ್ನು ಮತ್ತೊಮ್ಮೆ ಕಾಣಿರಿ!

ಟಿಕೇಟುಗಳನ್ನು ಮುಂಚಾಗಿ ಈ ಕೆಳಗಿನವರಲ್ಲಿ ಪಡೆಯಬಹುದು:

The Eastran Art Studio
Gunbow Street, FORT BOMBAY.

ಹಿಂದೂಸ್ತಾನದ ಚಿತ್ರರತ್ನಗಳಲ್ಲೊಂದು ಮಹತ್ವಾದ ಚಿತ್ರ.

ಅದು. ನಮ್ಮ ನಿಮ್ಮೆಲ್ಲರ ಭಾಗ್ಯ

ಕೆಸ್ಮತ್

ಎಣೆಯಿಲ್ಲದ ಜೊತೆ ಮುಮತಾಜ್ ಶಾಂತಿ ಮತ್ತು ಅಶೋಕ ಕುಮಾರ್ ಜೊತೆಗೆ ಷಾ ನವಾಜ್, ಸಿಧಾ ವಾಲಾ, ಚಂದ್ರಪ್ರಭಾ ಮೊದಲಾದವರು.

ತಾ. 12—2—45ರಿಂದ

ಶ್ರೀರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡ್ಡಿ.

ಬರುವ ಚಿತ್ರ—

— ಶಾಂತಾರಾಮರ ಶಾಕುಂತಲಾ. —

BOOKS RECEIVED.

HISTROY OF POLAND.
BY W. R. Rs- 1 -8—0
SOCIALISTS and THE POLISH CAUSE.
Contributers, M. R. Masani, Philip Murray, Robert Watt. David Dubinsky- Rs. 0 - 10—0
WHAT POLAND WANTS.
By Ignacy Matuszewski
Rs 0- 12—0
THE CORE OF A CONTINENT
By Henryk Strasburger.
Rs 1 -8—0
RUSSIA, POLAND AND INDIA.
By S. R Ali Rs 1 8—0
SOCIALISTS and POLAND
By Patrick J Dollan, Rs 1-0 0
FREE POLAND.
By Major Macdonald
Jalowieck, Rs 0 -10—0

All the above publications from

The INDO-POLISH LIBRARY.

Distributors for India:—

M/S PADMA PUBLICATIONS LTD,

Sir Phirozsha Mehta Road,
BOMBAY.

ದಕ್ಷಿಣ ಕನ್ನಡ,

ಮಂಗಳೂರು

ಜಿಲ್ಲಾ ಆಹಾರ ಸಮಿತಿಯ ಸಭೆ

ಯು–ಕಳೆದ ತಾ. ೨೯ರಂದು ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾಂತೀಯ ಸಿವಿಲ್ ಸಪ್ಲೈ ಡಿ ಕವಿ ಕನಕಾಡಿ ಶ್ರೀ ಆರ್. ಸಿ. ರಾಯೋ ಅವರೂ ಉಪಸ್ಥಿತರಾಗಿದ್ದರು. ಇವರು ಮುತನಾಡುತ್ತ, ಜಿಲ್ಲೆಯ ಆಹಾರ ಸಮಸ್ಯೆಯನ್ನು ಬಗೆಹರಿಸುವ ವಿಚಾರದಲ್ಲಿ ಜಿಲ್ಲೆಯ ಜನರು ಸಹಕರಿಸಿ ಕೈಕೊಳ್ಳುತ್ತಿರುವ ಕಾರ್ಯದಲ್ಲಿ ತೃಪ್ತಿ ಸೂಚಿಸಿದರು. ಜಿಲ್ಲೆಯಲ್ಲಿ ಹಸುಗೆ ಹರಡಿದ ಹಾಗೂ ಹಂದಿದ ಪ್ರದೇಶಗಳಿಗೆ ಒಟ್ಟಿ ಸುಮಾರು ೧೬ಲಕ್ಷ ಮುಡಿ ಅಕ್ಕಿ ಬೇಕಾಗಬಹುದು. ಈ ವೈಕಿ ಎರಡು ಬೆಳೆಗಳಿಂದಲೂ ಒಟ್ಟು ಸಂಗ್ರಹಿಸಬಹುದಾದ ಅಕ್ಕಿ ಮುಡಿ ೯ ಲಕ್ಷ ಮಾತ್ರ. ಆದುದರಿಂದ ಈ ವರ್ಷವೂ ಹೊರಗಿನಿಂದ ಅಕ್ಕಿ ತರಿಸದೆ ನರ್ವಾಹವಿಲ್ಲ ಎಂಬ ವಿಚಾರವು ಸ್ಪಷ್ಟಗೊಳಿಸಲ್ಪಟ್ಟಿತು. ಅವಶ್ಯಕತೆಯನ್ನು ಹಸುಗೆ ಪದಾರ್ಥದ ಒಂದಂಶವಾಗಿ ಉಪಯೋಗಿಸುವ ವಿಚಾರದಲ್ಲಿ ಸಲಹೆ ಕೊಡಲು ಹಿಂದಿನ ಸಭೆಯಲ್ಲಿ ನೇಮಿಸಲ್ಪಟ್ಟಿದ್ದ ಸಮಿತಿಯು 'ಅವಶ್ಯಕತೆಯನ್ನು ಹಸುಗೆ ಪದಾರ್ಥದ ಅಂಗವಾಗಿ ಉಪಯೋಗಿಸಲು ಸಾಧ್ಯವಿಲ್ಲ'–ಎಂಬ ಅಭಿಪ್ರಾಯವನ್ನು ಮೈಕ್ಷಪಡಿಸಿದರು.

ನಮ್ಮ ಜಿಲ್ಲೆಯ ಬೇಸಾಯವನ್ನು ಅಭಿವೃದ್ಧಿಗೊಳಿಸಲು ಗೆರೊಷ್ಪಾ ಜಲಪಾತದಿಂದ ವಿದ್ಯುತ್ ಶಕ್ತಿಯನ್ನು ತರಿಸಬೇಕು ಎಂದು ಶ್ರೀ ಎ. ಬಿ. ತಿಮ್ಮಪ್ಪಯ ಮುಂದಿನಿದ ಸೂಚನೆಯು ಸ್ವೀಕೃತವಾಯಿತು. ಹಸುಗೆ ಹುಡಿ ಕ್ಷೇತ್ರಗಳಲ್ಲಿರುವ ದೇವಸ್ಥಾನಗಳಲ್ಲಿ ನಡೆಯುತ್ತಿರುವ ಅಕ್ಕಿ ವಿತರಣೆಯ ಧಾನ್ಯಗಳ ವಿನಿಯೋಗದ ಬಗ್ಗೆ ನಬಂಧನೆಯೊಂದನ್ನು ಸಿದ್ಧಪಡಿಸಬೇಕೆಂದು ಶ್ರೀ ಜನರಾಜ ಹೆಗ್ಡೆ ಅವರು ಸೂಚಿಸಿದರು.

ಬೆಳೆ ಕಟಾವು–ಮಂಗಳೂರಿನ ಸೌತ್ ಸರ್ಕಲ್ (ದಕ್ಷಿಣ ವಿಭಾಗದ) ಹಸುಗೆ ಪ್ರದೇಶದೊಂಗರುವ ಸುಗ್ಗಿ ಬೆಳೆಯ ನ್ನು ಕಟಾವು ಮಾಡುವ ಬಗ್ಗೆ ಪ್ರತಿಯೊಬ್ಬ ಸಾಗುವಳಿದಾರನು ಸೌತ್ ಸರ್ಕಲ್ ಅಸಿಸ್ಟಾಂಟ್ ಹಸುಗೆ ಅಧಿಕಾರಿ ಬರಹ ಮೂಲಕ ಹುಕುಂ ಮುಂಗಡವಾಗಿ ಪಡೆಯತಕ್ಕದ್ದು. ಹೀಗೆ ಕಟಾವು ಮಾಡಿದ ಅನಂತರ ಸಿಕ್ಕಿರ ಭತ್ತದ ಸಂಪೂರ್ಣ ಲೆಕ್ಕವನ್ನು ಕೂಡಲೇ ಅದೇ ಅಧಿಕಾರಿಗೆ ಬರಹ ಮೂಲಕ ತಿಳಿಸತಕ್ಕದ್ದು. ಅದಲ್ಲದೆ ಈ ಭತ್ತವನ್ನು ಅದೇ ಅಧಿಕಾರಿಯ ಬಾಹ ಮೂಲಕ ಹುಕುಂ ಮುಂಗಡವಾಗಿ ಪಡೆಯದೆ ಯಾವ ರೀತಿಯಲ್ಲಾ ವಿರ್ಜ ಮಾಡಿಬಾರದು. ಇತಗಳಿಗೆ ವಿರುದ್ಧವಾಗಿ ವರ್ತಿಸಿದ್ದಲ್ಲಿ ಹಸುಗೆ ಸಟಂ ಧನೆನಿಯಮ ಕಠಿಣ ಹೊಂಸಲಾದೀತು ಎಂದು ಅಸಿಸ್ಟಾಂಟ್ ಹಸುಗೆ ಅಧಿಕಾರಿ, ಸೌತ್ ಸರ್ಕಲ್ ಇವರು ತಿಳಿಸುತ್ತಾರೆ.

ಸೈಕಲ್ ವ್ಯಾಪಾರಿ–ಹುಗೂ ರಿಪೇರು ಗಳಿಗೆ ಕೆನರಾ ಕಂಪನಿಯಲ್ಲಿ ಟೇಕ್ಸ್ ಆಫೀಸರರೊಂದು ಎಚ್ಚರಿಕೆಯನ್ನು ಕೊಡುತ್ತ 'ಒಂದು ಇಂಚು ಉದ್ದದ ವಾಲ್ವ್‌ಟ್ಯೂಬಿಗೆ ಕೆಲ ವ್ಯಾಪಾರಿ ಹಾಗೂ ರಿಪೇರಿ ಮಾಡುವವರ ೧೫ಯಿಂದ ೩ ಆಣೆಗೆ ವರೆಗೂ ಚಾರ್ಜು ಮಾಡುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ. ಈ ಕುರಿತ ಪರಿಶೀಲನೆ ನಡೆಸಿದ್ದಲ್ಲಿ, ಒಮ್ಮಿಗೆ ಬೇಕಾದ ವಾಲ್ವ್‌ಟ್ಯೂಬಿನ ಬೆಲೆ, ಇದನ್ನು ಪೋಣಿಸಿದ ಹಾಗೂ ಗಾಳಿ ತುಂಬಿಸಿದ ಒಟ್ಟು ಬೆಲೆಯು ಇಷ್ಟೆಂಗಿತ ವಿವರವೂ ತಿಳಿದುಬಂದಿದೆ. ಆದುದರಿಂದ ಇದಕ್ಕೆಂಂತಲೂ ಹೆಚ್ಚು ಚಾರ್ಜು ಮಾಡಿದರೆ ಅಂಥವರು ಕೆನರಾಗೆ ಒಳಪಡುವರು' ಎಂದು ಪ್ರಕಟಿಸಿದ್ದಾರೆ. ಸಾರ್ವಜನಿಕರು ಇದನ್ನು ಗಮನಿಸತಕ್ಕದ್ದು.

ಸೆಂಟ್ ಅಗ್ನೆಸ್ ಕೋಲೇಜಿನ ವಾರ್ಷಿಕ ದಿವಾಚರಣೆಯು ತಾ. ೧೯ರಂದು ಜಿ. ಕೆರ್ಕ್ಯಾರ್ ರಾ. ಸ. ರಾ ಮಂದಾರ ಅಧ್ಯಕ್ಷತೆಯಲ್ಲಿ ಜರಗಿತು. ಇಂಗ್ಲಿಷ್, ಕನ್ನಡ ನಾಟಕಗಳಿದ್ದುವು.

ಎಲೋಸಿಯಸ್ ಕಾಲೇಜಿನ ವಾರ್ಷಿಕ ಸೇತಿಯರ್ ಸಮಾರಂಭವು ತಾ. ೭ರಂದು ಶ್ರೀ ಕೆ. ಆರ್. ಕಾರಂತರ ಅಧ್ಯಕ್ಷತೆಯಲ್ಲಿ ಜರಗಿತು.

ನಗರ ಸಭೆಯ–ಸಾಮಾನ್ಯ ಸಭೆಯೊಂದು ತಾ. ೫ರಂದು ಸಂಜೆ ಜರಗಿತು. ಶ್ರೀ ಸಿ. ಎಲ್. ಲೋಬೋ ಅವರು ಸಭೆಯ ಮುಂದೆ ಈ ಮಾತುಗಳನ್ನು ಮಂಡಿಸಿದರು. ೧) ನಗರವಲ್ಲಿ ಈಗ ದೊರೆಯುವ ಹಸುಗೆ ಪಡಿಯನ್ನು ಪ್ರತಿಪಿಸಿಬ್ಬ ವ್ಯಾಯಕ್ತಿಗಳಿಗೆ ಅರ್ಧ ಸೇರಿನ ಪ್ರಮಾಣದಲ್ಲಿ ಸಬೇಕು; ಮತ್ತು ಗೋಧಿ-ರಾಗಿಗಳನ್ನು ಹಸುಗೆಮ ಭಾಗವಾಗಿ ಪಡೆದುಕೊಳ್ಳುವಂತೆನ್ನು ಅವರವರ ಇಚ್ಛೆಗೆ ಬಿಡಬೇಕಲ್ಲದೆ, ಈ ವಿಚಾರದಲ್ಲಿ ಏಡ್ಕಿಯಿರಬಾರದು. ೨) ಅವಶ್ಯಕತೆಯನ್ನು ಹಸುಗೆಯ ಪದಾರ್ಥವಾಗಿ ಪರಿಗಣಿಸದೆ ಸಾರ್ವಜನಿಕರಿಗೆ ಇದು ಉಚಿತ ಆಹಾರಕ್ಕಾಗಿ ನಿಗುಸಂತಾಗಬೇಕು; ೩) ನಗರದಲ್ಲಿನ ಸೈಕಿಳ ಬಡ ಕುಟುಂಬಕ್ಕಾಗಿ ಸದ್ಯದಲ್ಲಿ ಇಪ್ಪತ್ತಗರಿಗೆಯನ ವಿನಿಂದ ಕೊಟ್ಟಕ್ಕೆ ನಗರ ಸಭೆಯು ರೂ ೧೦೦ ಕೊಡಿಸಬೇಕು, ಈ ವಿಷಯ ಸರ್ಕಾರಿಗೆ ಗಮನ ಸರ್ಕಾರವು ಸಂಬಂಧಪಟ್ಟವರಿಂದ ವಂಜಿಸಿಂದುವುದು ಮೇರೆ ಹೆಣ್ಣು ಮಕ್ಕಳಿಗಾಗಿ ವಿದ್ಯುದ್ದೀಪ ಧನವೆಷ್ಟಂದನ್ನು ಕಟ್ಟಿಸಲು ಕೊಡಿಯಾಲ ಬೈಲಿನಲ್ಲಿ ೪ ಎಕ್ರೆ ಸ್ಥಳವನ್ನು ನೇಕ್ಷಿಸಿ ಬರಕ್ಕೆಂದಿದ್ದ ಅರ್ಜಿ ಈ ಬಗ್ಗೆ ಸಂಬೇಜವಾಗಿದ್ದ ಉಪಸಮಿತಿಯು ಶಿಫಾರಸಿನ ನೇರೆಗೆ ಬಿಟ್ಟುಕೊಡಲು ಒಪ್ಪಿತು ನಗರದ ನೀರಿನ ಸರಬರಾಯಿಯ ಯೋಜನೆಯ ಪರಿಶೀಲನೆಯ ಬಗ್ಗೆ ೫ ಸಾವಿರ ರೂಪಾಯಿ ಗಳನ್ನು ಮಂಜೂರು ಮಾಡಿತು ಈ ಯೋಜನೆಯು ಸದ್ಯದಲ್ಲಿ ಕೈಕೊಳ್ಳಲಾಗುವುದೆಂದು ಕೇಳುತ್ತೇವೆ.

ಕಸ್ತೂರಿ ಬಾ ಸ್ಮಾರಕ ನಿಧಿಯ–ಸಭೆಯು ತಾ. ೫ರಂದು ಸೇರಿ ನಿಧಿಯ ವಿನಿಯೋಗದ ಬಗ್ಗೆ ಶ್ರೀ ಎಂ. ಡಿ. ಅಧಿಕಾರಿಗಳು ಸಿದ್ಧಗೊಳಿಸಿದ್ದ ಸ್ಕೀಮ ಯೋಜನೆಯನ್ನು ಪರಿಶೀಲಿಸಿ, ಕೆಲವು ತಿದ್ದುಪಡಿಗಳೊಡನೆ ವ್ಯಾಂತೀಯ ಸಮಿತಿಯ ಮುಂತರ ಕೇಂದ್ರ ಸಮಿತಿಗೆ ಕಳುಹಿಸುವ ನಿರ್ಧಾರವಾಯಿತು. ಶ್ರೀ ಅಧಿಕಾರಿಗಳ ಯೋಜನೆಯಂತೆ, ಜಿಲ್ಲೆಯಲ್ಲಿ ಒಂದು ಹೆರಿಗೆ ಆಸ್ಪತ್ರೆ, ೨ ಆಫ್ತಾಪ ಕೇಂದ್ರಗಳು, ೩೦ ಗ್ರಾಮಾಗಳಲ್ಲಿ ರಾತ್ರಿ ಶಾಲೆಗಳು ಮತ್ತು ೪ ಗ್ರಾಲೆಗಳಲ್ಲಿ ಪಾಚಶಾಲಾಯ ಹಾಗೂ ಪುಸ್ತಕ ಭಂಡಾರಗಳು ಸ್ಥಾಪಿಸಲ್ಪಡಬೇಕು.

ಮೆಜೆಸ್ಟೇಟರ ಕೋರ್ಟಿನಲ್ಲಿ–ವಿಸ್ಮಯಕರ ಘಟನೆಯೊಂದು ತಾ. ೩ರಂದು ಸಂಜೆ ನಡೆಯಿತು. ಸ್ಥಳೀಯ ಸ್ವೆಷಲ್ ಶ. ಮೆಜಿಸ್ಟ್ರೇಟರಾದ ಶ್ರೀ ಬಿ. ಶಂಕರಾನಾಯಕ ಸೆಟ್ಟರು ತಮ್ಮ ಕೋರ್ಟಿನಲ್ಲಿ ವಿಚಾರಣೆಗೆಂದಿಗಾಗಿ ತಮಿಳು ನಡಿಸುತ್ತಿದ್ದಾಗ ಬೈ ದುಷ್ಕಾರ್ಯ ಆಕ್ಷಕರೆಯು, ನ್ಯಾಯಾಧೀಶರ ಸನ್ನಿಧಿಯಲ್ಲಿ ಎಂದು ಕರೆಸಿಕೊಳ್ಳುವ ಬೈರಾಗಿಬೆಟ್ಟುನು ರಭಸದಿಂದ ಕೋರ್ಟ್ ಹಾಲಿನೊಳಗೆ ನುಗ್ಗಿದ. ವಕೀಲರುಗಳ ಮುಂದಿದ್ದ ಮೇಜಿನ ಮೇಲೆಲಾ ಅಲ್ಲಿಂದ ಮೆಜಿಸ್ಟ್ರೇಟರ ಮುಂದಿನ ಪೀಠದ ಮೇಜಿಯ ಮೇಲೆಯು, ಕೈಯಲ್ಲಿದ್ದ ಪಾಕ್ಷೆಟ್‌ನಿಂದರಿಂದ ಬೆಜಸ್ಟೇಟರಿಗೆ ಹೊಡೆಯಲು ಎತ್ತಿದ ಆದರೆ ಕಲೆ ತಗ್ಗಿಸಿ ಒರೆಯುತ್ತಿದ್ದ ಮೆಜಿಸ್ಟೇಟರು, ಪ್ರಸಂಗಾವಧಾನದಿಂದ, ಕುಗಿಯುನ್ನು ಹಿಂದೆ ಸರಿಸುತ್ತ ಮೇಲೆದ್ದು ಮೆಜಿಸ್ಟ್ರೇಟರಿಂದಿನ್ನು ಪೀಠದಿಂದ ಕೆಡವಿದ ರು. ಆತನು ಪುನಃ ಎದ್ದು ಬರುವುದರೊಳಗೆ ಕೋರ್ಟಿನಲ್ಲಿದ್ದ ಪೋಲಿಸ್ ಇನ್ಸ್‌ಪೆಕ್ಟರರು ಆತನನ್ನು ಬಂಧಿಸಿದರು. ಸನ್ಯಾಸಿಯ ಆಯುಧದಿಂದ ಗೊಪ್ಪಿಯ ಬೆಳಿದ್ದ ನಾರ್ಕಳ್ಳಿಮರ ಚಿತ್ರದ ಗಾಜು ಹುಡಿಹುಡಿಯಾಯಿತು. ಇದೇ ಮೊರ್ಖಾನಂದನು ಸಿಟ್ ಫೋಲಿನ ಆಕ್ಷಿಗನ್ನು ಕೈದುಮಾಡಲ್ಪಟ್ಟದ್ದು ಈ ಮೆಜಿಸ್ಟ್ರೇಟರಿಂದಲೆ ವಿಚಾರಣೆ ಹೊಂದಿದ್ದನು.

ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವ–ತಾ. 10ರಲ್ಲು ಕೆನರಾ ಹೈಸ್ಕೂಲಿನ ಭುವನೇಂದ್ರ ಭವನದಲ್ಲಿ ಶ್ರೀ ಎ. ಜಿ. ಪಟ್ಟರ ಅಧ್ಯಕ್ಷತೆಯಲ್ಲಿ ಜರಿಗಿತು ಪ್ರೊ ವಿ. ಜೆ ಜೊಸೆಫ್ ಅವರು ಸಭಿಕರನ್ನೂ ಅಧ್ಯಕ್ಷರನ್ನೂ ಸ್ವಾಗತಿಸಿದರು. ಕಾರ್ಯದರ್ಶಿ ಶ್ರೀ ಲೋಕನಾಥರು ವರದಿ ಓದಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ವರ್ತಮಾನ ರಾಜ್ಯಗಳ ಕರುಣ ವಿದ್ಯಾರ್ಥಿಗಳ ಚಟುವಟಿಕೆಗಳನ್ನು ವಿವರಿಸಿ ಇಂದಿನ ನಮ್ಮ ಕರ್ತವ್ಯರು ಬಗ್ಗೆ ವ್ಯಕ್ತಿಂದ ಮುಂದುವರಿಯಬೇಕು, ಸಮಾಜ ಸೇವಕರಾಗಬೇಕೆಂದರು.

ಶಾಲಾ ವರ್ಧಂತಿ–ಬಿ. ಇ. ಎಮ್. ಹೈಸ್ಕೂಲಿನ ವರ್ಧಂತ್ಯುತ್ಸವವು ತಾ 10ರಲ್ಲು ರಾ. ಬಿ ಎಮ್. ಕೆ. ನಂಬಿಯಾರ ಅಧ್ಯಕ್ಷತೆಯಲ್ಲಿ ಜರಿಗಿತು. ಶ್ರೀ ಎಸ್. ಜನಾರ್ಧನ ಶೆಟ್ಟರು ಶಾಲೆಯ ಸ್ಪಷ್ಟ ವರದಿ ಮಾಡಿದರು ಶಾಲಾ ಹೆಡ್ ಮಾಸ್ಟರ್ ಮಿ ಎಸ್. ಎ. ಪಟ್ಟಾಡೋ ಅವರು ವರದಿವಾಚನ ಮಾಡಿದರು. ಶಾಲಾ ಮಕ್ಕಳು ವಿದ್ಯಾರ್ಥಿ ಜೀವನದಲ್ಲಿ ಸ್ವಶಕ್ತಿ ಜೀವನೋಪಾಯದ ಬೆಳೆ ಕನ್ನು ಕಾಪುವಂತಾಗಬೇಕೆಂದು ಅಧ್ಯಕ್ಷರು ತಮ್ಮ ಭಾಷಣದಲ್ಲಿ ಹೇಳಿದರು.

ಬರಿಮಾರು–ಸುಂಗಳಪದು ತಾಲೂಕಿನ ರಿಕೆಂಬು ಮಾಗಣೆ ಬರಿಮಾರು ಗ್ರಾಮದ ಶ್ರೀ ಮಹಮ್ಮಾಯಿ ದೇವಸ್ಥಾನದಲ್ಲಿ ಕಾಲಂಪ್ರತಿ ಆಗುಗುವ ಜಾತ್ರೆಯು ಇದೇ ತಾರೀಖು ಸಂಜೆ ಧ್ವಜಾರೋಹಣ ಕಾ ಯು ಶುಕ್ರವಾರ ಧ್ವಜಾವರೋಹಣ, ಪದಯು ಚಂದ್ರವಾರ ರಾತ್ರಿ ಮೃಗಬೇಟೆ, ಬಂಡಿ ಉತ್ಸವ, ೧೯ನೆಯ ತಾ 20-2-'45ನೇ ಆಯವ್ಯಾ ಮಧ್ಯಾಹ್ನ ಗಂಟೆ 2ಕ್ಕೆ ರಥಾರೋಹಣ, ರಾತ್ರಿ ಗಂಟೆ 9ಕ್ಕೆ ರಥೋತ್ಸವ, ಗೊಂದಲ ಪೂಜೆ, ೧೦ಯು ತಾ. 21-2-'45ನೇ ಬುಧವಾರ ಅವಭೃತ ಸ್ನಾನ, ರಾತ್ರಿ ಗೊಂದಲ ಪೂಜೆ ವ್ಯ ರಂಗ ಪೂಜೆ ಸಹಿತ ಸಡಿಯುವುದು.

ಕಾಸರಗೋಡು

ಶ್ರೀಮತಿ ಮೆಡಿಕಲ್ ಹಾಲ್–ಎಂಬ ಹೊಸ ಚಿಕಿತ್ಸಾಲಯದ ಉದ್ಘಾಟನಾ ಸಮಾರಂಭವು ತಾ. ೪ರಂದು ಕುಂಬಳೆಯ ಶ್ರೀ ಎ. ರಾಮಾನಾಯ್ಕರ ನೂತನ ಭವನದಲ್ಲಿ ಡಾ। ಎಂ. ಆರ್. ಭಟ್, ಆವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾ ಪಡಗಪ್ಪ, ಎಂ. ಬಿ. ಶಂಕರ ರಾವ್ ಮೊದಲಾದವರೂ ಸಮಾರಂಭಕ್ಕೆ ಆಗಮಿಸಿದ್ದರು. ಡಾ। ಪ್ರತ್ಯಸ್ಪರ್ಧೆಗಳು ಸಭಿಸಿದ ಸೇವೆಯನ್ನು ಪ್ರಶಂಸಿದರು.

ಪುತ್ತೂರು

ಸಿಡುಬು– ಈ ತಾಲೂಕಿನ ಕೆಲವು ಕಡೆಗಳಿಂದ ಸಿಡುಬಿನ ವಾರ್ತೆ ಕೇಳಿ ಬರುತ್ತಿದೆ. ಪುತ್ತೂರು ಪಟ್ಟಣದಲ್ಲಿಯೂ ಒಂದೆರಡು. ತಿಂಗಳ ಹಿಂದೆ ಆರಂಭವಾದಲ್ಲಿ ರೋಗವು ಇನ್ನೂ ಶಮನವಾಗಿಲ್ಲ.

THE
VIJAYA BANK LTD.,
Head Office: MANGALORE.

Branches at: **Coondapoor, Brahmavar, Udipi, Kaup, Karkala, Mangalore, City-Mangalore, Kaarsagod, Puttur & Bombay.**

Advances made on produce, Jewels, Government Papers, Immovable Properties or other approved securities. Deposits accepted at very attractive rates

All kinds of Banking Business transacted.

Navabharat Book Depot. Udipi South India — Navabharat Book Depot. Udipi, South India

ನೋಡಿದರೆ ಬಿಡದಿರುನ ಕೆಲವು ಪುಸ್ತಕಗಳು

ರೂ. ಜ್ಞ. ಮಕ್ಕಳ ಪ್ರಶ್ನ ಸನಗಳು	0 4	ವೀರಭೂಮಿ	0 2
ಸುಲಭದಲ್ಲಿ ಇಂಗ್ಲಿಷ್ 1-ಗೆ	0 3	ವೆತ್ತಲಾ	0 8
ಯುವಕರಿಗೆ ಮತ್ತು ವಯಸ್ಕರಿಗೆ ಪುಸ ಪಠ	0 4	● ಕವಿಚರಿತ.	
ಸುಲಭವಾಗಿ ಇಂಗ್ಲಿಷನ್ನು ಅನ್ಯ ಹೆಂಡ್ತಿ ಗಂಡನಾದರೆ	0-4	ಕಾವ್ಯಸಾಮಾನ್ಯ	0 12
ಸಹಾಯವಿಲ್ಲದೆ ಕಲಿಯುವ ಇಂಗ್ಲಿ ● ಕತೆಗಳು		ವಿಂಗುಳು	0 3
ಷ್ ಸ್ವಯಂಬೋಧಿನಿ. ನಗೆನೋಟಗಳು	0-14	ಶ್ರೀಮುವಿ	1-0
●ಪಾಠಗಳು ಆನ್ನದೇವರು		ಪುರಂದರದಾಸರ ತೀರ್ಥನೆ	1-0
ಪ್ರೌಢವಿಜಯ 0-12 ಮತ್ತು ಇತರ ಕತೆಗಳು	-10	ಭಗವದ್ಗೀತಾ (ಮೂಲ	
ದೇಕಥಕ್ಕೆ -14 ಭಾಷಾಂತರ ಕತೆಗಳು	0-14	ಸಲ್ಕೆ ಬೈಂಡು)	1-4
ನ್ಯಾಭಿಮಾರಿ ಯಾರು 0-12 ರಂಜಾಪಿಪ	0-10	● ಇತರ ಪುಸ್ತಕಗಳು	
ಕ್ಷಲವ 0-5 ನಾಡಕತೆಗಳು	0-3	ವಂದಿವ ದೇವಿ	0-3
ಸಂಕಲ್ಪ ಪಿಂಚಿ 0-8 ಕ್ಷಪ್ರಸಂಖ್ಯಾತ ಸಂಗಗಳು	0 8	ರಾಷ್ಟ್ರಭಕ್ತಿಯು ಇತಿಹಾಸ	2-8
ರಂಗಭೂಮಿ 0-5 ಸಾಮಾನ್ಯವು	0-14	ಬಾಲಮಾಜ್ಞೆಯ	0-3
ಪ್ರಕಾರ 1 12 ಅಂತರಂಗ ಕತೆಗಳು	0-10	ಬಿತಕರಂತೆ	0-5
ಧರ್ಮಲಂಕಾರ 0 4 ಸ್ವೀಯಕ್ಕಾಯ	0 6	ಲೈಬಾಜ್ಞೆನ	0-8
ಆರೋಗ್ಯ ಕ್ಷೀರ 0 12 ಅಸ್ತಿತ್ವಾಕ್ಕಿ ಕತೆಗಳು	0 12	ಪಾಪಪೂರ್ತ ಪತ್ನಿಯಾಗಳು	1 8
ಕಂಬಾರಿ 0-6 ಲೀಲಾಮಯಿ	0-6	ಭಗವ	0 6
ಪ್ರತಿಕಾರ 0-6 ● ಕಾವಂಬರಿಗಳು		ಗತಿಮ ಕೈಗನ್ನಡ	0 12
ಸೇವಾಪಥ 0 8 ಕನ್ಯಾಸಿಯ ರೋಗಿನಲ್ಲ	0-8		

ನವಭಾರತ ಪುಸ್ತಕ ಭಂಡಾರ, ರಿಜಿಸ್ಟರ್ ಪಬ್ಲಿಷರ್ಸ್, ಉಡುಪಿ ದ. ಕ.

ನಿಖಿಲ ಕರ್ನಾಟಕ ಆಯುರ್ವೇದ ಮಂಡಲ್ಯ ಮೈಸೂರು–ಅಖಿಲ ಭಾರತ ಆಯುರ್ವೇದ ಮಹಾ ಸಮ್ಮೇಳನವು ಈ ವರ್ಷ ನಮ್ಮ ಕರ್ನಾಟಕ ಪ್ರಾಂತದಲ್ಲಿ ನಡೆಯುವಿದೆ. ಅದಿಂದ ಭಾರತದಿಂದ ವಿಹ ವಿದ್ವನ್ಮಣಿಗಳಿಲ್ಲು ಬಂದು ಸೇರಿ ನಡೆಯಲಿರುವ ಈ ಮಹಾ ಸಭೆಯನ್ನು ಯಶಸ್ವಿಯಾಗಿ ನೆರವೇರಿಸುವ ಭಾರವ ನಮ್ಮ ಕರ್ನಾಟಕ ಬಂಧುಗಳಿಗೆ ಸೇರಿರುತ್ತದೆ. ಧನ ಜನ ಸಹಾಯವು ಕರ್ನಾಟಕ ಬಂಧುಗಳಾದ ಸಾರ್ವಜನಿಕರಿಂದ ಸಿಗುವುದಾದರೂ ಆಯುರ್ವೇದ ವಿಶ್ವ ವೈದ್ಯಿಯಂದ ಮತ್ತು ಪ್ರಚಾರ ದೃಷ್ಟಿಯಿಂದ ನಮ್ಮ ಪ್ರಾಂತದಲ್ಲಿ ನಡೆಯುವ ವಿಹ ಸಭೆಗೆ ಹೆಚ್ಚು ಪ್ರಾಶಸ್ತ್ಯವನ್ನು ತರುವ ಜವಾಬ್ದಾರಿಯು ಕರ್ನಾಟಕ ವೈದ್ಯ ಬಂಧುಗಳ ಮೇಲಿದೆ. ಆದುದರಿಂದ ಆಯುರ್ವೇದ ವಿಷಯದಲ್ಲಿ ಕರ್ನಾಟಕ ವೈಶಿಷ್ಟ್ಯವನ್ನು ಜನತೆಗೆ ತೋರಿಸುವ ಸಲುವಾಗಿ ನಾವು ಇಲ್ಲಿ ವಿಧಾನಗಳನ್ನು ಕೈಕೊಳ್ಳಬೇಕಾಗಿದೆ. ಅವುಗಳ ಪೈಕಿ ಒಂದಾಗಿ "ಕರ್ನಾಟಕ ಆಯುರ್ವೇದ ಮಿತ್ರಿ" (Karnataka Ayurvedic Guide) ಪ್ರಕಟಿಸಬೇಕೆಂದು ನಿರ್ಣಯಿಸಲ್ಪಟ್ಟಿದೆ. ಸದರಿ ಪುಸ್ತಕದಲ್ಲಿ ಕರ್ನಾಟಕ ಜಿಲ್ಲೆಗಳಿಗನುಸಾರವಾಗಿ ಎಲ್ಲಾ ವೈದ್ಯರು, ಔಷಧಿಗಳ ಪಾಠಶಾಲೆಗಳು, ವೈದ್ಯ ಶಾಲೆಗಳು, ಗ್ರಂಥಭಂಡಾರ, ಪತ್ರಿಕಾಕರ್ತರು, ಇತ್ಯಾದಿ ಎಲ್ಲವನ್ನೂ ವಿವರಿಸಲಾಗುವುದು. ಈ ವಿಷಯದಲ್ಲಿ ಪ್ರತಿಯೊಬ್ಬ ವೈದ್ಯರೂ ತಮ್ಮ ಕೆಸರು ವಿಳಾಸಗಳನ್ನು ಮತ್ತು ಪಾಠಶಾಲೆ, ಔಷಧಾಲಯ, ಕಾರಖಾನೆ, ರಚಿತಗ್ರಂಥ, ಪತ್ರಿಕೆಗಳ ವಿವರಗಳನ್ನು ಸದ್ಯ ಕಾರ್ಯದರ್ಶಿಗಳಿಗೆ ಬರೆದು ತಿಳಿಸಬೇಕೆಂದು ವಿನಂತಿ.

ಈ ಸಂಬಂಧವಾಗಿ ಹೆಚ್ಚಿನ ವಿಚಾರ ತಿಳಿಯಲಿಚ್ಛಿಸುವವರು ಒಂದಾಣೆ ಆಕ್ಷರ ಮುದ್ರಿತ ಕವರಿಗೆ ಬರೆಯತಕ್ಕದ್ದು.

ಕಾರ್ಯದರ್ಶಿ,
ನಿಖಿಲ ಕರ್ನಾಟಕ ಆಯುರ್ವೇದ ಮಂಡಲ,
ಲಕ್ಷ್ಮೀವಿಲಾಸ ಬಿಲ್ಡಿಂಗ್ಸ್, ಮೈಸೂರು.

ಕಣ್ಮರೆಯಾದ ಕಲಾವಿದ

ಅರ್ಥಧಾರಿ ಅಕ್ಕುಳಾಚಾರಿಗಳು

ದ. ಕನ್ನಡದ ಯಕ್ಷಗಾನ ಕಲಾವಿದರ ಸ್ಮರಣೆ ಪಂಗ್ತಿಯಲ್ಲಿ ರಾಜಸುತ್ತಿದ್ದ ಶ್ರೀ ಅಕ್ಕುಳ ಸುಬ್ರಾಯಾಚಾರಿಗಳ ಅವಸಾನವಾಯಿತು; ಯಕ್ಷಗಾನಾಭಿಮಾನಿಗಳ ಪಾಲಿಗೆ ಅವರೊಂದಿಗೇನೇ ರಾಮ, ಧರ್ಮರಾಯನೆಂತಹ ಶಾಂತ ಗಂಭೀರ ಅವತಾರಗಳ ಅವಸಾನವೂ ಆಯಿತು! ಆಚಾರಿಗಳ ನಿಧನ-ಮೃಧುರ ಸ್ವರ ಹೊರಡಿಸುತ್ತಿದ್ದ ಯಕ್ಷಗಾನದೊಂದು ತಂತಿಯೇ ಮೌನ!

ದಕ್ಷಿಣ ಕನ್ನಡದ ಹೆಳ್ಳಗರ ಕಲೆಯೆಂದರೆ ಯಕ್ಷಗಾನವೊಂದೇ. ಯಕ್ಷಗಾನ ಪ್ರವೀಣನು ಸಳ್ಳೇ ಧುರೀಣನಾಗುತ್ತಾನೆ. ಒಬ್ಬ ನಿಪುಣ ಅರ್ಥಧಾರಿಯು ಒಂದು 'ತಾಳಮದ್ದಳೆ'ಯ ರಂಗದಲ್ಲಿ ಕಾಲು ಮಡಚಿ ಕುಳಿತನನು ಕುಳಿತಲ್ಲಿಯೇ ಸಭಿಕರೆಲ್ಲರ ಹೃದಯ ಪೀಠವೇರುತ್ತಾನೆ. ತ್ರೇತ, ದ್ವಾಪರಾಯುಗಗಳ ರಾಮ ಭೀಮರ ಮಾತನ್ನಾಡಿ, ಅವರ ಮಾನ್ಯತೆಯನ್ನೇ ಪಡೆಯುತ್ತಾನೆ. ಆಗಲಿ ಹೋದ ಆಚಾರಿಗಳು ಅಂಥವರ ಪ್ರಥಮ ಸಾಲಲ್ಲಿದ್ದರು; ಯಕ್ಷಗಾನ ಸರಸ್ವತಿಯ ವೀಣೆಯೊಂದು ತಂತಿಯಾಗಿ ಇದ್ದರು; ಅದೀಗ ಕಡಿಯಿತು.

ನಟನೆಯೆಂದ ಮೇಲೆ,ಅದರಲ್ಲಿ ಪೂರ್ಣ ಸಹಜತೆಯಿರುವದಸಾಧ್ಯ. ಸಿನೆಮಾ, ನಾಟಕಗಳೂ ಹಾಗೆಯೇ. ಯಕ್ಷಗಾನದಲ್ಲಂತೂ ಸ್ವಾಭಾವಿಕತೆಗಿಂತಲೂ ಚಾತುರ್ಯ ಪ್ರದರ್ಶನನೇ ಮುಖ್ಯ ಆದರಲ್ಲಿ ಮುಖ್ಯ ನರ್ತನ-ನಟನೆಯಲ್ಲ ಬಯ ಲಾಟಗಳಲ್ಲಿ ಕಾಲುಗಳ ಚಾತುರ್ಯಬೇಕು. ತಾಳ ಮದ್ದಳೆಗಳಲ್ಲಿ ಬಾಯಿ ಚಾತುರ್ಯಬೇಕು. ಆ ಕಾಲದ ರಾಮಭೀಮರು ಹೀಗ ಕಾಣಿದಿದ್ದಾರೆಯೇ, ಹೀಗೆ ನುಡಿದಿದ್ದಾರೆಯೇ ಎಂಬ ಪ್ರಶ್ನೆಗೆಡೆಯಿಲ್ಲ ಹೀಗೆಂದ ಮಾತ್ರ ಕೈ ಯ-ಪ್ರೇಕ್ಷಗಾನದಲ್ಲಿ ಹುರುಳಿಲ್ಲ, ಹುಚ್ಚಾಟ ಮಾತ್ರ ಎಂದು ಭಾವಿಸಬಾರದು. ರಾಮನ ಸಹಜ ಗಾಂಭೀರ್ಯವನ್ನು ಪ್ರದರ್ಶಿಸಬಲ್ಲ ರಾಮಪಾತ್ರಧಾರಿಯೇ ಯಕ್ಷಗಾನದಲ್ಲೂ ಯೋಗ್ಯ ನಟ. ಮಿಕ್ಕ ಕಲಾಕ್ಷೇತ್ರಗಳಗಿಂತ ಇಲ್ಲಿ ಅಧಿಕಪ್ರಸಂಗಕ್ಕೆ ಅವಕಾಶ ಹೆಚ್ಚಿಗಿರಬಹುದು. ಆದರೆ ಪ್ರಧಮ ಸ್ಥಾನ ಸ್ವಾಭಾವಿಕತೆಗೇನೇ.

ಇಂತಹ ಸಹಜಾಭಿನಯದಲ್ಲಿ-ಪಾತ್ರ ತಲ್ಲೀನತೆ ಹೊಂದುವುದರಲ್ಲಿ-ನಸ್ಸೆ ತಿಳುವಳಿಕೆ ಮಟ್ಟಿಗೆ ಸುಬ್ರಾಯಾಚಾರಿಗಳಿಗೆ ಮೊದಲ ಸ್ಥಾನ ರಾಮನ ಅರ್ಥಧಾರಿಗಳಾಗಿ ವಾಲ್ಮೀಕಿಯು ತೆ ರಾಮಾಯಣವನ್ನೇ ಹೇಳುವರಿದ್ದಾರೆ; ಧರ್ಮರಾಯನಾಗಿ ಯಮಧರ್ಮರಾಯನಂತೆ ಧರ್ಮಾಧರ್ಮಗಳೆಲ್ಲವುಗಳ ತೀರ್ಮಾನ ಹೇಳುವವರಿದ್ದಾರೆ! ಆದರೆ ಸುಬ್ರಾಯಾಚಾರಿಗಳು ರಾಮನಾದರೆ ರಾಮನೇ; ಧರ್ಮರಾಯನಾದರೆ ಧರ್ಮರಾಯನೇ. ತನ್ನ ಪಾತ್ರದ ಬಾವ, ರೀವಿಗಳನ್ನೂ ಮಾತುಗಳಲ್ಲಿ ಸೇರಿಸಿ ತರುತ್ತಿದ್ದರು. ಹೆಚ್ಚಿನ ನಿಪುಣ ಅರ್ಥಧಾರಿಗಳು ಕೂಡಾ ತಮ್ಮ ಪಾತ್ರದಿದಿರು ಪ್ರಾರ್ಥನೆ ನಡಿಸುವವರಂತಿರುತ್ತಾರೆ, ಆದರೆ ಆಚಾರಿಗಳು ಪಾತ್ರನ 'ಪಾತ್ರಿ'ಯಾಗಿ 'ನುಡಿ'ಕೊಡುತ್ತಿದ್ದರು. ಶಾಂತ ಗಂಭೀರ ಅರ್ಥಗಳಿಗೆ ಅವಕಾಶ ಹೇಳಿಸಿದ ಜನ ಬೇರೆ ಕಾಣುವದಿಲ್ಲ.

ಆಚಾರಿಗಳು ಕಣ್ಮರೆಯಾದರು; ಯಕ್ಷಗಾನದೊಂದು ಸ್ಥಾನ ಖಾಲಿಯಾಯಿತು. ಶಾಶ್ವತಜೀವಿಯಾಗಿರುವದನ್ನು ಬಿಟ್ಟು ಕಲಾವಂತರ ಕಲಾಭಿನಯಾನಿಗಳ-ನ್ಮರಣೆಯಲ್ಲುಳಿದರು. -'ಕಲಾಭಿವಾನಿ'

ಜನತಾ ಸಾಹಿತ್ಯ ಸಮಿತಿ-ಜಾವಗಲ್(ಅರಸೀಕೆರೆ ಪಾರ್ಗ)(ಮೈಸೂರು ದೇಶ)ಯಕ್ಷಗಾನ ಸ್ಪೋಳಸ್ಪರ್ಧೆ(ಸಾವಿರ ರೂಪಾಯಿ ಬಹುಮಾನ) ಕನ್ನಡ ಜನತೆಯಲ್ಲಿ ಜಾಗ್ರತಿಯುಂಟಾಗಲು ನಮ್ಮ ನಾಡಿನ ಇತಿಹಾಸವನ್ನು ಯಕ್ಷಗಾನ ಮೇಳಗಳಾಗಿ ಬರಸಿ, ಪ್ರಕಟಿಸಿ, ಪ್ರಚಾರ ಮಾಡುವುದು ಜನತಾ ಸಾಹಿತ್ಯ ಸಮಿತಿಯ ಮುಖ್ಯ ಉದ್ದೇಶಗಳಲ್ಲೊಂದು. ಓದು ಬರಹ ಬಾರದ ಸಾಮಾನ್ಯ ಜನರಿಗೆ ತಿಳಿಯುವಂತೆಯೂ ಅವರಿಗೆ ಮನೋರಂಜನೆಯೊಗುವಂತೆಯೂ ಬೋಧಿಸಲು ಚರಿತ್ರೆಯನ್ನು ಯಕ್ಷಗಾನ ಮೇಳಗಳ ಮೂಲಕ ಪ್ರದರ್ಶಿಸುವುದಕ್ಕಿಂತ ಉತ್ತಮವಾದ ಮಾರ್ಗವಿಲ್ಲವೆನ್ನಬಹುದು. ಈ ಅಂಶವನ್ನು ಮನಗೊಂಡು ನಮ್ಮ ನಾಡಿನ ಇತಿಹಾಸಕ್ಕೆ ಸಂಬಂಧಿಸಿದಂತೆ ೧೦ ಯಕ್ಷಗಾನ ವೇಳಗಳನ್ನು ಬಲ್ಲವರಿಂದ ಬರಸಿ, ಪ್ರಕಟಿಸಿ, ಪ್ರಚಾರ ಮಾಡಬೇಕೆಂದು ಸಮಿತಿಯು ಅಖಿಲ ಕರ್ನಾಟಕಕ್ಕೆಲ್ಲ ಅನ್ವಯಿಸುವಂತೆ ಒಂದು ಸ್ಪರ್ಧೆಯನ್ನು ಏರ್ಪಡಿಸಿದೆ; ಮತ್ತು ಸ್ಪರ್ಧೆಯಲ್ಲಿ ಅತ್ಯುತ್ತಮವೆಂದು ನಿರ್ಧರಿಸಲಾಗುವ ಪ್ರತಿ ಯಕ್ಷಗಾನ ಮೇಳಕ್ಕೂ ೧೦೦ ರೂಪಾಯಿನಂತೆ ಒಟ್ಟು ೧೦೦೦ ರೂ. ಬಹುಮಾನ ಕೊಡಲು ನಿರ್ಧರಿಸಿದೆ

ನಿಯಮಗಳು–ಪ್ರತಿ ಯಕ್ಷಗಾನ ಮೇಳವೂ ಆಯಾ ಕಾಲದ ಜನಜೀವನವನ್ನು ಚಿತ್ರಿಸುವಂತಿದ್ದು ಜೀವಾದ ನಿಜವಾದ ಇತಿಹಾಸವನ್ನು ತಿಳಿಸುವಂತಿರಬೇಕು. ಪ್ರೇಕ್ಷಕರಲ್ಲಿ ದೇಶಭಕ್ತಿ, ಐಕಮತ್ಯ, ಸತ್ಯಸಂಧತೆ ಮುಂತಾದ ಉದಾತ್ತ ಗುಣಗಳನ್ನು ಪ್ರಜೋದಿಸುವಂತಿರಬೇಕು ಮತ್ತು ಕೋಮುವಾರು ಭಾವನೆಗಳಿಂದ ದೇಶಕ್ಕೆ ಆದ ಹಾನಿಯನ್ನು ಚಿತ್ರಿಸಿ ಕೋಮುವಾರು ಭೂತವನ್ನು ಪ್ರೇಕ್ಷಕರು ತಮ್ಮ ಹೃದಯದಿಂದ ಹೊಡೆದಟ್ಟುವಂತಿರಬೇಕು. ಪ್ರತಿ ಯಕ್ಷಗಾನ ಮೇಳವೂ ಫುಲ್ಸ್‌ಕೇಪ್ ಹಾಳೆಯಲ್ಲಿ ಸುಮಾರು ೧೫೫ ಪುಟಗಳಷ್ಟು ಇದ್ದು ಶಾಯಿಯಿಂದ ಬರೆಯಲ್ಪಟ್ಟಿರಬೇಕು. ಯಕ್ಷಗಾನ ಮೇಳಕ್ಕೆ ವಸ್ತುವನ್ನು ಸಮಿತಿಯು ಆಗಿಂದಾಗ್ಗೆ ತಿಳಿಸುತ್ತಿರುವುದು

ಮುಖ್ಯ ವಿಚಾರ—ಮೊದಲನೆಯ ಯಕ್ಷಗಾನ ಮೇಳದ ವಸ್ತು – ಕನ್ನಡ ಜನತೆಯ ಏಳಿಗೆಯನ್ನೇ ತಮ್ಮ ಧ್ಯೇಯವಾಗಿ ಉಳ್ಳವರೂ, ಜನತಾ ಸಾಹಿತ್ಯದಲ್ಲಿ ಅಭಿಮಾನಶಾಲಿಗಳೂ, ಮೂದರಿ ವೈಸೂರಿನ ಮಹಾರಾಜರವರೂ ಆದ ಶ್ರೀ ಜಯಚಾಮರಾಜ ಒಡೆಯರವರ ಮೂಲಪುರುಷರಾದ ಯದುರಾಯರ ಚರಿತ್ರೆಯನ್ನು ಮೊದಲನೆಯ ಯಕ್ಷಗಾನದ ವಸ್ತುವಾಗಿ ಆರಿಸಿಕೊಳ್ಳಲಾಗಿದೆ. ಮೇಲ್ಕಂಡ ನಿಯಮಗಳಿಗನುಸಾರವಾಗಿ ಯದುರಾಯರ ಚರಿತ್ರೆಯನ್ನು ಬರೆದು ೧೯೪೫ನೇ ಮಾರ್ಚಿ ತಿಂಗಳು ೩೧ನೇ ತಾರೀಕಿನೊಳಗೆ ಸಮಿತಿಗೆ ತಲಪುವಂತೆ ಕಳುಹಿಸಬೇಕು. ಕನ್ನಡಿಗರು ಇಂತಹ ಸುಸಮಯವನ್ನು ಸದುಪಯೋಗಪಡಿಸಿಕೊಂಡು ಸ್ಪರ್ಧೆಯಲ್ಲಿ ಭಾಗವಹಿಸಿ, ಜನತಾನೇನೆಯಲ್ಲಿ ಭಾಗಿಗಳಾಗುವರೆಂದು ನಂಬಲಾಗಿದೆ ಹೆಚ್ಚು ವಿಚಾರಗಳನ್ನು ತಿಳಿಯಲಪೇಕ್ಷಿಸುವವರು ದಯವಿಟ್ಟು ಕಾಗದ ಬರಯಬೇಕಾಗಿ ವಿನಂತಿ.

ಮತಿಘಟ್ಟ ಕೃಷ್ಣಮೂರ್ತಿ,
ಗೌ। ಕಾರ್ಯದರ್ಶಿ.

1944 ==- A YEAR OF RECORD PROGRESS:

NEW BUSINESS COMPLETED RS. 20,22,550

It is worthy of note that inspite of a 100% increase in New business, the renewal expense ratio for the year 1944 works below 15%. A net interest of 4% has been earned on the mean Life Assurance Fund During the year These factors compare very favourably with the best managed life assurance companies in India

This progress of the "POPULAR" must highly impress you. As a Company of your OWN, it lays a claim to your life assurance In the new Organisation programme of the Company there is a place for you on handsome remuneration as an ORGANISER, SPECIAL AGENT or DISTRICT AGENT on a small annual guarantee of business Or, if you can devote your spare time for an ORDINARY AGENCY, you can earn the maximum commission permissible, without any business guarantee. Please call at the Office or write for details.

TO MAKE 1945 A YEAR OF GREATER ACHIEVEMENT, WE SOLICIT YOUR CO-OPERATION.
THE MANAGEMENT IS CONFIDENT THAT IT WILL BE READILY EXTENDED.

THE POPULAR INSURANCE COMPANY LTD.,
MANGALORE.

"The Popular by Preference for an Agency or a Policy"

ಬಿಡಿನುಡಿ

ದ. ಕ. ಜಿಲ್ಲೆಯಲ್ಲಿ ಹಸುಗೆಯಿರುವ ನುತ್ತು ಇಲ್ಲದ ಕಡೆಗಳ ಜನರ ಊಟಕ್ಕೆ ವರುಷಕ್ಕೆ ಬೇಕಾಗುವ ಅಕ್ಕಿ ಮುಡಿ 16 ಲಕ್ಷ.

ಜಿಲ್ಲೆಯ ಎರಡು ಬೆಳೆಗಳಿಂದ ಒಟ್ಟು ಸಂಗ್ರಹಿಸಲ್ಪಡಬಹುದಾದ ಅಕ್ಕಿಮುಡಿ ೨ಲಕ್ಷ.

ಹೊಲದಲ್ಲಿ ೨ಲಕ್ಷ ಬೆಳೆಯಿಸಿ ಹೊಟ್ಟಿಗೆ 16ಲಕ್ಷ ಇಳಿಸಿಕೊಳ್ಳುವ ಬಕಾಸುರರು ನಾವು.

ಬಕಾಸುರರಾಗಿರುವವರು ಬಲಾಢ್ಯರಾಗಿ ಇರಲೇಬೇಕು

ಬಲಾಢ್ಯರಾಗಿದ್ದ ನೇಲೆ ಬರ್ಮಕ್ಕೇ ನೇ ಹೋಗಬೇಕು.

ಬರ್ಮಕ್ಕೆ ಹೋದೆಲ್ಲಿ ಈಗ ಕಡಿಮೆ ಕಾಣವ 7ಲಕ್ಷ ಮುಡಿಯನ್ನೂ ಅಲ್ಲಿಂದ ತರಬಹುದು.

ತರಲಾಗದಿದ್ದರೆ?—ಎಂಬ ಪ್ರಶ್ನೆ ಬೇಡ.

ತರಲು ಹೊರಟಾಗಲೇ ಅಕ್ಕಿಯ ಅಭಾವ ನಿವಾರಣೆ

ಮುಡಿ ಹೇರುವ ಅಥವಾ ಮುಖ ಗಂಟಿಕ್ಕುವ ಒಂದು ಲಕ್ಷ ಮಂದಿ ಬರ್ಮಕ್ಕೆ ಹೊರಡಲಿ

ಅವರೊಂದಿಗೆ 7ಲಕ್ಷದ ಅಕ್ಕಿಯ ಕೊರತೆಯೂ ಹೊರಡುತ್ತದೆ.

ಆದ್ದರಿಂದ ಸೈನ್ಯ ಖೂತೆ ಮತ್ತು ಧಾನ್ಯಖಾತೆಗಳು ಒಂದಾಗಬೇಕು

'ಕಣ'ಕ್ಕೆ ಹೊರಡಿರಿ, ಎನ್ನುವ ಬದಲಿಗೆ 'ಕಣಜ'ಕ್ಕೆ ಹೊರಡಿರಿ ಎಂದು ಜನರನ್ನು ಕರೆಯಬೇಕು.

೦೦ ೦೦ ೦೦

ಮಂಗಳೂರು ಸ್ಪೆ. ಸ. ಮೆಜಿಸ್ಟ್ರೇಟ್ ಕೋರ್ಟಿನಲ್ಲಿ. ಆಕ್ರಮ ನಂ ..... ತಾ. 3-2-1945.

ಮೆಜಿಸ್ಟ್ರೇಟ್ ಶ್ರೀ. ಪಿ ಸೀತಾರಾಮ ಸೆಟ್ಟರು ಕಲೆತಗ್ಗಿಸಿ ಬರೆಯುತ್ತಿದ್ದಾರೆ.

ಮುಂಭಾಗದಲ್ಲಿ ವಕೀಲರುಗಳು ಮಂಡಿಸಿದ್ದಾರೆ.

ಪೋಲಿಸ್ ಇನ್ಸ್ಪೆಕ್ಟರೂ ಇದ್ದಾರೆ.

ಧಾಂಡಿಗ ಪಂಜಾಬೀ ಸನ್ಯಾಸಿಯೊಬ್ಬನು ವಕೀಲರ ಮೇಜಿಯ ಮೇಲೆ ನೆಗೆದ.

ಕಣ್ಮುಚ್ಚಿ ತೆರೆಯುವದರೊಳಗೆ ಅಲ್ಲಿಂದ ಮೆಜಿಸ್ಟ್ರೇಟರ ಮೇಜಿಗೆ ಹಾರಿದ.

ಕೈಯ ಖಾತ್ರೆಯನ್ನು ಮೆಜಿಸ್ಟ್ರೇಟರ ತಲೆಗೆ ಹೊಡೆಯಲೆತ್ತಿದ.

ಕ್ಷಣಾರ್ಧದೊಳಗೆ ಸನ್ಯಾಸಿ ಸರ್ಪಾಸ್ತ್ರ!

ಮೆಜಿಸ್ಟ್ರೇಟರು ಕೃಷ್ಣನವತಾರ ತಾಳಿ ರಥವನ್ನು ಪ್ರಸಂಗಾವಧಾನತೆಯಿಂದ ಹಿಂದಕ್ಕೆ ಜಗ್ಗಿದರು.

ಅವನವನ್ನು ಹಿಂದೆ ತಳ್ಳಿದರು—ಅಸಾಮಿಯನ್ನು ನೆಲಕ್ಕಪ್ಪಳಿಸಿದರು.

ಅವನ ಆಯುಧ ಹೋಗಿ ಗೋಡೆಯಲ್ಲಿದ್ದ ಸಾರ್ವಭೌಮರ ಚಿತ್ರದ ಕನ್ನಡಿಯನ್ನೊಡೆಯಿತು.

ಸರ್ಪಾಸ್ತ್ರ ಕಿರೀಟ ಹಾರಿಸಿತು!

ಸನ್ಯಾಸಿ ಪುನಃ ಎದ್ದು ಬರುವಾಗ ಪೋಲಿಸ್ ಇನ್ಸ್ಪೆಕ್ಟರರ ಕೈದಿಯಾಗಿದ್ದ.

ಈ ಆಶ್ಚರ್ಯಕರ ಘಟನೆಯ ಕುರಿತು ಆಮೂಲಾಗ್ರ ಶೋಧ ನಡೆಯಬೇಕು.

ಮುಖ್ಯವಾಗಿ ಆ ಸಂಜಾಬೀ ಹುಚ್ಚನಿಗೆ ಹೆಸರಿಟ್ಟವನ ಪತ್ತೆಯಾಗಬೇಕು.

ಅವನಷ್ಟು ಹಿಡಿದು ತ್ರಿಮೂರ್ತಿ ಸಮ್ಮೇಲನಕ್ಕೆ ಸಾಗಿಸಬೇಕು.

ಇಂದಿನ ಯುದ್ಧಕ್ಕೆ ಯೋಗ್ಯ ಹೆಸರಾವುದು, ಎಂಬ ಶೋಧದಲ್ಲಿ ಪ್ರೆ. ರುಸವೆಲ್ಟರು ತಲೆ ಕರಡುಮಾಡಿಕೊಂಡ ವಾರ್ತೆ ಬಂದಿದೆ

ಜರ್ಮನಿಯನ್ನು ಮೂರು ತುಂಡು ಮಾಡಿದಾಗ ಪ್ರತಿಯೊಂದು ತುಂಡಿಗೂ ಮುಂದೆ ತಲೆಯೆತ್ತಲಾಗದಂತಹ ಭಾರವಾದ ಹೆಸರನ್ನಿಡುವ ಅಗತ್ಯವಿದೆ,

ಇಂತಹ ಮುಖ್ಯ ಕಾರ್ಯಗಳು ಈ ಸನ್ಯಾಸಿಗೆ ಹೆಸರಿಟ್ಟ ಜಗದ್ಗುರುವಿನಿಂದಲೇ ಆಗಬೇಕು.

ಹೆಸರಿಟ್ಟವನ ಯೋಗ್ಯತೆಯೆಷ್ಟು ಗೊತ್ತೆ? ಆ ಸಂಜಾಬಿ ಹುಚ್ಚನ ಹೆಸರು ಕೇಳಿ-'ಮೂರ್ಖಾನಂದ ಸರಸ್ವತಿ'!

೦೦ ೦೦ ೦೦

'ದಕ್ಷಿಣ ಕನ್ನಡಿಗರು ಗೋಧಿಯನ್ನು ಬಹಳ ಮೆಚ್ಚುತ್ತಾರೆ' ಎಂದು ಸರಕಾರೀ ವರದಿಯಲ್ಲಿದೆ.

'ಬೆಚ್ಚುತ್ತಾರೆ' ಎಂದಿರಬೇಕಾದುದು ಮುದ್ರಣದೋಷದಿಂದ 'ಮೆಚ್ಚುತ್ತಾರೆ' ಆಗಿರಬಹುದು?

● ನವಯುಗದ ನವವಿಧ ಭಕ್ತಿಗಳು. ●

ತಪೆ ಪುಟದಿಂದ ಮುಂದುವರಿದುದು.

ಎದೆಗೊಳ್ಳಲಾರರು. ಹೀಗಾಗಿ ಅಂದಿನ ದಾಸ್ಯತ್ವವು ಇಂದಿನಂತೆ ಅರ್ಥಪೂರ್ಣವಾಗಿರದೆ ಅಭೇದ್ಯವಾಗಿರದು. 'ಕ್ರಾಂತಿಯು ಚಿರಾಯುವಾಗಲಿ' 'ಕ್ವಿಟ್ ಇಂಡಿಯಾ ಪಂತಹ' ಘೋಷಣೆಗಳು ಕಂದಪದ್ಯದ ಅಥೋ ಮುಖಿಗಳಾಗಿಯೇ ಹುಟ್ಟಿ, ಕೊಟ್ಟೆಯೊಳ

'ಮತದಾರರ ಪಟ್ಟಿ'ಯಲ್ಲಿ 'ಭಾವರ್ತಿ-ಗಂಡ ಪಾವುಲ್ ಡಿ ಸೋಜ' ಆದುದಿದೆ.

ಸ್ಪೋರುಗಳಿಂದ ಪಡೆಯಬಹುದಲ್ಲಾ ಮೆಚ್ಚುಗೆಯಿಂದಲೇ ಪಡೆಯಬಹುದೆಂದಾದರೆ—

ದ. ಕನ್ನಡಿಗರು ಹುಡಿ ಕಲ್ಲುಗಳನ್ನು ಬಹಳವಾಗಿ ಮೆಚ್ಚುತ್ತಾರೆ;

ದ. ಕನ್ನಡಿಗರು ಹೊಳಬಿದ್ದ ಅಕ್ಕಿಯನ್ನು ಬಹಳವಾಗಿ ಮೆಚ್ಚುತ್ತಾರೆ;

ದ. ಕನ್ನಡಿಗರು ಹೆರುಪುಳ್ಳ ಸ್ಪೋರ್ ವಿಜಂಟರುಗಳನ್ನು ಬಹಳವಾಗಿ ಮೆಚ್ಚುತ್ತಾರೆ;

ದ ಕನ್ನಡಿಗರು ಹುಸಿಮಾತನ್ನು ಸಹಾಯಕ ಮೆಚ್ಚುತ್ತಾರೆ.

—ಬೀದಿವಾಲ

THE

Vijaya Stores, Ltd.,

(Incorporated under the Indian Companies Act 1913)

Registered Head Office: COONDAPUR, S K

Registered On 28th October, 1941

Liabilities of Members Limited.

Authorised Capital	**Rs.**	**3,00,000**
Issued Capital	**Rs.**	**50,000**

Divided into 10 (A) Shares of Rs. 1,000 each
10 (B) Shares of Rs 500 each
100 (C) Shares of Rs. 250 each
100 (D) Shares of Rs. 100 each

"Consent of the Central Government has been received to the issue under the Defence of India Rules. 94-A. It must be distinctly understood that in giving this consent the Government of India do not take any responsibility for the financial soundness of any schemes or for the correctness of any of the statements made or opinions expressed with regard to them

BOARD OF DIRECTORS

1. Sri. Mangalore Jerappa, Special Magistrate.
President & Managing Director
The Badavara Bhandhu Printing Press Ltd Mangalore
Sri Narayan Guru Bank, Ltd.
Chairman, The Mysore Speedwell Engineering Works, Ltd.
Mangalore (Chairman)
2. Sri. B Narsappa, Superintendent.
The Badavara Bandhu Printing Press, Ltd & Estate Superintendent
Sri Narayana Guru Bank, Ltd., Managing Director
3. Sri Halady Monappa Shetty, Timber Merchant & Landlord Coondapur
4. Sri. A. S. Vittal Shetty, Merchant & Landlord Coondapur. (Managing Director)
6. Sri A Muthaya Shetty, Merchant & Landlord Coondapur
5. Sri K Thimappa Shetty, Merchant, Coondapur
7. Ignatius Menezes, Esq Merchant, Coondapur

LEGAL ADVISER

Sri. Kolkebail Sanjiva Shetty, B Sc, L L B, Advocate, Coondapur.

BANKERS:

Sri Narayan Guru Bank, Ltd.,

AUDITOR:

Sri P. M. Hegde, B A (Cal) C, Registered Accountant.

This is the only Company of the kind in the Coondapur Taluk Join in the expansion scheme of the business of this large Stores of the District.

ಗಿಳಿದು ಜೀರ್ಣಗೊಳ್ಳುವವು. ಬದಲಿಗೆ 'ದಾಸನ ಮಾಡಿಕೊ ಎನ್ನು' ಮಾದಾ ಳೀಸನ ಉದ್ಯೋಗ ದಾಸ'-ಎಂಬ ದಾಸರ ಪದಗಳು ಸರ್ವತ್ರ ಪ್ರಾತಲ್ಪಡುವವು..

೨ ಸಖತ್ವ—ಯಾನೆ ಸುಖತ್ವ. ಹಿಂದೂದೇಶದ ದಾಸ್ಯತ್ವದಿಂದಾಗಿ ನಿದೇಶೀಯರು ಯಾರಾದರೂ ದೂರ ಗಟ್ಟಿ ಮಾಡುತ್ತಾರಾದರೆ, ಆ ತೊಂದರೆ ನಿವಾರಿಸಿ ಸುಖ ಜೊಂದುವದಕ್ಕಾಗಿ ಭಾರತಕ್ಕೆ ಈ ಹೊಸ ನಾಮಧೇಯ 'ಸಖ'. ಗುಲಾಮನಾಗಿರುವನೇ ನಿಜವಾದ ಸಖ-ಕುದುರೆ ಹೊಡೆದ ಕೃಷ್ಣ ಅರ್ಜುನನಿಗೆ ವ್ಯಾಪಾರದಲ್ಲಿ ಸ್ನೇಹ-ಪಾನಿಗೆ ಸ್ಪರ್ಧಿಂಗ್ ನಾಲಿದ ಪಾಪದ ವೇಳೆ. ವ್ಯವಹಾರ ಸಂಬಂಧವನ್ನು ಸಿಮಿತಿಗೊಳಿಸುವ ವೇಳೆ--ವೈರಿಗಳೆಂದು ಕರೆಯಲ್ಪಡುವ ಬೇರೆ ರಾಷ್ಟ್ರಗಳು ಸಿರ್ಮಾಣಗೊಳ್ಳುವ ವೇಳೆ-ಹಿಂದುಸ್ಥಾನವು 'ಪುತ್ರರಾಷ್ಟ್ರ'ವೆಂದು ಕರೆಯಲ್ಪಡಬಹುದು. ಅದು ಸಖತ್ವ.

೪ ಆತ್ಮನಿವೇದನ—ಈ ರೀತಿ ಮೊದಲಿನ ಅಷ್ಟವಿಧ ಭಕ್ತಿಯನ್ನಳವಡಿಸಿದಾಗಲೇ ಕೊನೆಯ 'ಆತ್ಮಾರ್ಪಣೆ' ಮಾಡಿದಂತೆಯೇ ಅನುಕ್ರಮವಾಗಿ 'ಆತ್ಮವೇದನ'ವಾಗಿ ಬೆಳೆಯುತ್ತಾ ಬಂದ ಈ ಸೇವಾ ಸಿಪಾನಗಳು ಒಂಭತ್ತನೆಯದಾದ 'ಆತ್ಮನಿವೇದನ'ದೊಡನೆ ಸಂಪೂರ್ಣ. ಮೊದಲಿನ ಅಷ್ಟ ದಿಗ್ಪಜಗಳಿಂದ, ತುಳಿಯಲ್ಪಟ್ಟಿರುವ ಅಭಿಮಾನವು ಪೂರ್ಣ ನಾಶವಾಗದೆ, ಅದರ ಅಣುವು ಉಳಿದವನಿದ್ದರೆ, ಅವರು ಅನಹನೆಯಿಂದ ಆತ್ಮನಿವೇದನೆ ಮಾಡಿಬಿಡಬಹುದು. ಹಾಗೆ ತಮಾಷಿಗಿ ಮಾತ್ರದೆ ಏನಾದರೂ ಚಟುವಟಿಕೆ ಕ್ರಿಯೋತ್ಪಾದಕತೆ ಇದ್ದರೂ ತತ್ಪಲವಾಗಿ ಆತ್ಮ ನಿವೇದನೆ ಮಾಡಿಸಿಕೊಂಡಾರು. ಇತಿ ಮುಕ್ತೋತ್ತರ ನವವಿಧ ಭಕ್ತಿ ಸಂಪೂರ್ಣಂ.

ಪವಿತ್ರ ಪ್ರಕಟಣೆಗಳು—ಪುಟ್ಟರನಲತ್ತ ಕತ್ತಿ ಕೋಣೆ ಕ್ರಮಾತೀತ ಸಿ ಪ್ರ ನವವಿಧ ಭಾವಗಳು; ಚರ್ಚಿಲ್ಲಿಯ ಯುದ್ಧ ಕಾರ್ಯಕ್ಕಾಗಿ ಪ್ರಯಾಣ ಮಾಡಿದ್ದ ರನ್ನೆಗಳಲ್ಲೀ ತೋರಿದ ಪುಣ್ಯವಿಕ.

ಪವಿತ್ರ ನಮ್ಮುಗಳು—ಸಿಗರ್ ಕೊಳವೆ; ಬೆಳ್ಳಿನ ಮುಖವಿಂಬಾರಂಭಿಸಿ ಚರ್ಚಿಲ್ ಮಾಡಿದ ಮಾಡಿಯ ಎಲ್ಲಾ ಬಾಯಿಟು ವಸ್ತುಗಳು. ಮುಳಿ ಕೊಗ.

ಪವಿತ್ರ ದಿನಗಳು—ಚರ್ಚಿಲ್ ಅಧಿಕಾರಾರೋಹಣ ಮತ್ತು ಅವರೋಹಣ ದಿನಗಳು. ಜರ್ಮನರ ಕೊನೆಯ ಗುಂಡು ಹಾಯಿದ ದಿನ: ಚರ್ಚಿಲ್ ಹುಟ್ಟು ಹಬ್ಬ; ಚರ್ಚಿಲ್ಲರ....ಇತ್ಯಾದಿ.

ಪವಿತ್ರ ಗುಣಗಳು—ಚರ್ಚಿಲ್ ಮಾಡಿಯ ತೀಪ್ರೋದ್ವೇಗ, ಜಿತಿಗೆ ಬಿದ್ದಾಗಲೂ ಅತ್ಯ ವಿಶ್ವಾಸ, ಕುಯುಕ್ತಿ, ವ್ಯೆಯಾರ್ಧಗಳ ಅರ್ಪಾನನೆ, ಜುಪಜಾರದ ಮುಖಚಿನೊಳಗೆ ಉರಿ-ಇತ್ಯಾದಿ ದಿ ಗೆ

-V H

Decorate your home with

Life-like Oil Painting

of those dear and near to you

M. S. Shirale.

MODERN STUDIO,

UDIPI.

The Pangal Nayak Bank Limited.

(Incorporated in 1920)

Registered Office Court Road, UDIPI.

Branches at— Udipi, Mangalore, Katapadi, Kanhangad, Kinnigoli and Nileshwar, South a nara District

Discounting of demand and short term negotiable instruments for approved parties, granting of loans and overdraft accommodation on goldware, marketable produce, other merchandise and on other securities, collection of pay, pension or other bills, transmission of monies to upcountry places on moderate terms acceptance of Fixed, Current, Savings Bank and Cumulative deposits and every other type of up-to date Banking service is at the disposal of all the sections of the discreet public.

For business proper please enquire at any one of our Offices.,

15th April 1944.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಥೊತರಕ್ಕೆ ಹೆಳದೀ ಹಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು. ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,... ಜಟ್ಟಿ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿ ದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರು ವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪ ದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸ ಬೇಕು. ಈ ಔಷಧವನ್ನು ಬೇಷಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹೆಸರುಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೪ ಆಣೆ.

ಏಜೆಂಟರು:—ಗದಗ: ಗದಗ ಫಾರ್ಮಸಿ, ಹುಬ್ಬಳ್ಳಿ: ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ಡಾವಣಗೇರಿ: ಡಾವಣಗೇರಿ ಫ್ರೇಸ್. ಪತ್ರವ್ಯವಹಾರ ಮಾಡತಕ್ಕ ಮೂಲಳರ ವಿಳಾಸ

ರೇವಣಸಿದ್ಧಪ್ಪ ಹಾಲಪ್ಪ ಡಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

Ayurveda Oushadalaya, GADAG.

The best preventive in epidemics of CHOLERA

"BHUVANENDRA"

CHANDRAAMS

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ'

ಚಂದ್ರಮಸ್ ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೂಡನಿರತಕ್ಕ ಅತ್ಯುತ್ತಮ ಔಷಧಿ

ದೊಡ್ಡವರಿಗೆ 40ಂದ 8ಟೊಟ್ಟು, ಸಣ್ಣ ಮಕ್ಕಳಿಗೆ 10ರದ2ಟೊಟ್ಟು ಲವಂಗ ಯಾ ಒನಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್, ಕಟಪಾಡಿ, ದ.ಕ.

ಉಡುಪಿ ಸ್ಟಾಕಿಸ್ಟರು:—ಹಾ. ನಾಯಕ್ಸ್ ಕನ್ಸಲ್ಟಿಂಗ್ ರೂಮರ್ಸ್ ಎಂಡ್ ಫಾರ್ಮಸಿಸ್ ಪ್ರೀ ಆರ್. ಎಸ್. ಶೆಣೈ, ರಥಬೀದಿ, ಡಾ। ಪಿ. ಜಿ. ಆಚಾರ್ಸ್ ಫಾರ್ಮಸಿಸ್; ಡಾ। ಕೆ. ಶೇಷಗಿರಿ ಸೈ, L. I. M.; ಡಾ। ವೆಂಕಟರಾವ್, ಕೊಪದಕ್ಕಲ್; ನವಭಾರತ ಬುಕ್ ಡಿಪೊ.



ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ಸಿದ್ಧೀಸಿ ತಯಾರಿಸಲ್ಪಟ್ಟ ಆವೇಧಿಷ್ಠಾವ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ)

ಈ ದಿವ್ಯೌಷಧಿಯನ್ನು ಹೆಚ್ಚು ಕೆಮಿಮೆ ಇಲದಿವಸಗಳಿಗೆ ಬರುವಷ್ಟು ಅಂದರೆ ಕೇವಲ ೪ ರೂಪಾಯಿಗೇ ಒಂದು ಬಾಣಂತಿತನಕ್ಕೆ ಸಾಕಾಗುವಷ್ಟು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.೨ ಕೊಡಿಯಾಲಬೈಲು, ದ.ಕ

— ಮಕ್ಕಳನ್ನು ಹಡೆಯುವದು ಸಾಕು—

ಆಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ್** ರೋಗಗ್ರಸ್ತ ಕೃಣ್ಣು ಮಕ್ಕಳಿಗೆ

ಏಳು ದಿವಸ ಈ ನಾಡ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಕೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿ ಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳ ಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರಿವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. ೬—೦—೦ ಪೋಷ್ಟ ಚಾರ್ಜು ೧ಆಣೆ.

ಮೂಲಕರು:—ಹಾಲಪ್ಪಾ ಭಕೀರಪ್ಪಾ ಡಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ

ಏಜಂಟರು:—ಹುಬ್ಬಳಿ ಫಾರ್ಮಸಿ,—ಹುಬ್ಬಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪುರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪುರ ಚಿಕ್ಕೋಡಿಯಲ್ಲಿ:—ಹುಂಬರವಾಡಿ ಸ್ಟೋರ್ಸ್. ಡಾವಣಗೇರಿ:—ಡಾವಣಗೇರಿ ಪ್ರೆಸ್ಸ್. ಇ. ಎಲ್. ಕವಲದಾಸಿ, ಕೆಮಿಸ್ಟ್, ಹಾವೇರಿ, ಬ್ಯಾಡಗಿ.

Ayurveda Oushadalaya, GADAG CITY.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತು ಮೂತ್ರವೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿ ಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ 1—12—0

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಎಲ್ಲಾ ನವಿನಮೆಯ ಔಷಧಿಗಳು ದೊರೆಯತ್ತವೆ. ಕಾಲೆ ಕಂಗ್ತಿ ಬರದಲ್ಲಿ ರೋಗಕ್ಕೆ ತಕ್ಕವಾದ ಔಷಧಿ ಕಳಿಸಲಾಗುವದು. ಉಡುಪಿ ಏಜಂಟರು:—ನವಭಾರತ ಬುಕ್ ಡಿಪೊ

ಅಂತರಂಗದ ಕತೆಗಳು

೧೨ ಕತೆಗಳ ಸಂಗ್ರಹ ಬೆಲೆ ೦—೧೦—೦

ಅಂತರಂಗವನ್ನು ಬೆಳಗಿ, ಬಹಿರಂಗವನ್ನು ಹೊಳೆಸಿ ಹರಿಯುವ ಮಾತು.

ಪ್ರೇಮಪ್ರವಾಹವು ಹೇಗೆ ಹರಿಯುತ್ತದೆ? ಪ್ರಣಯದಲ್ಲಿ ಪ್ರಲಯವಿದೆಯೆ?

ಪ್ರೇಮಪ್ರವಾಹ

ಸ್ವಾರಸ್ಯವಾದ ೫ ಕತೆಗಳ ಸಂಗ್ರಹ ಬೆಲೆ ೦-೬—೦

ಬಹಿರಂಗವಾಗಿ ಅಲ್ಲವಾದರೂ ಅಂತರಂಗವಾಗಿ ನೋಡತಕ್ಕ

ಆರ್ಟ್ ಚಿತ್ರಗಳು

ಹಲವಾರು ಸುಂದರಿಯರ ನೈಜಚಿತ್ರಗಳ ಕಟ್ಟು. ಬೆಲೆ ೦—೬—೦

ಪಾಪಪೂರಿತ ಪಟ್ಟಣಗಳು

ಪ್ರಪಂಚದ ಬೇರೆ ಬೇರೆ ದೇಶಗಳಲ್ಲಿ ವ್ಯಭಿಚಾರ ಸೂಳೆಗಾರಿಕೆಗಳು ಸಮಾಜವನ್ನು ಹೊಕ್ಕು ಅದನ್ನು ಹೇಗೆ ಕೊರೆದು ತಿಂದು ಹಾಳು ಮಾಡುತ್ತಿದೆ ಎಂಬುದನ್ನು ವಿವರಿಸುವ ಗ್ರಂಥ. ಬೆಲೆ. ೧—೮—೦

ವ್ಯಭಿಚಾರಿಣಿ ಯಾರು?

ಸಾಮಾಜಿಕ ನಾಟಕ. ಬೆಲೆ: ೦—೧೨—೦

ಮಾನವಂತತನದ ಸೋಗಿನಿಂದ ನಡೆಸಲ್ಪಡುವ ಅನಾಚಾರವನ್ನೂ ಪವಿತ್ರ ಪ್ರೇಮವು ಕಠಿಣ ಪರೀಕ್ಷೆಗೊಳಗಾದರೂ ಕಟ್ಟಕಡೆಗೆ ಅದರ ವಿಜಯ ಸಿದ್ಧಿಯನ್ನೆಂಬುದನ್ನೂ ಮನಗಾಣಿಸುವ ವಿಚಾರ ಕ್ರಾಂತಿಕಾರಕ ನಾಟಕ.

ನವಭಾರತ ಪುಸ್ತಕ ಭಂಡಾರ, ಉಡುಪಿ.

EDITED PRINTED & PUBLISHED BY K. H. SHETTY AT THE NAVAYUGA PRESS, UDIPI, S. India

Regd. No. M 3618. ವಾರ್ಷಿಕ ಚಂದಾ ರೂ. 4—8—0 ಬಿಡಿ ಸಂಚಿಕೆ 0—1—6. Estd. 1921 ಸ್ಥಾಪನೆ.

ಅಂತರಂಗ

ಉಡುಪಿ

ಅಖಿಲ ಕರ್ನಾಟಕದ ಹೊಸ

ವಾಚಕರಿಯ ಸಚಿತ್ರ

ವಿನೋದ ವಾರ ಪತ್ರಿಕೆ.

ವಾರ್ಷಿಕ ಚಂದಾ ರೂ. 4—8—0

ಬಿಡಿ ಪ್ರತಿಗೆ ರೂ. 0—1—6



ವರ್ಷ ೨೪ ವಾರ ೩೪] ಪ್ರತಿ ಗುರುವಾರ ಹೊರಡುವ ಗಾಂಧೀಯ ವಾರಪತ್ರಿಕೆ [Vol 24 No. 24

Founder SHRI. K. SHETTY.

ಉಡುಪಿ • 22—2—1945 • ಮಂಗಳೂರು.

ದಿ ಜುಪಿಟರ್

ಜನರಲ್ ಇನ್ಶೂರೆನ್ಸ್

ಕಂಪೆನಿ, ಲಿ, ಬೊಂಬಾಯಿ.

ವಿಮೆಯಿಳಿಸ ಬೇಕೆ?

ವಿಜಂಟಿಂಗ್ಸಿರಿ?

-ಹೀಗಾದರೆ ಕೂಡಲೇ

ಪಿ. ಡಿ. ತಾನಯ, ಉಡುಪಿ.

ದಕ್ಷಿಣ ಕನ್ನಡದ ಚೀಫ್ ಏಜೆಂಟ್.

-ಇವರಿಗೆ ಬರೆಯಿರಿ-

! ಕೋಟಿಗೆ ಮಿಕ್ಕಿ ವ್ಯವಹಾರ !

ಈ ವರುಷವೇ ರಜತೋತ್ಸವ!

The Jupiter General Insurance Company Ltd

ಅಮೃತಾಂಜನ

ತಲೆನೋವನ್ನೆ, ಶಿರೋ ನೋವನ್ನೆ, ಉಳುಕು, ಉತ್ತಿಗೆ, ಘುಡ, ಹಲ್ಲು ನೋವನ್ನೆಗಳಿಗೂ ಎದೆನೋವಿ, ಘ್ಯಾಯಗಳು ಬಾತು ಕೊಳ್ಳುವದು, ಚೇಳು ವಿಷ ಮುಂತಾದ ಚೇನೆ ದಷ್ಟವಾತ್ಸ ಮೊದಿನ ಮೋದಾದ ಎಲ್ಲಾ ರೋಗಗಳಿಗೂ ಸಿದ್ಧೌ ಸಸ್ಯಹುರುಳಿದ್ದ ನುದ್ಯ ಸಹ ನನ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

SYMPTOMS AND DISEASE.

Often an insurance company refuses to grant insurance cover to an apparently healthy person because, on a medical examination, symptoms of disease are discovered in him. This the insurance company puts the person on his guard. But then he has very little chance of insuring his life.

Insurance apart, one's health requires constant attention and periodical medical examination. So, do not neglect it till an insurance company focuses your attention on it.

THE CANARA MUTUAL ASSURANCE CO., LTD.,

UDIPI. (S India)

ಕ್ರೌನ್

ರಬ್ಬರ್ ಸ್ಟ್ಯಾಂಪ್ ಕಂಪೆನಿ

18 ಬಲ್ಮಠ ರಸ್ತೆ, ಮಂಗಳೂರು.

ರಬ್ಬರ್ ಮೊಹರು ಸೈನ್ ಬೋರ್ಡ್

ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co.

18 Balmat Road, MANGALORE.

Approved firm by the Govt of Mysore.

Certified by the Agent of the Govt of India in Ceylon. ESTD1905

ದಿ ಮೂಲ್ಕಿ ಬೇಂಕ್,

ಲಿಮಿಟೆಡ್

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿವೆಂಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,

Mooiky, S K

ಮಂದಾರ್ತಿ

ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನ, ಮಂದಾರ್ತಿ, ಬಾರ್ಕೂರು ಪೋಸ್ಟ್, ದ. ಕ.

ಇಲ್ಲಿ ಅಮ್ಮನವರ ಸನ್ನಿಧಿಯಲ್ಲಿ ನಡೆಯುವ ಹರಿವಾಣ ನೈವೇದ್ಯ ಪಂಚಾಮೃತ ಸೇವೆ ಕೊಡತಕ್ಕ ಸೇವಾ ಭಜಕರು ತಾನೇ ಅರ್ಧ ಸೇರು ಅಕ್ಕಿ ತಂದಲ್ಲಿ ಶಕ್ತಿ ಸೇವೆಯನ್ನು ಪೂರೈಸಿಕೊಡಲಾದೀತು.

ಅರ್ಚಕರು ಕಾವೇರಮ್ಮ.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ಇದೀಗ ಮೂರನೇ ಸಂಪುಟಾರಂಭವಾಗಿದೆ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕುಲಾರುಗಳೂ ಪ್ರಕಟವಾಗುತ್ತವೆ

ವಾರ್ಷಿಕ ಚಂದಾ ರೂ. 1—8—0 ಮಾತ್ರ

ಹೆಚ್ಚಿನ ವಿಚಾರಕ್ಕೆ ಬರೆಯಿರಿ

ಬಾಲಚಂದ್ರ, ಉಡುಪಿ.

THE BOMBAY LIFE ASSURANCE CO. LTD.

ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

(ಸ್ಥಾಪನೆ 1908)

1944ನೆ ಇಸವಿಯಲ್ಲಿ 2½ಕೋಟಿಗೂ ಮಿಕ್ಕ ನ್ಯೂನಹಾರವನ್ನು ಮಾಡಿದ ಪ್ರಥಮಶ್ರೇಣಿ ದೇಶೀ ವಿಮಾಸಂಸ್ಥೆಗಳಲ್ಲೊಂದಾದುದು

ಮುದ್ರಾಸು ರಾಜ್ಯ ಕಾರ್ಯದರ್ಶಿಗಳು

ಮತ್ತು

ಆಶ್ರಿತ ಸಂಸ್ಥಾನಗಳಿಂದ ಕೂಡಿದ ದಕ್ಷಿಣ ಭಾರತದ ಪ್ರಮುಖ ಎಜೆನ್ಸಿ

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಸ್ಥಾಪನೆ 1910

ಕಳದ ಮೂರು ವರುಷಗಳಿಂದ ಪುಲಿಯಿದಾವಾಗಲಿ, ಸ್ವತಂತ್ರವಾಗಿಯೂ ವಿಶೇಷ ರಿಯಾಯಿತಿ ಅನುಕೂಲತೆಗಳನ್ನು ಒದಗಿಸಿ ಸ್ವತಜ್ಞತೆ ವಿಶ್ವಾಸಗಳಿಂದ ಜನತಾಸೇವೆಯಲ್ಲಿ ನಿರತವಾಗಿದೆ ಎಂದು ಸಂತೋಷ ಹೇಳುವ ಜೀವನ ಸಾಲಿನೆಗೆ ಸಿದ್ಧ.

1944ರಲ್ಲು 53ಲಕ್ಷ ವಿಮಾ ವ್ಯವಹಾರದ ಗುರಾಣಿ ಬಿದ್ದಿದೆ

ಕಾರ್ಯಾಲಯಗಳು —

ಬೊಂಬಾಯಿ. ಬೆಂಗಳೂರು, ಮದ್ರಾಸು ಮಂಗಳೂರು

ಕಲ್ಲಿಕೋಟೆ, ಮಧುರಾ, ಟ್ರಿವೆಂದ್ರಂ ಉಡುಪಿ

ಮುಟ್ಟಾಗುವಿಕೆ

ಸಂತತಿಗಳಿಂದ ತೊಂದ್ರಿಗಿದ್ದರೂ, ಕಷ್ಟದ ಪರಿಹಾರಕ್ಕೆ ಆಪತ್ತಿನ ಇತ್ಯಾದಿ ಕಾರಣಗಳಿಂದ ಮುಟ್ಟಾಗುವಿಕೆ ನಿಲ್ಲಿಸಲು Govt Regd ಸುಲಭ ಸೌಲಭ್ಯವಿದೆ—ಎಂದಿನಂತೆಯೇ, ಆರೋಗ್ಯಕರವಾಗಿ, ಕೆಲಸ ಗಂಟಿಗಳಲ್ಲಿ ನಿರತರಾಗಿರುವುದು; ಬೇಕಾದಾಗ ಗರ್ಭಧಾರಣೆಯನ್ನು ಪಡೆಯುವುದು; ಸಾವಿರಾರು ಮಂದಿ ಕೃತಜ್ಞತಾಪತ್ರಗಳು ಬಲೆ ರೂ 3½ ಕೈಪುಸ್ತಕ ಕೇಸುಗಳಿಗೆ ರೂ 5,(ವಿ.ಪಿ 12 ಆಣೆ ಎಲಾಯಿದೆ) Mrs P. DEVEE, P. D. s (S) Tollygunge, Calcutta. ಬ್ಲಾಕಿಸ್ಟ್ ಹೋಮಿಯೋ ಫಾರ್ಮಸಿ, ಮಂಗಳೂರು.



ಯಾವತ್ತೂ ವಿಧದ ಬೈಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾನ್ಯಿಗಳೂ ರವಿಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಕಂಜೆ ವ್ಯಾಸಾಚಾರ್ಯ,

ರಥಬೀದಿ. ಉಡುಪಿ.

THE VIJAYA STORES, LTD.,

COONDAPUR, S. K.

Vijaya Commercial Cash Certificate

Rs 100 per Certificate

Rs. 104 will be paid against the production of the Certificate after one year or earlier

Your money is safe

Do not invest on property Jewels etc They depreciate. But this will yield 4 %

ವಿಜಯಾ ಸ್ಟೋರ್ಸ್ ಲಿಮಿಟೆಡ್,

ಕುಂದಾಪುರ

ವಿಜಯಾ ಕಮರ್ಷಿಯಲ್ ಸರ್ಟಿಫಿಕೇಟುಗಳು

ಒಂದಕ್ಕೆ ರೂಪಾ 100-0-0

ಒಂದು ವರ್ಷ ಕಳೆದ ನಂತರ ರೂ. 104 ಸಿಗುತ್ತವೆ ಭೂಮಿ, ಭಂಗಾರಗಳಲ್ಲಿ ಹಾಕಿದ ಹಣದ ಬೆಲೆಯು ಇಳಿಯುತ್ತದೆ. ಈ ಸರ್ಟಿಫಿಕೇಟುಗಳು ಶೇ. 1ರಷ್ಟು ಬಡ್ಡಿ ಕೊಡುತ್ತವೆ

ಹಲವಾರು ಖರ್ಚಾದುವು ——— ನೀವೂ ಪಡೆಯಿರಿ

CHAMPAE'S

Snow & Casirex

Sole Distributers for (India.)

Sukhananda Stores

Santhekatte, UDIPI, S. K.

ಪಾರ್ಥಿವ ಸಂವತ್ಸರದ

ಉಡುಪಿ ಪಂಚಾಂಗ

(1945-'46)

ಸಕಲ ಸಂಭಾರುಳ್ಳ-ನಿತ್ಯನೈಮಿತ್ತಿಕ ಧರ್ಮ ಕಾರ್ಯಗಳಿಗೆಲ್ಲಾ ಶಾಸ್ತ್ರೋಕ್ತ ರೀತಿಯಿಂದ ಪರಿಶೀಲನೆಯಾಗಿರುವುದು

ಬೆಲೆ ರೂ 0—4—0

ವಿಶೇಷ ವಿವರಣೆಗೆ ಬರೆಯಿರಿ

ಆತ್ಮೂರು ವಾಸುದೇವ ಉಡುಪ

ಸಂಪಾದಕ,

ಮೊದರ್ನ್ ಹಿಂದೂ ಹೊಟೆಲ್,

ಬೊಂಬಾಯಿ ಇಲ್ಲಿಯೂ ಸಿಗುವುದು.

Read & Advertise in

NAVAYUGA

ಇದೊಂದು ಜಾತಿ---
ಹಿರಿಯರು ಮಾಡಿದುದಿರುವವರು.

(ದೂರಿದುದು:—'ಬೇರೆ ಜಾತಿಯಾಳ'.)

ದಕ್ಷಿಣ ಕನ್ನಡ,

ಮಂಗಳೂರು

ಜಿಲ್ಲಾ ಕಲೆಕ್ಟರರ ಪ್ರಕಟಣೆ– ಎಂತಹ ಬೆಳೆಯ ಅಕ್ಕಿ ಮತ್ತು ಭತ್ತಗಳನ್ನು ಸ್ಟೋರಿಗೆ ಒಪ್ಪಿಸುವುದರ ಕುರಿತು ಮಾನ್ಯ ಜಿಲ್ಲಾ ಕಲೆಕ್ಟರರು ಒಂದು ಪ್ರಕಟಣೆ ಹೊರಡಿಸಿದ್ದಾರೆ. ಆ ಪ್ರಕಟಣೆಯ ಪ್ರಕಾರ ಈ ವರ್ಷದ ಬೆಳೆಯ ಮಿಗಿತಾಯ ಅಕ್ಕಿ ಮತ್ತು ಭತ್ತಗಳನ್ನು ದ. ಕ. ಜಿಲ್ಲಾ ಕೋ-ಆಪರೇಟಿವ್ ಸ್ಟೋರ್ ಲಿಮಿಟೆಡ್ ಸ್ಟೋರಿಗೆ ಇಲ್ಲವೆ ಅದರ ರಾಜೀಗಳಿಗೆ ಈ ಕೆಳಗೆ ತಿಳಿಸಿದ ತಾರೀಖುಗಳಿಗೆ ಒಪ್ಪಿಸತಕ್ಕದ್ದು.

"ಭತ್ತ ಮಾರಲು ನಿಗಿತಾಯದ ಎಲ್ಲಾ ಸಂಗ್ರಹವನ್ನು ತಾ. ೧೫-೧೧-೧೯೪೮ರೊಳಗೆ ಒಪ್ಪಿಸಬೇಕು. (ತಾ. ೧೦-೧೧-೧೯೪೮ರ ನಂತರ ಒಂದನೇ ಬೆಳೆಯ ನಿಗಿತಾಯ ಭತ್ತವನ್ನು ಒಪ್ಪಿಸಲಾಗುವುದಿಲ್ಲ) ಸ್ಟೇರ್ ರಿಯಾಯಿತಿ ಕೊಟ್ಟ ಕೆಜೆಗಳಿಂದ ಮಾತ್ರ ಭತ್ತ ಸ್ವೀಕರಿಸಲಾಗುವುದು) ಅಕ್ಕಿಯಾದರೆ ನಿಗಿತಾಯದ ಎಲ್ಲಾ ಅಂಶವನ್ನು ತಾ. ೧೫-೧೧-೧೯೪೮ರೊಳಗೆ ಮುಟ್ಟಿಸಕ್ಕದ್ದು."

ಕನ್ನಡ ಸಭಾ ದಿನಾಚರಣೆ– ಗವರ್ನಮೆಂಟ್ ಕಾಲೇಜಿನ ಕನ್ನಡ ಸಭಾ ದಿನವು ತಾ. 22ರಲ್ಲು ಪ್ರಿನ್ಸಿಪಾಲರಾದ ಮಿ| ಕೆ. ಐ. ವಾರ್ನರ್, ಎಮ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಕಾಲೇಜು ವಿದ್ಯಾರ್ಥಿನಿಯರ ಪ್ರಾರ್ಥನೆಯಾದ ಬಳಿಕ ಕಾರ್ಯದರ್ಶಿ ಶ್ರೀ| ಕೆ. ಭುಜಂಗ ಹೆಗ್ಡೆಯವರು ವರದಿ ಓದಿದರು. ಶ್ರೀ| ಕೆ. ಜಗನ್ನಾಥ ಹೆಗ್ಡೆಯವರು ಸಭೆಗೆ ಸ್ವಾಗತವನ್ನು ನುಡಿದರು. ಶ್ರೀ| ಉತ್ತರ ಭಟ್ಟರು ಉತ್ತರವಿತ್ತರು. ಸಭೆಯು ಉಪಾಧ್ಯಕ್ಷರಾದ ಶ್ರೀ| ನಂಜುಂಡ ಸ್ವಾಮಿಯವರು ವಿದ್ಯಾರ್ಥಿಗಳಿಗೆ ಹಿತೋಪದೇಶವನ್ನಿತ್ತರು. ಶ್ರೀ| ನಡ್ಕೂಡಿ ಅನಂತ ಉಪಾಧ್ಯಾಯರು ತಮ್ಮ ಭಾಷಣದಲ್ಲಿ ಎಲ್ಲರೂ ದೇಶಭಾಷೆಗಳಿಗೆ ಪ್ರಾಧಾನ್ಯವನ್ನು ಕೊಡಬೇಕೆಂದರು. ಅಧ್ಯಕ್ಷರು ತಮ್ಮ ಸಂತೃಪ್ತಿಯನ್ನು ವ್ಯಕ್ತಪಡಿಸುತ್ತಾ ಕಾಲೇಜಿನ ಗೌರವವನ್ನು ಕಾಪಾಡುವಂತೆ ವಿದ್ಯಾರ್ಥಿಗಳಿಗೆ ಸೂಚಿಸಿದರು. ಶ್ರೀ| ಕೆ. ರಾಮಕೃಷ್ಣ ಭಟ್ಟರ ಧನ್ಯವಾದಾರ್ಪಣೆಯೊಂದಿಗೆ ಕನ್ನಡ ಸಭಾ ದಿನಾಚರಣೆಗೆ ಮಂಗಲವಾಯಿತು.

ಹಸುಗೆ ಹರಡದೆ–ಜಿಲ್ಲೆಯ ಭಾಗಗಳಲ್ಲಿ ಗೋಧಿಯನ್ನು ಕೊಡುವ ವಿಷಾದವನ್ನು ಸಭೆಯಲ್ಲಿ ಸಲ್ಲಿಸಿ ರಾಗಿಯನ್ನು ಮಾತ್ರ ಕೊಡುತ್ತಿರುವರು ಗೋಧಿಯ ಸಂಗ್ರಹವು ತಕ್ಕಷ್ಟು ಬರುವ ವರೆಗೆ ಮಾತ್ರ ಈ ನಿಯಮ

ಪೂರ್ಣ ಬಿಡಿಯಕ್ಕಿ–ಯನ್ನೆ ಡಿಪೊಗಳಿಗೆ ತಂದೊಪ್ಪಿಸುವವರಿಗೆ ಅಕ್ಕಿ ಬೆಲೆಯು ಸೇರಿ ಅಂರಕ್ಕು ಮಾತ್ರ ಕೊಡಲಾಗುವುದು—ಎಂದು ಜಿಲ್ಲಾ ಕಲೆಕ್ಟರರು ಪ್ರಕಟಿಸುತ್ತಾರೆ.

ಗೋದಿಯನ್ನು–ಬೀಸಿ ಕೊಡುವ ಮಜೂರಿಯು ಸೇರಿಗೆ ೦-೦-೮ ಸೈಗಳಕಕ್ಕದ್ದು. ಈ ದುವನ್ನು ಕಾನಿಸುವ ಹಲಗೆಯೊಂದನ್ನು ಪ್ರತಿಯೊಬ್ಬ ಗೋಧಿ ಬೀಸುವವರು ಆಧವಾ ಮಿಲ್ಲಿನವರು ಕಮ್ಮ ಅಂಗಡಿಯ ಮುಂದೆ ಪ್ರದರ್ಶಿಸಕ್ಕದ್ದು ಎಂದು ಜ. ಕಲೆಕ್ಟರರು ಪ್ರಕಟಿಸಿದ್ದಾರೆ. 'ಈ ದರಕ್ಕೆ ಬೀಸಿ ಕೊಡಬಹುದು. ಆದರೆ ಗಾಳಿಸಿ ಹಿಟ್ಟು ಬೇರೆ ಸಜ್ಜಿ ಬೇರೆ ಮಾಡಲು ಸಾಧ್ಯವಿಲ್ಲ ಎಂದು ಬೀಸುವ ಕೆಲವರು ಇತ್ತೀಚೆಗೆ ಅಕ್ಷೇಪವೆತ್ತಿತ್ತಿದ್ದಾರೆ

ನಗರದ ಆರೋಗ್ಯ–ತಾ. ೧೫ಕ್ಕೆ ಅಂಕ್ಯಮಾದ ವಾರದ ಆರೋಗ್ಯ ವರದಿಯಲ್ಲಿ ನಗರದಲ್ಲಿ ಸ್ಪೋಟು ಮತ್ತೆ ಯಾವಾಗಾದರೂ ತಗುಲಿದ ವಾರ್ತೆಯಿಲ್ಲ. ಆದರೆ ಸಿಡುಬು ವ್ಯಧಿಸುಸ್ತಿಕೆ ಇದೆ. ವರ್ಷದ ಪ್ರಾರಂಭದಲ್ಲಿ ೧೪ ಮಂದಿಗೆ ಸಿಡುಬು ಕಂಡು, ೪ ಮಂದಿ ಮರಿದರು.

ಗೋಖಲೆ ದಿನಾಚರಣೆ–ಯು ತಾ. ೧೫ರಂದು ಡಿ ಸಿ ಮಿಠಾನಿ ಆಶ್ರಯದಲ್ಲಿ ಜರಿಗಿತು. ಶ್ರೀ| ಟಿ. ಎ. ರಾಮಲಿಂಗ ಚೆಟ್ಟಿಯಾರರು ಅಧ್ಯಕ್ಷತೆ ವಹಿಸಬೇಕೆಂದು ರಾ| ಕೇಶವ ಪೈ ಅವರು ವಿನಂತಿಸಿಕೊಂಡರು. ಶ್ರೀಗಳಾದ ರಂಗನಾಥ ಭೂಂಜ, ಕೆ. ಕೃಷ್ಣರಾವ್ ಮೊದಲಾದವರು ಮಾತನಾಡಿದರು.

ಪಾನೆ ಮಂಗಳೂರಿನ– ಸುಪ್ರಸಿದ್ಧ ವ್ಯಾಪಾರಿಗಳಾದ ಶ್ರೀ| ಕೃಷ್ಣ ಪೈಗಳು ತಾ. ೧೧ ರಂದು ಮುಂಜಾನೆ ೧೧ ಗಂಟೆಗೆ ಬಂದೆವಾರದಿಂದ ಪಾನೆ ಮಂಗಳೂರಿಗೆ ಸೈಕಲ್ ಮೇಲೆ ಹೋಗುತ್ತಿದ್ದಾಗ ಹೃದಯಸ್ತಂಭನದಿಂದ ತೀರಿದುಬರುತ್ತದೆ

ವೇದಾಂತ ಸಂಘ, ಕಡಬ– ಇದೇ ತಾ. ೧೪ರಂದು ಶ್ರೀ ರಾಮಕೃಷ್ಣ ಪರಮ ಹಂಸರ ಜನ್ಮದಿನವಾಗಿದ್ದು, ಅಂದು ಭಜನೆ, ಭಾಷಣ ಇತ್ಯಾದಿಗಳಿಂದ ತಿಥಿ ಪೂಜೆಯು ಯಥಾರ್ಥಿಯಾಗಿ ನೆರವೇರಿತು. ತಾ. ೧೪ರಂದು ಈ ವೇದಾಂತ ಸಂಘವು ಸ್ಥಾಪಕರಾದ ಸ್ವಾಮಿ ಆತ್ಮಾನಂದಜಿಯವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಉತ್ಸವವು ಜರಗಿತು. ಬೆಳಿಗ್ಗೆ–ನಗರ ಭಜನೆ, ಧರಿಪ್ರ ನಾರಾಯಣರ ಸೇವೆ ನಡೆಯಿತಲಾ. ಸ್ಥಳೀಯ ವೈದ್ಯ ಉದ್ಯೋಗಸ್ಥರಾದ ಡಾ| ಕೆ. ಕೆ. ರೈಗಳಿಂದ ದಿನ ಜನರಿಗೆ ನೀತಿ ಬೋಧನೆ ಮಾಡಲ್ಪಟ್ಟುವು. ಸಂಜೆ ಭಜನೆಗಳೊಂದಿಗೆ ಉತ್ಸವವು ಆರಂಭಿಸಿ ಶ್ರೀ ಪರಮಹಂಸರ ಮತ್ತು ಸ್ವಾಮಿ ವಿವೇಕಾನಂದರ ಜೀವನ ಚರಿತ್ರೆಗಳನ್ನು ಶ್ರೀಗಳಾದ ಕೆ. ಪಿ. ಪುತ್ತು ಸ್ವಾಮಿ, ಶ್ರೀ| ಕೆ. ವಿ. ಸುಬ್ಬರಾಯರೂ ವಿವರಿಸಿದ ಬಳಿಕ, ಶ್ರೀ| ಎಂ. ವೆಂಕಟ್ರಾಯರಿಂದ ಗೋಪಿಕಾ ಗೀತೆಯ ವಾಚನವು ನಡೆಯಿತು. ಅನಂತರ ಅಧ್ಯಕ್ಷರು ಶ್ರೀ ರಾಮಕೃಷ್ಣ ಪರಮಹಂಸರು ಮತ್ತು ಸ್ವಾಮಿ ವಿವೇಕಾನಂದರು ತಿಳಿಸಿದ ಯುಗಾಚಾರ್ಯರು ಹೇಗೆಂಬ ದನ್ನು ವಿವರಿಸಿದರು.

ಕಾರ್ಕಳ–"ಶ್ರೀ ಪದ್ಮಸಾಲಿ ವೈಶ್ಯ ಸೇವಾ ಸಂಘದ ಸಂಘಟನೆಯ ಸಭೆಯು ತಾ. 10-2-1945ರಲ್ಲಿ ಮಾಸ್ತರ್, ಕೆ. ವಂತಯ್ಯ ಸೆಟ್ಟಿಗಾರ್ರವರ ಅಧ್ಯಕ್ಷತೆಯಲ್ಲಿ ಜರಗಿ ಹೊಸ ವರುಷದ ಕಾರ್ಯಕಾರಿ ಸಮಿತಿಯು ಚುನಾಯಿಸಲ್ಪಟ್ಟಿತು.

ತುಳಸಿ

ಲೇಖಕಃ ಡಾ. ಯು. ಕೃಷ್ಣ ಮುನಿಯಾಲ

ಹಿಂದುಗಳು ಪವಿತ್ರವೆಂದು ಪೂಜಿಸುವ ಈ ತುಳಸಿ ಗಿಡದಲ್ಲಿ ಪವಿತ್ರತೆಗೆ ಸರಿಯಾದ ಪುರಾಣ ಭಾಗ ಒಂದಿದೆ; ಇದು ಸಾಮಾನ್ಯರಿಗೆ. ಈ ಪವಿತ್ರತ್ವದ ಕತ್ಪಭಾಗವೆಂದರೆ ಆ ಗಿಡದ ವಿಷಧಿಯ ಉಪಯೋಗ. ಇದು ಆರೋಗ್ಯವನ್ನುಳಿಸಿಕೊಳ್ಳಲು ಮಾಪ್ತ ರೋಗದಿಂದ ಪಾರಾಗಲು ಒಂದು ಉಪಯುಕ್ತ ಗಿಡವಾದುದರಿಂದಲೇ ನಮ್ಮ ಪೂರ್ವಜರು ಇದಕ್ಕೆಷ್ಟು ಪ್ರಾಮುಖ್ಯತೆ ಕೊಟ್ಟು ಪ್ರತಿಮನೆಯ ಮುಂಭಾಗದಲ್ಲಿ ನಿಟ್ಟು ಬೆಳಸುವ ರೂಢಿಸಿದಾರು ಆಯು ಪಸಾಮಾನ್ಯರ ತಿಳಿವು ಎಷ್ಟು ಕಡಿಮೆಯಾದಾಗಲೂ ಉಳಿಯಲೆಂದು ಅದಕ್ಕೆ ಪುರಾಣ ಭಾಗವನ್ನೂ ಹುಟ್ಟಿಬಿಟ್ಟರಬೇಕು. ಹಾಗಾದ್ದರಿಂದಲೇ ತಿಂಗಳ ಗೊಮ್ಮೆ ಸ್ನಾನವಾಡದ ಹೊಲೆಯನೂ ಕನ್ನ ಮನೆಯ ಮುಂಭಾಗದಲ್ಲಿ ತುಳಸಿ ಗಿಡ ಒಂದನ್ನು ನೆಡಲು ಮತ್ತು ಪ್ರತಿನಿತ್ಯವೆಮ್ಮೆಯಾದರೂ ಅದನ್ನು ಪೂಜಿಸಲು ಮರೆಯದಿರುವಷ್ಟು. ಆದರೆ ಸುಧಾರಕರೆಂದೆನಿಸಿಕೊಳ್ಳುವ ಹಲವರು ಇದರ ಪುರಾಣ ಭಾಗವನ್ನು ತಿರಸ್ಕರಿಸ್ಯೆಯಿಂದ ನಂಬಿಸಿ ಇದರ ಔಷಧಿಯ ಗುಣವನ್ನು ತಿಳಿಯದೆ ಈ ಗಿಡವನ್ನು ನೆಡುವುದನ್ನೇ ಬಿಟ್ಟುಬಿಟ್ಟಿರುವರು. ಇಂತಹ ಕಾಲದಲ್ಲಿ ಈ ಪ್ರಾಮುಖ್ಯ ಗಿಡದರಿವನ್ನು ಜನಸಾಮಾನ್ಯಕ್ಕೆ ಮಾಡಿಕೊಡುವ ಸಲುವಾಗಿ ಈ ಲೇಖನವು ಸಹಾಯವಾಗದಿರಲಾರದು.

ಯುರೋಪಿನ ವಿಜ್ಞಾನಿಗಳಿಗೆ ತುಳಸಿಯ ಪ್ರಯೋಜನ ತಿಳಿದು ಒಂದು ಶತಮಾನಕ್ಕಿಂತ ಹೆಚ್ಚು ಕಾಲವಾಗಿರುವುದಿಲ್ಲ. ಹಿಂದುಗಳಾದರೋ ಈ ಬಿಳ್ಳ ಗಿಡದ ಮಹತ್ತಿಕೆಯನ್ನು ಸಾವಿರಾರು ವರ್ಷಗಳ ಹಿಂದೆಯೇ ತಿಳಿದಿದ್ದರು. ಹಿಂದುಗಳ ಗ್ರಂಥಗಳಲ್ಲಿಯಂತೂ ತುಳಸಿಗೆ ಗಿಡಮೂಲಿಕೆಗಳ ಪ್ರಕಿ ಅಗ್ರಸ್ಥಾನ ದೊರಕಿದೆ ಆದ ದರಿಂದಲೇ ಅದಕ್ಕೆ ಪೂಜೆ ಸಲ್ಲಿಸಲ್ಪಡುತ್ತಿರುವುದು. ಯುರೋಪಿನ ವಿಜ್ಞಾನಿಗಳು ತುಳಸಿಯ ಅದ್ಭುತಕರವಾದ ಪ್ರಯೋಜನವನ್ನರಿತಾಗಲೇ ನಮ್ಮ ದೇಶದ ಸುಕ್ಷೇತ್ರಿಕ ಜನರು ಆದರ ಮಹತ್ವವನ್ನು ಒಪ್ಪಿಕೊಂಡುದು. ಮಧ್ಯ ತರಗತಿಯವರಿನ್ನು ಅದನ್ನು ಒಪ್ಪಿಕೊಂಡಂತಿಲ್ಲ. ಅವರಿಗೆ ಯುರೋಪಿನಲ್ಲಿ ಇದಕ್ಕೆ ಪ್ರಾಮುಖ್ಯತೆಯಿದೆ ಎಂಬುದು ತಿಳಿದಿಯಿರಬೇಕು.

ಮೊದಲಾಗಿ ಮುಂಬಯಿಯ ವಿಕ್ಟೋರಿಯಾ ಗಾರ್ಡನ್‌ನ ವೈದ್ಯ ಅಲ್ಲಿಯ ಅಲ್ಬರ್ಟ್ ವಿಜ್ಞಾನ ಸಂಸ್ಥೆಯಲ್ಲಿ ಇವುಗಳ ಬಗ್ಗೆ ಸಂಶೋಧನೆಯನ್ನು ನಡೆಸಿ ಅದರ ಫಲಿತಾಂಶವನ್ನು ಪ್ರಕಟಿಸಿದ್ದಾರೆ. ಅವರ ಪ್ರಕಾರ ತುಳಸಿಯ ಎಲೆಯಲ್ಲಿ ಒಂದು ರೀತಿಯ ಎಸೆನ್ಸ್ ಇದೆ. ಇದು ಆಹಾರವನ್ನು ಜೀರ್ಣಿಸಲು ಸಹಾಯಮಾಡುತ್ತದೆ ಊಟಾರಣದಿಂದಲೇ ಹಿಂದುಗಳು ಪೂಜಾನಂತರ ಇದರ ಎಲೆಗಳನ್ನು ತಿನ್ನುವ ರೂಢಿಯುಂಟಾಗಿದೆ. ಬೆಳಿಗ್ಗೆ, ಸಾಯಂಕಾಲ, ಮಧ್ಯಾಹ್ನ ಈ ರೀತಿ ಮೂರು ಸಾರಿ ಈ ಎಲೆಗಳನ್ನು ತಿನ್ನುವ ರೂಢಿಯಿಟ್ಟುಕೊಂಡರೆ ಎಲ್ಲಾ ವಿಧದಲ್ಲಿಯೂ ಆರೋಗ್ಯವು ಉತ್ತಮವಾಗಿ ಉಳಿಯುವುದು, ಸರ್ಕಾರಿಗೆ ಹನ್ನೊಂದು ಎಲೆಯಂತೆ ತಿನ್ನುವದೂ ಅನುಭವಿಕವಾಗಿ ಉತ್ತಮವೆಂದು ಕಂಡು ಬಂದಿದೆ.

ಮಲೇರಿಯಾಕ್ಕೆ:–ರೋಗಿಗಳು ತುಳಸಿ ಎಲೆಯ ಹಿಂದು ಕೂಲೆ ರಸದಲ್ಲಿ ಒಂದು ಚಿಮುಡ ಮೆಣಸಿನ (pepper) ಚೂರ್ಣವನ್ನು ಸೇರಿಸಿ ಜೇನಿನೊಡ ಕಲಸಿ ನೆಕ್ಕಬೇಕು. ಹೀಗೆ ಕಲವು ದಿನ ಸಾಧಿಸಿದರೆ ಮಲೇರಿಯಾ ಸಂತುಬಡುವುದು. ಅಲ್ಲದೆ ಮತ್ತೆ ಅಂಟುವುದಿಲ್ಲ.

ಪ್ಲೇಗು:—ತುಳಸಿ ಎಲೆ, ಬಿಲ್ವಪತ್ರೆ, ಆರಳಿ ಎಲೆಗಳನ್ನು ಸಮಪ್ರಮಾಣ (ಒಂದು ತೊಲೆಯಂತೆ) ಒಂದು ಸೇರು ನೀರಿನಲ್ಲಿ ಅರಿದು ಕಾಲು ಸೇರಾಗುವಷ್ಟಕ್ಕೆ ನಿಲ್ಲಿಸಿ ಗಾಳಿಸಿ ಗಂಟೆಗೊದು ತೊಲೆಯಂತೆ ಕುಡಿಯಬೇಕು. ಇದರಿಂದ ಪ್ಲೇಗು ತಾನಿಯಾಗುವುದು.

ಸಾಮಾನ್ಯ ಜ್ವರಕ್ಕೆ.—ಮೂರು ಗುಲುಗುಂಜಿಯಷ್ಟು ರಸವನ್ನು ದಿನಕ್ಕೆ ಮೂರು ಸಾರಿ ಕುಡಿಸಿದರೆ ಜ್ವರ ವಾಸಿಯಾಗುತ್ತೆ.

ವಾತ ರೋಗಕ್ಕೆ.—ತುಳಸಿ ರಸ ಮತ್ತು ಮೆಣಸಿನ ಕಾಳಿನ (pepper) ಚೂರ್ಣವನ್ನು ದನದ ತುಪ್ಪದಲ್ಲಿ ಬೆರಸಿ ನೋವಿನ ಭಾಗಕ್ಕೆ ತಿಕ್ಕುವುದು.

ಕಿವಿರೋಗಕ್ಕೆ:—ತುಳಸಿ ರಸವನ್ನು ಎದು ದಿನಗಳ ತನಕ ಕಿವಿಗೆ ನಾಲ್ಕು ನಾಲ್ಕು ಬೊಟ್ಟು ಬಿಟ್ಟರೆ ಎಂತಹ ಕಿವಿ ರೋಗವಿದ್ದರೂ ವಾಸಿಯಾಗುತ್ತದೆ.

ತುಳಸಿ ಬೀಜ:—ಇದನ್ನು ಮೂತ್ರ ರೋಗಗಳಲ್ಲಿ ಉಪಯೋಗಿಸುತ್ತಾರೆ.

ಇಂತಹ ಅಮೂಲ್ಯವಾದ ಗಿಡವನ್ನು ವನಸ್ಪತ್ಯಲ್ಲಾ ದೊಡ್ಡ ಪರಿಮಾಣದಲ್ಲಿ ನೆಡುವುದರಿಂದ ಅಂದುಬರೋಗಗಳೆಲ್ಲಾ ದೂರವಾಗುವವು

ಮೈಸೂರು ಶ್ರೀಮನ್ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ
ಖಾಸ್ ವೈದ್ಯ ಅಂಬಳೆ ನರಸಿಂಹ ಪಂಡಿತರ ಮನೆತನದ

ಸಂತಾನ ಸಿಂಧೂರ

ತೋಳಿನವಾಗಿ ಎಷ್ಟು ನರ್ಜನವಾದರೇನು? ಬಹಿಷ್ಪೆ ಸಂಬಂಧದ ಹುಟ್ಟಿ ನೋವು ಪೂರ್ಣ ಗುಣವಾಗದ ಹೊರ್ತು ಒಂಡಿಕ ಸಂತಾನವಾಗುವುದಿಲ್ಲ. ಮೂರು ದಿವಸದಲ್ಲಿ ಗುಣವಾಗಿ, ಜಾಗ್ರತೆ ಸಂತಾನ ಫಲ ತೀಕ್ಷಾದರೆ, ೬೬ ವರ್ಷಗಳಿಂದ ಪ್ರಯತ್ನತವಾದ ಮೇಲ್ಕಂಡ ಸಿದ್ಧೌಷಧ ಒಂದು ಸೆಟ್ ಸೇವಿಸಿರಿ, ಸಾಕು. ತೋಳಿನವಾದ ೧೫ ವರ್ಷ ಪುತ್ಕಳಿಲ್ಲವರಿಗೂ ಸುಕ್ಕಳಾಗಿರೆ. ಇಂಗ್ಲಿಷ್, ಅಯುರ್ವೇದಿಕ್ ಡಾಕ್ಟರರುಗಳ ಶಿಫಾರಸನ್ನೂ ಅನೇಕ ಪ್ರಕಟಿಸಿದ ಪತ್ರಗಳನ್ನೂ ಪಡದಿದೆ

ಕ್ರಯ. ೧ ಸೆಟ್ 2 ರೂ ಪ್ಯಾಕಿಂಗ್ ಮತ್ತು ಟಪ್ಪಾಲು ಖರ್ಚು ೧೦ ಆಣೆ ರೂ. ೩ ೧೦ ಮನಿಯಾರ್ಡರ್‌ರ್ ಮಾಡಿದರೆ ಕೂಡಲೇ ವಿಜಿಸ್ಟರ್ ಪಾರ್ಸೆಲ್ ರವಾನೆ ಪಿ. ಪಿ. ಇಲ್ಲ ಕಮೀಷನ್ ಏಜೆಂಟರು ಬೇಕಿಲ್ಲ ಪತ್ರವ್ಯವಹಾರ ಗುಪ್ತ ಕ್ಯಾಟ್ಲಾಗ್ ಉಚಿತ ಅನುಪಾನ ಪತ್ರ ಔಷಧಿ ಸಂಗಡ

A. Ramaswami Aiyar
Ambley, Yelandur P. O
(MYSORE Dt.)

ಎ ರಾಮಸ್ವಾಮಿ ಅಯ್ಯರ್,
ಅಂಬಳೆ, ಯಳಂದೂರು ಪೋಸ್ಟು.
(ಮೈಸೂರು ಡಿಸ್ಟ್ರಿಕ್ಟ್)

Navabharat Book Depot, Udipi South India — Navabharat Book Depot, Udipi South India

ನೋಡಿದರೆ ಬಿಡದಿರುವ ಕೆಲವು ಪುಸ್ತಕಗಳು

ರೂ. ಆ. ಮಾರು ಪ್ರಹಸನಗಳು 0-14
ಸುಲಭದಲ್ಲಿ ಇಂಗ್ಲಿಷ್ 1-4
ಯುವತಿಯರಿಗೆ ಮತ್ತು ವಯಸ್ಕರಿಗೆ
ಸುಲಭವಾಗಿ ಇಂಗ್ಲಿಷನ್ನು ಆನ್ಸ ಹೆಂಡ್ತಿ ಗಂಡನಾದರೆ
ಸಹಾಯವಿಲ್ಲದೆ ಕಲಿಸುವ ಇಂಗ್ಲಿ ● ಕತೆಗಳು
ಷ್ ಸ್ವಯಂಬೋಧಿನಿ ನಗೆನೋಟಗಳು 0-14
ಅನುಪೆಗಳು ಉನ್ನಮೇವರ
ಪ್ರೇಮವಿಜಯ 0-12 ಮತ್ತು ಇತರ ಕಥೆಗಳು -10
ವೇಕಥಕ್ಕ -14 ಭಾರತೀಯ ಕತೆಗಳು - 0-14
ನೃಭಿಚಾರಿಣಿ ಯಾರು 0-12 ನಂದಾದೀಪ 0 10
ಕುಲವನ 0-5 ನಾಡಕತೆಗಳು 0-3
ಸಂಕಯ ವಿಶಾಚಿ 0-8 ಕಂದೂಕಾಶಾದ ನೋಟೆಗಳು 0-8
ರಂಗಭೂಮಿ 0-8 ನಾರೀಹೃದಯ 0-14
ಪ್ರಕಾಶ 1-12 ಅಂತರಂಗದ ಕತೆಗಳು 0-10
ಧರ್ಮಸಂಕಟ 0-4 ಪ್ರೇಮಾಪ್ರಮಾಣ 0 6
ಆರೋಗ್ಯ ಸೌಕಾಪ 0-12 ಆಹುತಿ ಇತ್ಯಾದಿ ಕತೆಗಳು 0-12
ಪಂಚಾಂತಿ 0-6 ಲೋಪಾಮುದ್ರೆ 0-6
ಪ್ರತೀಕಾರ 0-6 ● ಕಾದಂಬರಿಗಳು
ಸೇವಾಪಥ 0-8 ಸನ್ಯಾಸಿಯ ಸೋಗಿನವಳಿ 0-8

ವಿಶ್ವಭೂಮಿ 0 2
ವತ್ಸಲಾ 0-8
● ಕವಿತೆಗಳು
ಕಾವ್ಯಸಮಸ್ಯಾ 0 12
ಮುಗುಳು 0-3
ಶ್ರೀಮುಖ 1-0
ಪುರಂದರದಾಸರ ಕೀರ್ತನೆ 1-0
ಭಗವದ್ಗೀತಾ (ಮೂಲ-ಸಿಲ್ಕ್ ಬೈಂಡು) 1-4
● ಇತರ ಪುಸ್ತಕಗಳು
ಮಂಂದಿನ ದೇವರು 0-3
ರಾಷ್ಟ್ರಸಭೆಯ ಇತಿಹಾಸ 2-8
ಬಾಲವಾಜ್ಯಾಯ 0-3
ಮಿಷಸಂತತಿ 0-8
ನಿಶ್ಚಯಜ್ಞಾನ 0-8
ಪಾಪಪುಂಜ ಪಟ್ಟಣಗಳು 1-8
ಬಗರು 0 6
ಗೀತೆಯ ಕೈಗನ್ನಡಿ 0-12

ನವಭಾರತ ಪುಸ್ತಕ ಭಂಡಾರ, ರಜಿಸ್ಟರ್ಡ್ ಪಬ್ಲಿಷರ್ಸ್, ಉಡುಪಿ. ದ. ಕ.

ದಕ್ಷಿಣ ಕನ್ನಡ.
ಉಡುಪಿ

ಪೋಸ್ಟ್ ಮಾಸ್ಟರ್ ಜನರಲ್ಲರಿಗೆ ಮನವಿ–ಕಳೆದ ವಾರ ವಿದ್ಯಾನಿನ ಪೋಸ್ಟ್ ಮಾಸ್ಟರ್ ಜನರಲ್‌ರವರು ಉಡುಪಿಗೆ ಬಂದಾಗ ಕೊಡ್ಚಿಕಾರ್ ಬ್ರದರ್ಸ್, ಡಾಮಸ್ಥರು ಪೈ, ಆರೂರು ಲಕ್ಷ್ಮೀನಾರಾಯಣರಾಯರೇ ಮೊದಲಾದವರು ಅವರನ್ನು ಭೇಟಿಯಾಗಿ ಉಡುಪಿಗೆ ಹೆಚ್ಚಿನ ಪೋಸ್ಟಲ್ ಟಿಕೆಟ್ಟುಗಳ ಅವಶ್ಯಕತೆ, ಟ್ರಂಕ್ ಟೆಲಿಫೋನ್ ತೆರೆಯುವಿಕೆ ಮತ್ತು ಮಂಗಳೂರಿಗೆ ಸಂಜೆ ಏಳು ಗಂಟೆಗೆ ಬರುವ ಪೋಸ್ಟ್‌ಗಳನ್ನು ಅಂದೇ ಸಂಜೆ ಉಡುಪಿಗೆ ತರಿಸಿ ಮರುದಿನ ಬೆಳಿಗ್ಗೆ ಬಟ್ಟಾಡೆ ಮಾಡಿಸುವ ಕುರಿತು ಮನವಿ ಮಾಡಿಕೊಂಡರು. ಅದಕ್ಕೆ ಉತ್ತರವೀಯುತ್ತಾ ಯುದ್ಧಾವಧಿಯಲ್ಲಿ ಟ್ರಂಕ್ ಟೆಲಿಫೋನ್ ತೆರೆಯಲು ಅಸಾಧ್ಯವೆಂದೂ ವ್ಯಕ್ತಪಡಿಸಿದ ಒಂದು ಪೋಸ್ಟಲು ಕಛೇರಿಯನ್ನು ಯಾರಾದರೂ ದಿ ಮಾರ್ಥ ಕಛೇರಿ ಕೊಟ್ಟರೆ ಪ್ರಯೋಗಾರ್ಥವಾಗಿ ತೆರೆಯಬಹುದೆಂದೂ ಮಂಗಳೂರಿಗೆ ಸಂಜೆ ಬಂದ ಪೋಸ್ಟಲ್‌ಗಳನ್ನು ಅಂದೇ ಉಡುಪಿಗೆ ಒಯ್ಯುವರೆ ಜಲ್ಲಿ ಟ್ರೈಫಿಕ್ ಬೋರ್ಡಿಗೆ ಮನವಿ ಮಾಡಿಕೊಳ್ಳಬೇಕೆಂದೂ ಸೂಚಿಸಿದರು. ಪ್ರಯೋಗಾರ್ಥ ಪೋಸ್ಟಲು ಕಛೇರಿಯು ಕೆಲ್ಲಂಕಿಂದಲ್ಲಿ ತೆರೆಯಲಾಗುವುದೆಂದು ತಿಳಿದುಬರುತ್ತದೆ. ಇಂತಹ ಪ್ರಯೋಗಾರ್ಥ ಪೋಸ್ಟಲ್ ಆಫೀಸುಗಳು ಬನ್ನಂಜೆ ಅದಿಉಡುಪಿ, ಆಂಬ್ಲಪಾಡಿ, ಕಡೆಕಾರು, ಆರೆಬೈರು ಕೇಂದ್ರಗಳಲ್ಲೂ ತೆರೆಯಲ್ಪಡುವಂತೆ ಅಲ್ಲಿರುವ ಮಹಾ ಜನರು ಈ ಗಳಿಗೆ ಚಳವಳಿಸುವುದು ಸಂದರ್ಭೋಚಿತವಿದೆ.

ವಿಕ್ಟೋರಿಯಾ ಜ್ಯುಬಿಲಿ ಕ್ಲಬ್ಬಿನ ದಿನಾಚರಣೆಯು–ತಾ. 24ರಲ್ಲಿ ಜರಗಿ ರಾತ್ರಿ ಹಿನ್ನರ್ ಪಾರ್ಟಿಯು ವಕೀಲ್ ಶ್ರೀ ವಿ ರಲ ಕಾಮತರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಸಂದರ್ಭದಲ್ಲಿ ಶ್ರೀಗಳಿಂದ ಎಮ್. ಡಿ. ರಾಮಚಂದ್ರ ಎನ್. ಪಿ. ಕಾಮತ್, ಎನ್. ಎಸ್. ಕಲ್ಲೆ, ಕೊಚ್ಚಿಕಾರ್ ಪದ್ಮನಾಭ ಪೈ ಮೊದಲಾದವರು ಸಂದರ್ಭೋಚಿತ ಮಾತುಗಳನ್ನಾಡಿದರು. ಇಂದು ದಿನ್ನೆ ಬಾಲಕಿಯ ಸ್ಪರ್ಧೆಗಳನ್ನು ಶ್ರೀ ಸದಾಶಿವ ಹೆಗ್ಡೆರಿಗೂ ಇ ತರರಿಗೂ ಜಾ! ಸುಂದರರಾಮ ಪೈಗಳು ಧನ್ಯವಾದ ಗಳನ್ನಿತ್ತರು.

ಪಣಿಯಾಡಿ ವಾರ್ಡಿನ ಉಪಚುನಾವಣೆ–ಯಲ್ಲಿ ಶ್ರೀ ಆರ್. ಆರ್. ಕುಂಜರ್ ಅವರು ಪ್ರತಿಪಕ್ಷಿಗಳಲ್ಲದೆ ಉಡುಪಿ ಮುನಿಸಿ ಪಾಲಿಟಿಗೆ ಆರಿಸಿ ಬಂದಿರುವರು.

ಸ್ಮಾರಕ ದಿನಾಚರಣೆ–ಮಹಾ ಕವಿ ಮುದ್ದಣ್ಣನ ಸ್ಮಾರಕ ದಿನಾಚರಣೆಯು ತಾ. 25ರಲ್ಲಿ ಬೋರ್ಡು ಹೈಸ್ಕೂಲ್ ಸಭಾ ಮಂದಿರದಲ್ಲಿ ಶ್ರೀ. ಎನ್. ರಾಜಗೋಪಾಲಶೆಟ್ಟಿರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಬಾಲಕಿಯರಿಂದ ಸ್ಪಾರ್ಥನೆ ಮತ್ತು ಬಳಿಕ ಅಧ್ಯಕ್ಷರು ಮುದ್ದಣ್ಣನ ಪರಿಚಯವನ್ನು ಸಭಿಕರಿಗೆ ಮಾಡಿಕೊಟ್ಟರು. ಶ್ರೀ ರಾಮಾ ಪಸ್ಥಾಭಿಷೇಧದಿಂದ ಕೆಲವಂಕರನ್ನು ಶ್ರೀ ಬಿ. ಎ. ಕೆದಿಲಾಯರು ಓದಿದರು. ಶ್ರೀಗಳಾದ ಕೊಡ್ಡಂಲ್ ಶ್ರೀನಿವಾಸರಾವ್, ಪಿ. ಕೃಷ್ಣಭಟ್ಟಾಯರ್, ಕೆ. ವಿಠಲ ಶೆಣೈಯವರು ಕವಿಯ ಗದ್ಯ ಪದ್ಯಗಳನ್ನೆತ್ತಿ ಓದಿ ಕವಿಕಾವ್ಯ ಪ್ರಶಂಸೆ ಮಾಡಿದರು. ನಿವೃತ್ತ ಕುಸ್ತಿ ವಾಸ್ತರ್ ಶ್ರೀ ರಾಮಕೃಷ್ಣ ರಾಯರೂ ಸಂದರ್ಭೋಚಿತ ಮಾತುಗಳನ್ನಾಡಿದರು. ತದನಂತರ ಸ್ಥಳೀಯ ಯಕ್ಷಗಾನ ಕಲಾ ಸಮಿತಿಯವರು 'ಕುಮಾರ ವಿಜಯ'ದಿಂದ ಕೆಲವು ಭಾಗಗಳನ್ನೆತ್ತಿ ಯಕ್ಷಗಾನ ಸೇವೆಯನ್ನು ಮಾಡಿದರು.

ಗೋಧಿ ಹಿಟ್ಟು ಸಜ್ಜಿಗೆ– ತಯಾರಿಸಿ ಕೊಡುವ ಮಿಲ್ಲುಗಳ ಮ್ಯಾಲಕರು ಒಂದು ಸೇರು ಗೋಧಿಗೆ ಒಂದಾಣೆಯಂತೆ ಚಾರ್ಜು ತೆಗೆದುಕೊಳ್ಳುತ್ತಿರುವುದಾಗಿ ತಿಳಿದುಬಂದಿದೆ. ಮಂಗಳೂರಲ್ಲಿ ಜಿಲ್ಲಾಧಿಕಾರಿಗಳು ದರ ನಿರ್ಣಯಿಸಿದಂತೆ ಉಡುಪಿಯಲ್ಲೂ ದರ ನಿರ್ಣಯಿಸುವುದು ಆತ್ಯಾವಶ್ಯಕ.

ಉಡುಪಿ ಮೆಜೂರ ಸಮ್ಮೇಳನವನ್ನು–ತಾ 11-3-45ಕ್ಕೆ ಉಡುಪಿಯಲ್ಲಿ ಜರಗಿಸುವ ನಿರ್ಧಾರವಾಗಿ ತಾ. 20-2-45ರಲ್ಲಿ ನೇತಾರ ಸಂಘದ ಕಾರ್ಯಾಲಯ ದಲ್ಲಿ ನೇಮಿತ ಬೇಡಿ ಮಜೂರ ಸಂಘ ಮತ್ತು ನೇಕಾರ ಸಂಘಗಳ ಸಮ್ಮಿಶ್ರ ಕಾರ್ಯಕಾರಿ ಸಮಿತಿಯಲ್ಲಾಗಿದೆ. ಶ್ರೀ. ಕೆ. ರಾಘವನರು ಸ್ವಾಗತಾಧ್ಯಕ್ಷರಾಗಿ ಆರಿಸಲ್ಪಟ್ಟರು. ಶ್ರೀ. ಜೆ. ಇ. ನಿಕೇರಿಯು ಸಮ್ಮೇಳನದ ಉದ್ಘಾಟನೆ ಮಾಡುವರು- ಶ್ರೀ. ಬಿ. ವಿ. ಕಕ್ಕಿಲ್ಲಾಯರಿಂದ ಧ್ವಜಾರೋಹಣ ನಡೆಯುವದು. ಕಲ್ಲಿಕೋಟೆಯ ಮಜೂರ ಪ್ರಮುಖರಾದ ಶ್ರೀ. ಎಚ್. ಮುಂದುನಾಥ ರಾಯರು ಸಮ್ಮೇಳನಾಧ್ಯಕ್ಷರು. ಸಮ್ಮೇಳನಕ್ಕೆ ಹಾಗೂ ನಿ.ಜಾರಹಿತ ಸಂಬಂಧಗಳಿಗೆ ಸಂಬಂಧಪಟ್ಟ ಪ್ರಸ್ತಾಪಮುಖ್ಯ ನಿರ್ಧಾರಗಳೂ ಸಮಿತಿಯಲ್ಲಾಗುವ ಸಂಘದ ಕಾರ್ಯಾರ್ಥವಾಗಿ ಹೋಗಿದ್ದ ನೇಕಾರ ಸಂಘದ ಕಾರ್ಯದರ್ಶಿಯರನ್ನು ಮಂಗಳ ವ್ಯಾಲಕರೆಬ್ಬರು ಆತಿಥಾಸಿಸಿದುದನ್ನು ಸಮಿತಿಯು ಕೃತ್ಞತಾಪೂರ್ವಕವಾಗಿ ನಿರೀಕ್ಷಿಸಿ, ಆ ವಿಷಯವನ್ನು ಉಡುಪಿ ಕೈಮಗ್ಗ ಮ್ಯಾಲಕರ ಸಂಘದ ಗಮನಕ್ಕೆ ತರಲಾಗಿದೆ.

ಕಲಾತ್ಮಕದ ದ್ವಿತೀಯ ಸಾಹಿತ್ಯಗೋಷ್ಠಿಯುಭಬ್ರವರಿ ತಾ 25ರಿಂದ 27ರ ವರೆಗೆ ಮೂರು ದಿನ ವಿಜ್ಞಾಧನೆಯುಂಡ ಶ್ರೀ ಚಂದ್ರೇಶ್ವರ ದೇವಸ್ಥಾನದ ವಸಾಗೆಯಲ್ಲಿ ಜರಗಿತು. ಪ್ರಥಮ ದಿನ ಶ್ರೀ ಬಿ ರಾಮಕೃಷ್ಣಾಚಾರ್ ಬಿ ಎ, ಇವರಿಂದ ಉದ್ಘಾಟನೆಯಾಗಿ ಶ್ರೀ ಸಂಜೀವ ಭಟ್ ಎಂ ಎ ಎಲ್ ಬಿ ಇವರ ಅಧ್ಯಕ್ಷತೆಯಲ್ಲಿ ಶ್ರೀಗಳಾದ ಎ! ಸುಬ್ಬಾಯ ಅಚಾರ್ಯ, ವಿದ್ವಾನ್ (ರತ್ನ ಮತ್ತು ಗದಾಯುದ್ಧ), ಕು।ಶಿ। ಹರಿದಾಸ ಭಟ್ಟರು, ವಿಠಲದ(ಬೇಂದ್ರೆಯವರ ಕಾವ್ಯ ಲಹರಿ), ಕೆ। ಸುಬ್ಬಾಯ ಪುರಾಣಿಕ (ಸಂಸ್ಕೃತಸಾಹಿತ್ಯ) ಇವರು ಉಪನ್ಯಾಸಗಳನ್ನಿತ್ತರು. ತಾ 26ರಲ್ಲಿ ಸಂಸ್ಕೃತಕಾಲೇಜಿನ ಪ್ರಿನ್ಸಿಪಾಲ್ ಶ್ರೀ। ರಾಮಚಂದ್ರರಾವ್ ಎಂ। ಎ ಇವರ ಅಧ್ಯಕ್ಷತೆಯಲ್ಲಿ ಶ್ರೀಗಳಾದ ಬಿ। ಸೀತಾರಾಮ ಆಚಾರ್, ವಿದ್ವಾನ್ (ಪಂಪಭಾರತ), ಕೆ। ರಾವ ಚಂದ್ರ ಉಪಾಧ್ಯಾಯ, ವಿದ್ವಾನ್ (ಕವಿ ಮುದ್ದಣ), ಎಂ। ವಿ। ಕೆಗ್ಡೆ (ಪ್ರಗತಿಶೀಲ ಸಾಹಿತ್ಯ) ಇವರ ಭಾಷಣಗಳಾದುವು ಎರಡು ದಿನಗಳಲ್ಲೂ ಕುಮಾರ ಗುರು, ಇವರಿಂದ ಕಾವ್ಯವಾಚನ ನಡೆಯಿತು. ಮೂರನೇ ದಿನ' ಬೀದಿಗಿಳಿದ ನಾರಿ' ಪುಟ್ಟು 'ಜಯಶ್ರೀ' ನಾಟಕಗಳು ಕಲಾತ್ಮಕದವರಾಪ ಸಂಸ್ಕೃತ ಕಾಲೇಜ್ ವಿದ್ಯಾರ್ಥಿಗಳಿಂದ ಅಭಿನಯಿಸಲ್ಪಟ್ಟವು.

ಬಡಗಬೆಟ್ಟು–ಸ್ಥಳೀಯ ಬೋರ್ಡು ಶಾಲೆಯ ಹೆತ್ತವರ ಕೂಟವು ಮಕ್ಕಳ ಹಬ್ಬದೊಂದಿಗೆ ಶ್ರೀ. ಬಿ. ಸದಾನಂದ ಪೈ ಗ್ಡೆಯವರ ಅಧ್ಯಕ್ಷತೆಯಲ್ಲಿ ತಾರೀಕು 24-2-45ರಲ್ಲಿ ಬಹಳ ವಿಜೃಂಭಣೆಯಿಂದ ನಡೆಯಿತು ಮಕ್ಕಳ ಚಟುವಟಿಕೆಗಳನ್ನು ನೋಡಲು ಗಣ್ಯಮಾನ ಅನೇಕ ಬಂಧುಭಗಿನಿಯರು ನೆರೆದಿದ್ದರು.

THE VIJAYA STORES, LTD.,
COONDAPUR, S. K.
Vijaya Commercial Cash Certificate
Rs. 100 per Certificate.
Rs 104 will be paid against the production of the Certificate after one year or earlier
Your money is safe.
Do not invest on property Jewels etc. They depreciate. But this will yield 4 ॰
ವಿಜಯಾ ಸ್ಟೋರ್ಸ್ ಲಿಮಿಟೆಡ್,
ಕುಂದಾಪುರ.
ವಿಜಯಾ ಕಮರ್ಶಿಯಲ್ ಸರ್ಟಿಫಿಕೇಟುಗಳು
ಒಂದಕ್ಕೆ ರೂಪ್ಯಾ **100-0-0** .
ಒಂದು ವರ್ಷ ಕಳೆದ ನಂತರ ರೂ. 104 –ಸಿಗುತ್ತದೆ. ಭೂಮಿ, ಭಂಗಾರಗಳಲ್ಲಿ ಹಾಕಿದ ಹಣದ ಬೆಲೆಯು ಇಳಿಯುತ್ತದೆ. ಈ ಸರ್ಟಿಫಿಕೇಟುಗಳು ಶೇ. 4ರಷ್ಟು ಬಡ್ಡಿ ಕೊಡುತ್ತವೆ
ಹಲವಾರು ಖರ್ಚಾದುವು —— ನೀವೂ ಪಡೆಯಿರಿ

ಬಾಡಿಗೆಗೆ ದೊರಕುತ್ತವೆ.
ಹೊಸ ಉಡುಪುಗಳು ಹೊಸ ಪರದೆಗಳು
ಹೊಸ ಇತರ ಉಪಕರಣಗಳು
ಶಾಲಾವಾರ್ಷಿಕ ಮತ್ತು ಎಮೆಚೂರ್ಸ್ ನಾಟಕ ಕಥಾಭಾಗದಲ್ಲಿ ಬರಬಹುದಾದ ವಿವಿಧ ಭೂಮಿಕೆಗಳಿಗನುಕೂಲವಾದ ಎಲ್ಲಾ ತರದ ಪರದೆ ಉಡುಪು ಸಹಿತ ಉಪಕರಣಗಳು ಬಹಳೇ ಕಡಿಮೆ ಬಾಡಿಗೆಗೆ ದೊರಕುತ್ತವೆ. ಅಗತ್ಯವಿದ್ದಲ್ಲಿ ಪೌಡರ್ ಕೆಲಸವನ್ನು ಸಹ ಮಾಡಿ ಸೋಣಾಗುವುದು. ಹೆಚ್ಚಿನ ವಿವರಕ್ಕೆ ಈ ಕೆಳಗಿನ ವಿಳಾಸಕ್ಕೆ ಎಂಟು ದಿವಸಗಳ ಮುಂಚಿತವಾಗಿ ಬರೆದುಕೊಳ್ಳುವುದು.
B Budan Basha Saheb,
P. V. I., B. H. E. Boys School, Barkur,
P. O. Barkur.

ಉಡುಪಿ ಮಧ್ವಮತ
ಶಿವಳ್ಳಿ ಬ್ರಾಹ್ಮಣರ
ಧರ್ಮ ಛತ್ರ
ಇದೇ ತಾ. **8–10–44**ರಿಂದ
ರಾಮೇಶ್ವರ ದೇವಸ್ಥಾನದ ಬಡಗು ಬೀದಿಯಲ್ಲಿ ತೆರೆಯಲ್ಪಟ್ಟಿದೆ.
ಎಲ್. ನರಸಿಂಗ ರಾವ್, ಪ್ರೊಪ್ರೈಟರ್.
ಉಡುಪಿ ಬೋರ್ಡಿಂಗ್ ಎಂಡ್ ಲಾಜಿಂಗ್, ಮಣಿಪುರ.

ಸೌ. ಭಾರತೀಬಾಯಿ ಪಣಿಯಾಡಿಯವರ ನಿಧನ

ಉಡುಪಿಯ ಸಮರ್ಥ ಯಾಗೂ ಕಾಂಗ್ರೆಸ್ ಕೆಲಸಗಾರರೂ,ಹೆಲವು ಉದ್ಯಮಗಳ ಸೂತ್ರಧಾರಿಗಳೂ ಆಗಿದ್ದ ಶ್ರೀ. ಎಸ್. ಯು. ಪಣಿಯಾಡಿಯವರ ಧರ್ಮಪತ್ನಿ ಶ್ರೀಮತಿ ಭಾರತೀ ಬಾಯಿಯವರು ಕ್ಷಯ ರೋಗಕ್ಕೆ ತುತ್ತಾಗಿ ಕಳೆದ ವಾರ ಆಕಾಲ ನಿಧನಹೊಂದಿದುದು ವಿಷಾದಕರವಿದೆ. ಶ್ರೀಮತಿಯವರು ಸತತ ಖಾದಿಧಾರಿಗಳಾಗಿದ್ದು, ಹಲವು ಕಛೇಗಳನ್ನು ಬರೆದು ಕನ್ನಡ ಸಾಹಿತ್ಯ ಸೇವೆಯನ್ನು ಮಾಡಿದ ಪೀರ ನಾರಿಯಾಗಿದ್ದರು. ಪತ್ನಿಯ ಅಗಲುವಿಕೆಯಿಂದುಂಟಾದ ಶ್ರೀ ಪಣಿಯಾಡಿಯವರ ಕೋಕದಲ್ಲಿ ಸಹಸಂತಾಪವನ್ನು ಸೂಚಿಸಿ ಶ್ರೀಮತಿಯವರ ಆತ್ಮಕ್ಕೆ ಚಿರಶಾಂತಿಯನ್ನು ಕೋರುವೆವು.

ದಿ ವಿಜಯ ಸ್ಟೋರ್ಸ್ ಲಿಮಿಟೆಡ್ ಕುಂದಾಪುರ–ಈ ಸಂಸ್ಥೆಯು ಈಗಾಗಲೇ ರಿಜಿಸ್ಟ್ರಿ ಮಾಡಲ್ಪಟ್ಟು ಜನಪ್ರತಿನಧಿಗಳನ್ನೊಳಗೊಂಡ ಬೋರ್ಡು ಸಂತೋಷದ ಸಂಗತಿಯಾಗಿದೆ. ಹಲವು ಕಂಪೆನಿಗಳನ್ನು ಸ್ಥಾಪಿಸಿ ಅವನ್ನು ಜಯಶೀಲವಾಗಿ ನಡೆಸಿಕೊಂಡು ಬರುತ್ತಿರುವ ಶ್ರೀ. ಮಂಗಳೂರು ಜಾರಪ್ಪನವರ ಅಧ್ಯಕ್ಷತೆಯಲ್ಲಿ ಡೈರೆಕ್ಟ್ರಾರ್ಸ್ ಕಂ.ಜರಾದ ಶ್ರೀ ಎ ಎಸ್ ನಿಲ್ಕಲ ಸೆಟ್ಟರ ಮೇನೇಜಂಗ್ ಡೈರೆಕ್ಟರ್ ಟಿಸಿಲಲ್ಲಿ ಮತ್ತು ಇತರ ನೈಮಾರ ಟಕುಂಬಾ ಡೈರೆಕ್ಟರ್ ಮಂಡಳಿಯ ಸಹಕಾರದಿಂದ ಈ ಕಂಪೆನಿಯು ದಿನೇ ದಿನೇ ಅಭಿವೃದ್ಧಿಗೊಳ್ಳುತ್ತಿರುವುದೆಂದು ತಿಳಿಬರುತ್ತದೆ. ಈ ಸಂಸ್ಥೆಯು 3 ಲಕ್ಷದ ಅಧಿಕೃತ ಮೂಲ ಧನಕ್ಕೆ ರಿಜಿಸ್ಟ್ರಿ ಮಾಡಲ್ಪಟ್ಟಿದ್ದರೂ ಪ್ರಸ್ತುತ ಸೆಂಟ್ರಲ್ ಗವರ್ನಮೆಂಟಿನಿಂದ ಬರೇ 50,000ಪ ಪಾಲುಗಳನ್ನು ವಿಕ್ರಯಿಸಲು ವಾಕ್ಯ ಆಯುವೇ ದೊರತರವಾಯಿದ ಪಾಲುಗಳು ಬಹು ರಭಸದಿಂದ ವಿಕ್ರಯವಾಗುತ್ತಿವೆ. ಇದರ ಡೈರೆಕ್ಟ್ರರಲ್ಲೊಬ್ಬರಾದ ಶ್ರೀ. ಆಜ್ರ ವಿಠಲ ಸೆಟ್ಟರು ಇತ್ತೀಚೆಗೆ ಪಾಲುಗಳ ಸಂಗ್ರಹಕ್ಕಾಗಿ ಬೊಂಬಾಯಿಗೆ ತೆರಳಿರುವರೆಂದು ತಿಳಿಬಂದಿದೆ. ಲಾಭದಾಯಕವಾಗಿ ನಡೆಸಲ್ಪಡಲಿರುವ ಈ ಸಂಸ್ಥೆಗೆ ಬೊಂಬಾಯಿ ಕನ್ನಡಿಗರು ತೆರುಗಳನ್ನು ಪಡಕೊಂಡು ಪ್ರೋತ್ಸಾಹಿಸುವರೆಂದು ನಿರೀಕ್ಷಿಸಲಾಗಿದೆ.

ತೆಕ್ಕಟ್ಟೆ–ಇಲ್ಲಿ ನಿ ಕಳೆದ ವರುಷ ತೆರೆದಿರುವ ಹ್ಯಾಯರ್ ಎಲಮೆಂಟರಿ ಶಾಲೆ ಬಗ್ಗೆ ನೋಡಹತ್ತು ಜನರು ಕನ್ನಡ-ತ್ತಿರುವ ಕಟ್ಟೋಡದ ಪೈಕಿ, [ಸಂವಾಸರ ರೂ. 800 ಎಚ್ಚನ ಒಂದು ಬ್ಲೋಕನ್ನು ಇದ್ದಿಯ ಗ್ರಾಮಾಭ್ಯುದಯ ಸಂಘದ ಕೈಸಡೆದು ಶ್ರೀ ರಾಮಚಂದ್ರ ಹಕ್ಕಾರ್ರ ಸನ್ಸ್ ಇವರೂ ರೂಪ್ಯಾ 800 ಪಿಚಿನ ಇನ್ನೊಂದು ಬ್ಲೋಕನ್ನು ಶ್ರೀಮಾಲಿ. ಮಂಕಟುಮಾಣ ಹಕ್ಕಾರ್ರ ಪುದರ್ಸ ಯನರವ ಕಟ್ಟಿಸಿ ಕೊಡಲು ಮುಂದೆ ಬಂದು ಮುಕ್ತಕ್ಕೆ

ಮೂಲ್ಕಿ–ರೆವೆನ್ಯೂ ಇನ್ಸ್‌ಪೆಕ್ಟರಾಗಿದ್ದ ಬಸವಾ ಬ ರಾಮ್ಮಾನವರು ಸ್ವತಕ್ಕೆ ಹಾಗೂ ಇನ ಸ್ಪೆಕ್ಟರ ತಾರ್ಯಗಳನ್ನು ಮನಗಂಡು ಅವರ ವಿರಾಮಕ್ಕೆಯಾಗಿ ಮೂಲ್ಕಿ ಬಿಲ್ಲವ ಸಮಾಜ ಸೇವಾ ಸಂಘವನ್ನು ತಾ. 13-2-45ರಲ್ಲು ಒಂದು ಸತ್ಕಾರ ಕೂಟವನ್ನು ಏರ್ಪಡಿಸಲಾಗಿತ್ತು. ಶ್ರೀಗಳಾದ ಯಂ. ಆರ್. ಪೂಂಜಾ ಕೆ. ವಿಠ್ಠಪ್ಪ ಎ. ಎ. ಎಲ್. ಬಿ ಯವರೂ ಶ್ರೀ. ಯ್ಯು. ಬಿ. ಅನಂತಯ್ಯನವರೂ, ಶ್ರೀ. ಯಂ. ಕೆ. ಎಲ್ಲಪ್ಪ ವಕೀಲ್ಕರೂ, ಮಂಜಿಲ್ಲ ಪೋಲೀಸ್ ಸಬ್ ಇನ್ಸ್‌ಪೆಕ್ಟರರೂ ಜನಾಬ್ ರಾ ಮ್ಮಾನವರ ಗುಣಕೀರ್ತನ ಮಾಡಿದರು.

ಕಟಪಾಡಿ–ಇಲ್ಲಿಯ ಕಲ್ಯಾಣಪುರ ಬಾಯ ನೀರಿನ್ನ ಯೋಜನೆಯನ್ನಲ್ಲಿ ಫೆಬ್ರವರಿ 26ನೇ ಸೋಮವಾರ ಸಂಜೆ ನೇಮಿಸಲು ಹೋಪೆ ಕೆಲವರು ಜಾಹಿರಾಯಲ್ಲೊಂದು ಮೆಸ್ಸ್ ಮಾಲಿ ಈಜಾಡುವವನ್ನು ಕಂಡು, ಮಲವ ರೆಯಿಟ್ಟಿಗೆ ಕಲ್ಲು ಹೊತ್ತುಹಾಕಿ ಕೊಂದಿರುವ ತಿಳಿವಾಬರುತ್ತಿದೆ ಕಾತ್ರಿ ಪೋಲೀಸಾಗಿ ಕುಯಾರ ಮೊರಬಿದ್ದ ಮಲಿಯು ಪ್ರಮೋದನ ರಾಜಾನಿಗೆವೆ ರವೆಯೆಂದುವರಿದಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಸುಗೆ ಜ್ಯಾರಿಯಾಗಿರುವ ಗಡಿಯೊಳಗಿರುವವರಿಗೆ ತಲಾ ಅರ್ಧ ಸೇರಿನಂತೆ ಅಕ್ಕಿ ಅಥವಾ ಗೋಧಿ ಕೊಡುವರೆ ಸರಕಾರವೊಪ್ಪಿದೆ.

ಈ ವರೆಗೆ ಕೊಡುತಿದ್ದುದು ರೇಷನ್ ಜ್ಯಾರಿಯಾಗಿರುವದು. ದೊಡ್ಡ ಪಟ್ಟಣಗಳಲ್ಲಿ ಮಾತ್ರ.

ದೊಡ್ಡ ಊರವರಿಗೆ ದೊಡ್ಡ ಉದರಗಳೂ ಇವೆ.

ಬೊಜ್ಜು ಹೊಟ್ಟೆಯವರು ಹಳ್ಳಿಗಳಲ್ಲಿರುವದು ಕಡಿಮೆ.

ಹೊಟ್ಟೆ ನೋಡಿ ಬಡಿಸಬೇಕು ತಾನೆ?

ಒಡಿಸುವವರ ಈ ನೀತಿಯಿಂದಾಗಿ ಪಟ್ಟಣಿಗರ ಹೊಟ್ಟೆ ತುಂಬಬಹುದು.

ಎರಡು ಸಾವಕ್ಕೆ ಇಪ್ಪೊತ್ತೈನೂಟಕ್ಕೆ ಸಾಕು.

ತಮ್ಮ ಹೊಟ್ಟೆಯೂ ಹಾಗೆ ತುಂಬುವ ದಿಕ್ಷುಪಲ್ಲ ಎಂದು ಹಳ್ಳಿಗರು ಮತ್ಸರ ಗೊಂಡಿದ್ದಾರೆ.

ಆ ಅಪರಾಧ ಅವರ ಹೊಟ್ಟೆಯದೇ.

ಆದ್ದರಿಂದ ಅವರು ತಮ್ಮ ಹೊಟ್ಟೆಯನ್ನು ಶಿಕ್ಷಿಸಬೇಕು. ಅನ್ನಕೋಶದ ಒತ್ತುವ ಶಕ್ತಿಯನ್ನು ಮರ್ದಿಸಿ ಉಬ್ಬುವ ಶಕ್ತಿಯನ್ನು ವರ್ಧಿಸಬೇಕು.

ಮೇಲೆ ಮಂಗಳೂರು ಉಡುಪಿ ನಟ್ಟಣಗಳ ನಾಗರಿಕರು ಮಾಡಿದಂತೆಯೇ

The

Vijaya Bank Ltd.,

Mangalore

NOTICE

To,

K. Narayana Hegde, S/o Athrady Venktayya Hegde, Land holder and Merchant, Residing at Kodu, Shirva Village. Post SHIRVA. S K

Please take notice, that in spite of the Allotment notice D/- 3-2-'43 and reminders and registered notices D 17-5-'43 and 23-9-'44, under the articles 27 and 28 of the Articles of Association, the latter of which were returned unserved, the arrears of allotment fee, interest and cost in respect of 2 shares of the Bank numbered 5953 and 5954 remain unpaid. If the same is not paid on or before 19-3-'45 the said shares will be forfeited without further notice to you, as per article 29 of the Articles of Association of our Bank.

particulars of amount due:-

Allotment fee	30-0-0
Interest from 30-4-'43 up to date @ 6¼ per annum	3-7-0
Cost of notices	1-3-6
Total Rs	34-10-6

and interest from this date till the date of payment is also due.

The payment may be made at the Head Office or at any of its Branches

B Mahabala Shetty,
Secretary

24-2-'45, Mangalore

ಬಿಡಿನುಡಿ

ಮದ್ರಾಸ್ ಸರಕಾರಕ್ಕೆ ಅರ್ಜಿ ಕಳುಹಿಸಬೇಕು.

ಆ ಅರ್ಜಿಯಲ್ಲಿ ಹಳ್ಳಿಗರ ದೊಡ್ಡ ದೊಡ್ಡ ಹೊಟ್ಟೆಗಳ ಭಾವಚಿತ್ರಗಳನ್ನೂ ಕಾಣಿಸಬೇಕು.

ಸರಕಾರೀ ಗೋಡೌನುಗಳಲ್ಲಿ ಸ್ಥಳಾವಕಾಶ ಕಡಿಮೆಯಾದ್ದರಿಂದ ಧಾನ್ಯಗಳು ಹಾಳಾಗುತ್ತಿವೆ.

ಪಟ್ಟಣಿಗರ ಹೊಟ್ಟೆಯಂತೆಯೇ ತಮ್ಮ ಹೊಟ್ಟೆಯೂ ವಿಶಾಲ ಸ್ಥಳವಿರುವ ಗೋಡೌನುಗಳೆಂಬುದನ್ನು ಹಳ್ಳಿಗರು ತೋರಿಸಿಕೊಡಲಿ.

ಸ್ವಲ್ಪಾಂಶ ಧಾನ್ಯವನ್ನು ಇಲ್ಲಿಯೂ ಸಂಗ್ರಹಿಸೋಣವೆಂದು ಅವರಿಗೂ ಕಾಲುಪಾವು ಹೆಚ್ಚಿಗೆ ಕೊಟ್ಟಾರು.

೦೦ ೦೦ ೦೦

ದ. ಕ. ಜಿಲ್ಲಾ ನಾಲ್ಕನೇ ಸಹಕಾರೀ ಸಮ್ಮೇಲನವು ಕಳೆದ ವಾರ ಮಂಗಳೂರಲ್ಲಿ ಜರಗಿತು.

ಕೆಲವು ಗುಟ್ಟಿನ ವಿಷಯಗಳನ್ನದು ಬಹಿರಂಗ ಸಡಿಸಿತು

1936 ಕೃಷಿಕರ ಭಂಡಸಾಲೆ ಸಂಘವೊಂದು ಸ್ಥಾಪಿಸಲ್ಪಟ್ಟು ಮಂಗಳೂರಲ್ಲಿ ಆದರದೊಂದು ಶಾಖೆಯಿತ್ತು.

ಅದು ಅಭಿವೃದ್ಧಿಗೊಳ್ಳತ್ತಾ ಒಮ್ಮಾಗ ಬೊಂಬಾಯಿಯ ಅಗ್ನಿ ಸ್ಫೋಟವಾಯಿತು.

ಇದರಿಂದ ಈ ಭಂಡಸಾಲೆಗೆ ೪ ಲಕ್ಷದ ಹಾನಿ ತಟ್ಟಿತು.

'ಪರಸ್ಪರ ಸಹಕಾರ' ತತ್ವಕ್ಕೆ 'ಪರಸ್ಪರ ಸಂಹಾರ'ಕ್ಕೂ ಅನ್ವಯಿಸುತ್ತದೆ ಎಂಬುದಕ್ಕೆ ನಿದರ್ಶನ— ಬೊಂಬಾಯಿ ಬೆಂಕಿ ಮಂಗಳೂರಿನ ಭಂಡಸಾಲೆಗೆ ಮಾಡಿದ ಹಾನಿ

ಬೊಂಬಾಯಿ ಸ್ಫೋಟದ ವಿಚಾರಣಾ ಸಮಿತಿಯ ಅವಗಾಹನೆಗೆ ಇದನ್ನು ತರಲಾಗಿತ್ತೆ?

ಆ ಮೂಲಕ ನಷ್ಟ ಪರಿಹಾರವನ್ನು ಪಡೆಯಲಾಯಿತೆ?

ಪ್ರಾಯಶಃ ಇಲ್ಲ.

ಬೆಂಕಿಗದ್ದಷ್ಟು ಪರಸ್ಪರ ಸಹಕಾರ ಬುದ್ಧಿ ಸರಕಾರಕ್ಕಿಲ್ಲ

ಆದ್ದರಿಂದ ಸಹಕಾರೀ ಸಂಘಗಳು ಸಾರ್ವಜನಿಕರಂತೆಯೇ ಸರಕ್ಕಾರಕ್ಕೂ ತಮ್ಮ ತತ್ವ ಬೋಧೆ ಕೊಡಬೇಕು.

'ನಾವೂ ಯುದ್ಧ ಕಾರ್ಯದಲ್ಲಿ ಸಹಕರಿಸಲಾಗುವಂತೆ ಸ್ವಾತಂತ್ರ್ಯದಾನ ಮಾಡಿ' ಎಂದು ಬೇಡುತ್ತಿರುವ ಬೇರೆ ಸಹಕಾರಿಗಳೂ ಇದ್ದಾರೆ.

ಸಹಕಾರೀ ಸಂಘಗಳಿಗೆ ಅಂಧವರ ಧನ್ಯವಾದಗಳೂ ಬರಬಹುದು.

ಹಿಂದೀ ರಾಜಕೀಯ ಬಿಕ್ಕಟ್ಟನ್ನು ಬಿಡಿಸಿದ ಪುಣ್ಯವೂ ಬರಬಹುದು.

೦೦ ೦೦ ೦೦

"ಸದ್ಯದ ವಿತ್ತೀಯಾನುಕೂಲತೆಗಳನ್ನೇ ನಂಬಿಕೊಂಡು ಸಹಕಾರೀ ಸಂಘಗಳು ತಮ್ಮ ನಿತ್ಯ ಕರ್ತವ್ಯಗಳನ್ನು ಲೋಪಗೊಳಿಸಿದರೆ ಈಗಿನ ಪರಿಸ್ಥಿತಿ ಕಳೆದ ಮೇಲೆ ನಮ್ಮ ಸಂಸ್ಥೆ ಹಿನ್ನೆಲೆಗೆ ಹೋಗಬೇಕಾದೀತು'— ಸಹಕಾರಿ ಸಮ್ಮೇಲನಾಧ್ಯಕ್ಷ ಶ್ರೀ ಟಿ. ಎ. ರಾಮಲಿಂಗಂ ಚೆಟ್ಟಿಯಾರ್ ಎಚ್ಚರಿಕೆ.

ಕೆಲವು ಸ್ಫೋಟಿಗಳ ವಿಜಯಂಟರು ಈ ಜೋಧೆಗೆ ಅಗತ್ಯ ಕವಿಕೊಡಬೇಕು.

ಅವರಂಗ ವಿತ್ತೀಯಾನುಕೂಲತೆಗನುಗುಣವಾದ ವಿಶೇಷಾಚರಣೆ ಕೈಗೊಂಡಿದ್ದಾರೆ ಎಂಬ ವಾರ್ತೆಯಿದೆ.

ತಮ್ಮ 'ನಿತ್ಯಕರ್ಮವಾದ ಸಹಕಾರ, ಸೌಹಾರ್ದ್ರತೆಗಳನ್ನು ಲೋಪಮಾಡಿಕೊಂಡಿದ್ದಾರೆ' ಎಂಬ ದೂರಿದೆ

ಜೇಷ್ಟಗಾರರ ಮಾತಲ್ಲ, ಚಿಟ್ಟಿಯಾರರ ಮಾತು—'ಹೀಗೆ ಮಾಡಿದರೆ ಹಿನ್ನೆಲೆಗೆ ಹೋಗಬೇಕಾದೀತು!'

೦೦ ೦೦ ೦೦

ಮಂಗಳೂರು ಟೌನಿನ ಮಟ್ಟಿಗೆ ಗೋಧಿ ಬೀಸಿಕೊಡುವ ಚಾರ್ಜನ್ನು ಜಿಲ್ಲಾ ಕಲೆಕ್ಟರು ನಿಯಂತ್ರಿಸಿದ್ದಾರೆ.

ಸೇರಿಗೆ 0—0—8ಪೈ ದರ.

ಜಿಲ್ಲೆಯ ಬೇರೆ ಕಡೆಗಳಲ್ಲಿ ಒಂದು ಸೇರು ಗೋದಿಯನ್ನು ಹಿಟ್ಟು ಮಾಡಿಕೊಟ್ಟರೆ ಒಂದಾಣೆ ಅಥವಾ ಹೆಚ್ಚಿಗೆ ಪಡೆಯುವದೂ ಇದೆಯಂತೆ.

ಈ ಕಡೆಯವರೆಲ್ಲಾ ಗೋಧಿ ಹಿಡಿದುಕೊಂಡು ಮಂಗಳೂರಿಗೆ ಹೊರಡೋಣವೇ ಎಂಬ ಯೋಚನೆಯಲ್ಲಡ್ಡಾಡ್ತಾರೆ

ಉಳಿಯುವ ಮುನಾಫೆಯೆಷ್ಟು, ಮಂಗಳೂರು ಪ್ರಯಾಣಕ್ಕಾಗುವ ವೆಚ್ಚವೆಷ್ಟು ಎಂಬ ಅಂದಾಜು ಪಟ್ಟಿತಯಾರಿಯಲ್ಲಿದ್ದಾರೆ.

ಇವರೆಲ್ಲಾ ಅಲ್ಲಿಗೆ ಹೊರಡುವದಕ್ಕೆಂತಲೂ ಕಲೆಕ್ಟರರ ಆ ನಿಯಂತ್ರಣಾಜ್ಞೆಯೇ ಇಲ್ಲಿಗೂ ಹೊರಡುವದು ಸುಲಭ.

ಹೊರಡಬಹುದೆ?

೦೦ ೦೦ ೦೦

ದ. ಕ. ಜಿಲ್ಲೆಯ ಆತ್ಯಾಧುನಿಕ ಗಾದೆ:—'ಬೇಸಾಯಗಾರರಿಗೆ ಹುಲ ಕಾಟ, ವೇಟೆಯವರಿಗೆ ಇಲಿ ಕಾಲ!

ಹುಲಿಗಳನ್ನು ಬೇಟೆಯಾಡಲಾಗುವಂತೆ ಅಧಿಕಾರಾಧಿಕಾರಿಗಳಿಗೆ ಕೋವಿ ಲೈಸನ್ಸುಗಳನ್ನು ಸರಕಾರವು ಕೊಡುತ್ತಿದೆ

ಮಂಗಳೂರಲ್ಲಿ ಪ್ಲೇಗಿನ ಇಲಿಗಳು ಬೇಳುತ್ತಿವೆ.

ಅಲ್ಲಿ ಇಲಿಗಳ ಬೇಟೆಯೂ ನಡೆದಿದೆ.

ಈ ತನಕ ಇವೆರಡರಲ್ಲಾವುದನ್ನೂ ಪೂರ್ಣ ಸೋಲಿಸಲಾಗಲಿಲ್ಲ.

ನಮ್ಮ ಪಾಲಿಗೆ ಜರ್ಮನ್, ಜಾಪಾನ ರಂತಾಗಿವೆ ಹುಲಿಇಲಿಗಳು.

ವಿಜಯ ಖಂಡಿತ; ಆದರೆ ದೀರ್ಘವಧಿ ಹೋರಾಡಬೇಕಾದೀತು.

ಈ ಕಾಲದಲ್ಲಿ ಹೋರಾಟಕ್ಕಿರುವಷ್ಟು ಆಯುಷ್ಯ ಒಲ ಜೇರಾವುದಕ್ಕೂ ಇಲ್ಲ.

ಹೋರಾಡಿ ಸಾಯಬೇಕು ಒಂತು ಹೋರಾಟ ಸಾಯುವಂತಿಲ್ಲ.

ಕಾಲ ಮಹಿಮೆ!

ಬೀದಿವಾಲ

Sri Narayan Guru Bank, Ltd.,

(Incorporated in British India, Liability of Members Limited)

Consent of the central government was obtained to the issue of Capital.

The shares have been oversubscribed, hence no further shares of the Bank are available.

Our 1945 Fixed Deposit Drive has just commenced. Several officers of the Bank have been deputed to approach investors. They have been authorised to offer attaractive rates of interest, probably a little better than our usual rates. Please take advantage of the offers. If our Representatives do not come to you, please enquire at our following offices:—

HAMPANKATTA, MANGALORE.

Branch at **Coimbatore.**

Branch at **Udipi.**

Branch at **Coondapoor.**

Partake in our expansion scheme. Repose confidence in a Bank of your place conducted by able men. Await our announcement increasing the Authorised Capital to **Rs. 1,00,00,000** (A Crore)

You will shortly read the names of our Directors of all India fame

M. A. Suvarna Esq., B.A. LL., B. Advocate
Organising Superintendent.

Mangalore Jarappa,
President & Managing Director

B. Narsappa,
Estate Superintendent.

B. Madhava Suvarna
Office Manager.

James Rodrigues, Esq.,
Organiser.

NOTICE

ಉಡುಪಿ ಡಿ. ಮುನ್ಸಿಫ್ ಕೋರ್ಟಿನಲ್ಲಿ

O. P No. 8/1945

ಕೆ. ನರಸಿಂಹ ಭಟ್ಟ ಕೂಡಾ ಅರ್ಜಿದಾರರು

ಸದ್ರಿ ಅರ್ಜಿಯು 1ರಂದ 3ನೆ ವರೆಗಿನ ಅರ್ಜಿದಾರನ ತಂದೆ ಪ 4ನೆ ಅರ್ಜಿದಾರಳ ಗಂಡ ಸ್ವರ್ಗತಪಟ್ಟ ಕೆ. ರಾಮಕೃಷ್ಣಾರಾಯಣ ಭಟ್ಟ ಜಾಪ್ತಿ ಸಸ್ಪೆಕ್ಟ್ ಯಿಲ್ಲಾರೆನ್ಸ್ ಕಂಪನಿಯು ನಂಬ್ರ 3045485 ನೆ 3143225 ಮತ್ತು ಡಿಮಿಸಿಲರ್ ಜನರಲ್ ಮಿನಾತೂರೆನ್ಸ್ ಕಂಪನಿಯು ನಂಬ್ರ 16454ನೇ ಪೋಲಿಸಿಗಳ ಪ್ರಕಾರ ಬರಕ್ಕೆ ಆ್ಯವೇಜನ್ನು ವಸೂಲುಮಾಡುವ ಸಲುವಾಗಿ ಪ್ರತಿವಾದಿಗಳಾದ 1ನೆ ಅರ್ಜಿದಾರನಿಗೆ ಪಾರಿಸು ಸರ್ಟಿಫಿಕೇಟು ಕೊಡಿಸಬೇಕಾಗಿ ಪ್ರಸ್ತೆಪ ನಾಕ್ಲುಮಾಡಿದ ಮೇಲ್ಕಂಡ ಅರ್ಜಿಯು ತಾ 6-3-1945ಕ್ಕೆ ತಪ್ಪದೆ ಬರ್ಪ ಯಿಟ್ಟಿರುವುದರಿಂದಲೂ ಆಕ್ಷೇಪ ಉಳ್ಳವರು ಸದ್ರಿ ದಿವಸ ಬೆಳಿಗ್ಗೆ 11 ಗಂಟೆಗೆ ಕೋರ್ಟಿಗೆ ಮುಂದೆ ಹಾಜ್ರಾಗಿ ಯಾ ವಕೀಲರ ಮುಖಾಂತ್ರ ಜ್ಯಾಹೀರು ಮಾಡಿಕೊಳ್ಳತಕ್ಕದೆಂತಲೂ ಯಿ ಮೂಲಕ ತಿಳಿಸೋಣಾಗುತ್ತದೆ

K. Gururaja Rao,
Counsel for Petitioners

ತಾ 22-2-1945, ಉಡುಪಿ.

ಮನೋಬಲವೇ ಮಹಾಬಲ

ತನೇ ಪುಟದಿಂದ

ಧುರೀಣರು ಇಂತಹ ಆಸಕ್ತಿಯನ್ನು ಪ್ರದರ್ಶಿಸುತ್ತಾರೆ. ಒಮ್ಮೆ ಈ ಯುದ್ಧಾವಧಿಯಲ್ಲಿ ಸಮುದ್ರ ಮೇಲ್ಪಡೆಯ ವಿಮಾನದಲ್ಲಿ ಬ್ರಿಟಿಷರ ವಿದೇಶ ಮಂತ್ರಿ ಮಿ. ಅಂತೋನಿ ಈಡೆನರು ಕಾರ್ಯಾರ್ಥವಾಗಿ ಸಾಗಿದ್ದರು. ವಿಮಾನ ಹಾಳಾಯಿತು; ಸಮೀಪದ ಸ್ಥಳಕ್ಕೆ ಸಾರಥಿ ಹಿಂದಿರುಗಿಸುವ ಆಲೋಚನೆ ಮಾಡಿದ. 'ಬೇಡ; ಓಡಿಸಿ ಬಿಡು' ಎಂದರು ಮಿ ಈಡೆನ್. ಅಜ್ಞೋಲ್ಲಂಘನೆಮಾಡಲಾರದೆ ಸಾರಥಿ ಓಡಿಸಿಯೇ ಬಿಟ್ಟ. ಧೈರ್ಯವೇ ಯಂತ್ರವೆಂಬಂತೆ ವಿಮಾನ ಗುರಿ ಮುಟ್ಟಿತು. ಮೇಡಮ್ ಚಿಯಾಂಗರೊಮ್ಮೆ ಅಮೇರಿಕ ಪ್ರವಾಸದಿಂದ ಚೀನಕ್ಕೆ ಹಿಂದಿರುಗುತ್ತಿದ್ದರು. ಅವರ ಸಾರಥಿಗೆ ನಕಾಶೆಯ ಪರಿಚಯ ಮುರನೆಯಾಗಿ ವಿಮಾನವನ್ನು ಬರ್ಮಾಗಡಿಯೊಳಕ್ಕೇನೇ ಬಿಟ್ಟ. ಬರ್ಮದಲ್ಲಿರುವದು ಮೇಡಮರು ಸಿಕ್ಕಿದರೆ ಗೂಡಿನಲ್ಲಿ ಸೇರಿಸುವ ಜಾಪಾನರೇ. ಸ್ವಲ್ಪ ದೂರಕ್ಕೆ ಬಂದ ಕೂಡಲೇ ಮೇಡಮರು ಸಾರಥಿಯನ್ನೆಚ್ಚರಿಸಿದರು. ಆ ಮೊದಲೇ ಜಾಪಾನರ ಕಣ್ಣು ತೆರೆಯಿಸುವವರಿರಲಿಲ್ಲವಾದ್ದರಿಂದ ವಿಮಾನವನ್ನು ತಿರುಗಿಸಿ ಸರಿದಾರಿಗೆ ತರಲು ಸಾರಥಿಗೆ ಸಾಧ್ಯವಾಯಿತು. ಮನವುಳಿಸಿಕೊಳ್ಳುವದು ಪ್ರಾಣವುಳಿಸಿಕೊಳ್ಳುವದಕ್ಕಿಂತಲೂ ಕಷ್ಟ. ಪ್ರಾಣಾಪತ್ತು ಬಂದಾಗ ಮೇಡಮರಂತೆ ಪಾರಾಗುವದನ್ನು ತಿಳಿದಿರಬೇಕು; ಪ್ರಲಾಪಿಸುವದನ್ನು ಕಲಿತಿರಾಗದು.

ಜುಲಾಯಿ ೧೯೦೮ನ್ನಿ ಸಭಾಭವನದಲ್ಲೇ ಹಿಟ್ಲರನ ತೀರಾ ಸಮೂಪಕ್ಕೆ ಬೋಂಬು ಬಿತ್ತು. ಬೋಂಬು ಶಬ್ದದ ಜೆನ್ನಲ್ಲೇ ಹಿಟ್ಲರನ ಘರ್ಜನೆ ಕೇಳಬಂತು. 'ದೇವರು ತನ್ನ ಕಾರ್ಯವಾದ ಜರ್ಮನಿಯ ಉದ್ಧಾರಕ್ಕಾಗಿಯೇ ನನ್ನನ್ನು ಉಳಿಸಿದ್ದಾನೆ'– ಈ ಮಾತಿಗೆ 'ಇದು ನಿಜ' ಎಂದು ಎಲ್ಲಾ ಜರ್ಮನರ ಹೃದಯವೂ ಧ್ವನಿಗೊಟ್ಟರಬೇಕು. ಸಂದರ್ಭವಂತಹದು ಹಿಟ್ಲರನು ಎದೆ ಕಳಕೊಳ್ಳಲೂ ಸಾಧ್ಯ–ಇನ್ನುಡಿ ಧೈರ್ಯ ಹೊಂದುವದಕ್ಕೂ ಅನುಕೂಲವೆಂಬಂತಿದ್ದ ಸಂದರ್ಭವದು. ಇದುವೆ ನುಗ್ಗಲು ಎಡೆಯಿಲ್ಲವೆಂಬಷ್ಟು ಭದ್ರವಾಗಿ ಹಿಟ್ಲರನ ಗೃಹಕೋಟೆಯಿದೆ, ಎಂದು ಲೋಕವೇ ಭಾವಿಸಿದ್ದಿತು; ಅಂತಹ ಜಗತ್ತು ದಂಗುಪಡುವಷ್ಟು ದೊಡ್ಡ ಬಿರುಕು ಫಕ್ಕನೇ ಆ ಕೋಟೆಯಲ್ಲಿ ಗೋಚರಿಸಿದೆ. ಅದೂ ತಾನ್ಪ್ರಜರನೆರಿಗೆ ಅಪಜಯವನ್ನು ಉಣ್ಣಿಸುತಿದ್ದ ಪುಷ್ಯಾಬಲದಲ್ಲೇ! ಹಿಟ್ಲರನು ಎದೆಗೆಡಬಾರದಿತ್ತೆ? ಆದರೆ ಆವ ಆ ದುರ್ಘಟನೆಯನ್ನು–ತನ್ನ ದೌರ್ಬಲ್ಯದ ಪರಿಣಾಮವಾಗಿ ತನ್ನ ಮೇಲಾದ ಆಕ್ರಮಣವನ್ನೇ–ತನ್ನ ಅನುಕೂಲಕ್ಕಾಗಿ ಉಪಯೋಗಿಸಿಕೊಂಡ. 'ಫುರರ್ ದೇವ' ಎಂದು ಜರ್ಮನರು ಭಕ್ತಿಯಿಂದಲೂ 'ಇವನ ತಿದ್ದಪ್ಪ ಒಳ್ಳೆಯದಿರಬಹುದೆ!' ಎಂದು ವಿರುದ್ಧ ಪಕ್ಷೀಯರು ಭಯದಿಂದಲೂ ತನ್ನನ್ನು ಕಾಣುವಂತೆ ಮಾಡಿದ. ಇದೀಗ ಆತ್ಮಬಲ ಮತ್ತು ಪ್ರಸಂಗಾವಧಾನತೆ.

ಸಾಮಾನ್ಯ ನಿದರ್ಶನಗಳು

'ಇಡೀ ಜನ್ಮದಲ್ಲಿ ಏನೇ ಮಾಡಿದರೂ ಮರಣ ಕಾಲದಲ್ಲಿ ದೇವಧ್ಯಾನ ಮಾಡಿದವರು ಸದ್ಗತಿ ಸೇರುತ್ತಾರೆ' ಎಂದು ನಮ್ಮಲ್ಲಿಯ ಪರಲೋಕ ಭಕ್ತರ ಭಾವನೆಯಿದೆ. ಈ ಮಾತನ್ನು ನಾಸ್ತಿಕನು ಕೂಡಾ ಒಪ್ಪುವೇಕು. ಯಾತಕಂದರೆ ಇಡಿಯ ಜನ್ಮದಲ್ಲಿ ಏನೇನೋ ಮಾಡುತ್ತಾ ಬಂದ ಒಬ್ಬ ಮನುಷ್ಯನು ಮರಣಕಾಲದಲ್ಲಿ ಹೆತ್ತು ಸಲವನ್ನು ಹಂಬಲಿಸಿಯಾನು, ಹೊರತು ಮನಸ್ಸನ್ನು ಸಕ್ಕನೇ ಮೇಲಕ್ಕೆತ್ತಿ ದೇವಸ್ಮರಣೆಮಾಡುವಷ್ಟು ಸ್ಥಿರಮುದ್ಧಿಯುಂಟಾಗಲಾರದು. ಆಂತಹ ಶಕ್ತಿಯು ಅವಸ್ಥಿಲದೆಯಾವರೆ, ಅದರ ಬಲದಿಂದಲೇ ತನ್ನ ಗತಿ ಪರಿಪಡೆಯಬಹುದು ಎಂಬುದು ಖಂಡಿತ. ಆದರೆ ನೆಪೋಲಿಯನನಂತೆ ಅಕಸ್ಮಾತ್ ಗಾಯ ಹಾರುವಾಗ ಕೈಯ ಜಡಿತ ತಪ್ಪಿಯಲುಗಾಡದವರಾಗಲೀ, ಗೋರಾ ಕುಂಬಾರನಂತೆ ಭಜನೆಯಲ್ಲಿ ತಲ್ಲೀನತೆ ಮಾಂದಿ ಮಗುವನ್ನು ತುಳಿದು ಕೊಲ್ಲುವವರಾಗಲೀ ಇರುವದು ಕಷ್ಟ. ಅಂತರ್ಜಾಗೃತಿ, ಸಾವಧಾನತೆ ಇರುವವರೇ ಜೀವನದ; ಅವರದೇ ದೇವಲೋಕ. ಆತ್ಮಬಲದ ಅಭಿವೃದ್ಧಿಯಾಗಿ ವಿನಮ್ರತೆ-ಅಂತಃಶುದ್ಧಿ ಹೊಂದಿದವರಿಬ್ಬರಿರಲಿ. ಸೈರೀನೇಸಿಯ ಉಂಗುರದ ಸಡಿಲು ಜಾರಿ ಬಿಡಿಸಿಕೊಂಡು ಒರುವ ಯೋಧತನ್ಮಯಿಗಳ ಸರ್ವತೋಮುಖ ಸರ್ವೋನ್ನತಿಯನ್ನು ವಿಕಾಸಕೆಯಾಗಿ ಇಮಿರಿಸುವ ನ್ಯಾಯನಿಷ್ಠ ಶುದ್ಧ ಸಾಂಸ್ಕೃತಿಯಾಪಾರ ನಡುವೆ ಅಸ್ಪರ್ಶತೆ ನಿವಾರಣೆ. ಸಿಧಿವ ಬಿಳಾಸ ಪಂತಹವುಗಳನ್ನು ತಾರುವ ಸುಧಾರಕ-ಮೂಗಿನನಕ ನಾಲಿಗೆಲ್ಲ ಮುಂಬಿದ್ದರೂ ತೇಜಸ್ವೀ ಮುಮುಕ್ಷುವೆಯಂದಿರಬಲ್ಲ ನಲಿಪ್ಪ-ಇವೆಲ್ಲ ಆತ್ಮಬಲವನ್ನೇ ಅವಲಂಬಿಸಿವೆ. ತಮ್ಮ ಮರಣ ದಿನತನಯ ತೀರ್ಪನ್ನೇ ಪುವ. [illegible] ಇಜಿಪ್ತಿನ ನೈಸೆಕೊಲಿಯ ಆಸ್ಥಾನಿತರ ಮಾತೆಕೇಳಿದ್ದೇನೆ ತಮಗೆ ಅಂತರಿಯವಮಗಳ ಪತ್ರಿಯ ತೀರ್ಪನ್ನು ಶರಪಡಗಳ ತೀಕ್ಷ್ಣ ಗಂಧಿಗಳು ಕೊಟ್ಟ ತೇಜಸ್ವಿ ಮೇಳಿಕೆಯನ್ನೊಂದಿದ್ದೇನೆ. ಆತ್ಮ ತ್ರಿಕರಣಗಳಗಳನ್ನೂ ಸರಿಪಡಿಸಿರುವ ಚರಿತ್ರಪೂರ್ವಯುವ ಕಾರ್ಯ. ಇತ್ತ ಮೆದುಳು, ಹೃದಯಮೆಂದನ್ನೂ ಕೇಂದ್ರೀಕರಿಸಬೇಕಾದ ತ್ರಿಮೂರ್ತಿ ಸಮ್ಮೇಲನದ ಯೋಚನೆ ಈ ಕರ್ತವ್ಯ ನಡುವೆ ಸಿಕ್ಕಿಕೊಂಡಂತೆಯೇ ಮಾರ್ಕಲ್ ಎಂಬಲಿನರು ಮೂರನೇ ಬಾರಿ ಮದುಮಗನಾದ ವಾರ್ತೆ ಬಂದಿದೆ. ಇವರೆಲ್ಲಾ ಈ ಮಾದರಿಯ ಆತ್ಮವೀರರು.

೦೦ ೦೦ ೦೦

ಸಾರಾಂಶವಿಷ್ಟೆ ಮನಸಿದ್ದಿಂತೆ ಮನುಷ್ಯ. ಮನವಭೇದ್ಯವಾಗಿದ್ದರೆ ಮನುಷ್ಯ ಅಜೇಯ; ಮನವಳುಕುತಿದ್ದಂ ಅವ ಅಲ್ಪ

ಪ್ರಕಟನೆ
ಶಿರ್ವಾ ಪಂಚಾಯ್ತ್ ಬೋರ್ಡು ಪ್ರೆಸಿಡೆಂಟರಿಂದ
ನೋಟೀಸು

ಶಿರ್ವಾ ಪಂಚಾಯ್ತ್ ಬೋರ್ಡಿಗೆ ಒಳಪಟ್ಟ ಶಿರ್ವ ಮಂಜಕಲ್ಲು ಸಂತೆ ಮಾರ್ಕೆಟು ಮತ್ತು ದಿನಚರಿ ಮಾರ್ಕೆಟುಗಳಲ್ಲಿ 1945ನೇ ಯಿಸ್ವಿ ಎಪ್ರೀಲ್ ತಿಂಗಳ ತಾರೀಕು 1ರಿಂದ 1946ನೇ ಯಿಸ್ವಿ ಮಾರ್ಚ್ 31ರ ವರೇಗೆ ಒಂದು ವರ್ಷದಲ್ಲಿ ಸುಂ ವಸೂಲುಮಾಡುವ ಸ್ವತಂತ್ರವನ್ನು ಪ್ರತ್ಯೇಕಪ್ರತ್ಯೇಕವಾಗಿ ಇದೇ ಬಾವ ಮಾರ್ಚಿ ತಿಂಗಳ ತಾರೀಕು 28ನೇ ಬುಧವಾರ ದಿನ ಸಾಯಂಕಾಲ ಗಂಟೆ 5ಕ್ಕೆ ಪಂಚಾಯ್ತ್ ಬೋರ್ಡು ಆಫೀಸಿನಲ್ಲಿ ಬಹಿರಂಗವಾಗಿ ಏಲಂ ನಡಾಯಿಸಲಾಗಬಹುದು. ಏಲಂ ಶರತ್ತು ಪಂಚಾಯ್ತ್ ಬೋರ್ಡಿನ ಬಹಿರಂಗ ಪ್ರಕಟಣಾದಿಗಳನ್ನು ನೋಡಿ ತಿಳಿಯಬಹುದು.

(Sd.) A. Annaya Heyde,
President, Panchayat Bd. office
Shirva 24---2---45

ಪದಾರ್ಥಗಳ ಬೆಲೆಗಳು
ಇಳಿಯುತ್ತಲೇ ಇವೆ.
ಕೊಳ್ಳುವ ಅತುರದಲ್ಲಿ
ಮೋಸಹೋಗಬೇಡಿ

ಕಳೆದ ವರ್ಷದ ನವದಲಿಕೆಗಳು, ಸರಕುಗಳು, ಸ್ಪಿರಿಟ್ಸ್, ಚೆರಸ್ಪತ್ತು ಮುಂತಾದ ವಸ್ತುಗಳ ಮೇಲೆ ಹಾಕಿದ ಬಂಡವಾಳವು ಬಹಳ ನಷ್ಟಕ್ಕೆ ಈಡಾಗಬೇಕೆಂಬುದನ್ನು ಸ್ಪಷ್ಟವಾಗಿ, ಸ್ಥಾಪಿಸುತ್ತವೆ. ಹೇಗೆಂದರೆ, ಬೆಲೆಗಳು ಕಡಿಮೆಯಾದುದರಿಂದ, ಆ ಪದಾರ್ಥಗಳಮೇಲೆ ಹಾಕಿದ ಬಂಡವಾಳವು ನಮ್ಮ ಕಣ್ಣಿಗೆ ಕಾಣುವಹಾಗೆ ಸಂಕುಚಿತವಾಗಿರುತ್ತದೆ!

ಸುರಕ್ಷಿತವಾದ ಮಾರ್ಗದಲ್ಲಿ ಧನವನ್ನು ವಿನಿಯೋಗಿಸಿದವರು ನಿಜವಾಗಿಯೂ ಸೌಭಾಗ್ಯವಂತರೇ ಸರಿ. ಅವರ ಶ್ರಮಾರ್ಜಿತವಾದ ಬಂಡವಾಳವು ವೃದ್ಧಿಯನ್ನು ಹೊಂದಿರುತ್ತದೆ. ಅವರು ವಿವೇಕದಿಂದ ವಿನಿಯೋಗಿಸಿದ ಹಣಕ್ಕೆ ಬೆಲೆಯು ಹೆಚ್ಚಿದೆ. ಇವರ ಜೊತೆಗೆ, ಗಾರ್ನರ್‌ಮೆಂಟ್ ನವರು ಜಲಾವನೆಗೆ ತಂದಿರುವ, ಬೆಲೆಗಳನ್ನು ಹತೋಟಿಗೆ ತೆಗೆದುಕೊಳ್ಳುವ ಕಾನೂನುಗಳು ಮತ್ತು ಪದಾರ್ಥಗಳ ತಯಾರಿಗೆ ಸರ್ಕಾರದವರು ಕೊಡುತ್ತಿರುವ ಉತ್ತೇಜನ, ಇವುಗಳ ಸಹಾಯವೂ ಸೇರಿ, ಅಪ್ರಮಾಣೀಕ ವ್ಯಾಪಾರಿಗಳು, ಸರಕುಗಳನ್ನು ಬಚ್ಚಿಟ್ಟು, ಅವುಗಳ ಬೆಲೆಯನ್ನು ಮಿತಿಮೀರಿ ಹೆಚ್ಚಿಸಬೇಕೆಂದು ಮಾಡುತ್ತಿರುವ ಪ್ರಯತ್ನಗಳನ್ನು ನೋಲಿಸುತ್ತಿವೆ. ಇವರುಗಳು ತಮಗೆ ಮಾತ್ರವೇ ಅಲ್ಲ, ಇಡೀ ಭರತಖಂಡಕ್ಕೇನೆ ಮಹಪಚಕಾರವನ್ನು ಮಾಡಿರುತ್ತಾರೆ.

ಈ ಸತ್ಕಾರ್ಯವನ್ನು ಬಿಡದೇ ಮಾಡುತ್ತಿರಿ. ಬೆಲೆಗಳು ಇನ್ನೂ ಇಳಿಯುತ್ತಲೇ ಇರುವುದಲ್ಲದೆ, ಜನಗಳು ಎಲ್ಲಿಯವರಿಗೆ ಮಿತವ್ಯಯವನ್ನು ಮಾಡಿ ಹಣವನ್ನು ಉಳಿಸುವರೋ ಅಲ್ಲಿಯವರಿಗೆ, ಇಳಿಯುತ್ತಲೇ ಹೋಗುವುದು. ಈಗ ಆಸ್ಪೇಕರ ಅನುಭವಕ್ಕೆ ಬಂದಿರುವಂತೆ, ಹಣವನ್ನು ಈಕೆಳಗೆ ನಮೂದಿಸುವ ಮಾರ್ಗಗಳಲ್ಲಿ ವಿನಿಯೋಗಿಸುವುದೇ ಶ್ರೇಯಸ್ಕರವು. ಈ ಮಾರ್ಗಗಳಲ್ಲಿ ಪ್ರತಿಯೊಂದೂ, ಸಂಪೂರ್ಣ ಭದ್ರತೆ ಉಳ್ಳದ್ದಾಗಿರುತ್ತದೆ. ಅವುಗಳು ಯಾವವೆಂದರೆ. — ಕೋ ಆಪರೇಟಿವ್ ಸಂಸ್ಥೆಗಳು, ಇನ್ಷೂರೆನ್ಸ್ (ಏನು), ಸೇವಿಂಗ್ಸ್ ಬ್ಯಾಂಕುಗಳಲ್ಲಿ ಖಾತೆ ತೆರೆಯುವುದು, ಗಾರ್ನರ್‌ಮೆಂಟ್ ಲೋನುಗಳು, ನ್ಯಾಷನಲ್ ಸೇವಿಂಗ್ಸ್ ಸರ್ಟಿಫಿಕೇಟುಗಳು, ಪೋಸ್ಟಾಫೀಸ್ ಸೇವಿಂಗ್ಸ್ ಬ್ಯಾಂಕುಗಳು

ಹಣವನ್ನು ಕೈಲಾದ ಮಟ್ಟಿಗೂ
ಉಳಿಸಿರಿ
ಉಳಿಸಿದ್ದನ್ನು ವಿವೇಕಮಾರ್ಗಗಳಲ್ಲಿ ವಿನಿಯೋಗಿಸಿರಿ

ಬಟ್ಟೆಬರೆಗಳು, ಮೇಜು, ಕುರ್ಚಿ ಮೊದಲಾದ ಸಾಮಾನುಗಳು, ಗಿರಾಜಿನ ಸಾಮಾನುಗಳು, ಸೈಕಲ್‌ಗಳು, ಮೋಟಾರ್ ಗಾಡಿಗಳು ಇವೇ ಮುಂತಾದ ಸಾಮಾನುಗಳನ್ನು ಅನವಶ್ಯಕವಾಗಿ ಕೊಳ್ಳುವುದರಲ್ಲಿ ಹಣವನ್ನು ಸರ್ವಥಾ ವೆಚ್ಚ ಮಾಡಬೇಡಿ ಯುದ್ಧಾನಂತರದಲ್ಲೇ ಇವುಗಳನ್ನು ಬಹಳ ಸುಲಭ ಬೆಲೆಗೆ ಕೊಳ್ಳಬಹುದು. ಈ ಯುದ್ಧ ನಡೆಯುವವರೆಗೂ ಭೋಗ್ಯವಸ್ತುಗಳನ್ನು ತ್ಯಜಿಸಿರಿ. ನಿಮ್ಮ ಸ್ವಂತ ಸುಖಕ್ಕಾಗಿ, ಭರತಖಂಡದ ಅಭಿವೃದ್ಧಿಗಾಗಿ ನಿಜವಾದ ಸಾರ್ವ ಇದೇ.

ದಾಸ್ಯಮುಬುವ ನಿಮ್ಮ ಸಮ್ಮತಿಸುದಲ್ಲಿ ನಾಮುವ ವಿನಂತಿಯು ಇದೇ.

AAA 1118 KN

Decorate your home with
Life-like Oil Painting
of those dear and near to you
M. S Shirale,
MODERN STUDIO,
UDIPI.

The Pangal Nayak Bank Limited.

(Incorporated in 1920)

Registered Office Court Road, UDIPI.

Branches at— **Udipi, Mangalore, Katapadi, Kanhangad Kinnigoli and Nileshwar, South a nara District**

Discounting of demand and short term negotiable instruments for approved parties, granting of loans and overdraft accommodation on goldware, marketable produce, other merchandise and on other securities, collection of pay pension or other bills, transmission of monies to upcountry places on moderate terms acceptance of Fixed, Current, Savings Bank and Cumulative deposits and every other type of up-to-date Banking service is at the disposal of all the sections of the discreet public

For business proper please enquire at any one of our Offices.

15th April 1944.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ, ...ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕಂವು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ. ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ನೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ನೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಷಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಮೀನು, ಕುಂಬಳಕಾಯಿ, ಒಳೈಣ್ಣೆ ಬಿಡಬೇಕು

ಬಾಟ್ಲಿ ಬಿಕ್ಕೆ ೫ರೂ. ಪೋಸ್ಟು ಚಾರ್ಜ ೪ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ಡಾವಣಗೇರಿ:ಡಾವಣಗೆರಿ ಪ್ರೆಸ್ ಶಕ್ತ್ಯನುಸಾರ ಮಾಡಬೇಕು ಮಾಲಿಕರು ವಿಳಾಸ

ರೇವಣಸಿದ್ದಪ್ಪ ಹಾಲಪ್ಪ ಡಾವಣಗೇರಿ,
ಆಯುರ್ವೇದ ಔಷಧಾಲಯ, ಗದಗ.

Ayurveda Oushadalaya GADAG.

The best preventive in epidemics of CHOLERA

"BHUVANENDRA"
CHANDRAMAS

Also a sovereign remedy for diarrhoea Stomachache, Vomiting and Nausea

BHUVANENDRA PRODUCTS LTD., Katapadi.

'ಭುವನೇಂದ್ರ'
ಚಂದ್ರಮಸ್

ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೂಡನಿರತಕ್ಕ ಅತ್ಯುತ್ತಮ ಔಷಧಿ

ದೊಡ್ಡವರಿಗೆ 40ರಿಂದ 8ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ2ಬೊಟ್ಟು ಲವಂಗ ಯಾ ಏಪಾದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂದಂತೆ ಕೊಡುವುದು

ಅತಿಸಾರ, ಪೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ.ಕ.

ಉಡುಪಿ ಫ್ಯಾಕಿಸ್ಟರು:- ಡಾ. ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮೆಸಿ ಶ್ರೀ ಆರ್. ಎಸ್. ಶೆಣೈ, ರಥಬೀದಿ, ಡಾ. ಪಿ. ಬಿ. ಆಚಾರ್ಸ್ ಫಾರ್ಮೆಸಿ, ಡಾ. ಕೆ. ವೆಂಕಟಗಿರಿ ಸೈ, L 1 M.S; ಡಾ. ವೆಂಕಟರಾವ್, ಕೊರತ್ಯಲ್; ನವಭಾರತ ಬುಕ್ ಡಿಪೊ



ಬಾಣ ತಯಾರ ಸಲುವಾಗಿಯೂ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ದೇಶಿಸಿ ತಯಾರಿಸಲ್ಪಟ್ಟ ಅಮೋಘ ವಾವ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಪೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ)

ಈ ಔಷಧಿಯ ಎರಡು ಹೆಚ್ಚು ಕಡಿಮೆ ಅರವತ್ತು ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳ ಒಂದು ಬಾಣಂತಿತನಕ್ಕೆ ಸಂತಾಗುವಷ್ಟು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.೨ ಕೊಡಿಯಾಲಬೈಲು, ಮಂಗಳೂರು

— ಮಕ್ಕಳನ್ನು ಹಡೆಯುವದು ಸಾಕು—

ಅಶಕ್ತ ಸ್ತ್ರೀಯರಿಗೆ ಗರ್ಭಕೋಶ ಹಸ್ತ
ಬರ್ಥ ಕಂಟ್ರೋಲ್
ಹಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಕೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಕ್ಕೆ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಸ್ಟ್ ಚಾರ್ಜು ೧೫ಆಣೆ.

ಮಾಲಿಕರು:—**ಹಾಲಪ್ಪಾ ಫಕೀರಪ್ಪಾ ಡಾವಣಗೇರಿ**

ಆಯುರ್ವೇದ ಔಷಧಾಲಯ, ಗದಗ-ಸಿಟಿ

ಏಜಂಟರು:—ಹುಬ್ಬಳಿ ಫಾರ್ಮಸಿ,—ಹುಬ್ಬಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ—ಡಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ. ಚಿಕ್ಕೋಡಿಯಲ್ಲಿ:—ಹುಂಬರವಾಡಿ ಸ್ಟೋರ್ಸ. ಡಾವಣಗೇರಿ:—ಡಾವಣಗೇರಿ ಪ್ರೆಸ್ಸ್. ಇ೦. ಎಲ್. ಕವಲಗಾನ, ಕೆಮಿಸ್ಟ್ಸ, ಹಾವೇರಿ ಬ್ಯಾಡಗಿ.

Ayurveda Oushadalaya, GADAG CITY.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತ್ಯವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ವಿಶೇಷವಾಗಿ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು ಬಾಟ್ಲಿ 1ರ ರೂ 1—12—0

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ ಕ್ಯಾಟಲಾಗ್ ಬರದಲ್ಲಿ ರೋಗಕ್ಕೆ ತಕ್ಕವಾದ ಔಷಧಿ ರವಾನಿಸಲಾಗುವುದು. ಉಡುಪಿ ಏಜಂಟರು:—ನವಭಾರತ ಬುಕ್ ಡಿಪೊ

ಅಂತರಂಗದ ಕತೆಗಳು

೧೨ ಕತೆಗಳ ಸಂಗ್ರಹ. ಬೆಲೆ ೦—೧೦—೦

ಅಂತರಂಗವನ್ನು ಬೆಳಗಿ, ಬಹಿರಂಗವನ್ನು ಹೊಳೆಸಿ ಹರಿಯುವ ಮಾತು

ಪ್ರೇಮಪ್ರವಾಹವು ಹೇಗೆ ಹರಿಯುತ್ತದೆ? ಪ್ರಣಯದಲ್ಲಿ ಶ್ರೀಲಯವಿದೆಯೆ?

ಪ್ರೇಮಪ್ರವಾಹ

ಸ್ವಾರಸ್ಯವಾದ ೫ ಕತೆಗಳ ಸಂಗ್ರಹ ಬೆಲೆ ೦—೬—೦

ಪಾಪಪೂರಿತ ಪಟ್ಟಣಗಳು

ಪ್ರಪಂಚದ ಬೇರೆ ಬೇರೆ ದೇಶಗಳಲ್ಲಿ ವ್ಯಭಿಚಾರ ಸೂಳೆಗಾರಿಕೆಗಳು ಸಮಾಜವನ್ನು ಹೊಕ್ಕು ಅದನ್ನು ಹೇಗೆ ಕೊರೆದು ತಿಂದು ಹಾಕುತ್ತಿದೆ ಎಂಬುದನ್ನು ವಿವರಿಸುವ ಗ್ರಂಥ. ಬೆಲೆ ೦—೮—೦

ವ್ಯಭಿಚಾರಿಣಿ ಯಾರು?

ಸಾನಾಜಿಕ ನಾಟಕ. ಬೆಲೆ: ೦—೧೨—೦

ಮಾನವಂತನತನದ ಸೋಗಿನಿಂದ ನಡೆಸಲ್ಪಡುವ ಅನಾಚಾರವನ್ನೂ ಪವಿತ್ರ ಪ್ರೇಮವು ಕಠಿಣ ಪರೀಕ್ಷೆಗೊಳಗಾದರೂ ಕಟ್ಟಕಡೆಗೆ ಅದರ ವಿಜಯ ನಿಶ್ಚಿಯವೆಂಬುದನ್ನೂ ಮನಗಾಣಿಸುವ ವಿಚಾರ ಕ್ರಾಂತಿಕಾರಕ ನಾಟಕ.

ನವಭಾರತ ಪುಸ್ತಕ ಭಂಡಾರ, ಉಡುಪಿ.

EDITED PRINTED & PUBLISHED BY K. H. SHETTY AT THE NAVAYUGA PRESS, UDIPI, S. India

ಅಂತರಂಗ

ಉಡುಪಿ

ಅಖಿಲ ಕರ್ನಾಟಕದ ಹೊಸ

ಮಾದರಿಯ ಸಚಿತ್ರ

ವಿನೋದ ವಾರ ಪತ್ರಿಕ.

ವಾರ್ಷಿಕ ಚಂದಾ ರೂ 4—8—0

ಬಿಡಿ ಪ್ರತಿಗೆ ರೂ 0—1—6

NAVAYUGA

ವರ್ಷ ೨೪] ಪ್ರತಿ ಗುರುವಾರ ಹೊರಡುವ ನಾಮ್ಯೇಯ ವಾರಪತ್ರಿಕೆ [Vol 24

ವಾರ ೨೬] Founder SRI A. B. SHETTY. [No. 26

ಉಡುಪಿ • 8—3—1945 • ಮಂಗಳೂರು.

ದಿ ಜುಪಿಟರ್

ಜನರಲ್ ಇನ್ಶ್ಯೂರೆನ್ಸ್

ಕಂಪೆನಿ, ಲಿ, ಬೊಂಬಾಯಿ.

ವಿಮೆಯ ಬಿಸಿ ಬೇಕಾ?

ವಿಜಯಟರಾಗುವಿರಾ!

ಹುಗಾದರೆ ಕೂಡಲೆ

ಪಿ. ಡಿ ನಾನಯ್ಯ, ಉಡುಪಿ.

ದಕ್ಷಿಣ ಕನ್ನಡದ ಜಿಲ್ಲಾ ಏಜೆಂಟ್.

ಇವರ ಬಳಿ

1 ಕೋಟಿಗೆ ಮಿಕ್ಕ ವ್ಯವಹಾರ!

ಈ ವರುಷವೇ ರಜತೋತ್ಸವ!

The Jupiter General Insurance Company Ltd

ಅಮೃತಾಂಜನ

ತಕ್ಷಣದ, ಶಿರೋ

ವೇದನೆ, ಉಳುಕು,

ಕ್ಷತ್ರಿಗೆ, ಭುಜ,

ಹುಲ್ಲು ವೇದನೆಗಳಿ

ಗೂ ಎದೆನೋವು,

ಸ್ನಾಯುಗಳು ಜಾಡು

ಕೊಂಡಾಗ, ಚೇಳು

ವಿಷ ಮುಂತಾದ ಬೇನೆ

ಪಕ್ಷವಾತ್ತ ಮೊದಲು

ಮೊದಲಾದ ಎಲ್ಲಾ

ರೋಗಗಳಿಗೂ ಸಿದ್ಧೌ

ಷಧ, ಹುಳುಕಡ್ಡಿ ಮುದ್ದು ಸಜ ನಮ್ಮಲ್ಲಿ ಸಿಕ್ಕುತ್ತದೆ

ಅಮೃತಾಂಜನ ಲಿಮಿಟೆಡ್.

ಮದರಾಸು

ಬೊಂಬಾಯಿ ಮತ್ತು ಕಲ್ಕತ್ತ.

ದಿ ಮೂಲ್ಕಿ ಬೇಂಕ್,

ಲಿಮಿಟೆಡ್

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೊಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಜನರ ಪ್ರಯೋಜನವನ್ನು ಸಾಧಿಸುತ್ತಿರುವುದು

The Moolky Bank Ltd.,

Moolky, S K.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ಇದೀಗ ನೂರನೇ ಸಂಪುಟ ಪ್ರಕಟವಾಗಿದೆ

ವಿದ್ಯಾ ಇಲಾಖೆಗೆ ಸಂಬಂಧಿಸಿದ

ಸಕ್ಯುಲರುಗಳೂ ಪ್ರಕಟವಾಗುತ್ತವೆ

ವಾರ್ಷಿಕ ಚಂದಾ

ರೂ 1—8—0 ಮಾತ್ರ

ಕಚ್ಚಿನ ವಿಚಾರಕ್ಕೆ ಬರೆಯಿರಿ

ಬಾಲಚಂದ್ರ, ಉಡುಪಿ.



ಯಾವತ್ತೂ ವಿಧ

ದ ಬೈಲ್ಸ್, ತಾಮ

ಹಿತ್ತಾಳೆ, ಕಂಚು

ಮೊದಲಾದವುಗ

ಳ ವಿವಿಧ ಪಾತ್ರೆ

ಗಳೂ ಸಾಮಾಗ್ರಿ

ಗಳೂ ರಿಪೀ ಆಗಿ

ಯೂ ಚಿಲ್ಲರೆಯಾಗಿಯೂ ಮೊರೆಯುತ್ತವೆ

ಕಲ್ಯಂಜೆ ವ್ಯಾಸಾಚಾರ್ಯ,

ರಥಬೀದಿ, ಉಡುಪಿ.

CHAMPAE'S

Snow & Eastrex

Sole Distributers for (India.)

Sukhananda Stores

Santhekatte, UDIPI, S. K

The Vijaya Stores, Ltd.,

(Incorporated under the Indian Companies Act 1913)

Registered Head Office COONDAPUR, S K

Registered On 28th October, 1944 Liabilities of Members Limited

Authorised Capital	Rs	3.00.000
Issued Capital	Rs	50 000

Divided into [illegible]

10 (Ten) Shares of Rs 500 each

100 (One Hundred) Shares of Rs 250 each

600 (Six Hundred) Shares of Rs 100 each [illegible]

"Consent of the Central Government has been received to the issue under the Defence of India Rules 94 A It must be distinctly understood that in giving this consent the Government of India do not take any responsibility for the financial soundness of any schemes or for the correctness of any of the statements made or opinions expressed with regard to them.

BOARD OF DIRECTORS

1 Sri Mangalore Ganapa Special Magistrat Founder & Managing Director The Badavara Bhandhu Printing Press Ltd Mangalore Sri Narayan Guru Bank Ltd, Chairman The Mysore Speedwell Engineering Works Ltd Mangalore (*Chairman*)

2 Sri B Narsappa Superintendent The Badavara Bandhu Printing Press, Ltd & Estate Superintendent Sri Narayana Guru Bank,Ltd, Mangalore

3 Sri Hatadu Manappa Shetty Timber Merchant & Landlord Coondapur

4 Sri A S Vittal Shetty Merchant & Landlord Coondapur (*Managing Director*)

6 Sri A Muthaya Shetty Merchant & Landlord Coondapur

5 Sri K Thirumappa Shetty Merchant Coondapur

7 Ignatius Menezes Esq Merchant Mangalore

LEGAL ADVISER

Sri Kolkebail Sanjiva Shetty, B Sc, LL B., Advocate, Coondapur.

BANKERS Sri Narayan Guru Bank, Ltd.,

AUDITOR

Sri P. M. Hegde, [illegible], Registered Accountant

This is the only Company of the kind in the Coondapur Taluk Join in the expansion scheme of the business of this large Stores of the District

SYMPTOMS AND DISEASE.

Often an insurance company refuses to grant insurance cover to an apparently healthy person because, on a medical examination, symptoms of disease are discovered in him Thus the insurance company puts the person on his guard. But then he has very little chance of insuring his life.

Insurance apart one's health requires constant attention and periodical medical examination So do not neglect it till an insurance company focuses your attention on it

THE CANARA MUTUAL ASSURANCE CO., LTD.,

UDIPI (S. India)

ಪಾರ್ಥಿವ ಸಂವತ್ಸರದ

(1945—1946)

ಶ್ರೀಪತಿ ಪಂಚಾಂಗ

ಇದೀಗ ಬಿಕರಿಗೆ ತಯಾರಾಗಿದೆ

೫೭ ಪುಟಗಳು — ಬೆಲೆ ನಾಲ್ಕಾಣೆ

ಬದಾಗಿ ಸ್ಟ್ಯಾಂಪು ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟ್ ಮಾಡಿ ಕಳಿಸಲಾಗುವುದು

ವಿಳಾಸ—

ಶ್ರೀಪತಿ ನರಸಿಂಹ ಅಡಿಗ,

ಬೇಲೂರು ಗ್ರಾಮ,

ಕೋಟ ಪೋಸ್ಟ್, ದ ಕ

ಕ್ರೌನ್

ರಬ್ಬರ್ ಸ್ಟ್ಯಾಂಪ್ ಕಂಪೆನಿ

18 ಬಲ್ಮಠ ರಸ್ತೆ, ಮಂಗಳೂರು

ರಬ್ಬರ್ ಮೊಹರು ಸೈಜ್ ಬೋರ್ಡ್ ತೃಪ್ತಿಕರವಾಗಿ ಮಾಡಿಕೊಡಲ್ಪಡುವವು

Crown Rubber Stamp Co

16 Balmat Road, MANGALORE

Approved firm by the Govt of Mysore

Certified by the Agent of the Govt of India in Ceylon ESTD 1906

ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನ, ಪುಂಡಾರ್ತಿ, ಬಾರ್ಕೂರು ಪೋಸ್ಟ್ ದ ಕ

ಇಲ್ಲಿ ಅಮ್ಮನವರ ಸನ್ನಿಧಿಯಲ್ಲಿ ನಡೆಯುವ ಪರಿವಾಣ ನೈವೇದ್ಯ ಪಂಚಾಮೃತ ಸೇವೆ ಕೊಡತಕ್ಕ ಸೇವಾ ಭಜಕರು ತಾವೇ ಆರ್ಥ ಸೇರು ಅಕ್ಕಿ ತಂದಲ್ಲಿ ಪದ್ರಿ ಸೇವೆಯನ್ನು ಪೂರೈಸಿಕೊಡಲಾಗುವುದು

ಆರ್ಚಕರು ಕಾವೇರಮ್ಮ.

ಪಾರ್ಥಿವ ಸಂವತ್ಸರದ

ಉಡುಪಿ ಪಂಚಾಂಗ

(1945-'46)

ಸಕಲ ಶುಭಾಶುಭ-ನೈಮಿತ್ತಿಕ ಧರ್ಮ ಕಾರ್ಯಗಳಿಗೆಲ್ಲಾ ಶಾಸ್ತ್ರೋಕ್ತ ರೀತಿಯಿಂದ ಪರಿಶೀಲನೆಯಾಗಿರುವುದು

ಬೆಲೆ ಇರ 0—4—0

ವಿಶೇಷ ಮಾಹಿತಿಗೆ ಬರೆಯಿರಿ:-

ಆತ್ಮಾರು ವಾಸುದೇವ ಉಪಾಧ್ಯಾಯ

ಪಂಪವನ

ಅಂಬಾಭವನ ಕಾಫಿ ಕ್ಲಬ್ ಪಾರ್ಕಿಂಗ್,

ಬೊಂಬಾಯಿ ಇಲ್ಲಿಯೂ ಸಿಗುವುದು.

Read & Advertise in

ANTARANGA



ಒಂದು ವ್ಯಂಗ್ಯ ಕಲ್ಪನೆ

ಗೋಬೆಲ್ಸ್ ಉವಾಚ—
1948ರ ಪ್ರೇತ ಪೀಡೆ

(ಊಹಿಸಿದುದು 'ಡೆಗ್ಲೆ')

1945ನೇ ಜುಲಾಯಿ ತಾರೀಕು ೨೦. ಇಂದಿಗೆ ಸರೀ ಒಂದು ವರ್ಷಕ್ಕೆ ಮೊದಲು ಹಿಟ್ಲರನಿಗೊಗೆಯಲ್ಪಟ್ಟಿದ್ದ ಬೋಂಬು ಹೊಟ್ಟಾಗದ್ತಿತು. ಈ ಬಾರಿ ಹಾಗಾಗುವಂತಿಲ್ಲ.

ಕೆಂಡ ಸದೃಶವಾದ ಕೆಂಪು ಸೇನೆಯು ಬರ್ಲಿನ್ ನಗರದ ರೋಮು ರೋಮುಗಳನ್ನೂ ಕರಟಿಸುತ್ತಿದೆ ಪ್ರತಿಯೊಂದಿಂಚು ನೆಲವೂ ಕೆನ್ನೇರಿಸಿಂದ ಕೆಸರಾಗಿದೆ; ಪ್ರತಿಯೊಂದು ಕುಕ್ಕೆ ಮಣ್ಣಲ್ಲೂ ಸಮ ಪಾಲು ಎಲುಬು ಮಾಂಸ ಜೆರೆತಿದೆ; ಬರ್ಲಿನಿನ ಸ್ಮಶಾನೋದ್ಯಮ ಮನುಷ್ಯ ಗೋಡೆಯೂ ಸಿಗ್‌ಫ್ರೈಡ್ ಕೋಟೆಯಾಗಿ ನಿಂತಿದ್ದಿತು; ಒಂದೊಂದು ಕಲ್ಲೂ ಗುಂಡಾಗಿ, ಒಂದೊಂದು ಹಿಡಿ ಮಣ್ಣೂ ಸಿಡಿ ಮದ್ದಾಗಿ ರಕ್ಷಿಸುತ್ತಿದ್ದರು. ಉಪಯೋಗಿಸಲ್ಪಟ್ಟಿದ್ದಿತು ಆದರೆ ಬೊಲ್ಶೆವಿಕ್ ಸೇನೆಗೆ—ಸಮತಾವಾದಿ ಯೋಧರಿಗೆ—ರಕ್ತ ಚಿಮ್ಮುವುದಲ್ಲೀ ರಿ ಮಿಸುವ ರಣವ ಬ್ಲರಿಗೆ ಯಾವುದೂ ಗಣ್ಯವಾಗಲಿಲ್ಲ. ಕೋಟೆಯಿಂದ ಹಿಡಿದು ಕೋಡೆಯ ವರೆಗೂ ಕ್ಷೇತ್ರದಿಂದ ಹಿಡಿದು ತಡಿಮೆಯ ತನಕವೂ ಭೀಕರ-ಅತಿ ಭಯಂಕರ ಹೋರಾಟ ಸಡೆಯಿತು; ನೂತನಾಸ್ತ್ರಗಳ ಹಾರಾಟದಿಂದಾರಂಭಿಸಿ ಉಗುರು ಹಲ್ಲುಗಳ ಸರಚಾಟದ ವರೆಗೂ ನಡೆಯಿತ. ಕೊನೆಯಲ್ಲಿ ರಕ್ತ ದೆವರುಗಳಿಂದ ತೊಯಿದ ಕೆಂಪುಜೋಳನ ಕಾತಕ್ಕೆ ಸಿಜಯ ಶ್ರೀಯ ಹೂಮಾಲೆ ಬಿತ್ತು.

ಬರ್ಲಿನ್ ಪತನವಾಯಿತು; ಇಡೀ ಪ್ರಪಂಚವು ಜಯಜಯಕಾರ ಮಾಡಿತು. ನೂರಾಒಯ ಬೇಸಸ್ಥಾನಗಳ ಘಂಟೆಗಳು ಬಾರಿಸಲ್ಪಟ್ಟವು; ಧ್ವಜಗಳು ಹಾರಿದವು; ಬೀಡು ಬಾಲಗಳು ಮೊಳಗಿದವು; ರಸ್ತೆ ಬೀದಿಗಳಲ್ಲೂ ನರ್ತನವಾಯಿತು; ಕದಿರಿಗೆ ಸಿಕ್ಕಿದವರು ಹಣ್ಣು ಗಂಡು ಭೇದವಿಲ್ಲದೆ ಆನಂದೋನ್ಮಾದದಲ್ಲಿ ಒಬ್ಬರನ್ನೊಬ್ಬರು ಹತ್ತತ್ತು ಮಿನಿಟುಗಳ ವರೆಗೂ ಗಾಢವಾಗಿ ಆಲಿಂಗಿಸಿಕೊಂಡು ಕುಣಿದರು. ಪಶ್ಚಿಮ ರಂಗವಲ್ಲಿ ಹೆಜ್ಜೆ ಮುಂದಿತವಾದರೆ ನಿಂತಿದ್ದ ಅಂಗ್ಲೋ ಅಮೇರಿಕನ್ ಯೋಧರು ನೈತಿಕಸಿಕೊಂಡರು.

ಹಿಟ್ಲರನ ನಿವಾಸ ಗೃಹವಿರುವ ಬರ್ಚಿಸ್ ಗಾಡನ್ಸಿಗೆ ಕೆಂಪು ಸೇನೆ ಮುತ್ತಿಗೆ ಹಾಕಿದೆ. ಫ್ಯೂರರನ ಮನೆಯಾದ ಬೆರ್ಗೋಫಿನಲ್ಲೇ ಹಿಟ್ಲರ್, ಹಿಮ್ಲರ್, ಗೋರಿಂಗ್, ಗೋಬೆಲ್ಸರು ಸಿಕ್ಕಿಬಿದ್ದಿದ್ದಾರೆಂದು ಗೊತ್ತು. ಅವರನ್ನು ಜೀವವಿದ್ದಂತೆಯೇ ಹಿಡಿಯಬೇಕು. ಪಂದ್ಯದಲ್ಲಿ ಸಕಾಲಕ್ಕೆ ಬಂದು ಬರ್ಲಿನಿಗೆ ಮುಟ್ಟಲಾಗದ ಅಂಗ್ಲೋ ಅಮೇರಿಕನ್ ಸೇನೆಗಳ ಈಸೆನ್‌ಹೋವರ್ ಮತ್ತು ಮೋಂಟೆಗೋಮೆರಿಯವರು ಸಿಕ್ಕಪಟ್ಟೆ ರೊಂದಿಗೆ ವಿಮಾನ ಹತ್ತಿ ಅಲ್ಲಿಗೆ ಹಿಡಿ ಬಂದಿದ್ದರು ಯಾಕಂದರೆ ನಾಜೀ ನಾಯಕರ ಪ್ರಾಣಗಳು ಎಲ್ಲಾ ಮಿತ್ರರಾಷ್ಟ್ರೀಯರ ಸಮಷ್ಟಿ ಹಕ್ಕು. ಅವುಗಳನ್ನು ಸ್ವಾಧೀನಪಡಿಸಿಕೊಳ್ಳುವಾಗ ಇವರು ಹಾಜರಿರಲೇ ಬೇಕು. ನಾಜೀ ಚತುರ್ಮೂರ್ತಿಗಳನ್ನು ಹಿಡಿಯಲು ರಷ್ಯ, ಅಮೇರಿಕ, ಇಂಗ್ಲಾಂಡುಗಳ ಪ್ರತಿನಿಧಿ ನಾಯಕರೂ ರಷ್ಯನ್ ಸೇನೆಯೂ ಒರ್ಜಿನಲ್ ಗಾಡನನ್ನು ಸುತ್ತುಗಟ್ಟಿ ಬರ್ಗೋಫ್ ನಿಲಯದೊಳಗೆ ನುಗ್ಗಿ ಹೋಗುತ್ತಿವೆ; ಹೋ! ಮೆಟ್ಟಲು ಹತ್ತಿದರು.

'ಥಂ ಥಂ ಥಂಥಂ'—ಒಳಗಿನಿಂದ ನಾಲ್ಕು ಬಾರಿ ಸಿಸ್ತೂಲಿನ ಸದ್ದು! ಅದೇನದು! ಮಿತ್ರ ನಾಯಕರು ರುಂಯಿರುಂಯನೆ ಗೃಹದೊಳಕ್ಕೆ ನುಗ್ಗಿ ಬಂದರು.

ಹಿಟ್ಲರ್, ಹಿಮ್ಲರ್, ಗೋರಿಂಗ್, ಗೋಬೆಲ್ಸ್—ಹೆಣವಾಗಿ ನಾಲ್ಕು ಕುರ್ಚಿಗಳಲ್ಲಿ ಒರಗಿದ್ದಾರೆ. ಸುತ್ತಲಿನ ಗೋಡೆಗಳಿಗೂ ಕುರ್ಚಿ ಮೇಜುಗಳಿಗೂ ರಕ್ತಾಭಿಷೇಕವಾಗಿದೆ, ನಾಲ್ಕು ಹೃದಯಗಳಿಂದ ಲೂ ರುಧಿರ ಚಿಮ್ಮುತ್ತಿದೆ!

'ಡಗಾಯೋಗರು ತಮಗೆ ತಾವೇ ಜಾತ್ಯ ತಂದುಕೊಂಡರು. ಧೂರ್ತರನ್ನು ಜೀವಂತವಾಗಿ ಹಿಡಿಯಬೇಕೆಂಬ ನನ್ನ ಶಪಥವು ಈಡೇರಲಿಲ್ಲ. ನನ್ನ ಜೀವಮಾನದ ಪ್ರಥಮ ಪರಾಭವವಿದು" ಎಂದ ಪಾರ್ಶಲ್ ರುಕೋವ್ ತನ್ನ ಪದಕವನ್ನು ಝಳಪಿಸುತ್ತಾ.

ಮಿಕ್ಕವರಂತೂ ಮಾತಾಡದೆ ತಿಲಾ ಹ್ಯತಿಮೆಯಂತಾಗಿದ್ದರು—ಈ ಸೆನೋಪರರು ಕಿಟಕಿಯಿಂದ ಹೊರಗಿಣಕಿದರು. ತಮ್ಮ ಫ್ಯೂರರನ ಆತ್ಮಹತ್ಯೆಗಾಗಿ ಜರ್ಮನಿಯ ಗುಂಪುಕೂಡಿ ಎದೆ ತಲೆ ಬಡಕೊಂಡು ಅಳುತಿದ್ದಾರೋ ಎಂಬುದನ್ನು ಪರೀಕ್ಷಿಸುವ ದಕ್ಕಾಗಿ. ಆದರೆ ಯಾರೂ ಇಲ್ಲ ಸುತ್ತ ಲೂ ಗಂಭೀರ ನರ್ತನ.

ಹಿಟ್ಲರನ ಆತ್ಮಹತ್ಯೆಯ ವಾರ್ತೆ ಕೇಳಿ ದೊಡನೆಯೇ ಇಡೀ ಪ್ರಪಂಚದ ಆಕಾಶದ ನೀಲೆಲ್ಲಾ ಹ್ಯಾಟುಗಳು, ಕರವಸ್ತ್ರಗಳು ಟೋಪಿಗಳು, ಬೆಲೂನ್‌ಗಳಂತೆ ಏರಿದವು; ಹಾರಿದುವು; ಜನರಿಗೆಲ್ಲಾ ಅಷ್ಟೂ ಸಂತೋಷ.

ಇಡೀ ಪ್ರಪಂಚದ ನಾಲಿಗೆಯಲ್ಲಿ ರಕ್ಕದ ರಾಯಿ, ಎಲುಬು ಲೇಪಿನಿಗಳ ಮೂಲಕ ಒತ್ತಕ್ಷರ, ಒಟ್ಟಕ್ಷರಗಳಂದ ಎಷ್ಟೋ ಮಟಗಳಲ್ಲಿ ಒರೆಯಲ್ಪಟ್ಟಿದ್ದ 'ಮಾಸಿ ಅಧ್ಯಾಯ'ವೊಂದಕ್ಕೆ ಪೂರ್ಣವಿರಾಮ ಬಿತ್ತು.

ಮೋಸ್ಕೋ, ಲಂಡನ್, ವಾಷಿಂಗ್ಟನುಗಳಿಂದ ಪಿಜಯ ಧ್ವಜಗಳನ್ನು ಹಾರಾಡಿಸುತ್ತಾ ಬಂದ ವಿಮಾನಗಳ ಸಂಪಣೆ ಸಂಪಣಿಗಳು ಒರ್ಲಿನಿನಲ್ಲಿಳಿದುವು ಮೊದಲ ವಿಮಾನಗಳಲ್ಲೇ ಸ್ಟಾಲಿನ್, ಚರ್ಚಿಲ್, ರುಸವೆಲ್ಟರಿಳಿದಿದ್ದರು.

ಅವಸರದ ಆದರ ಆನೇಗದ ಸರ್ಯಾಲೋಚನೆಯ ನಂತರ ಮೇಲಿನ ನಾಲ್ಕು ರವಗಳನ್ನೂ ಹಾಳಾಗದಂತೆ ಬರ್ಲಿನಿನಲ್ಲೇ ಪ್ರದರ್ಶನಕ್ಕೆಡುವ ನಿರ್ಧಾರವಾಯಿತು. ಮಿತ್ರ ರಾಷ್ಟ್ರಗಳಿಗಾದ ಯುದ್ಧ ನಷ್ಟ ಪರಿಹಾರಕ್ಕಾಗಿ ಚಿತ್ತುಗೊಳ್ಳಿರೆ ಜರ್ಮನಿಯಲ್ಲೇನೂ ಉಳಿದಿರಲಿಲ್ಲವಾದ್ದರಿಂದ ಈ ಪ್ರದರ್ಶನದ ಟಿಕೇಟಿನಿಂದ ದೊರೆಯುವ ನಿಧಿಯನ್ನೇ ಪ್ರಾರಾಷ್ಟ್ರಗಳು ಪಾಲು ಮಾಡಿಕೊಳ್ಳುವ ನಿರ್ಧಾರವಾಯಿತು. ಜರ್ಮನಿಯ ಮುಖ್ಯ ಭಾಗವನ್ನು ಮೂರು ಪಾಲು ಮಾಡಿ ಅಮೇರಿಕ, ಇಂಗ್ಲಾಂಡು, ರಶ್ಯಗಳ ಪಾಲು ಪಟ್ಟಿಯಾಗಿ ರಿಜಿಸ್ಟ್ರಿ ನಾಡಲಾಯಿತು ಸಿಗ್‌ಫ್ರೈಡ್ ಕೋಟೆಯ ತೆಂಕು ಮೂಲೆಯೊಂದು ಕಾಡು ವಲಯವನ್ನು ಫ್ರಾನ್ಸಿಗೂ ಜರ್ಮನಿಯ ಈಶಾನ್ಯ ಮೂಲೆಯ ಒಂದು ತುಂಡನ್ನು ಪೋಲೆಂಡಿಗೂ ಪಿಂಗಡಿಸಿ ಆಕ್ಷೇಪಸಿನಹ ಶಿರಸಾವಹಿಸಿಕೊಳ್ಳತಕ್ಕದ್ದೆಂಬ ದತ್ತಸತ್ರದೊಡನೆ ಪೆರಡು ರಾಷ್ಟ್ರಗಳಿಗೊಪ್ಪಿಸಲಾಯಿತು. ಅಲ್ಲಿನಿನಲ್ಲಿ ಪ್ರಿರಾಷ್ಟ್ರ ಸನ್ಮಿಶ್ರ ಅಧಿಕಾರೀ ಮಂಡಲಿಯೊಂದನ್ನು ನ್ಯಾಪಿಸಿ ಇಡೀ ಜರ್ಮನ್ ಆಳ್ವಿಕೆಯಮೇಲ್ಪಿಚಾರವನ್ನೂ ಇಂಗ್ಲಾಂಡು-ರಿಷ್ಯ-ಅಮೆರಿಕಗಳೊಳಗೇಳಬಹುದಾದ ಜಗಳ ತೀರ್ಮಾನಾಧಿಕಾರವನ್ನೂ ಆ ಮಂಡಲಿಗೆ ಕೊಡಲಾಯಿತ.

ಇಲ್ಲಿಗೆ ಎಲ್ಲಾ ವ್ಯವಸ್ಥೆಯೂ ಸಂಪೂರ್ಣ.

1945ರ ಅಂತ್ಯದ ವರೆಗೂ ಅಸಹನೀಯ ಗೊರಿಲ್ಲಾ ಉಪದ್ರವಿತ್ತು; ಅದನ್ನು ಸಮೂಲವಾಗಿ ನಿರ್ಮೂಲಿಸಿ ದಶಂಬರಾಂತ್ಯಕ್ಕೆ ಖಾನೇಶುಮಾರಿ ತೆಗೆದು ನೋಡುವಾಗ ಹುಟ್ಟು ಜರ್ಮನನೊಬ್ಬನೂ ಉಳಿದಿರಲಿಲ್ಲ. ನಾಪತ್ತೆಯಾಗಿರಬಹುದು, ಅಥವಾ ಅಡಗಿಕೊಂಡಿರಬಹುದು—ಇತಿಶ್ರೀ.

× × ×

1946. ಜರ್ಮನರ ಗೊರಿಲ್ಲಾ ಯುದ್ಧ ನಿಂತಿದೆ; ಜರ್ಮನಿಯೆಲ್ಲೂ ಸಂತಿಷ್ಟ. ಆಕ್ರಮಿತ ಜರ್ಮನಿಯಲ್ಲೂ, ಯೂರೋಪಿನ ಇತರ ರಾಷ್ಟ್ರಗಳಲ್ಲೂ 'ಭಗ್ನ ಜ್ವರ' ಎಂಬ ವಿಶೇಷ ಕಾಯಿಲೆಯೊಂದಕ್ಕೆ ಲಕ್ಷಲಕ್ಷವಸ್ಸು ಮಂದಿ ಆಹುತಿಯಾದರು. ಮನೆ ಮರಗಳ ನೆರಳನ್ನು ಕಂಡು—ಬೆಂಗಡೆಯಿಂದ ಬೆಕ್ಕು ನಾಯಿಗಳೋಡಿ ಸದ್ದಾಗಿ—ಬೆನ್ನಿಗೆ ತಗಣೆ ಇರುವೆಗಳಾಗಲೀ, ಕಾಲಿಗೆ ಮುಳ್ಳುಗಲೀ ಚುಚ್ಚಿದಾಗ—ಜರ್ಮನ್ ಗೊರಿಲ್ಲಾಗಳನ್ನು ನೆನಸಿ ಜನರು ದಿಗಿಲಿಗೀಡಾಗುವವರಿಂದಾಗಿಯೇ ಈ ಸರ್ವ ವ್ಯಾಪೀ ಜ್ವರ. ನಾಲದು ದಕ್ಕೆ ಹಿಟ್ಲರ್, ಗೋರಿಂಗ್, ಗೋಬೆಲ್ಸ್, ಹಿಮ್ಲರರು ಪ್ರೇತಗಳಾಗಿ ಸರ್ವತ್ರ ಸಂಚರಿಸಹತ್ತಿದ್ದಾರೆಯೆಂಬ ವಾರ್ತೆ ಬೇರೆ ಹಿಟ್ಲರನ ಪ್ರೇತ ಬರ್ಲಿನನ್ನು ಬಿಡುವವಿಲ್ಲವಂತೆ. ಜೆರ್ಗೋಫಿನ ಕೋಣೆಯಲ್ಲಿದ್ದ ಹಿಟ್ಲರ್ ಮಂಚದ ಮೇಲೆ ಒಂದು ರಾತ್ರಿ ಪರಿಕ್ಷಾರ್ಥವಾಗಿ ಮಲಗಿದ್ದ ಜರ್ಚಿಲ್ಲರಿಗೆ ಸಡು ರಾತ್ರಿಯ ವೇಳೆ ಹಿಟ್ಲರನೇ ಬಂದು ಕೆಳಗೆಳೆದು ಹಾಕಿದಂತಾಯಿತಂದರಿಂದ ಅವರು ಆ ಮೇಲೆ ಬರ್ಲಿನ್‌ಗಾವನಿಗೆ ಕಾಲಿಟ್ಟಿರಲಿಲ್ಲ. ಸ್ವಿಸರ್ಲೆಂಡಿನಲ್ಲಿರುವ, ಹಿಂದೆ

(ಗಾನೇ ಪುಟ್ಟನೋಡಿರಿ.)

ANNOUNCEMENT.

We have pleasure to announce that the following new branches have been opened.

COIMBATORE SALEM
ERODE MADURA

Other Branches at

Quilon	**Mangalore**
Alleppey	**Bangalore**
Ernakulam	**Belgaum**
Cochin	**Dharwar**
Calicut	**Hubli**
Cannanore	**Chikmangalur etc. etc**

4 Branches in Bomay City

Capiatal 26 Lakhs Reserves 10 Lakhs.

ESTD 1906

Canara Bank, Limited.

(Incorporated in British India Liability of members limited)

ಬಿಡಿನುಡಿ

ತಾ. 3-3-45ನೇ ರಾತ್ರಿ--ಸಿನಿಶಾಚರರ ಕಾಲ.

ಉಡುಪಿಯ ರಸ್ತೆಗಳಲ್ಲಿ 'ಫಯರ್ ಸರ್ವಿಸ್' ನವರ ವಾಹನಗಳು ಘಂಟೆ ಬಾರಿಸುತ್ತಾ ತೀವ್ರಗತಿಯಿಂದೋಡುತಿದ್ದವು.

ಗಂಟೆ ಬಾರಿಸುವದಕ್ಕೂ ತಂಟೆ ಬರಿಸುವದಕ್ಕೂ ವ್ಯತ್ಯಾಸವಿದೆಯೆಂದೇ ಆ ಹೊತ್ತಿನ ವರೆಗೂ ನನ್ನ ಭಾವನೆ.

ಯಾರೋ ಶನಿ ಹಿಡಿದವರ ಮನೆಗೆ ಬೆಂಕಿ ಹಿಡಿದಿರಬೇಕೆಂದು ನಾನೂ ಓಡಿದೆ.

ವಾಹನಗಳು ನಿಂತ ತುಸು ದೂರದಲ್ಲೇ ನಿಂತೆ.

ಆ ವರಾರದ ಮಾಡುಗಳೆಲ್ಲಾ ಮೌನ ನಾಗಿದ್ದುವು.

ಬೆಂಕಿಯೆಂತೂ ಇಲ್ಲ, ಮಿಣುಕು ಹುಳ ಕೂಡಾ ಮಿಣುಕುತಿರಲಿಲ್ಲ.

ನಿಜ, ಮಾಡಿಗೆ ಬೆಂಕಿ ಹಿಡಿದಿರಲಿಲ್ಲ; ಆದರೆ ಹಲವರ ಪನ್ನಿಗೆ ಬೆಂಕಿ ಬಡಿದು ಹಾರಾಡುತಿದ್ದರು

ಇಂತಹ ಬೆಂಕಿಯನ್ನು ನಂದಿಸುವ ಒಂದು 'ಫಯರ್ ಸ್ಟೇಶನ್' ಉಡುಪಿಗಿಲ್ಲದೆ ಹೋಯಿತು!

ಇದೊಂದು ದೊಡ್ಡ ಸಮಸ್ಯೆ. ಇನ್ನೊಮ್ಮೆ ಕೇಳಿಕೊಳ್ಳಿ; ಮತ್ತೊಂದು ಅರ್ಧ ಹೇಳಿ:—

ಬೆಂಕಿ ನಂದಿಸುವ ವಾಹನಗಳು ಆ ರಾತ್ರಿ ಹಲವು ಬಾರಿ ಅತ್ತಿತ್ತ ಓಡಾಡಿದ್ದವು.

ಬೆಂಕಿ ಯೋಧರು ಕೆಲವರು ಬೆಂಕಿಯಂತಾಗಿದ್ದರು.

ಆ ಸ್ಥಳದ ಮಾಡಿನಲ್ಲಿ ಬೆಂಕಿಯುರಿದು ದಾಗಲೀ ನೀರು ಸುರಿದುದಾಗಲಿ ಕಾಣುತಿರಲಿಲ್ಲ

ಮನಸ್ಸು ಉರಿದಿರಬಹುದು-ಕಣ್ಣಿರೋ ಕನ್ನೀರೋ ಸುರಿದಿರಬಹುದು.

ಗೌಜಿ ಗಲಭೆ ಕೇಳಿಬರುತಿತ್ತು.

ಆದರೆ 'ಪಯರ್ ಸ್ಟೇಶನ್'ನ ಪೈಪಿನಿಂದ ನಂದಿಸಲಾಗುವ ಉರಿ ಅದಲ್ಲ.

ಹಾಗಾದರಲ್ಲಿ ಉದುದೇನು? ಇವರೆಲ್ಲಾ ಹೋದುದೇಕೆ?

ಆ ಲೋರಿಗಳು ಒಡಾಡಿದಷ್ಟು ಬಾರಿ ನೀರು ಚಿಮುಕಿಸುತ್ತಾ ಹೋಗುತಿದ್ದರೆ ಉಡುಪಿಯ ಧೂಳರಸ್ತೆಯಾದರೂ ತಣಿಯುತಿತ್ತು.

ಆದರೆ ಪೆಟ್ರೋಲು ವ್ಯಯವಾದಷ್ಟು ನೀರು ಖರ್ಚಾಗಲಿಲ್ಲ.

ಈ ಘಟನೆಯ ಆಧಾರದಿಂದ ಸತ್ಯಶೋಧನೆಗಾಗಿ ಪ್ರಶ್ನಿಸಬೇಕಾಗುತ್ತದೆ:—

ಬೆಂಕಿ ಯೋಧರು ಅಲ್ಲಿಗೆ ಹೋದುದು ಬೆಂಕಿ ಹಿಡಿವ ಸುದ್ದಿ ಬಂದೇ ಬುದ್ಧಿ ಬಂದೋ?

ಸುದ್ದಿ ಬಂದಿತ್ತಾದರೆ, ಸುಳ್ಳು ಸುದ್ದಿ ಕೊಟ್ಟು ಇಷ್ಟೆಲ್ಲಾ ಜನರ್ಧವಾಡಿದ ಅಪರಾಧಿಗಳನ್ನು ಹೇಗೇನೇ ಬಡಬಹುದೆ?

ಒಬ್ಬಿಬ್ಬರೇ ..... ಫೈಫಲ್ಲಿ ಪಾಂಶಂ ಪಾಪಂ, ಶಾಂತಂ ಪಾಪಂ' ಅವರೆಂದದೆ ಬೆಂಕಿ ನಂದಿಸುವ ನೀರು-ಸೀರೆ ಮೇರೆ ದಪ್ಪಿದರೆ ಜಲಪ್ರಳಯವಾಗದೆ

ಸಂಬಂಧಪಟ್ಟ ಮೇಲಧಿಕಾರಿಗಳಿಗೀ ವಿಚಾರಿಸಿ ತೀರ್ಮಾನಿಸಲಿ.

ದಯವಿಟ್ಟು ಆಸುಪಾಸಿನ ನಾಗರಿಕರ ಸಾಕ್ಷ್ಯಗಳನ್ನೂ ಪಡೆದು ಸತ್ಯಾಂಶ ತೋರಿಸಲಿ.

ಯಾಕಂದರೆ ಸಂಗತಿ ಸಣ್ಣದಲ್ಲ

ಉಡುಪಿ ನಾಗರಿಕರು ಮಾಡಿಗೆ ಹಿಡಿವ ಬೆಂಕಿಗಿಂತಲೂ ಹೆಚ್ಚಾಗಿ ಮಾನಕ್ಕೆ ತಾಗುವ ಬೆಂಕಿಗಂಜುತ್ತಾರೆ.

ಇಂತಹ ಸಮನ್ಯಾತ್ಮಕ ದುಃಖದಾಯೀ ದುರ್ಘಟನೆಗಳು ಇಂದಿಗೇ ಮುಗಿದುಹೋದಾಗಬೇಕು.

ಆದ್ದರಿಂದ ಫಯರ್ ಸರ್ವಿಸಿನ ಹಾಗೂ ಆ ಸಂಬಂಧದ ಅಧಿಕಾರವುಳ್ಳ ಇತರ ಮೇಲಧಿಕಾರಿಗಳಲ್ಲಿ ಉಡುಪಿ ನಾಗರಿಕರ ಪರವಾಗಿ ನನ್ನ ಮೊರೆ:—ಬೆಂಕಿಯನ್ನು ನಂದಿಸಿ ಆದರ ತುಣುಕೂ ಉಳಿಯದಂತೆ ನಂದಿಸಿ ಬಿಡಿ.

ಅಗ್ನಿ, ಆಪತ್ತು, ಅತ್ಯಾಚಾರ-ಇವುಗಳ ನಿರ್ನಾಮದ ಹೊರತು ನಿರ್ಮಾಣದ ಅಧಿಕಾರ ಯಾರಿಗೂ ಇಲ್ಲ

ಅಂಧವರಿದ್ದಾರಾದರೆ ಅನರ್ಥ ತಪ್ಪಿ ಮಂತಿಲ್ಲ

ಆದ್ದರಿಂದ ಮತ್ತೊಮ್ಮೆ ಹೇಳುತ್ತೇನೆ-ತಾ. ೨ರಲ್ಲಿದ್ದಂತಹ ಬೆಂಕಿ ಇನ್ನು ಮುಂದೆ ನಿಳದಂತಾಗಬೇಕು

× × ×

ಕಾಲ್ತಾರಿಯಲ್ಲೇ ನಡೆಯದುವಕ್ಕಾಗಿ ಮಂಗಳೂರು ನಗರದಲ್ಲಿ ಹಲವರು ಜುಟ್ಟಾನೆಗೊಳಗಾಗಿದ್ದಾರೆ

ಉಡುಪಿಯಲ್ಲಿ ಕಾಲ್ತಾರಿ ಬಿಟ್ಟು ನಡುದ್ದೆಯಲ್ಲಿ ನಡೆಯುವವರು ಅಗಲೇ ತಿಕ್ಕಿ ಬಿಸಿ-ಭೂಸುತಿದ್ದಾರೆ. ಮೂಗು ಬಾಯಿ ತುಂಬಾ ಧೂಳು.

ಇದು ಹೊರತು ಈ ವರೆಗೆ ಯಾರಿಗೂ ಜುಲ್ಮೆ ಸೆಯಾಗಿಲ್ಲ.

ಆದರೆ ಅತ್ಯಿತ್ತಮವಾದ ನಡೆಯಬೇಕಾದ ಒಂದೊಂದು ಕಾಲ್ತಾರಿಯು ಪ್ರತಿಯೊಂದು ಇಲಾಖೆಗೂ ಇದೆ.

ರಸ್ತೆಗಳಿಗೆ ನೀರು ಹಾಕಿಸುವ ದಾನಿಯಲ್ಲಿ ನಗರ ಸಭೆ ನಡೆಯಲೇಬೇಕು

ಬೆಂಕಿ ಹಿಡಿದ ಮನೆಗೆ ನೀರು ಹೊಯ್ಯುವ ಕಾಲ್ತಾರಿ ಫಯರ್ ಸರ್ವಿಸಿನದು

ಉಡುಪಿಯವರೇ- 'ಕಾಲ್ತಾರಿಯಲ್ಲೇ' ನಡೆಯಿರಿ; ಕಾಲ್ತಾರಿಯಲ್ಲೇ ನಡೆಯಿರಿ!

× × ×

'ಪ್ರಥಮ ಬೆಳೆಯ ಅಕ್ಕಿಯನ್ನೊಪ್ಪಿಸುವ ವಾಯಿದೆ ಮುಗಿಯಿತು., ಇನ್ನೂ ನೂರಕ್ಕೆ ತದನ್ನೊಪ್ಪಿಸದವರನ್ನೂ ಎರಡನೇ ಬೆಳೆಯ ಡಿಕ್ಲರೇರನ್ ಕೊಡದವರನ್ನೂ ಶಿಕ್ಷಿಸುವ ಕೆಲಸ ಮಾರ್ಚಿ ಪ್ರಥಮ ವಾರದಿಂದಲೇ ವ್ಯಾರಂಭವಾಗುತ್ತದೆ' ಎಂದು ಜಿಲ್ಲಾ ಕಲೆಕ್ಟರರ ಪ್ರಕಟನೆಯಿದೆ

ರೈತರಿಗೆ ತಮ್ಮ ಅಕ್ಕಿಯ ಮೇಲೆ ಸ್ವಾಧಾವಧಿ ಅಕ್ಕರೆಯಿರುವುದು ಸ್ವಾಭಾವಿಕ.

ಅದನ್ನು ಸ್ವೋರಿಗೆ ಕಳುಹಿಸುವಾಗ ಗಂಡನ ಮನೆಗೆ ಮಮತೆಯ ಮಗಳನ್ನು ಕಳುಹುವಷ್ಟೇ ಸುತಾಪ.

ಆದರೆ ಕತ್ತಿಯ ಜಾಲು ಹಿಡಿದರೂ ಅತ್ತೆಯ ಮನೆಗೆ ಹೋಗುವದು ತಪ್ಪು ವಂತಿಲ್ಲವಷ್ಟೆ?

ನ ಯ ಮಾಡಿಕೊಂಡು ಬರಲಿ' ಎಂದು ಜಿಲ್ಲಾ ಕಲೆಕ್ಟರರು ಎರಡು ಬಾರಿ ಅವಧಿ ಮುಂದುವರಿಸಿಯೂ ಆಗಿದೆ.

ಇನ್ನೂ ಹೊಡದಿರುವವರು ಸಂಚಾರ ನಡಿಸಲಿನ್ನಿದ್ದಿದವಳೆನ್ನ ಜೇಕು.

ಇದು ಸಲ್ಲದು. ಸೊಸೆ ಹರ ಮಾಡಲೂ ಬಾರದು, ಅತ್ತೆ ಕಾಟ ಕೊಡಲೂ ಕೂಡದು

ಈಕೆ ಸಂತೋಷದಿಂದ ಪಕಾಲದಲ್ಲಿ ಹೊರಡಬೇಕು, ಆಕೆಯಿಂದ ಅಲ್ಲಿ ಆನಂದದ ಸ್ವಾಗತ ದೊರೆಯಬೇಕು.

—ಬೀದಿವಾಲ

The Vijaya Bank Ltd.,
Mangalore.

NOTICE

To,

K. Narayana Hegde, S/o Athrady Venktayya Hegde, Land-holder and Merchant, Residing at Kodu, Shirva Village, Post SHIRVA, S. K.

Please take notice, that inspite of the Allotment notice D/ 3 2 '43 and reminders and registered notices D/17-5 '43 and 32-9-'44 under the articles 27 and 28 of the articles of Association, the later of which were returned unserved, the arrears of allotment fee, interest and cost in respect of 2 shares of the Bank numbered 5953 and 5954 remain unpaid If the same is not paid on or before 19-3 '45 the said shares will be forfeited without further notice to you, as per article 29 of the Articles of Association of our Bank

Particulars of amount due:-

Allotment fee	30 0-0
Interest from 30 4 '43 up to date @6½% per annum	3 7-0
Coast of notices	1-3-6
Total Rs	34-10 6

and interest from this date till the date of payment is also due.

The payment may be made at the Head Office or at any of its Branches.

B. Mahabala Shetty,
Secretary.

24-2-'45, Mangalore

The Bombay Life Assurance Co. Ltd.
ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.
(ಸ್ಥಾಪನೆ: 1908)

1944ನೆ ಇಸವಿಯಲ್ಲಿ 2½ಕೋಟಿಗೂ ಮಿಕ್ಕಿ ವ್ಯವಹಾರವನ್ನು ಮಾಡಿದ ಪ್ರಥಮಶ್ರೇಣಿ ದೇಶೀ ವಿಮಾಸಂಸ್ಥೆಗಳಲ್ಲೊಂದಾದುದು

ಮದ್ರಾಸು ಶಾಖಾ ಕಾರ್ಯಾಧಿಕಾರಿಯರು
ಮಾ ಕ್ಕೆ
ಆಶ್ರಿತ ಸಂಸ್ಥಾನಗಳಿಂದ ಕೊಡಿಸಿದ ದಕ್ಷಿಣಭಾರತದ ಪ್ರಾಮುಖ್ಯ ವಿಮೆದಾರರು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್
ಸ್ಥಾಪನೆ: 1910

ಕಳದ ೩೫ ವರುಷಗಳಿಂದ ಪೊಲಿಸಿದಾರರಿಗೂ, ಪ್ರತಿನಿಧಿಗಳಿಗೂ ವಿಶೇಷ ರಿಯಾಯಿತಿ ಅನುಕೂಲತೆಗಳನ್ನು ಒದಗಿಸಿ ದೃಢಭದ್ರತೆಗೆ ವಿಶ್ವಾಸಗಳಿಂದ ಜನತಾಸೇವೆಯಲ್ಲಿ ನಿರತರಾಗಿ ಸದಾ ಸರ್ವದಾ ತಮ್ಮ ಧ್ಯೇಯಸಾಲನೆಗೆ ಸಿದ್ಧರು.

1944ರಲ್ಲಿ 53ಲಕ್ಷ ವಿಮಾ ವ್ಯವಹಾರದ ಗುರಿಯನ್ನು ಬಟ್ಟಿಸಿಡೆ

ಕಾರ್ಯಾಲಯಗಳು —
ಬೊಂಬಾಯಿ, ಬೆಂಗಳೂರು, ಮದ್ರಾಸು, ಮಂಗಳೂರು, ಕಲ್ಲಿಕೋಟೆ, ಮಧುರಾ, ಟ್ರಿವೆಂಡ್ರಂ, ಉಡುಪಿ

ಮುಂಬಯಿಯಲ್ಲಿ ಕನ್ನಡ ನಾಟಕ!

ತಾರೀಕು 18-3-45ನೇ ರವಿವಾರ ಪ್ರಾತಃಕಾಲ ಗಂಟೆ 10½

'ಬಾಲಿವಾಲಾ ಗ್ರೌಂಡ್ ಫಿಯೇಟರ್ಸ್' (ತಾರ್‌ದೇವ್)

ಮಾಸ್ಟರ್ ದೇವಡಿಗಾರ್ ಮತ್ತು ಪಾರ್ಟಿ

ಇವರಿಂದ

★ ಪ್ರೇಮ ಪಾಶ ★

ಎಂಬ ಹಾಸ್ಯರಸಪ್ರಧಾನ ಸಾಮಾಜಿಕ ನಾಟಕವು 'ಮಂಗಳೂರು ಆನಂದ ಸಂಗೀತ ವಿದ್ಯಾಲಯ'ದ ಸಹಾಯಾರ್ಥವಾಗಿ ಅಭಿನಯಿಸಲ್ಪಡುವುದು

ವಿನೋದ ನಟನಾ ಪ್ರವೀಣ ಶ್ರೀ.ಬಿ ನರ್ಸಪ್ಪ (ಬಡವರ ಬಂಧು) ಇವರ 'ಹೆಡ್ಡ ತಿಮ್ಮ' ನ ಪಾತ್ರವನ್ನು ನೋಡಲು ಮರೆಯದಿರಿ!

"ಕಾಲಚಕ್ರ' ದಲ್ಲಿ ಅಭಿನಯಿಸಿ ನಿಮ್ಮನ್ನು ತುಷ್ಟಿಗೊಳಿಸಿದ ನಟವರ್ಗದ ನಟನಾ ಚಾತುರ್ಯವನ್ನು ಮತ್ತೊಮ್ಮೆ ಕಾಣಿರಿ!

ಟಿಕೇಟುಗಳನ್ನು ಮುಂದಾಗಿ ಈ ಕೆಳಗಿನವರಿಂದ ಪಡೆಯಬಹುದು

The Eastran Art Studio
Gunbow Street, FORT BOMBAY.

ಮುಟ್ಟಾಗುವಿಕೆ

ಹಲವರಿಂದ ಕಷ್ಟಾನಿಸಿದ್ದರೂ, ಕಷ್ಟದ ಗರ್ಭಧಾರಣೆ ಅಥವಾ ಇತ್ಯಾದಿಕಾರಣವಿದ್ದರೂ—'ಕುಮಾರಿ' (Govt Regd ನಿಶ್ಚಿತ ಆದ ಪ್ರಸಿದ್ಧ ಔಷಧಿಗಳಿಂದ ಅತ್ಯಲ್ಪಕಾಲದಲ್ಲಿ ಕಷ್ಟವಿಲ್ಲದೆ ಸರಿಯಾಗಿ ಮುಟ್ಟಾಗುವುದು, ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು; ಸರಕಾರ ನಂದಿ ರಿಜಿಸ್ಟರಾಗಿದ್ದಾರೆ' ಬೆಲೆ ರೂ3 | ಕೈಯಿಂದ ಕೇಸುಗಳಿಗೆ ರೂ.5,(ವಿ ಪಿ 12 ಆಣೆ ಆಲಾದುದು) Mrs P. DEVEE, P. O. N. (N) Toll Gunge, Calcutta
ಸ್ಟಾಕಿಸ್ಟ್: ರಾಜಾ ಮೆಡಿಕಲ್ ಹಾಲ್, 31, ಫೆನ್ಸಾರಾಜ ಸ್ಟ್ರೀಟ್, ಬೆಂಗಳೂರು. (Cantt)

★ ಸ್ಥಾನಬದ್ಧ ಪ್ರಮುಖರ ಸ್ಥಳಾಂತರ ★

ಬಾಬುರಾಜೇಂದ್ರ ಪ್ರಸಾದರೊಬ್ಬರನ್ನು ಬಿಟ್ಟರೆ, ಈ ವರೆಗೆ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸದಸ್ಯರೆಲ್ಲಾ ಒಂದೆಡೆ ಒಟ್ಟಾಗಿದ್ದಾರೆ. ಕಳದ 31 ತಿಂಗಳುಗಳಿಂದಲೂ ಬೊಂಬಾಯಿ ಬಳಿಯ ಅಹಮ್ಮದ್ ನಗರದಲ್ಲೇ ಇವರ ಜತೆಜೀವನ ಸದ್ಯ ಅಹಮ್ಮದ್ ನಗರದ ಸ್ಥಾನಬದ್ಧ ಶಿಬಿರವನ್ನು ಬರ್ಖಾಸ್ತುಪಡಿಸುವ ಯೋಚನೆಯು ಸರಕಾರ್ಕಿದೆಯಂತೆ. ಕಾಂಗ್ರೆಸ್ ಪ್ರಮುಖರನ್ನು ಕೂಡಿಸಿಟ್ಟ ಈ ಕೋಟೆಯು ಕಾರಾಗೃಹವೇನೂ ಅಲ್ಲ. ಆಗಾ ಖಾನ್ ಅರಮನೆಯಂತೆ ಪರಿಸ್ಥಿತಿಗೆ ತಕ್ಕಂತೆ ಸರಕಾರವು ಅರಿಸಿಕೊಂಡಿದ್ದ ಒಂದು ಸುರಕ್ಷಿತ ನೆಲೆ. ಅಗೋಸ್ತು ಗಲಭೆ ನಡೆದು ಬಹಳಕಾಲ ಕಳೆಯುವವರೆಗೂ ನೆಹರುಗಳೇ ಆದಿಯಾಗಿ ಕಾಂಗ್ರೆಸ್ ಪ್ರಮುಖರೆಲ್ಲಿದ್ದಾರೆಂಬ ಗುಟ್ಟು ಯಾರಿಗೂ ತಿಳಿದಿರಲಿಲ್ಲ ಬೇರೆ ಬೇರೆ ಜೈಲುಗಳನ್ನು ಊಹಿಸಿದವರಿದ್ದಾರೆ; ಆದರೆ ಅಹಮ್ಮದ್ ನಗರದ ಸ್ವಪ್ನ ಯಾರಿಗೂ ಬೀಳಲಿಲ್ಲ ಆದ್ದರಿಂದ ಕಾಂಗ್ರೆಸ್ ಪ್ರಮುಖರ ಸ್ಥಾನಬದ್ಧ ಶಿಬಿರದ ಕುರಿತು ಏನೇನೋ ವಿಲಕ್ಷಣ ವಾರ್ತೆಗಳು ಹುಡಿದ್ದುವು ತಾನು ಅಡಗಿಸಿಟ್ಟ ಗುಟ್ಟು ವಿಕಾರ ವೇಷದಿಂದ ಹೊರಬಿದ್ದುದನ್ನು ಕಂಡು ಸರಕಾರವೇ ಬೇಸರಕ್ಕೀಡಾಗಿರಬೇಕು. ಕೊನೆಗೆ ಹೇಗೂ ವಾರ್ಲಿಮೆಂಟಿನಲ್ಲಿ ಅಹಮ್ಮದ್ ನಗರದ ಹೆಸರು ಕೇಳಿಬಂತು ಆಗಲೇ ದೇಶವು ಆ ಕಡೆಗೆ ನೋಡಹತ್ತಿದುದು ಇದು ವರೆಗೂ ನೋಡುತ್ತಿದೆ. ಈಗ ಬರುತ್ತಿರುವ ವಾರ್ತೆಯಂತೆ ಅಹಮ್ಮದ್ ನಗರದ ಬಂದೀಖಾನೆಯನ್ನೇ ಒಪ್ಪಾಸ್ತುಪಡಿಸಿ, ಅಲ್ಲಿರುವ ಧುರೀಣರನ್ನೆಲ್ಲಾ ಅವರವರ ಪ್ರಾಂತಗಳ ಜೈಲುಗಳಿಗೆ ವರ್ಗಾಯಿಸಲಿದ್ದಾರೆ. 31 ತಿಂಗಳ ಕುಟುಂಬ ಜೀವನಾನಂತರ ಈ ಪ್ರಮುಖರು ಪರಸ್ಪರ ಅಗಲುವಿಕೆಯ ವೇದನೆಯನುಭವಿಸಲಿದ್ದಾರೆ

ಅಲ್ಲಿರುವ ಪ್ರಮುಖರೆಂದರೆ–

1944ನೆ ಇಸವಿಯಲ್ಲಿ 2½ ಕೋಟಿಗೂ ಮಿಕ್ಕಿ ನ್ಯೂಜಹಾರನನ್ನು ಮಾಡಿದ ಪ್ರಥಮಶ್ರೇಣಿ ದೇಶೀ ವಿಮಾಸಂಸ್ಥೆಗಳಲ್ಲೊಂದಾದುದು

ಮದ್ರಾಸ ಶಾಖಾ ಕಾರ್ಯದರ್ಶಿಯರು
ಮತ್ತು
ಆಫ್ರಿಕಾ ಸುನ್ನಾನಗರಂದ ಕೂಡಿದ ದಕ್ಷಿಣ ಭಾರತದ ಪ್ರಾಮುಖ್ಯ ಎಜೆಂಟರ

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್
ಸ್ಥಾಪನೆ. 1910

ಕಳೆದ 35 ವರ್ಷಗಳಿಂದ ಪೂರಿಸಿದಾರಿಕೆಗೂ, ಪ್ರತಿನಿಧಿಗಳಿಗೂ ವಿಶೇಷ ವಿಮಾಮತಿ ಅನುಕೂಲತೆಗಳನ್ನು ಒದಗಿಸಿ ವೃದ್ಧಿಪಥಕ್ಕೆ ಏರ್ಪಿಸಿಗಳಿಂದ ಜನತಾಸೇವೆಯಲ್ಲಿ ನಿರತರಾಗಿ ಸದಾ ಸರ್ವದಾ ಅವೇ ಧ್ಯೇಯಾಪಾಲನೆಗೆ ಸಿದ್ಧರು.

1944ರಲ್ಲಿ 53ಲಕ್ಷ ವಿನೂತ ನ್ಯೂಜಹಾರದ ಗಣನೀಯ ಏರಿಸ್ವಾನೆ

ಕಾರ್ಯಾಲಯಗಳು:—
ಬೊಂಬಾಯಿ, ಬೆಂಗಳೂರು, ಮದ್ರಾಸು, ಮಂಗಳೂರು, ಕಲ್ಲಿಕೋಟಿ, ಮಧುರಾ, ಟ್ರಿವೆಂಡ್ರಂ. ಉಡುಪಿ.

S. V. S. High School, Katapadi.

ಕಟಪಾಡಿಯಲ್ಲಿ 'ಶ್ರೀ ವೆಂಕಟರಮಣ ಸ್ವಾಮಿ ಹೈಸ್ಕೂಲು ತಾ. 1—6—'45ನೇ ಗುರುವಾರ ತೆರೆಯಲ್ಪಡುವುದು

10ರಿಂದ 11ರ ವರೆಗಿನ ಪೂರ್ವಭಾವಿ ಪರೀಕ್ಷೆಯಲ್ಲಾಗಲಿ ಅಥವಾ ಪ್ರವೇಶ ವಿದ್ಯಾರ್ಥಿಗಳು ತಾ 1—6—'45ನೇ ಗುರುವಾರ ಆ ಶಾಲೆಗೆ ಬಂದು ಪ್ರವೇಶಾನುಮತಿಯನ್ನು ಪಡೆಯಬಹುದು ಎಂದು ವಿನಂತಿಸುತ್ತಾ ಅಭ್ಯಾಸದಲ್ಲಿ ಅವರ ಕಾರ್ಯಕ್ಕೆ ಸಹಾಯಕವಾಗಲಿಕ್ಕಾಗಿ ಶಾಲಾ ಸಮಯವನ್ನು ಬೆಳಿಗ್ಗೆ 7½ ರಿಂದ 11½ ವರೆಗೆ ಮಾಡಲಾಗಿದೆಯೆಂದು ತಿಳಿಸಲಿಚ್ಛಿಸುವೆವು.

ಸಿ. ವಾಸುದೇವ ನಾಯಕ್ ಎಂ ಎ,
ಮುಖ್ಯೋಪಾಧ್ಯಾಯರು.
ತಾ 2—4—'45. ಶ್ರೀ. ವೆಂ ಸ್ವಾ ವಿದ್ಯಾವರ್ಧಕ ಸಂಘ, ಕಟಪಾಡಿ

ಕ್ರೌನ್
ರಬ್ಬರ್ ಸ್ಟ್ಯಾಂಪ್ ಕಂಪೆನಿ
18 ಬಲ್ಮಠ ರಸ್ತೆ, ಮಂಗಳೂರು
ರಬ್ಬರ್ ಮೊಹರು ಸೈನ್ ಬೋರ್ಡ್ ಸ್ಟೆನ್ಸಿಲ್‌ಗಳಾಗಿ ಮಾಡಿಕೊಡಲ್ಪಡುವವು.
Crown Rubber Stamp Co.
18 Balmat Road, MANGALORE
Approved by the Govt of Mysore, Coorg & the Agent of the Govt of India & Ceylon ESTD 1936

ರುತ್ತದೆ. ಈ ಸುದ್ದಿಯು ಭಾಗವತರ್, ಕೃಷ್ಣನ್ ಮತ್ತು ಶ್ರೀ ರಾಮುಲು ನಾಯಿಡುಗಳ ಕಿವಿಗೆ ಬಿದ್ದೊಡನೆ, ಈ ವಾದಿವೇಲುವನ್ನು ಉಪಯೋಗಿಸಿಕೊಂಡು, ತಮ್ಮ ಬಗೆಗೆ ಮಿಟು ವಿಮರ್ಶಕ ಲಕ್ಷ್ಮೀಕಾಂತನನ್ನು ಶಾಂತ್ಯಗೊಳಿಸಬೇಕೆಂದು ಅವರು ನಿರ್ಧರಿಸಿದರು. ಇದಕ್ಕೆ ಮಧ್ಯಸ್ಥಗಾರನಾಗಿ ತಮಗೆ ಸುಪರಿಚಿತನೂ, ಜಲಚ್ಚಿತ್ರ ಪ್ರಪಂಚಕ್ಕೂ ಪರಿಚಿತನೂ ಆದ ಬೋಕ್ಸೆರ್ ಆರ್ಯವೀರ ಸೀನನನ್ನು ಜತಾಯಿಸಿದರು. ಸೂತ್ರಧಾರಿಗಳಾದ ಆ ಮೂವರು ಸುಪ್ರಸಿದ್ಧರೂ ಶ್ರೀಮಂತರೂ ಆಗಿರುವುದರಿಂದ, ತಾವೆಷ್ಟೇ ಹಣ ಮತ್ತು ಎಂತಹ ಸಹಾಯವಿಯ್ಯುವದಕ್ಕೂ ಸಿದ್ಧರಿದ್ದರೇ ಹೊರತು ಈ ಸಂಬಂಧದಲ್ಲಿ ಬೇಳಕೆಗೆ ಬೀಳಲು ತಯಾರಿರಲಿಲ್ಲ

ಮಾಫಿ ಸಾಕ್ಷಿ
ಜಯನಂದನನ ಹೇಳಿಕೆ-

ಕೊಲೆಯ ತೊದಲ ದಿನ ನಡೆದ ಸಿದ್ಧತೆಗಳೆಲ್ಲಾ ಮಾಫಿ ಸಾಕ್ಷಿ ಹೇಳಿದ ಜಯನಂದನನ ಬಾಯಿಯಿಂದ ಬಾಹುದನ್ನು ಎದ್ವೊಕೇಟ್ ಜನರಲರು ನಿವೇದಿಸಿಕೊಂಡಿದ್ದಾರೆ ಕೊಲೆ ಮಾಡಲ್ಪಟ್ಟ ಲಕ್ಷ್ಮೀಕಾಂತನು ತನ್ನ 'ಹಿಂದು ನೆಸಾಸ್' ಪತ್ರಿಕೆಯಲ್ಲಿ ಇದೇ ಜಯನಂದನ್ ಮತ್ತು ಆವನ ತಂಗಿ ಕ್ಲಾರಾಳ ಮೇಲೆ ತಕ್ಕೀದಾಯೀ ಲೇಖನ ಬರೆದಿದ್ದನಾದ್ದರಿಂದ ಇವನಿಗೂ ಆತನ ಮೇಲೆ ಪ್ರಾಣಾವಧಿ ದ್ವೇಷವಿತ್ತು. ಪ್ರಥಮ ಬಾರಿ ನಡೆದ ಒಕ್ಯೂಬರನ ತಿಪತದ ವಾರ್ತೆ ಕೇಳಿದ ಜಯನಂದನನು ಸದ್ಯದ ಆರೋಪಿಗಳಲ್ಲಿಬ್ಬರಾದ ನಾಗಲಿಂಗಮ್ ಮತ್ತು ಆತನ ಭಾವಮೈದುನ ರಾಜ ಬಾಡಾರನ ಭೇಟಿಯಾಗಿ ಸಂಗತಿಯೇನೆಂದು ವಿಚಾರಿಸಿದ. 'ಲಕ್ಷ್ಮೀಕಾಂತನನ್ನು ತಿವಿದವ ವಾದಿವೇಲು; ಆದರೆದೆ. ಗುರಿ ತಪ್ಪಿತು. ಆದರೆ ಲಕ್ಷ್ಮೀಕಾಂತನನ್ನು ಪೂರ್ತಿ ಮುಗಿಸಿಬಿಡುವ ವ್ಯವಸ್ಥೆ ನಡೆದಿದೆ. ಸ್ವಲ್ಪ ಸಮಯ ಕಾಯಬೇಕು'—ಎಂದು ಅವರೆಂದಾಗ ತಾನೂ ಅದಂಲ್ಲಿ ಸೇರುವೆನೆಂದು ಜಯನಂದನನಾಡಿದ್ದ. ಆ ಮೇಲಿನ ಒಳಸಂಚಿನಲ್ಲಿ ಈ ಜಯನಂದನನೂ ಸೇರಿದ್ದನಲ್ಲದೆ, ಕೊಲೆಯ ಹಿಂದಿನ ದಿನವಾದ ನವೆಂಬರ್ ತಾ 7ರಲ್ಲಿ ಮೂರೇ ಮಾರ್ಕೆಟಿನಲ್ಲಿ ಸೇರಿದ ಒಳಸಂಚುಗಾರರ ಕೂಟದಲ್ಲಿ ಅವನೂ ಹಾಜರಿದ್ದ. ಅಲ್ಲಿ ಜಯನಂದನ್, ವಾದಿವೇಲು, ನಾಗಲಿಂಗಮ್, ರಾಜ ಬಾಡಾರ್, ಅರುಮುಗ ಮುದಲಿಯವರು ಕೂಡಿ ಪರ್ಯಾಲೋಚಿಸಿದ ಮೇಲೆ ಆರ್ಯವೀರ ಸೀನನ್ ಸೂಚಿಸಿದ "ನಾವಿಗ 'ಅಸಾಮಿ'ಗಳ ಭೇಟಿಗೆ ಹೋಗಬೇಕು". ಅಸಾಮಿಗಳಾದ ಭಾಗವತರ್ ಮತ್ತು ಕೃಷ್ಣನ್‌ರ ಭೇಟಿಗಾಗಿ ಈ ಪಂಗಡವು ವಾಲ್ ಟೇರ್ಸ್ ಥಿಯೇಟರಿಗೆ ಹೋಯಿತು.

ಪ್ರತಿಜ್ಞಾ ಸ್ವೀಕಾರ!

ಆ ಪೈಕಿ ಅರುಮುಗ ಮುದಲಿ ಮತ್ತು ವಾದಿವೇಲು ಹೊರಗೆ ನಿಂತರು; ಮಿಕ್ಕುವರೆಲ್ಲಾ ಒಳಗೆ ಹೋಗಿ ಭಾಗವತರ್ ಮತ್ತು ಕೃಷ್ಣನ್‌ರ ಭೇಟಿ ಪಡೆದರು. "ನೀನು ಹೇಳಿದ ಜನರು ಇವರೇ ಏನು?" ಎಂದು ಭಾಗವತರ್ ಸೀನನನ್ನು ಪ್ರಶ್ನಿಸಿದಾಗ 'ಹೌದು' ಎಂದ ಸೀನನ್. ಭಾಗವತರ್ ಆವರನ್ನು ಸಂಬೋಧಿಸುತ್ತಾ ಹೇಳಿದರು. "ನಮ್ಮ ಸ್ಥಾನಮಾನಗಳೆಂಥವೆಂಬುದನ್ನು ನೀವು ಬಲ್ಲಿರಿ ನಮ್ಮ ಘನಸ್ಥಿಕೆಗೆ ಕುಂದು ಬಾರದಂತೆ ನೀವು ನೋಡಬೇಕು. ನಿಮಗೆ ಬೇಕಾದಷ್ಟು ಹಣ ನಾವು ಕೊಡುತ್ತೇನೆ. ಆದರೆ ನೀವು ನಮ್ಮನ್ನು ಬೆಳಕಿಗೆ ಹಾಕುವದಿಲ್ಲವೆಂದು ಭಾಷೆ ಕೊಡಿ". ಆವರೆಲ್ಲರೂ ಮಾತುಕೊಟ್ಟರು. ಇಷ್ಟರಿಂದಲೇ ಆ ಪ್ರೇರೇಪಕರಿಗೆ ಸಮಾಧಾನವಾಗಲಿಲ್ಲ. ವೀಳ್ಯದೆಲೆ ಮತ್ತು ಉಪ್ಪನ್ನು ತರಿಸಿ ಕೃಷ್ಣನ್ ಆವರಲ್ಲಿ ಪ್ರತಿಯೊಬ್ಬನಿಗೂ ವೀಳ್ಯದೆಲೆಯ ದಂಟು ಮತ್ತು ಉಪ್ಪನ್ನು ಜಗಿಯಲು ಕೊಟ್ಟ. ಭಾಗವತರ್ ಹೇಳಿದರು: "ನಮ್ಮಿಂದ ಇದನ್ನು ಮಾಡಿಸಿದ್ದು ಯಾಕೆಂದು ಬಲ್ಲಿರಾ? ಉಪ್ಪು ನಮ್ಮ ಕಷ್ಟಾರ್ಜಿತ ಧನವನ್ನೂ, ದಂಟು ನಮ್ಮ ಮೈ ಮಾಂಸವನ್ನೂ ಸೂಚಿಸುತ್ತದೆ ನಮ್ಮ ಉಪ್ಪು ಮತ್ತು ರಕ್ತಮಾಂಸವನ್ನು ತಿಂದ ನೀವು ನಮಗೆಂದಿಗೂ ನೋಸಮಾಡಬಾರದು. ಇದೇ ಈ ಪ್ರತಿಜ್ಞೆಯ ಜರ್ಥ". ಆವರೆಲ್ಲರೂ ಒಪ್ಪಿಕೊಂಡರು ಭಾಗವತರ್ ನೋಟುಗಳ ಕಟ್ಟೊಂದನ್ನು ತೆಗೆದು ಕೃಷ್ಣನ್ ಕೈಯಲ್ಲಿ ಕೊಟ್ಟಾಗ ಕೃಷ್ಣನ್ ಆ ದನ್ನ ಸೀನನಿಗೆ ಕೊಟ್ಟ. ಅದು ಮುಂಗಡವಾಗಿ ಕೊಟ್ಟ ರೂ. 500. ಉಳಿದ ಅಂಶವನ್ನು ಕೆಲಸ ಮುಗಿದ ಮೇಲೆ ಕೊಡುವ ತಕಾ. ಒಳಸಂಚಿನ ಈ ವಾರ್ತೆಯನ್ನೆಲ್ಲಾ ನಾಫಿ ಸಾಕ್ಷಿ ಜಯನಂದನನ ಹೇಳಿಕೆಯೆಂದೆತ್ತಿ ಎದ್ವೊಕೇಟ್ ಜನರಲರು ವಿವರಿಸಿದರು.

ಕೆಲಸ ಜ್ಯಾರಿ!

ವಾದಿವೇಲು ತನ್ನನ್ನು ತಿವಿದನೆಂದು ಒಕ್ಟೋಬರ್ 19ರಲ್ಲಿ ಲಕ್ಷ್ಮೀಕಾಂತನ್ ಪೋಲಿಸ್ ಫಿರ್ಯಾದಿ ಕೊಟ್ಟಿದ್ದನಷ್ಟೆ. ವಿಚಾರಣೆಗೆಯೋಗ್ಯವಲ್ಲವೆಂದು ಪೋಲಿಸರದನ್ನು ಗಣಿಸದಿದ್ದುದರಿಂದ, ಖಾಸಗೀ ಮೊಕದ್ದಮೆಯನ್ನೇ ಹೂಡಬೇಕೆಂದು ಲಕ್ಷ್ಮೀಕಾಂತನ್ ನವೆಂಬರ್ 7ನೇ ರಾತ್ರಿ ತನ್ನ ವಕೀಲರಾದ ಎಡ್ವೊಕೇಟ್ ನಗರ್ಜುನಯ್ಯರ ಮನೆಗೆ ತನ್ನ ಮಿತ್ರ ಗೋಪಾಲ ಸ್ವಾಮಿ ಜೆಟ್ಟಿಯೊಂದಿಗೆ ಹೋಗಿದ್ದ. ಎಡ್ವೊಕೇಟರು ಫಿರ್ಯಾದಿಯ ಕರಡುಪ್ರತಿ ತಯಾರಿಸಿ, 'ಇದನ್ನು ಟೈಪು ಮಾಡಿಕೊಂಡು ನಾಳೆ ಮುಂಜಾನೆ ತಿನ್ನಿ' ಎಂದು ಕೊಟ್ಟರು ಲಕ್ಷ್ಮೀಕಾಂತನ್ ಅದನ್ನು ಹಿಡಿದುಕೊಂಡು ತನ್ನ ಮಿತ್ರ ಗೋಪಾಲ ಸ್ವಾಮಿಯೊಂದಿಗೆ ರಾತ್ರಿಯಲ್ಲೇ ಮನೆಗೆ ಹೊರಟ.(ಬರುವಾಗ ಹಾದಿಯಲ್ಲಿ ಅಲ್ಲಲ್ಲಿಂದ ಕೆಲವರು ಇವರ ಬೆನ್ನು ಹಿಡಿದು ಬಂದದ್ದು, ಕೊನೆಗೆ ರಸ್ತೆ ತಿರುಗುವಲ್ಲಿ ಕಾಣೆಯಾದದ್ದು ನೊದಲಾದ ಸಂದೇಹಾಸ್ಪದ ಸಂಗತಿಗಳು ಈ ಗೋಪಾಲ ಸ್ವಾಮಿಯ ಸಾಕ್ಷಿಯಲ್ಲಿ ಬಂದಿವೆ) ಮರುದಿನ ಮುಂಜಾನೆ ಲಕ್ಷ್ಮೀಕಾಂತನನು ಆದನ್ನು ಟೈಸ್ ಮಾಡಿಸಿಕೊಂಡು ಗೋಪಾಲ್ ಎಂಬವನ ರಿಕ್ಷಾ ಹತ್ತಿ ವಕೀಲರಲ್ಲಿಗೆ ಹೋದ. ಎ ಡ್ವೋಕೇಟರದನ್ನು ಮಂಜೂರು ಮಾಡಿ, ಅದನ್ನು ಪೋಲಿಸ್ ಸ್ಟೇಶನಿಗೆ ದಾಖಲು ಮಾಡಿರೆಂದು ಲಕ್ಷ್ಮೀಕಾಂತನನ್ನು ಬೀಳ್ಕೊಟ್ಟರು. ಆತ ರಿಕ್ಷಾ ಹತ್ತಿ ಹೊರಟ. ಗೋಪಾಲನ ರಿಕ್ಷವು ಜನರಲ್ ಕೊಲ್ಲಿನ್ಸ್ ರಸ್ತೆ ತಿರುಗುವಲ್ಲಿಗೆ ಬಂದಾಗ ಹಿಂದಿನಿಂದಿಬ್ಬರು ಧಾವಿಸಿ ಬಂದು ರಿಕ್ಷವನ್ನು ಸಟಕ್ಕನೆ ಹಿಂದೆ ಜಗ್ಗಿದರು. ಆ ರಭಸಕ್ಕೆ ಲಕ್ಷ್ಮೀಕಾಂತನ್ ಮುಗ್ಗರಿಸಿ ಕೆಳಗೆ ಬಿದ್ದ. ರಿಕ್ಷಾವಾಲನು ತುಸು ದೂರಹೋಗಿ ಅಲ್ಲಿಯೇ ಕಂಪೌಂಡ್ ಗೋಡೆಯ ಹತ್ತಿರ ನಿಂತ ಆಗ ನ್ಯಥನಾರೋಪಿ ವಾದಿವೇಲು ಲಕ್ಷ್ಮೀಕಾಂತನನ್ನು ಕತ್ತರಿಯಿಂದ ತಿವಿಯುವಾಗ, ದ್ವಿತೀಯಾರೋಪಿ ನಾಗಲಿಂಗಮನು ರಿಕ್ಷಾವಾಲ ನಿಂತಲ್ಲಿಗೆ ಬಂದು, ಒಂದೇಟು ಕೊಟ್ಟು, "ಸೂಳೇ ಮಗನೇ, ಏನು ನಿ-ತು ನೋಡುತ್ತೀ? ಓಡು ಇಲ್ಲಿಂದ" ಎಂದು ಲಕ್ಷ್ಮೀಕಾಂತನ್ ಬಿದ್ದಲ್ಲಿಗೆ ಬಂದು ಆತನೂ ಚೂರಿ ಹಾಕಿದ. ಆ ಮೇಲೆ ಆವರಿಬ್ಬರೂ ಪೂರ್ವದಿಕ್ಕು ಹಿಡಿದು ಓಡಿಹೋದರು.

ಆ ಮೇಲೆ

ರಿಕ್ಷಾವಾಲ ಗೋಪಾಲ ಬಂದು ಲಕ್ಷ್ಮೀಕಾಂತನನ್ನೆಬ್ಬಿಸಿದ. ನೋವಿನಿಂದ ನರಳುತ್ತಾ ಲಕ್ಷ್ಮೀಕಾಂತನ್ ಕೆಬ್ಬೊಟ್ಟಿಗೆ ನಾಟಿದ್ದ ಕರಾರಿಯನ್ನು ಸ್ವತಃ ಕಿತ್ತು ಬಿಸಾಡಿದಾಗ ಗೋಪಾಲ್ ಅದನ್ನು ಹಿಕ್ಕಿ ರಿಕ್ಷದೊಳಗಿಟ್ಟು ಲಕ್ಷ್ಮೀಕಾಂತನ್ ಎರಡೂ ಕೈಗಳಿಂದ ಘಾಯವನ್ನು ಒತ್ತಿ ಹಿಡಿದುಕೊಂಡು ವಕೀಲ್ ನಗುನಮರ ಮನೆ ಕಡೆಗೆ ನಡೆಯುತ್ತಾ ಮುಂದೊತ್ತಿದ. ಇಷ್ಟರಲ್ಲೇ ಯಾರೋ ತಿವಿಯಲ್ಪಟ್ಟರು ಎಂಬ ವಾರ್ತೆ ಕೇಳಿ ಹೊಂಟಿದ್ದ ವಕೀಲರು ಅರ್ಧ ಹಾದಿಯಲ್ಲಿ ರಕ್ಕ ಸೋರುತ್ತಾ ಬರುತ್ತಿರುವ ಲಕ್ಷ್ಮೀಕಾಂತನನ್ನು ಸಂಧಿಸಿದರು ಆವನನ್ನು ಆದರಿಸಿ, ಅಲ್ಲಿಗೆ ಬಂದ ಚಿನ್ನಪ್ಪಯ್ಯನ್ ಎಂಬವನ ರಿಕ್ಷದಲ್ಲಿ ಲಕ್ಷ್ಮೀಕಾಂತನನ್ನು ಹೆತ್ತಿಸಿ, ಗೋಪಾಲನ ರಿಕ್ಷದಲ್ಲಿ ಬ್ರೂ ಎಂಬ ನಿವೃತ್ತ ಟೆಲಿಗ್ರಾಫಿಸ್ಟರನ್ನು ಕುಳ್ಳರಿಸಿ ಜತೆ ನೂಡಿ ಆಸ್ಪತ್ರೆಗೆ ಸಾಗಿಸಿದರು. ಮಧ್ಯ ಹಾದಿಯಲ್ಲೇ 'ಲಕ್ಷ್ಮೀಕಾಂತನ್ ಪೋಲಿಸ್ ಸ್ಟೇಶನಿಗೆ ಹೋಗಿ ವಾಗ್ಮೂಲ ಕೊಟ್ಟು ಆಸ್ಪತ್ರೆಗೆ ಸಾಗಿದ. ಮರುದಿನ ಮುಂಜಾನೆ ನಾಲ್ಕು ಘಂಟೆಗೆ ಕಾಲವಾಸ."

ಇದು ಈಗಲೂ ಮದ್ರಾಸ್ ಸೆಶ್ಶನ್ಸ್ ಹ್ಯಾಕೋರ್ಟಿನಲ್ಲಿ ವಿಚಾರಣೆಯಲ್ಲಿರುವ 'ಲಕ್ಷ್ಮೀಕಾಂತನ್ ತಿವಿತ ಮೊಕದ್ದಮೆ' ಯಲ್ಲಿ ಪ್ರೊಸಿಕ್ಯೂಶನ್ ಕಡೆಯ ಕಥಾಸಾರ. ಎಡ್ವೋಕೇಟ್ ನಗರ್ಜುನಮ್, ಮಿ. ಬ್ರೂ, ರಿಕ್ಷಾವಾಲಂದ ಗೋಪಾಲ್, ಮತ್ತು ಚಿನ್ನಪ್ಪಯ್ಯ, ವೈದ್ಯ ಪರೀಕ್ಷಕರು, ಸಬ್ ಇನ್ಸ್‌ಪೆಕ್ಟರರು, ಡಾಕ್ಟರರು ಮೊದಲಾದವರ ಸಾಕ್ಷಿ ವಿಚಾರಣೆ ಮುಗಿದಿದೆ. ಮುಂದಿನ ವಿಚಾರಣೆಯೂಗುತ್ತಿದೆ.

ಆಲೆಕ್ಸ್ ಪೈ ಡಿಸ್ಪಿಲರಿ,
ಮಂಗಳೂರು.

ಇವರು ಈ ತಿಂಗಳಾಂಭದಿಂದ ಉಡುಪಿ ಇಗರ್ಜಿ ಬಳಿಯಲ್ಲಿ ಬೆಲ್ಲ ಖರೀದಿ ಮಾಡುವ ಒಂದು ಡಿಪೋವನ್ನು ತೆರೆದಿರುತ್ತಾರೆ. ಈ ಡಿಪೋದಲ್ಲಿ ನ್ಯಾಯವಾದ ಮಾರ್ಕೆಟ್ ವರದಲ್ಲಿ ಬೆಲ್ಲವು ಚಿಲ್ಲರೆಯಾಗಿಯೂ ರಟುಂ ಆಗಿಯೂ ತೆಗೆದುಕೊಳ್ಳಲ್ಪಡುವುದು.

F. P. S Albuquerque

ದಿ ವಿಜಯ ಸ್ಟೋರ್ಸ್ ಲಿಮಿಟೆಡ್.

(1913ನೆ ಇಸವಿ ಇಂಡಿಯನ್ ಕಂಪೆನಿ ಆಕ್ಟಿಗನುಸಾರವಾಗಿ ಇನ್‌ಕೊರ್ಪರೇಟ್ ಮಾಡಲಾಗಿದೆ.
ರಿಜಿಸ್ಟರ್ಡ್ ಹೆಡ್ ಆಫೀಸು:—ಮಂಗಳೂರು, (ದ ಕ.)
(28-10-44ರಲ್ಲಿ ರಿಜಿಸ್ಟ್ರಿಯಾದುದು. ಮೆಂಬರರ ಬಾಧ್ಯತೆ ಮಿತವಾದುದು).

ಅಧಿಕೃತ ಷೇರು ಭಂಡವಳ ರೂ. 3,00,000
ಕಿತ್ತ ಷೇರು ಭಂಡವಳ ರೂ. 50,000

ವಿಭಾಗಿಸಲ್ಪಟ್ಟ ವಿವರ 10 (A) ಶೇರುಗಳು ರೂ. 1000ರಂತೆ
10 (B) ಶೇರುಗಳು ರೂ. 500ರಂತೆ
100 (C) ಶೇರುಗಳು ರೂ. 250ರಂತೆ
100 (D) ಶೇರುಗಳು ರೂ 100ರಂತೆ (ಬರಾಬರಿ)

ರಿಫೆನ್ಸ್ ಒಫ್ ಇಂಡಿಯಾ ರೂಲ್ಸು 94 Aರಂತೆ ಷೇರುಗಳನ್ನು ವಿಕ್ರಯಿಸುವಲೆ ಕೇಂದ್ರ ಸರಕಾರವ ಅನುಮತಿ ಪೊರೆದಿದೆ. ಇಂಡಿಯಾ ಸರಕಾರವು ಈ ಅನುಮತಿಯನ್ನೀಯುವಾಗ ಸ್ಟೋರ್ಸಿನ ಆರ್ಥಿಕ ಭದ್ರತೆ ಲೆಬ್ಬ ಪತ್ರಗಳ ಸ್ಕೇರ್‌ಮೆಂಟಿನ ಸರ್ವ ಸನುತೆ ಇತ್ಯಾದಿಯ ಜವಾಬ್ದಾರಿಯನ್ನು ವಹಿಸಿಕೊಂಡಿಲ್ಲನೆಂಬುದನ್ನು ಸ್ಪಷ್ಟಪಡಿಸಲಾಗಿದೆ.

ಕುಂದಾಪುರ ತಾಲೂಕಿನಲ್ಲಿ ಈ ಮಾದರಿಯ ನೆಲೆಯಲ್ಲಿ ಸ್ಥಾಪನವಾದ ಒಂದೇ ಒಂದು ಸಂಸ್ಥೆ. ಜಿಲ್ಲೆಯ ಈ ದೊಡ್ಡ ಸ್ಟೋರ್ಸಿನ ವ್ಯವಹಾರ ವಿಸ್ತರಣಾ ಯೋಜನೆಯಲ್ಲಿ ಸೇರಿ ಪ್ರೋತ್ಸಾಹಿಸಿರಿ

THE VIJAYA STORES LTD., MANGALORE.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್ ಉಡುಪಿ.

ಯಶಸ್ವಿ 3ನೇ ವಾರ!

ಕಾಂತಾರಾಮ ದಿಗ್ದರ್ಶಿತ

"ಶಕುಂತಲಾ"

ಮುಂದಿನ ಚಿತ್ರ

ಹಮೀರ್‌ಬಾತ್

ದೇವಿಕಾರಾಣಿ ಮತ್ತು ಜೈರಾಜ್.

CHAMPAE'S
Snow & Lastrex
(Sole Distributers for (India)
Sukhananda Stores

ಬಿಡಿನುಡಿ

'ದಕ್ಷಿಣ ಕನ್ನಡದಲ್ಲಿ ಅಧಿಕಾರಿಗಳು ತಕ್ಷೀನನೆ ಭೀತಿಹುಟ್ಟಿಸಿ, ಇತಿಮಿತಿಯಿಲ್ಲದೆ ಧಾನ್ಯ ಸಂಗ್ರಹಿಸಿ, ವಾರದಲ್ಲಿ ಎಂಡುದಿನ ಹಳ್ಳಿಗರು ಉಪವಾಸವಿರುವಂತೆ ಮಾಡಿದ ವದನ್ನು' ಚರ್ಚಿಸಲು ಶ್ರೀ. ಕೆ ಬಿ ಜಿನರಾಜ ಹೆಗ್ಡೆಯವರಿಂದ ಕೇಂದ್ರ ಎಸೆಂಬ್ಲಿಯಲ್ಲು ಒಂದು ಸಲ ನೋಟೀಸು ಕೊಟ್ಟಿದ್ದರು.

ಆದಾರ ಸಚಿವ ಶ್ರೀ. ಶ್ರೀಪತ್ಸವರಿಂದ ಅದಕ್ಕೆ ವಿರೋಧ ಬಂತು.

'ಮದ್ರಾಸ್ ಸರಕಾರದೊಡನೆ ವಿಚಾರಿಸಿದಾಗ ಇದು ಆತಿರಯೋಕ್ತಿ ಎಂದು ತಿಳಿದು ಬಂದಿದೆ' ಎಂದರು ಶ್ರೀ ಶ್ರೀ ವತ್ಸನ.

'ಈ ವಿಷಯವು ಸಂರಯಾಸ್ಪದ'ವೆನ್ನುತ್ತಾ ಅಧ್ಯಕ್ಷರು ಶ್ರೀ. ಹೆಗ್ಡೆಗಳ ಸೂಚನೆಯನ್ನು ತಳ್ಳಿ ಹಾಕಿದರು.

'ಇಡೀ ವಾರದ ಅಕ್ಕಿ ಪಡೆಯಬೇತ್ತಾರೋ-ವಾರಕ್ಕೆರಡು ದಿನ ಉಪವಾಸವಿಟ್ಟು ತ್ತಾರೋ'-ಎಂಬ ವಿಷಯದಲ್ಲೇ ಆ ಸಂತಯ.

ವಾರಕ್ಕೆಷ್ಟು ದಿನ?

ಈ ಪುಟ್ಟಗೂ ಸಂರಯಕ್ಷಿಪ್ತವಿದಸಿದೆ.

ಸಂಶಯದಷ್ಟು ಸೊಡ್ಡ ಸಂಕಟ ಬೇರೊಂದಿಲ್ಲ. ವಾರಕ್ಕೆರ್ಡುದು ದಿನವೆಂದಾದರೆ ಸಂಶಯವೆಲ್ಲಾ ನಿವಾರಣೆ.

ಸ್ಟೇಂಡರ್ಡ್ ಫುಂಟೆಯನ್ನು ಮುಂದು ವರಿಸಿದಂತೆ ವಾರವನ್ನು ಹಿಂದಿರಿಸಿದರಂ ಗದು?

ಈಗಿನ ದಿರ್ದಾನಗಳನ್ನು ಸಾಧ್ಯವಿದ್ದಷ್ಟು ಕಡಿಮೆ ಮಾಡುವದು ಎಲ್ಲಕ್ಕೂ ಹಿತಕರ.

೦೦ ೦೦ ೦೦

'2ವರುಷದಿಂದ 12 ವರುಷಗಳ ವರೆಗಿನವರಿಗೆ ಅರ್ಧಪಡಿ-2ವರುಷದ ಒಳಗಿನ ಮಕ್ಕಳಿಗೆ ಅಕ್ಕಿಯೇ ಇಲ್ಲ'ದಿರುವ ಮದ್ರಾಸ್ ಸ್ಕಾಂತ್ಯದ ಸದ್ಧತಿಯ ಕರಿತು ಶ್ರೀ ಜನರಾಜ ಹೆಗ್ಡೆಗಳು ಒಂಗು ಸುಳ್ಳಿ ಕೇಳಿದರು.

ಲೈಸೆನ್ಸ್ ರವರ ಸಚಿವರು ಕೂಟ್ಟ ಉತ್ತರದಿಂದ ಹಿಂದೀ ಸರಕಾರದ ಧೋರಣೆ ಬೇರೆಯೇ ಎಂದು ತಿಳಿದು ಬಂತು.

'ಹುಟ್ಟಿದಂದಿನಿಂದ 8 ವರುಷಗಳ ವರೆಗೆ ಅರ್ಧ ಪಡಿ-ಆ ಮೇಲಿನವರಿಗೆಲ್ಲಾ ಪೂರ್ಣ ಹೆಸರಿಗೆ'-ಇದು ಕೇಂದ್ರ ಸರಕಾರದ ಧೋರಣೆ.

'ಎಲ್ಲಾ ಸ್ಕಾಂತಿಕ ಸರಕಾರಗಳೂ ಇದರಂತೆಯೇ ವರ್ತಿಸಬೇಕು' ಎಂದು ಕೇಂದ್ರ ಸಚಿವರು ಕೇಳಿಕೊಂಡಿದೆಯಂತೆ.

ಸಾಕಿಸಾಕಾಗಿ ಇನ್ನು ಮಾಡಿದರಾಜಿನಾಜಿ ಮದ್ರಾಸಿಗರು.

ದ್ರಾವಿಡ ಸ್ಕಾನ್ ಕೇಳುತ್ತಿರುವ ಶ್ರೀ ರಾಮಸ್ವಾಮಿ ನಾಯ್ಕರರೂ ಮದ್ರಾಸಿನವರೇ.

ಇವರಿಬ್ಬರು ಮದ್ರಾಸಿನಲ್ಲಿದ್ದರೂ ಮದ್ರಾಸ್ ಹಿಂದುಸ್ಥಾನದಲ್ಲೇ ಇದೆ.

ಆದರೆ ಹಿಂದೀ ಸರಕಾರದ ಧೋರಣೆ ಮಾತ್ರ ಮದ್ರಾಸಿನಲ್ಲಿ-ಅದರೊಳಗಿರುವ ದ. ಕ.ದಲ್ಲಿ-ಜ್ಯಾರಿಯಲ್ಲಿಲ್ಲ.

ಬೇರೆ ಸ್ಕಾಂತ್ಯಗಳಲ್ಲಿ ಹುಟ್ಟಿದೆ ಮದ್ರಾಸಿನಲ್ಲೇ ಹುಟ್ಟಿದರೆ-

2 ವರುಷಗಳ ವರೆಗೆ ಆಹಾರವೇ ಇಲ್ಲ.

12 ವರುಷಗಳಾಗುವ ವರೆಗೆ ಅರ್ಧ ಪಡಿ ಹೊರತು ಪೂರ್ಣ ಪಡಿಯಿಲ್ಲ.

ಹುಟ್ಟಿದೊಡನೆ ಆಹಾರ ಬೇಕಾಗುತ್ತದೆಂದು ಕೇಂದ್ರ ಸರಕಾರದ ಅಧಿಕಾರಿಗಳಿಗಾದರೆ ತಿಳಿದಿದೆ.

ಮದ್ರಾಸಿನ ಅಧಿಕಾರಿಗಳಿಗೂ ಮಕ್ಕಳಿರಬೇಕು.

ಅಧಿಕಾರಿಗಳ ಮಕ್ಕಳು-ಎರಡು ವರುಷಗಳ ವರೆಗೆ ಅಕ್ಕಿಯಾಹಾರ ಬಿಟ್ಟಾವು

ಆದರೆ ಸಾಮಾನ್ಯರ ಮಕ್ಕಳಿಗೆ ಬೇರೆ ನಿಯೆ!

'ಉಂಟುಮಾಡಿದ ದೇವನೂಟ ಕೊಡಲಾರನೆ?' ಎಂಬ ಗಾದೆಯಿದೆ.

ಸದ್ಯ 'ಉಂಟುಮಾಡಿ ಎರಡು ವರ್ಷಗಳ ನಂತರ ಊಟ ಕೊಡಬಲ್ಲ'

ಇದ್ದರಿಂದ ನವಮಾಸ ತುಂಬಿದೊಡನೆ ಜನಿಸುವ ಜೀವಿಗಳು ಅನಸರಬಿಡಲಿ

ಮದ್ರಾಸ್ ಸ್ಕಾಂತ್ಯದ ಮಟ್ಟಿಗೆ ಆವು ಹುಟ್ಟಬೇಕಾದ ಅವಧಿ:9+24 ಮಾಸಗಳು!

೦೦ ೦೦ ೦೦

ಸಸ್ಯ ಸಂಧಾನ ಸಮಿತಿಯ ಪುರಸ್ಕಾರಗಳಿಗೆ ಶ್ರೀ ಕೆ ಆರ್ ಕಾರಂತರು ಕೊಟ್ಟ ಉತ್ತರದಲ್ಲಿ ಕೆಳಗಿನ ಅಂಶವಿದೆ —

'ನನ್ನ ಸ್ಪಾಸುಧನವನ್ನು ಪೋಲುಮಾಡಿದರೆ ನಾನು ಕಳೆದ ೭೬ ವರುಷಗಳಲ್ಲಿ ಸ್ವಾತಂತ್ರ್ಯ ಮತ್ತು ಉದ್ಯೋಗ ಕಳೆಕೊಂಡು ದಿಗ್ಬಂಧನದಲ್ಲಿದ್ದೆ;

'ಉದ್ಯೋಗ, ಅದಾಯಗಳನ್ನು ಕಳೆಕೊಂಡು ವಿಚಾರಣೆಯಿಲ್ಲದೆ ಬಂಧಿಸಲ್ಪಡುವವರಿಗೆ ಸರಕಾರವು ಪರಿಹಾರ ದ್ರವ್ಯ ಕೂಡುವ ರಾಜ್ಯಶಾಸನಬೇಕು.'

ಸಸ್ಯ ಸಮಿತಿಯು ತನ್ನ ಶಿಫಾರಸಿನಲ್ಲಿ ಈ ಸೂಚನೆಯನ್ನು ಅಗತ್ಯವಾಗಿ ನೇರಿಸಿಕೊಳ್ಳಬೇಕು.

ಯಾತಕೆಂದರೆ, ರಾಜಕೀಯ ದೃಷ್ಟಿಯಿಂದಲ್ಲವಾದರೂ ಆರ್ಥಿಕ ದೃಷ್ಟಿಯಿಂದ ಸಂಸ್ಕಾರಕ್ಕೆ ಈ ಸೂಚನೆ ಪಥ್ಯವಾಗಬಹುದು.

ಈ ಕಾಲದಲ್ಲಿ ಕೆಲವರ ಅದಾಯವಂತೂ ಮಿಸಿವೀರಿದೆ

ಸಹಜವಾಗಿ ಸರಕಾರಕ್ಕೆ ಎಲ್ಲಾ ನಿಧದ ಆದಾಯಗಳ ಮೇಲೂ ಕಣ್ಣು ಬಿದ್ದಿದೆ.

ಆದಕ್ಕಾಗಿ ಬೇರೆ ಬೇರೆ ನಿಧದ ತೆರಿಗೆಗಳನ್ನೆದು ಹೇರಬೇಕಾಗುತ್ತದೆ.

'ಜೇಸಾಯ ಹುಟ್ಟುವಳಿಯ ಮೇಲಿನ ಆದಾಯ ತೆರಿಗೆ'ಯು ಇತ್ತೀಚೆಗಿನ ನಿದರ್ಶನ.

ಮೇಲಿನ ಸೂಚನೆಗಳುಗುಣವಾದ ಒಂದೇ ಶಾಸನವನ್ನು ಜ್ಯಾರಿಗೆ ತಂದರೆ ಹಲವು ಕೆಲಸಗಳನ್ನು ಕಡಿಮೆ ಮಾಡಿಕೊಳ್ಳಬಹುದು.

ಅದಾಯವಿರುವವರನ್ನು (ಆದಾಯವನ್ನೂ) ದಿಗ್ಬಂಧನದಲ್ಲಡ್ಡುವದು-ಅದಕ್ಕೊಂದಿಷ್ಟು ಪರಿಹಾರ ದ್ರವ್ಯ ಕೊಡುವದು!

—ಜೀವಿವಾಲ

NOTICE.

ದ. ಕ. ಜಿಲ್ಲಾ ಶಿಕ್ಷಣ ಬಂಟರ ಯಾನೆ ನಾಡವರ ವಿದ್ಯಾವರ್ಧಕ ಸಂಘ (ರಿಜಿಸ್ಟರ್ಡ್), ಶಿರ್ವ ಇದರ ವಾರ್ಷಿಕ ಮಹಾ ಸಭೆಯು ಇದೇ ಬುಧವಾರ ತಾ.22 4 45ನೇ ಆದಿತ್ಯವಾರ ದಿನ ಸಾಯಂಕಾಲ ಗಂಟೆ 3 30ಕ್ಕೆ ಸಂಘದ ಭವನದಲ್ಲಿ ಜರಗಲಿರುವುದರಿಂದ, ಎಲ್ಲಾ ಮೆಂಬರರೂ ದಯವಿಟ್ಟು ಬರಬೇಕಾಗಿ ವಿನಂತಿ.

K. Muddu Shetty,
ಅಧ್ಯಕ್ಷ.

Office of the Society, Shirva.
5-4-45



ಯಾವತ್ತೂ ವಿಧದ ಬೆಳ್ಳಿ, ತಾಮ್ರ ಪಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾನ್ಯಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ

ಕಲ್ಕಂಜೆ ವ್ಯಾಸಾಚಾರ್ಯ,
ರತ್ನಭವನ, ಉಡುಪಿ.

THE
VIJAYA BANK LTD.
Head Office: MANGALORE.

Branches at **Coondapoor, Brahmavar, Udipi, Kaup, Karkala, Maugalore, City-Mangalore, Kasaragod, Puttur & Bombay.**

Advances made on produce, Jewels, Government Papers, Immovable Properties or other approved securities Deposits accepted at very attractive rates.

All kinds of Banking Business transacted.

ಉಡುಪಿ ಮಧ್ವಮತ
ಶಿವಳ್ಳಿ ಬ್ರಾಹ್ಮಣರ
ಧರ್ಮ ಛತ್ರ
ಇವೇ ತಾ 8-10-44ರಿಂದ
ರಾಮೇಶ್ವರ ದೇವಸ್ಥಾನದ ಬಡಗು ಬೀದಿಯಲ್ಲಿ ತೆರೆಯಲ್ಪಟ್ಟಿದೆ
ಎಲ್. ನರಸಿಂಗ ರಾವ್, ಪ್ರೊಪ್ರೈಟರ
ಉಡುಪಿ ಹೋಟಿಲಿಂಗ್ ಎಂಡ್ ಲಾಡ್ಜಿಂಗ್, ಉಡುಪಿ

ನ್ಯೂಕೂರು ಪತ್ರ.

(ಸ್ವಂತ ವರದಿಗಾರರಿಂದ).

ತನಪುರೆ ಸ್ಕಾಮಿಗಳು ಫಂದೆಪ್ಪರ ಬಿಂದೆ ದಾಮೋಕ್ಷರಕ್ಕೆ ಕಾಲಾನಡುಗೆಯಲ್ಲೇ ಸಾಗಬೇಕಾಗಿ ಸಾರಿಗೆ ಸೌಕರ್ಯವಿಲ್ಲದೆ ಜನರು ಅನಾನುಕೂಲರಾಗಿರುವ ತನಪುರೆ ಸ್ಕಾಮಿಗಳು ಇಲ್ಲಿಯ ರೈಲ್ವೆ ಸ್ಟೇಷನ್ ಪಕ್ಕದ ಸ್ಥಳವನ್ನು ಬಸ್ಸು ನಿಲ್ದಾಣಕ್ಕಾಗಿ ಕಾದಿರಿಸಿದ್ದಾರೆ. ಅವರ ಸೂಚನೆಯಂತೆ ಸ್ಥಳವನ್ನು ಶ್ರೀ ಯುತ ಬಿ. ರಂಗಪ್ಪಯ್ಯನವರು ಸಮತಟ್ಟು ಮಾಡಿಸಿದ್ದಾರೆ.

ಕಾಂಗ್ರೆಸ್ ಅಧ್ಯಕ್ಷ ಪದವಿ ನ್ಯೂಕೂರು ಕಾಂಗ್ರೆಸ್ ಅಧ್ಯಕ್ಷ ಪದವಿಗೆ ಹೆಸರು ಸೂಚಿಸಲ್ಪಟ್ಟವರಲ್ಲಿ ಶ್ರೀಯುತ ಎಚ್. ಎಸ್. ಪಾಯ್ಯ, ಕೆ ಟಿ ಪಾಟ್ಕರ್, ಎಸ್. ಎಸ್. ಕಸ್ಮಾರಡ್ಡಿಯವರು ಕೊನೆಯ ಸಂತೋಷದ ಸಾರಿಗೆಗಳನ್ನು ಹಿಂದೆಳೆದುಕೊಂಡಿದ್ದರಿಂದ ಶ್ರೀಯುತ ಮೆಕೋಪರ ದಾಮಪ್ಪ ಸುತ್ತು ಶ್ರೀ ಎಸ್. ನಿಜಲಿಂಗಪ್ಪನವರ ಹೆಸರುಗಳು ಮಾತ್ರ ಸೂಚಿಗೆ ಬಂದಿರುವ ಕಾರಣ ಅಂತಿಮ ಚುನಾವಣೆ ನಡೆಯುವುದು.

ಪೌರಸಭೆ— ನ್ಯೂಕೂರು ಪೌರಸಭೆಯ ಸಾಧಾರಣ ಸಭೆಯು ತಾ. ೧೧ ಬುಧವಾರದಂದು ಅಧ್ಯಕ್ಷರಾದ ಶ್ರೀ ಆರ್. ಆರ್ ಜೋಯಿಸರ ಅಧ್ಯಕ್ಷತೆಯಲ್ಲಿ ನಡೆದು ಅನೇಕ ವಿಷಯಗಳನ್ನು ಚರ್ಚಿಸಿತು. ಜಪ್ತಿಗಳ ಪೈಕೊಳ್ಳಾವರಿಗೆ ಮತ್ತು ಬಿಡ್ಡಾರ್ಥಿಗಳಿಗೆ ಇನ್ನೂ ಸೌಕರ್ಯಗಳನ್ನು ಕಲ್ಪಿಸಬೇಕೆಂದು ಶ್ರೀ ಎಂ ಕೃಷ್ಣಮೂರ್ತಿಯವರ ಮತ್ತು ಸಿ. ಎಸ್ ಸೂರ್ಯನಾರಾಯಣರ ಸಲಹೆಯಂತೆ ಸಭೆಯು ಸರ್ವಾನುಮತದಿಂದ ನಿರ್ಣಯಿಸಿತು. ಶ್ರೀ ಎಂ. ಎಸ್. ಜೋಯಿಸರವರ ಬಿರ್ಣಯವನ್ನು ಕಾರ್ಯಾನ್ವಯಗೊಳಿಸಬೇಕು.

ವಿದ್ಯಾರ್ಥಿ ಕಾಂಗ್ರೆಸ್ ಅಧಿವೇಶನ ನ್ಯೂಕೂರು ವಿದ್ಯಾರ್ಥಿ ಕಾಂಗ್ರೆಸಿನವರು ಸಭೆ ಸೇರಿ ಎಪ್ರಿಲ್ ೨೯ರಂದು ನ್ಯೂಕೂರು ವಿದ್ಯಾರ್ಥಿ ಸಮ್ಮೇಳನವೊಂದನ್ನು ಜುಲೈ ತಿಂಗಳಲ್ಲಿ ಸೇರಿಸಬೇಕೆಂದೂ, ನ್ಯೂಕೂರು ಕಾಂಗ್ರೆಸ್ ಅಧ್ಯಕ್ಷರನ್ನು ಅಧ್ಯಕ್ಷತೆಗೆ ಆಮಂತ್ರಿಸಬೇಕೆಂದೂ, ಶ್ರೀ. ಎಸ್. ಜಿ ಪೂಜಾರಿಯವರಾದ ಶ್ರೀ. ಜೋಕರ ಆಮಂತ್ರಣವನ್ನು ಕಾರ್ಯರೂಪಕ್ಕೆ ತರಲು ಸೇವಾಸಮಿತಿಯೊಂದನ್ನು ಸ್ಥಾಪಿಸಬೇಕೆಂದೂ ನಿರ್ಣಯಿಸಲಾಗಿದೆ.

ನೂತನ ಮಂತ್ರಿಗಳು— ನೂತನ ಪ್ರಧಾನ್ಯಂ ಸಭೆಯು ಜೂನ್ ಒಂದನೇ ತಾರೀಕು ಮಂತ್ರಿಗಳನ್ನು ಸಭೆಯುನ್ನುದು. ನೂತನ ಮಂತ್ರಿಗಳ ಹೆಸರುಗಳಿದ ಪ್ರಕಟಿಸಲು ಇಂದಿನೇ ಕಾರಣವು ಹೊರಬೀಳಬಹುದೆಂದು ಊಹಿಸಲಾಗಿದೆ. ನೂತನ ಮಂತ್ರಿಗಳು ಯಾರಾಗುವುದೆಂಬ ಊಹೆ ಬಲವಾಗಿದೆ. ಕಾಂಗ್ರೆಸ್ಸಿಗ ಮಂತ್ರಿ ಇರಲು ಲಭಿಸಬಹುದೆಗೆ ಇಬ್ಬರು ಮಂತ್ರಿಗಳೇಗೆ? ಮೂವರೇ? ಇಬ್ಬರಾದರೆ ಯಾರು? ಇತ್ಯಾದಿ ಇತ್ಯಾದಿ ಈಗ ಶ್ರೀ. ಇ. ಹೆಚ್. ಚಾಪ್ಲಿಕಟ್ಟೆಯವರು, ಮಿ. ಎಂ ಎಸ್. ಶ್ರೀ ಎಸ್ ಮಾಲಕಣ್ಣನವರ ಹೆಸರುಗಳು ಜನರ ನಾಲಿಗೆಯಲ್ಲಿ ನಲಿದಾಡುತ್ತಿವೆ. ಆದರೆ ಸೋಡಿಸಿಲ್ಲ. ಈಗಿನ ಸಚಿವರಾದ ಶ್ರೀ. ಜೆಜ್ ಎಂ ಲಿಂಗಯ್ಯ ಸಬ್ಬಿಮಾಸ್ಟಿಲಯವರ ಸ್ಥಾನಕ್ಕೆ ಸಂಸದೀಯ ಕಾರ್ಯದರ್ಶಿಯಾಗಿ ನೇಮಕಗೊಂಡಿದ್ದು, ಇನ್ನೊಬ್ಬ ಮಂತ್ರಿಯಾದ ಶ್ರೀ ಜನಾರ್ದನ ರವರ ಸಂಸದೀಯ ಕಾರ್ಯದರ್ಶಿಯಾಗಿ ಶ್ರೀ. ಎಸ್. ಆರ್. ಕಾಮತ್ ನೇಮಕಗೊಂಡಿದ್ದಾರೆ.

ಆಸೀಲು ವಜಾ— ಜನವರಿ ೧೫ರಂದು ಪ್ರಜಾಸಂಪತ್ತಿಗೆ ಒಳಪಟ್ಟ ಬೆಂಕಿಯ ಅನಾಹುತದಿಂದ ಸಂಭವಿಸಿದ ಪಾಣನಷ್ಟವನ್ನು ಹಿಂದಿನಲ್ಲಿ ಕಾಯಿದೆ ಪ್ರಕಾರ ಸಂಪತ್ತಿಗೆಗಳ ಪ್ರಾಪ್ತಿಕರಾದ ಶ್ರೀ ಎಂ ಅಣ್ಣಪ್ಪಯ್ಯನವರು ಹೈಕೋರ್ಟಿಗೆ ಸಲ್ಲಿಸಿದ್ದ ಆಸೀಲು ಅರ್ಜಿಯು ಹೈಕೋರ್ಟಿನಲ್ಲಿ ವಜಾ ಆಗಿದೆ.

ಕಾಂಗ್ರೆಸ್ ಅಧಿವೇಶನ— ನ್ಯೂಕೂರು ಕಾಂಗ್ರೆಸ್ ಜಿಲ್ಲಾ ಅಧಿವೇಶನವನ್ನು ಮೇ ೧೦ನ್ನು ಬದಲಿಸಿ ಕಾರ್ಯಾಲಯದ ಮೇಗ ಅಂದರೆ ಮೇ ೨೦ನ್ನು ನಡೆಯುವುದೆಂದು ನಿರ್ಧಾರವಾಗಿದೆ.

The Canara Banking Corporation Limited.

(Incorporated in British India, with limited Liability)

Estd 1906.

Head Office. **UDIPI**, (S. K.)

Authorised Capital	Rs. 25,00,000/-
Issued & Subscribed Capital	Rs. 16,00,000/-
Paid up Capital	Rs. 14,92,000/-
Reserves	Rs. 4,13,000/-

ನವಯುಗ

ಉಡುಪಿ, ಗುರುವಾರ ೧೩-೪-೧೯೪೧

'ದೋಷಪೂರ್ಣ' ಕಂದಾಯ ಕ್ರಮ

ಬೇಸಾಯ ಹುಟ್ಟುವಳಿಗಳ ಮೇಲೆ ಆದಾಯ ತೆರಿಗೆ ಹೇರುವ ಸಂಕಲ್ಪದಿಂದ ಮದ್ರಾಸು ಸರಕಾರವು ಒಂದು ಯೋಜನೆಯನ್ನು ಪ್ರಕಟಿಸಿ, ಸಾರ್ವಜನಿಕರಿಂದ ಅದಕ್ಕೆ ಪೂರೈಯುವ ಸ್ವಾಗತವೆಂತಹದೆಂಬುದನ್ನು ನೀರೀಕ್ಷಿಸುತ್ತಿದೆ. ಮೇ 31ರ ವರೆಗಿನ ಅವಧಿಯು ಅಭಿಪ್ರಾಯ ಸಂಗ್ರಹಕ್ಕಾಗಿ ನಿಗದಿಪಡಿಸಲಾಗಿದೆ. ನಮ್ಮ ಸರಕಾರವು ಸಾರ್ವಜನಿಕಾಭಿಪ್ರಾಯಗಳಿಗೆ ಬೆಲೆಕೊಟ್ಟು ನಿದರ್ಶನಗಳು ಇಲ್ಲವಾಗುವದಿಲ್ಲ; ಆದರೆ ಸಾರ್ವಜನಿಕರ ಅಭಿಮತ ಕೇಳುವ ನಟನೆಯು ಅದಕ್ಕೆ ಅಪವಾದವಾಗಿದೆ ಈ ಬಾರಿಯ ಮಸೂದೆಯ ಮೇಲಿನ ಅಭಿಪ್ರಾಯ ಸಂಗ್ರಹವೂ ಅಂತಹ ಕಪಟ ನಾಟಕ ಮಾತ್ರವೆಂದಾದರೆ, ಎಂತಹ ಕೂಗಿದ್ದರೂ ಸರಕಾರದ ಕಿವುಡುತನದಿದಿರು ನಿರರ್ಥಕ. ಈ ಯೋಜನೆಯ ಮಟ್ಟಿಗಾದರೂ ಸಾರ್ವಜನಿಕಾಭಿಪ್ರಾಯವನ್ನಾಧರಿಸಿ ಕಾರ್ಯಕೈಗೊಳ್ಳಬೇಕೆಂಬ ಸದ್ಬುದ್ಧಿಯು ಸರಕಾರಕ್ಕೆ ಹುಟ್ಟಿದೆಯಾದರೆ, ನಿಯೋಜಿತ ಹೊಸ ತೆರಿಗೆಗೆ ಇಡೀ ಮದ್ರಾಸ್ ಪ್ರಾಂತ್ಯದ ವಿರೋಧವು ಇಷ್ಟರಲ್ಲೇ ಪ್ರದರ್ಶಿಸಲ್ಪಟ್ಟಿರುವುದನ್ನು ಕಾಣಬಹುದು. ಸರ್ವರಿಗೂ ಬೇಡವಾದುದು ಸರಕಾರಕ್ಕೂ ಬೇಡವೆಂದಾದಲ್ಲಿ ಆ ಯೋಜನೆಯನ್ನೇ ಬಿಟ್ಟುಬಿಡಬೇಕಾದ ಪರಿಸ್ಥಿತಿ ನಿರ್ಮಾಣಗೊಂಡಿದೆ ಒಂದು ಹೊಸ ತೆರಿಗೆ ಬೀಳುವಾಗ ಅದಕ್ಕೆ ಸಂಬಂಧಪಟ್ಟ ವರ್ಗವು ಬೆಚ್ಚಿಬೀಳುವ ಸಂಪ್ರದಾಯ; ಸಂಬಂಧವಿರದ ಜನರು ಅದರ ಖಂಡನೆ ಆಧಿಕ್ಯ ಮಂಡನೆಯ ಅಧಿಕ ಪ್ರಸಂಗಕ್ಕೆ ಹೋಗದೆ ತಟಸ್ಥರಿರುತ್ತಾರೆಂಬುದಕ್ಕಾಗಿ ಸರಕಾರವು ಯಾವ ಹೊಸ ತೆರಿಗೆ ಹೇರುವಾಗಲೂ ಜನತೆಯ ವಿರೋಧವೊಂದನ್ನೇ ನಿರೀಕ್ಷಿಸಬೇಕು; ಇದು ಮಾನವ ಸಹಜ ಸ್ವಾರ್ಥವೆಂದು ಸರಕಾರವು ತತ್ವಾರ್ಥವನ್ನೆ ಮಾಡಬಹುದು. ಸಂಪ್ರದಾಯಪಾಲನೆಗಾಗಿಯೇ ಸರಕಾರವು ಸಾರ್ವಜನಿಕರ ಅಭಿಪ್ರಾಯ ಕೇಳಿತು.—ಸಂಪ್ರದಾಯದಂತೆ ಜನತೆಯ ವಿರೋಧಿಸಿತು.—ಇನ್ನು ಸಂಪ್ರದಾಯಾನುಸಾರ ತನ್ನ ಯೋಜನೆಯನ್ನು ಕಾರ್ಯಕ್ಕೆ ಇಳಿಸಿದರಾಯಿತು, ಎಂದು ಸರಕಾರವು ಭಾವಿಸುತ್ತದಾದರೆ ಈ ಯಾಂತ್ರಿಕ ಪದ್ಧತಿಯು ಶಾಪಾರ್ಹವಿದೆ. ಸರಕಾರವು ಈ ಯೋಜನೆಯು ಮಟ್ಟಿಗೂ ಸಂಪ್ರದಾಯವನ್ನಷ್ಟೇ ಪಾಲಿಸುತ್ತಿರಬಹುದು, ಆದರೆ ಜನತೆಯು ಅದಕ್ಕೆ ಹೊಡಿರುವ ವಿರೋಧದಲ್ಲಿ ಸಯುಕ್ತಿಕ ವಾದವಿದೆ;ಅಲ್ಲಗಳೆಯಲಸಾಧ್ಯವಾದ ಅರ್ಥವಿದೆ; ನ್ಯಾಯವಿದೆ.

ಮೊದಲನೆಯದಾಗಿ ಈಗ ಜಾರಿಯಲ್ಲಿರುವ ಭೂಕಂದಾಯ ಪದ್ಧತಿಯು ದೋಷಪೂರ್ಣವಿದೆಯೆಂಬುದನ್ನು ಸರಕಾರವೇ ಒಪ್ಪಿಕೊಂಡಿದೆ. ಅದದ್ದು ಸುಧಾರಿಸುವ ಆಶ್ವಾಸನೆಗೆ ಹಲವು ವರುಷಗಳ ಆಯುಷ್ಯ ತುಂಬಿದರೂ ಕಾರ್ಯತಃ ಏನೂಂದೂ ಆಗಿಲ್ಲ ಅತಿದೊಡ್ಡ ದೋಷವೆಂದರೆ ವರ್ಗದಾರರಲ್ಲಿ ಸೇಕಡಾ75ಕ್ಕಿಂತಲೂ ಮಿಗುವ ಮಂದಿ ಬಡ ರೈತರ ತೀರ್ವೆ ಅವರ ತುಂಡುವರ್ಗಗಳ ಉತ್ಪತ್ತಿಯು ಕುಟುಂಬ ಪೋಷಣೆಗೂ ಸಾಕಾಗದಷ್ಟಿರುವಾಗ, ನ್ಯಾಯದೃಷ್ಟಿಯಿಂದ ಅವರು ಯಾವ ವಿಧದ ತೀರ್ವೆ ತೆರುವದಕ್ಕೂ ಬದ್ಧರಲ್ಲ. ಆದರೆ ಈಗಿನ ಕಂದಾಯ ಕ್ರಮದಂತೆ, ಸಾವಿರಾರು ಎಕ್ರೆ ಭೂಮಿಗಳಿರುವ ದೊಡ್ಡ ವರ್ಗದಾರರ ಮೇಲಿನ ಬೀಳುವ ಪರಿಮಾಣದಲ್ಲೇ ಈ ಬಡ ಬೇಸಾಯಗಾರರ ಮೇಲೂ ತೀರ್ವೆ ಬಿದ್ದಿದೆ. ಈ ಕಂದಾಯ ಸಮತಾಭಾವದವ್ವು, ಜಮೀನ್ದಾರರ ಉಳಿಕಾಯ ನಿಧಿಯು ಸಣ್ಣದೊಂದು ಭಾಗವನ್ನು ಪಡೆಯುತ್ತಿರುವಾಗ, ಬಡ ಬೇಸಾಯಗಾರರ ಊಟಕ್ಕಿಂಡುಗೆಯಂತಹ ಜೀವನಾವಶ್ಯಕ ವೆಚ್ಚಗಳ ಅಂಶವನ್ನೇ ಕಿತ್ತುಕೊಳ್ಳುತ್ತಿದೆ ಬೇಸಾಯೇತರ ವ್ಯಾಪಾರೋದ್ಯಮಗಳ ಕ್ಷೇತ್ರಗಳಲ್ಲಿ ಇಂತಹ ಅನ್ಯಾಯ ಕಂಡುಬರುವದಿಲ್ಲ ರೂ 2000ಕ್ಕೆ ಮಿಕ್ಕಿ ಆದಾಯವಿರುವವರ ಮೇಲೆ ಮಾತ್ರ ತೆರಿಗೆ ಬೀಳುತ್ತಿದೆ ಹೊರತು, ಬಡ ರೈತರಂತೆ ಬಡ ವ್ಯಾಪಾರಿಗಳ ಸಂಖ್ಯೆಗೆ ನಡೆಯುವದಿಲ್ಲ ವ್ಯಾಪಾರೋದ್ಯಮ ಕ್ಷೇತ್ರಗಳ ಈ ಮಾದರಿಯನ್ನೇ ಬೇಸಾಯ ರಂಗದಲ್ಲೂ ಜಾರಿಗೆ ಮಾಡಬಾರದೇಕೆ? ನಿಯೋಜಿತ ಹುಟ್ಟುವಳಿ ಆದಾಯ ತೆರಿಗೆಯು ನೇರವಾಗಿ ದೋಷಕ್ಕೊಂದು ಚಿಕಿತ್ಸೆಯಾಗಬಲ್ಲುದೆಂಬ ಆಸೆಯಿದೆಯೆಂದು ಸರಕಾರವು ಉಸಹಾರೋಕ್ತಿಯನ್ನಾಡಿದೆ. ಹೊಸ ಯೋಜನೆಯು ಒಂದು ಅಂಗವಾಗಿ, ಬಡ ವರ್ಗದವರ ಕಂದಾಯ ಮುತ್ತತೆಯನ್ನು ಸ್ಪಷ್ಟವಾಗಿ ಸೂಚಿಸಿದ್ದರೆ, ಈ ಮಾತು ವಿಶ್ವಾಸಯೋಗ್ಯವಾಗುತ್ತಿದ್ದಿತು ಹೊರಲಾರದೆ ಮುಗ್ಗರಿಸುತ್ತಿರುವ ಬಡ ವರ್ಗದವರ ತಲೆ ಹೊರೆಯನ್ನು, ಜಗ್ಗದೆ ಹೊರಬಲ್ಲ ಜಮೀನ್ದಾರರ ಹೆಗಲಿಗೆ ವರ್ಗಾಯಿಸುವ ದೀನಬಂಧು ಯೋಜನೆಗೆ ಸ್ವಾಗತ ಪೂರೈಯುತಿತ್ತು. ಆದರೆ ದೋಷಪೂರ್ಣವಾದ ಭೂಕಂದಾಯ ಪದ್ಧತಿಯನ್ನು ಸ್ಪರ್ಶಿಸದೆ, ಅದು ಭವಿಷ್ಯತ್ಕಾಲದಲ್ಲಿ ಎಂದಾದರೊಮ್ಮೆ ಆಗುವ ಸುಧಾರಣೆಯೆಂದು ಸೂಚಿಸಿ, ಬೇಸಾಯದ ಮೇಲೆ ಅದಾಯ ತೆರಿಗೆಯನ್ನು ಮಾತ್ರ ಈಗಲೇ ಹೇರುವದು, ಅದು ಸ್ವಾರ್ಥ ಸಾಧನೆ, ಸ್ವಕಾರ್ಯ ಸಾಧನೆಯೇ ಹೊರತು ರೈತರ ಉದ್ಧಾರವಲ್ಲ ಇಂತಹ ಪರಿಸ್ಥಿತಿಯಲ್ಲಿ ತಿಳಿರ ಪ್ರತಿಯುಳ್ಳವರಾದ ಶ್ರೀಮಂತ ವರ್ಗದವರ ಮೇಲೆ ಬೀಳುವ ಈ ಭಾರವು ಅಸಹ್ಯಕ್ಷವಾಗಿ ಒಡಬೇಸಾಯಗಾರರೆಂಬ ಬಡವನ್ನೂ ಜಜ್ಜದಿರಲಾರದು. ನೆಲಕಂದಾಯ ಪದ್ಧತಿಯಲ್ಲಿ ಸುಧಾರಣೆಯಾಗದೆ, ಆದಾಯ ತೆರಿಗೆ ಹೇರುವದೆಂದರೆ ಇದೀ ಬೇಸಾಯೋದ್ಯಮಕ್ಕೇನೇ ಳಕ್ಕೆ ಕೊಡುವದಾದ್ದರಿಂದ, ಈ ಯೋಜನೆಯನ್ನು ಸರಕಾರವು ಹಿಂದೆಗೆದುಕೊಳ್ಳಬೇಕೆಂಬ ಸಾರ್ವತ್ರಿಕಾಭಿಪ್ರಾಯದೊಡನೆ ನಾವೂ ದನಿಗೂಡಿಸುತ್ತೇವೆ.

ಜಾಪಾನ್ ಕರಾರನ್ನು ರಶ್ಯವು ಹರಿದೊಗೆಯಿತು!

ಮೊದಲೇ ನಿರೀಕ್ಷಿಸಿದ್ದಂತೆ 19-41ನೇ ಏಪ್ರಿಲ್ 13ರಲ್ಲಾಗಿದ್ದ ರಶ್ಯಾ-ಜಾಪಾನ್ ಪಂಚವಾರ್ಷಿಕ ತಟಸ್ಥ ಒಪ್ಪಂದವನ್ನು ರಶ್ಯವು ಇದೇ ತಾ. 5ರಲ್ಲಿ ಮುರಿದುಕೊಂಡಿದೆ. ಸೋವಿಯೆಟ್‌ನ ಈ ನಿರ್ಧಾರದ ಹಿನ್ನೆಲೆ ಯಾವುದೆಂಬುದು ರಶ್ಯದ ವಿದೇಶಮಂತ್ರಿ ನೊಲಟವರು ಮೋಸ್ಕೋದಲ್ಲಿದ್ದ ಜಾಪಾನೀ ರಾಯಭಾರಿಗೊಪ್ಪಿಸಿದ ಈ ಕೆಳಗಿನ ಹೇಳಿಕೆಯಲ್ಲಿದೆ.

ರಶ್ಯದ ಆಕ್ಷೇಪ

'ಈ ತಟಸ್ಥ ಒಪ್ಪಂದವು ತಾ 13-4-41 ರಲ್ಲಾಗಿತ್ತು. ಆಂದರೆ ಜರ್ಮನಿಯು ಸೋವಿಯೆಟ್ ಯೂನಿಯನ್‌ನನ್ನಾಕ್ರಮಿಸುವ ಮೊದಲು, ಜಾಪಾನು ಮತ್ತು ಬ್ರಿಟಿಷ್ ಅಮೇರಿಕಾ ಯುದ್ಧಾರಂಭದ ಪೂರ್ವದಲ್ಲೇ. ಆಗಿತ್ತು. ಆಂದಿನಿಂದ ಪರಿಸ್ಥಿತಿಯಲ್ಲಿ ತೀವ್ರ ಬದಲುವಣಿಯಾಗಿದೆ ಜರ್ಮನಿಯು ಸೋವಿಯೆಟ್‌ನ ಮೇಲೆ ಧಾಂಡಿಟ್ಟಿತು. ಜರ್ಮನಿಯ ಮಿತ್ರ ರಾಷ್ಟ್ರವಾದ ಜಾಪಾನು ಈ ಕಾರ್ಯದಲ್ಲಿ ಜರ್ಮನಿಗೆ ಸಹಾಯ ಸಲ್ಲಿಸುತ್ತಾ ಬಂದಿದೆ. ಮಾತ್ರವಲ್ಲದೆ ಸೋವಿಯೆಟ್‌ನ ಮಿತ್ರ ರಾಷ್ಟ್ರಗಳಾದ ಇಂಗ್ಲಾಂಡು ಅಮೇರಿಕಗಳೊಡನೆ ಯುದ್ಧದಲ್ಲಿವೆ. ಇಂತಹ ಪರಿಸ್ಥಿತಿಯಲ್ಲಿ ಜಾಪಾನ್ ಮತ್ತು ಸೋವಿಯೆಟ್ ಯೂನಿಯನ್‌ನುಗಳೊಳಗಿನ ತಾಟಸ್ಥ್ಯ ಒಪ್ಪಂದದ ಅರ್ಥವೇ ಒರಿದಾಗಿದೆಯಾದ್ದರಿಂದ ಅದನ್ನಿನ್ನು ಮುಂದುವರಿಸುವದು ಅಸಾಧ್ಯ."

ಈ ಘೋರಣೆಯ ರಹಸ್ಯವೇನು?

ರಶ್ಯದ ಈ ಘೋರಣೆಯು ದೂರದೃಷ್ಟಿಯದೆನ್ನಬೇಕು ಜರ್ಮನಿ, ಜಾಪಾನುಗಳ ಪರಾಭವವು ನಿರ್ಶ್ಚಯವೆಂದಿರುವಾಗ, ತಾನು ಅರ್ಧ ಭೂಖಂಡವಾದ ದೂರಪೂರ್ವದ ಕುರಿತು ಕೊನೆಯ ವರೆಗೂ ಅಶ್ರದ್ಧಕ್ತಾಧರ್ಮವನ್ನು ಪಾಲಿಸಿದರೆ, ಈ ಭಾಗದಲ್ಲಿ ಇಂಗ್ಲಾಂಡು ಅಮೇರಿಕಗಳ ಅಧಿಕಾರವೇ ಸ್ಥಾಪಿಸಲ್ಪಡಬಹುದೆಂಬ ಭಯ ರಾಯೀ ನಿರೀಕ್ಷೆಯಿಂದ ಸ್ಟಾಲಿನರೀ ಹೆಜ್ಜೆಯಿಟ್ಟಿದೆ ಬೇಕು ರಶ್ಯದ ಈ ಕೈತ್ಯಕ್ಕಾಗಿ ಇಂಗ್ಲಾಂಡು ಅಮೇರಿಕಗಳು ಔಪಚಾರಿಕ ಸಂತೋವನ್ನಲ್ಲದೆ ಮನಃಪೂರ್ವಕ ಆನಂದಪಟ್ಟಿಲ್ಲ; ಜಾಪಾನೀ ಯುದ್ಧದ ಕೊನೆಯ ಭಾಗದಲ್ಲಿ ರಶ್ಯವೂ ಅದರ ಮೈಲಿಟಿದ್ದು ಆಂಗ್ಲೋ ಅಮೆರಿಕಾನರೊಡನೆ ಸ್ಪರ್ಧಿಸುವದೆಂದು ಊಹಿಸಲಾಗಿದೆ.

ರಶ್ಯದ ಸ್ವಕಾರ್ಯ ಸಾಧನೆ

ಆದು ೨ ವರುಷಗಳ ಅವಧಿಯಿದ್ದ ಒಪ್ಪಂದ ಮುಂದುವರಿಸಲಿಚ್ಛೆಯಿಲ್ಲದ ಪಕ್ಷವು ಒಂದು ವರ್ಷದ ಮೊದಲೇ ನೋಟೀಸು ಕೊಡಬೇಕೆಂಬ ಶರ್ತವದರಲ್ಲಿತ್ತು. ಆದರೆ, ಜರ್ಮನಿಗೆ ಸಹಾಯಮಾಡಿದ ಆರೋಪ ಹೊರಿಸಿ, ನೊಲೊಟವರದನ್ನು ತಿರಸ್ಕರಿಸಿದ್ದಾರೆ ಹೊರತು ನೋಟೀಸು ಕೊಟ್ಟುದಲ್ಲ. ಪಶ್ಚಿಮರಂಗದಲ್ಲಿ ಬಿಡುವು ದೊರೆತೊಡನೆಯೇ ಪೂರ್ವರಂಗಕ್ಕೆ ಧುಮುಕುವ ಯೋಚನೆಯಿಂದಲೇ ರಶ್ಯವು ಹೀಗೆ ಮಾಡಿತೆನ್ನಬೇಕು. ಜಾಪಾನು ರಶ್ಯವನ್ನು ಸಮಜಾಯಿಸಲು ವಿಶೇಷ ಪ್ರಯತ್ನಮಾಡಿದೆ ಬಹುವರುಷಗಳ ಜಗಳದ ವಿಷಯವಾಗಿದ್ದ, ಉತ್ತರ ಸಖಾಲಿನ್ ಪ್ರಾಂತ್ಯದ ಎಣ್ಣೆ ಮತ್ತು ಕಲ್ಲಿದ್ದಲ ಗಣಿಗಳನ್ನು ಇದ ಕ್ಕಾಗಿಯೇ ಗತವರುಷದ ಮಾರ್ಚಿಯಲ್ಲಿ ಜಾಪಾನ್ ರಶ್ಯಕ್ಕೆ ಬಿಟ್ಟುಕೊಟ್ಟಿದ್ದಿತು. ಈಗಲಾದರೂ ರಶ್ಯವನ್ನು ಕೆಣಕುವ ಸ್ಥಿತಿಯಲ್ಲಿ ಜಾಪಾನಿಲ್ಲ. 'ಸೋವಿಯೆಟ್' ಸರಕಾರದ ಸೂಚನೆಯಂದಾಗಿ ನವ್ಯೊಳಗಿನ ಒಪ್ಪಂದವು ಕೂಡಲೇ ಮುರಿದುಹೋಗಿಲ್ಲ ಅದಕ್ಕೆ ಇನ್ನೊಂದು ವರುಷದ ವಾಯಿದೆಯಿದೆ. ಎರಡು ಪಕ್ಷಗಳೂ ಕಡಿನೆ ಯೆಂದರೆ ಇನ್ನೊಂದು ವರುಷವಾದರೂ ತಾಟಸ್ಥ್ಯ ಪಾಲಿಸಲು ಬದ್ಧವಿನೆ' ಎಂದು ಜಾಪಾನಿನ ಅಧಿಕೃತ ಹೇಳಿಕೆ. ಈ ಒಪ್ಪಂದ ಮುಕ್ತಾಯದ ಕುರಿತು ಪ್ರಪಂಚದ ಪತ್ರಿಕೆಗಳು ಮತ್ತು ಪ್ರಮುಖರಿಂದ ನಿವಿಧಾಭಿಪ್ರಾಯಗಳು ಪ್ರಕಟವಾಗಿವೆ.

ಸಾರ್ವಜನಿಕ ಸಭೆ— ಬುಧವಾರ ಸಂಜೆ ಕಲಸಿಗಾರರ ಸಂಘ ಮತ್ತು ಬೀಡಿ ಸುಲಿಗಾರರ ಸಂಘಗಳ ವತಿಯಿಂದ ಇದೇ ತಾ 10ನೆಲ್ಲ ರಥಬೀದಿಯಲ್ಲಿ ಸಾರ್ವಜನಿಕ ಸಭೆ ಸೇರುತಿದೆ. ಶ್ರೀ. ಕೆ ರಾಘವನವರು ಭಾಷಣಕರ್ತರು. ಸುಗ್ಗಸಿಗೆ ಸ್ಥಾಪಿಕರು ಮಜೂರಿ ನಿರಾಪೇಕ್ಷೆಯಲ್ಲಿ ಸ್ವಇಚ್ಛೆಯಿಂದ ಒಪ್ಪಿಗೆ ಕೊಟ್ಟಿದ್ದ ಶ್ರೀ. ಪಿ. ಲಕ್ಷ್ಮೀನಾರಾಯಣ ಸಾಮ್ಯರವರ ಸನ್ಮಾನಕ್ಕೆ ಕೊನೆಗೆ ಅವಕಾಶ ಸೂಚಿಸಿದುದನ್ನು ಸಭೆಯಲ್ಲಿ ನಿವರಿಸಲಾಯಿತು. ಮುಗ್ಧ ಸ್ಥಾಪಿಕರಾಬ್ಬರು ಓರ್ವ ಕಲಸಿಗಾರನಿಗೆ ಹೊಡೆದುದನ್ನು ತಿಳಿದು ಆ ಕೃತ್ಯವನ್ನು ತೀವ್ರವಾಗಿ ನಿಷೇಧಿಸಿ, ಅನಂಬಂಧವಲ್ಲೊಂದು ನಿರ್ಣಯವಾಯಿತು.

ಪುರ ನಿವಾಸಿಗಳ ಸಭೆ— ಯೋಜನಾ 10ನೆಲ್ಲ ಸಂಜೆ ಮುನಿಸಿಪಲ್ ಆಫೀಸಿನಲ್ಲಿ ಹಿರಿಯ ಶಾಲೆ ಹುಡುಗಿಯರ ಹಾಗೂ ಬಾಲಿಕಾಲಯ ಕಟ್ಟಡ ನಿರ್ಮಾಣದ ಬಗ್ಗೆ ನೇಮಿಸಿರುವ ಸಮಿತಿಯ ಸಭೆಯಲ್ಲಿ ಬಂದ ಸಾಟಿಕ ಸ್ವರೂಪವನ್ನು ಸಭೆಯಲ್ಲಿ ಮಂಡಿಸಲಾಗುವುದು ಮುನಿಸಿಪಲ್ ಅಧ್ಯಕ್ಷರು ಆಪೇಕ್ಷೆಯಿಂದ ಹಣ ಸಂಗ್ರಹದ ಬಗ್ಗೆ ಒಂದು ಉಪ ಸಮಿತಿಯು ನೇಮಕವಾಯಿತು.

ಮಿತ್ರರೊಳಗಿನ ಕಚ್ಚಾಟದಾಸೆಯಿಂದ ಜರ್ಮನರ ಹೋರಾಟ

ಪಶ್ಚಿಮ ರಂಗದಲ್ಲಿ

ರೈನ್‌ನನ್ನು ದಾಟಿದ ಮಿತ್ರರ ಅರ ಸೇನೆಗಳಿಗೆ ಜರ್ಮನಿಯೊಳಗೆ ಸ್ವಿಸ್ ಗಡಿಯಿಂದ ಡಚ್ ಗಡಿಯ ವರೆಗಿನ ವಿಸ್ತಾರವಾದ ರಂಗದಲ್ಲಿ ವಾಯುವೇಗದಿಂದ ಮುಂದೊತ್ತುತ್ತಿವೆ ಆ ಸೈಕಿ ಜನರಲ್ ಪೇಟನರ 3ನೇ ಅಮೆರಿಕನ್ ಸೇನೆಯು ಲೀಪ್ ಝಿಗ್‌ನತ್ತ ಮುಂದೊತ್ತುತ್ತಿದ್ದು, ಪೂರ್ವಗಡೆಯಿಂದ ಮುಂದೊತ್ತುತ್ತಿರುವ ಜನರಲ್ ಕೊನೀವರ ರಶ್ಯನ್ ಸೇನೆಯನ್ನು ಕೂಡಿಕೊಳ್ಳುವ ಸಂಭವವಿದೆ. ಎಲ್ಲಾ ಮಿತ್ರ ಸೇನೆಗಳೂ ತೀವ್ರ ಗತಿಯಿಂದ ಮುಂದೊತ್ತಿ ಇಡೀ ಮಧ್ಯ ಜರ್ಮನಿಯೇ ಈಗ ನಾಜಿಗಳ ಕೈತಪ್ಪಿದಂತಾಗಿದೆ. ಕೂಲ್ಲೆಂಡಿನಲ್ಲಿ ನಾಜಿಗಳು ಬಲೆಯಲ್ಲಿ ಬಿದ್ದಂತಾಗಿದ್ದಾರೆ, ಅಲ್ಲಿ ಗಾಳಿ ಕೂಡಯವರೂ ಇಳಿದಿದ್ದಾರೆ ಅಲ್ಲಿಯು ರೋಕೆಟ್ ಪ್ರಯೋಗ ನಿಲ್ಲಿದ್ದಾಗಳ ಆಕ್ರಮಣಯತ್ನ ನಡೆದಿದೆ ದೊಡ್ಡ ಬಂದರಾದ ಬ್ರೆಮೆನ್ ಮಿತ್ರರ ವಶವಾಗುವ ಲಕ್ಷಣಗಳಿವೆ ಜರ್ಮನಿಯೊಳಗಡೆ ಸಂಘಟಿತ ನಾಜೀ ವಿರೋಧವೇ ಕಾಣುವದಿಲ್ಲ. ಹಿನ್ನೆಲೆಯ ಸರಂಜಾಮಿ ಪಡಗಳು ದೀರ್ಘವಾದ ತೊಂದರೆಯೊಂದಲ್ಲದೆ ಮಿತ್ರ ಸೇನೆಗಳಿಗೆ ಬೇರೆ ಬಾಧೆ ಕಾಣುವದಿಲ್ಲ

ಪೂರ್ವ ರಣರಂಗದಲ್ಲಿ

ಕೆಂಪು ಸೇನೆಯು ದಕ್ಷಿಣಕ್ಕೆ ತಿರುಗಿದ್ದರಿಂದ ಬರ್ಲಿನಿನ ದಾರಿಯೆಂದು ಪರಿಕ್ಷಿಸಲ್ಪಟ್ಟಿದ್ದ ಓಡರ್ ರಂಗವಿನಿಗ ಸ್ತಬ್ಧವಾಗಿದೆಯಾದರೂ ಅತ್ಯಂತದ ರಾಜಧಾನಿಯ ನ್ನೆದೊಳಗಡೆ ನುಗ್ಗಿ ರಶ್ಯನರೀಗ ಬೀದಿ ಹೋರಾಟದಲ್ಲಿ ನಿರತರಾಗಿದ್ದಾರೆ. ನಾಜಿಗಳಿಗೆ ಪ್ರಧಾನತಃ ಒಲಿಯಾಗಿದ್ದ ಆಸ್ಟ್ರಿಯವು ಜರ್ಮನಿಯ ನಿಕಟ ಸಂಬಂಧೀ ರಾಷ್ಟ್ರ ಜರ್ಮನಿ ನುಗ್ಗುವ ಹಬ್ಬಿಗಿಲಾದ ವಿಯನ್ನವನ್ನು ರಶ್ಯನರೀಗ ಜಲುಪಿಯಿಂದ ತೆರೆಯುತಿದ್ದಾರೆ ಆ ವಲಯದ ಎಲ್ಲಾ ರಂಗಗಳಲ್ಲಿ ಕೆಂಪುಸೇನೆ ಸರ್ವತೋಮುಖ ಪ್ರಗತಿ ಪದಗಿದು. ಸಾಲವು ಪ್ರಮುಖ ಉತ್ಪತ್ತಿ ಕೇಂದ್ರಗಳು ತಿದರ ವಶವಾಗಿವೆ

ನಾಜಿಗಳು ಮುಂದೇನು?

ನಿರೀಕ್ಷಿಸಿದಂತೆ ಜರ್ಮನ್ ಯುದ್ಧ ಕೂಡಲೇ ಮುಕ್ತಾಯಗೊಳ್ಳುವ ಲಕ್ಷಣ ಕಾಣುವದಿಲ್ಲ ಜರ್ಮನ್ ನಾಯಕರು ಗುಪ್ತ ಸಭೆಯಲ್ಲಿ ಶರಣು ಹೋಗುವ ಪ್ರಸ್ತಾಪವೇ ಬರಲಿಲ್ಲವೆಂದೂ ಕೊನೆಯ ವರೆಗೂ ಪ್ರತಿಘಟಿಸುವ ನಿರ್ಧಾರವಾಗಿದೆಯೆಂದೂ ಈಗ ತಿಳಿದು ಬರುತ್ತಿದೆ ಯುದ್ಧವನ್ನು ತಾವು ಕಳಕೊಂಡಾಯಿತು ಎಂದಾಯಿತು ಹೋಂಟಿದೆ ಕೈಕಟ್ಟಿತು ಆದರೆ ದೀರ್ಘಾವಧಿಯ ಗೆರಿಲ್ಲಾ ಯುದ್ಧದಿಂದ ನೈರಿಗಳನ್ನು ಹಣ್ಣು ಮಾಡಬೇಕೆಂದು ಜರ್ಮನರು ದೃಢ ಶಪಥಮಾಡಿ ಸರ್ವಸಿದ್ಧತೆಯಾಗಿವೆ ನೋರ್ವೆ ಹೊಲ್ಲಂಡುಗಳಲ್ಲಿರುವ ನಾಜೀ ಸೇನೆಗಳು ಪ್ರತಿನಿಧಿಸಿಲ್ಲುವವು ಯು ಜೋಟು ಯುದ್ಧವನ್ನು ಮುಂದೊತ್ತುವರು. ಈ ಅವಧಿಯಲ್ಲಿ ಮಿತ್ರರಾಷ್ಟ್ರಗಳೊಳಗಿನ ವೈಮನಸ್ಸು ಭಗ್ಗನೆ ಉರಿದು ತಮಗನುಕೂಲ ವಾತಾವರಣ ನಿರ್ಮಾಣಗೊಳ್ಳುವೆಂದು ಜರ್ಮನರ ಆಶೆಯಿದೆ

ನಾಜೀ ಕೈದಿಗಳು

ಫ್ರಾನ್ಸಿನಲ್ಲಿ ಛೇಕರ ಕೈಗೆ ಸಿಕ್ಕಿದ ಜರ್ಮನ್ ಸೈನಿಕರನ್ನು ಅಮೆರಿಕದ ಸಂಗ್ರಹ ಶಿಬಿರಕ್ಕೆ ಸೇರಿಸಲು ಸಾಲಾಗಿ ನಿಲ್ಲಿಸುತ್ತಿದ್ದಾರೆ

ನೋರ್ವೆಯಲ್ಲಿ ಕೊನೆಯ ಕಾಳಗ?

ಈ ಯುದ್ಧದ ಕೊನೆಯ ಹೋರಾಟವನ್ನು ನೋರ್ವೆಯಲ್ಲಿ ಕೊಡಬೇಕೆಂದು ಜರ್ಮನರು ಅತ್ಯವಸರದಿಂದ ಅಗಾದ ಸಿದ್ಧತೆ ನಡಸಿದ್ದಾರೆ ಒಟ್ಟಿ ಇನ್ನೂ 200000 ಜರ್ಮನ್ ಸೇನೆಯಿದೆ ಇಲ್ಲಿ ಬೋಟು ನಿಲ್ದಾಣಗಳ ರಿಪೇರಿ ವತ್ತು ನಿರ್ಮಾಣವು ಬರದಿಂದ ಸಾಗಿದ ಜರ್ಮನರ ಶರಣು ಬರುವದನ್ನು ನಿರೀಕ್ಷಿಸಬಾರದೆಂದೂ, ಯುದ್ಧವನ್ನು ಕೊನೆಯ ವರಗ ನಡೆಸಿಯೇ ಮುಕ್ತಾಯಗೊಳಿಸಬೇಕೆಂದೂ ಜನರಲ್ ಈಸೆನೋವರು ಅಧ್ಯಕ್ಷ ರುಸವಲ್ಟರಿಗೆ ವರದಿ ಮಾಡಿದ್ದಾರೆ ಈ ನಡವಳಿಕೆಗಳು—ರುಂಡಸ್ಟೆಡನನ್ನು ಗಂಡಿಟ್ಟು ಕೊಂದ ವಾರ್ತೆ-ಜರ್ಮನ್ನರಲ್ಲಿ ನಿರಾಶೆಯಿಂದ ತೆರೆಯುತಿದ್ದಾರೆ ಆ ವಲಯದ ಎಲ್ಲಾ ರಂಗಗಳಲ್ಲಿ ಕೆಂಪುಸೇನೆ ಸರ್ವತೋಮುಖ ಪ್ರಗತಿ ಪದಗಿದು. ಸಾಲವು ಪ್ರಮುಖ ಉತ್ಪತ್ತಿ ಕೇಂದ್ರಗಳು ತಿದರ ವಶವಾಗಿವೆ

ನಾಜಿಗಳು ಮುಂದೇನು?

ನಿರೀಕ್ಷಿಸಿದಂತೆ ಜರ್ಮನ್ ಯುದ್ಧ ಕೂಡಲೇ ಮುಕ್ತಾಯಗೊಳ್ಳುವ ಲಕ್ಷಣ ಕಾಣುವದಿಲ್ಲ ಜರ್ಮನ್ ನಾಯಕರು ಗುಪ್ತ ಸಭೆಯಲ್ಲಿ ಶರಣು ಹೋಗುವ ಪ್ರಸ್ತಾಪವೇ ಬರಲಿಲ್ಲವೆಂದೂ ಕೊನೆಯ ವರೆಗೂ ಪ್ರತಿಘಟಿಸುವ ನಿರ್ಧಾರವಾಗಿದೆಯೆಂದೂ ಈಗ ತಿಳಿದು ಬರುತ್ತಿದೆ ಯುದ್ಧವನ್ನು ತಾವು ಕಳಕೊಂಡಾಯಿತು ಎಂದಾಯಿತು ಹೋಂಟಿದೆ ಕೈಕಟ್ಟಿತು ಆದರೆ ದೀರ್ಘಾವಧಿಯ ಗೆರಿಲ್ಲಾ ಯುದ್ಧದಿಂದ ನೈರಿಗಳನ್ನು ಹಣ್ಣು ಮಾಡಬೇಕೆಂದು ಜರ್ಮನರು ದೃಢ ಶಪಥಮಾಡಿ ಸರ್ವಸಿದ್ಧತೆಯಾಗಿವೆ ನೋರ್ವೆ ಹೊಲ್ಲಂಡುಗಳಲ್ಲಿರುವ ನಾಜೀ ಸೇನೆಗಳು ಪ್ರತಿನಿಧಿಸಿಲ್ಲುವವು ಯು ಜೋಟು ಯುದ್ಧವನ್ನು ಮುಂದೊತ್ತುವರು. ಈ ಅವಧಿಯಲ್ಲಿ ಮಿತ್ರರಾಷ್ಟ್ರಗಳೊಳಗಿನ ವೈಮನಸ್ಸು ಭಗ್ಗನೆ ಉರಿದು ತಮಗನುಕೂಲ ವಾತಾವರಣ ನಿರ್ಮಾಣಗೊಳ್ಳುವೆಂದು ಜರ್ಮನರ ಆಶೆಯಿದೆ

ಜಪಾನ್ ಯುದ್ಧ

ಯೂರೋಪ್ ಸಮರದ ಪ್ರಧಾನ ಪಾತ್ರಧಾರಿಯಾಗಿದ್ದ ಜರ್ಮನಿಯ ಸೋಲಿನಿಂದ ಜಪಾನಿನ ಸ್ಥಿತಿಯೇನು? ಜರ್ಮನಿಯ ಸೋಲಿನಿಂದ ಜಪಾನಿಗೆ ಯಾವ ಪರಿಣಾಮವೂ ಆಗದೆಂದು ಕೆಲವರು ಹೇಳುತ್ತಾರೆ. ಆದರೆ ಇದು ಸರಿಯಲ್ಲ. ಜರ್ಮನಿಯ ಸೋಲಿನಿಂದ ಜಪಾನಿಗೆ ಬಹಳ ಪರಿಣಾಮವಾಗುವದು. ಜರ್ಮನಿಯ ಸೋಲಿನಿಂದ ಜಪಾನಿಗೆ ಆಗುವ ಪರಿಣಾಮಗಳು ಹೀಗಿವೆ:

೧. ಜರ್ಮನಿಯ ಸೋಲಿನಿಂದ ಜಪಾನಿಗೆ ಮಿತ್ರರಾಷ್ಟ್ರಗಳ ಸಹಾಯ ಹೆಚ್ಚಾಗುವದು. ಜರ್ಮನಿಯ ಸೋಲಿನಿಂದ ಜಪಾನಿಗೆ ಮಿತ್ರರಾಷ್ಟ್ರಗಳ ಸಹಾಯ ಹೆಚ್ಚಾಗುವದು. ಜರ್ಮನಿಯ ಸೋಲಿನಿಂದ ಜಪಾನಿಗೆ ಮಿತ್ರರಾಷ್ಟ್ರಗಳ ಸಹಾಯ ಹೆಚ್ಚಾಗುವದು.

೨. ಜರ್ಮನಿಯ ಸೋಲಿನಿಂದ ಜಪಾನಿಗೆ ಮಿತ್ರರಾಷ್ಟ್ರಗಳ ಸಹಾಯ ಹೆಚ್ಚಾಗುವದು. ಜರ್ಮನಿಯ ಸೋಲಿನಿಂದ ಜಪಾನಿಗೆ ಮಿತ್ರರಾಷ್ಟ್ರಗಳ ಸಹಾಯ ಹೆಚ್ಚಾಗುವದು. ಜರ್ಮನಿಯ ಸೋಲಿನಿಂದ ಜಪಾನಿಗೆ ಮಿತ್ರರಾಷ್ಟ್ರಗಳ ಸಹಾಯ ಹೆಚ್ಚಾಗುವದು.

೩. ಜರ್ಮನಿಯ ಸೋಲಿನಿಂದ ಜಪಾನಿಗೆ ಮಿತ್ರರಾಷ್ಟ್ರಗಳ ಸಹಾಯ ಹೆಚ್ಚಾಗುವದು. ಜರ್ಮನಿಯ ಸೋಲಿನಿಂದ ಜಪಾನಿಗೆ ಮಿತ್ರರಾಷ್ಟ್ರಗಳ ಸಹಾಯ ಹೆಚ್ಚಾಗುವದು. ಜರ್ಮನಿಯ ಸೋಲಿನಿಂದ ಜಪಾನಿಗೆ ಮಿತ್ರರಾಷ್ಟ್ರಗಳ ಸಹಾಯ ಹೆಚ್ಚಾಗುವದು.

The Udipi Bank, Limited.

(ESTD 1925)

Head Office **UDIPI**

ANNOUNCEMENT

A Branch of the Bank has been opened at MUNDKUR

Other Existing Branches –

1 KOONDAPOOR 2 KALLIANPUR

3. PADUBIDRI

Office of the Bank Udpi, 7—4—1945

U V PRABHU, MANAGER

ಗಿರಿಯಾದುದಕ್ಕಾಗಿ ಬೊಂಬಾಯಿಯ ಫ್ಯಾಷನ್ ಮತ್ತು ಒಪೆರಾ ಕಲಸಗಾರರು ತಾ ೧೦ರಿಂದ ಮುಷ್ಕರ ಹೂಡಿದ್ದಾರೆ ಸುಮಾರು 40ಕ್ಕೂ ಮಿಕ್ಕಿ ದಸ್ತಗಿರಿಗಳಾಗಿವೆ ಸ್ವಯಂಸೇವಕರ ಸಹಾಯದಿಂದ ಕೆಲವು ಬಟ್ಟೆ ಮತ್ತು ಬ್ಯಾನುಗಳೀಗ ಓಡುತ್ತಿವೆ ಸಹಕಾರ್ಯಾಧಿಯವರು ಕೂಲಿಗರ ಮಂಡಿಂದರ ದಸ್ತಗಿರಿಯನ್ನು ನಿಷೇಧಿಸಿದ್ದಾರೆ ಬೊಂಬಾಯಿ ಪ್ರಾಯೋಗದ ವಿದ್ಯಮಾನಗಳಿಂದ ಈ ಮುಷ್ಕರವು ರಾಜಿಯಾಗುವ ಸಂಭವವಿದೆ

ಸಾನ್ ಫ್ರಾನ್ಸಿಸ್ಕೋ ಸಮ್ಮೇಲನವು

ನಿಶ್ಚಿತ ಒಪ್ಪಕ್ಕೆ ಕೂಡುವ ಲಕ್ಷಣವು ಕಾಣುವದಿಲ್ಲ ಮುಖ್ಯವಾಗಿ ಪೋಲೆಂಡಿನ ಲುಬ್ಲಿನ್ ಸರಕಾರಕ್ಕೆ ಪ್ರಾತಿನಿಧ್ಯವೀಯದುದಕ್ಕಾಗಿ, ಹಾಗೂ, ಜಂಗಿತಕ ಭದ್ರತಾ ಕೌನ್ಸಿಲಿನಲ್ಲಿತನಗೆ ಮೂರು ವೀಟುಗಳ ಅಧಿಕಾರವಿಯದುದಕ್ಕಾಗಿ ರಶ್ಯವು ಈ ಸಮ್ಮೇಲನವನ್ನೇ ಒಪ್ಪಿರುವ ಸಂಭವವಿವ್ವೂ ಇದೆ ಮುಂದಿನ ಭದ್ರತಾ ಕೌನ್ಸಿಲ್‌ನಲ್ಲಿ ಸಣ್ಣ ರಾಷ್ಟ್ರಗಳಿಗೆ ಸ್ಥಾನವಿಲ್ಲವೆಂದು ಜನರಲ್ ಸ್ಮಟ್ಸರು ಕಾಂಗ್ರೆಸ್ಸಾವಾಗಿ ಹೇಳಿರುವದರಿಂದ ಈ ಕುರಿತು ತೀವ್ರ ಟೀಕೆಗಳದ್ದಿವ.

ಲೋರ್ಡ್ ವೇವೆಲರು

ಲಂಡನ್ನಿನಲ್ಲಿ ಮಿ ಚರ್ಚಿಲ್, ಮಿ ಅಮೆರಿಯವರೂಡನ ದೀರ್ಘ ಸಂಭಾಷಣೆ ನಡೆಸಿದ್ದಾರ್ಲಲದೆ ಮಂತ್ರಿಮಂಡಲದ ಸದಸ್ಯರೊಡನೆಯೂ ಸರ್ಯಾಲೂಚಿಸಿದ್ದಾರೆ ಸರ್ ಕ್ರಿಪ್ಸರೇ ಮೊದಲಾದವರ ಭೇಟಿ ಪಡಯಲಿದ್ದಾರೆ. ರಕ್ಷಣಾ ಖಾತೆಯೂ ದಪ್ಪು ಬಿಟ್ಟು ಉಳಿದ ಎಲ್ಲಾ ವಿಜಾಗಗಳನ್ನೂ ಹಿಂದೀಯರಿಗೇನೇ ಬಿಟ್ಟುಕೊಟ್ಟು ವಿಕ್ಟೆಟ್ಟ್ ನಿನ ರಿಸುವ ಆತ್ಯವಸ್ಥಿ ಲೋರ್ಡ್ ವೇವೆಲರಿದ್ದಾರೆಂದು ಸ್ಪಷ್ಟವಾಗಿದೆ

ಆಷ್ವಿ ಚೆನೂರುಗಳಲ್ಲಿ—

ಮರಣ ದಂಡನೆಗೊಳಗಾಗಿ ಚಕ್ರವರ್ತಿಗಳಿಂದಲೂ ಪ್ರಾಣದ ನದ ಅರ್ಜಿನಿವಾರಿಸಲ್ಪಟ್ಟವರಿಗಾಗಿ ದೇಶದಾದ್ಯಂತ ಪ್ರಾಣದಾನದ ಬೇಡಿಕೆಗಳು ಹೋಗಿವೆ ಅಲ್ಲಲ್ಲಿ ಹರತಾಳಗಳೂ ದಸ್ತಗಿರಿಗಳೂ ನಡದಿವೆ ಈಗ ನಾಗಪುರ ಹೈಕೋರ್ಟಿನಲ್ಲಿ ಮರಣದಂಡನೆಗೊಳಗಾದ ಪರಶುರಾಮ 'ಪೇಟಿಯಾಸ್ ಕಾರ್ಪಸ್' ಅರ್ಜಿ ದಾಖಲಾಗಿದ್ದು ಹೈಕೋರ್ಟು ಅದನ್ನು ಎಂಗೀಕರಿಸಿ ವಾದಶ್ರವಣ ನಡಸಿದ

ಸಪ್ಪು ಸಂಧಾನ ಸಮಿತಿಯು

ವೈಸರಾಯ್ ವೇವೆಲರಿಗೆ ಲಂಡನ್ನಿಗೆ ಕರ್ಬ್ಲ್ ವಿಮಾನ ಭಾರತದ ಸ್ವಾತಂತ್ರ್ಯವನ್ನು ಚಕ್ರವರ್ತಿಗಳ ಸಂಸತ್ತಿನಲ್ಲಿ ಸಂಧಾನವೊಂದಾ ವಾಸಲಿಕ ಸರಕಾರವನ್ನು ಸ್ಥಾಪಿಸಿ, ತಾತ್ಕಾಲಿಕ ಆಡಳಿತ ಒಪಲಾವಣೆಯ ವಾರ್ತಾನ್ನು ನಿರ್ವಿಕರಿಸಿದ್ದಿತು. ಮಿ ಜಿನ್ನರು, ಇದ ಗಾಂಧೀ ವಿನಿಯಂತ್ರಿತ್ವವೆಂದೂ ಪಾಕಿಸ್ತಾನವನ್ನು ಮೋನೇದ್ದಾ ಮಾತ ಹಂಚಿಕೆಯಿಂದೂ, ಇವನ್ನು ಒಗ್ಗಾವಿದ್ದಾರೆ ತಂತ್ರಾತೀತ ಒಪ್ಪಂದ ಸಂಭಂಧದಲ್ಲಿ ಇದು ಕಾರಣ ಸಂಭವ' ಎಂದು ಲಂಡನಿನ ಪ್ರಮುಖ ಪತ್ರಿಕೆ ಟೀಕಿಸಿದ

ದೊಡ್ಡ ಮರಗಳನ್ನು ನಡುವವರು ಅನುಸರಿಸಬೇಕಾದ ಕೆಲವು ನಿಯಮಗಳನ್ನು ಇಲ್ಲಿ ಸಾಧ್ಯವಾದ ಮಟ್ಟಿಗೂ ಕೊಡಲಾಗಿದೆ.

ಸಾಧಾರಣವಾಗಿ ದೊಡ್ಡ ದೊಡ್ಡ ಮರಗಳನ್ನು ನಡುವವರು ಜವಿನು ಯಾವ ಜಾತಿಯ ಭೂಮಿಯೆಂಬುದನ್ನು ಮೊದಲು ತಿಳಿದು ತರುವಾಯ ಕೆಲಸಕ್ಕೆ ಕೈ ಹಾಕುವುದು ಉತ್ತಮ.

ನೆಲ –ಗೊಬ್ಬರ ಮತ್ತು ಪಾತಿಗಳ ತಯಾರಿಕೆ ಸಾಮಾನ್ಯವಾಗಿ ಹೇಳಬಹುದಾದರೆ ಉತ್ತಮವಾದ ನೆಲದಲ್ಲಿ ೨ಘನ ಅಡಿಯ ಪಾತಿಗಳನ್ನು ಮಾಡಬೇಕು ಆದರೆ ನೆಲವು ಕಲ್ಲು ನೆಲವಾಗಿದ್ದರೆ ೧೦ಂದ ೧೫ ಘನ ಅಡಿಗಳ ವರೆಗೆ ತೆಗೆಯಬೇಕು ಹೀಗೆ ಹಳ್ಳಗಳನ್ನು ತೆಗೆಯುವಾಗ ಮೇಲಿನ ಮಣ್ಣನ್ನು ತೆಗೆದು ಒಂದು ಪಕ್ಕದಲ್ಲಿ ಹಾಕಿಕೊಂಡು ಸಮಯೋಚಿತವಾಗಿ ಮಣ್ಣಿನ ಸುರ ಯೋಗ್ಯತೆಗಳನ್ನು ಅರಿತು ಹಳ್ಳಗಳ ತುಂಬಬೇಕು ಹೀಗೆ ಮಾಡುವುದಕ್ಕೆ ಮುಂಜಿ ಹಳ್ಳದ ತಳಭಾಗದಲ್ಲಿ ಸುಮಾರು ೧ ಆಂಗುಲದಷ್ಟು ಇಟ್ಟಿಗೆ ಪುಡಿಗಳ ಗಾರೆ ಪುಡಿಯನ್ನು ಹಾಕಿ ಅನಂತರ ಮಣ್ಣಿನ ಜೊತೆಯಲ್ಲಿ ಚೆನ್ನಾಗಿ ಕೊಳೆತ ಕೊಟ್ಟಿಗೆ ಗೊಬ್ಬರ ಅಥವ ಕುರಿ ಗೊಬ್ಬರಗಳನ್ನು ಚೆನ್ನಾಗಿ ಮಣ್ಣಿನ ಜಾತಿಗ ಬೆರೆಸಿ ಪಾತಿ ಸಿದ್ಧಪಡಿಸಿಕೊಳ್ಳಬೇಕು. ಆದರೆ ಕುರಿ ಗೊಬ್ಬರವನ್ನು ಉಪಯೋಗಿಸುವಾಗ ಚೆನ್ನಾಗಿ ಪುಡಿ ಮಾಡಿ ಉಪಯೋಗಿಸಬೇಕು. ಮುಖ್ಯವಾಗಿ ಇವುಗಳನ್ನು ಮಾಡುವುದಕ್ಕೆ ಮೊದಲು ನೀವು ಹಳ್ಳಗಳಲ್ಲಿ ತೆಗೆದ ಮಣ್ಣು ಒಳಗೆ ಮಟ್ಟಿಗೆ ಉತ್ತಮವಾಗಿರಬೇಕು ಹಾಗೆ ಮಣ್ಣನ್ನು ಮುಚ್ಚುವಿಕೆಯ ನೆಲದ ಮಟ್ಟದಿಂದ ಕೂಂಜ ಎತ್ತರವಾಗಿಯಾ ಇರಬೇಕು ಅಲ್ಲದೆ ಮಳೆಗಾಲವಲ್ಲದ ಕಾಲದಲ್ಲಿ ಕೊಂಚ ನೀರು ಚಿಮುಕಿಸಿದರೆ ಒಳ್ಳೆಯದು. ಏಕೆಂದರೆ ಹೀಗೆ ಹೂಡುವುದರಿಂದ ನಾವು ನೀರು ಹಾಕಿದ ಕೂಡಲೆ ಅವು ಬೇರೆಸಿ ಪಾತಿಗಳಿಗೆ ಹಾಕಿ

ಮಂದಾರ್ತಿ

ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನ, ಮಂದಾರ್ತಿ, ಬಾರ್ಕೂರು ಪೋಸ್ಟ್ ಸ. ಕ

ಇಲ್ಲಿ ಅಮ್ಮನವರ ಸನ್ನಿಧಿಯಲ್ಲಿ ನಡೆಯುವ ಹರಿವಾಣ ನೈವೇದ್ಯ ಪಂಚಾಮೃತ ಸೇವೆ ಕೊಡತಕ್ಕ ಸೇವಾ ಭಜಕರು ತಾವೇ ಅರ್ಧ ಸೇರು ಅಕ್ಕಿ ತಂದಲ್ಲಿ ಸದ್ರಿ ಸೇವೆಯನ್ನು ಪೂರೈಸಿಕೊಡಲಾಗಿದೆ

ಅರ್ಚಕಳು ಕಾನೇರಮ್ಮ

ದಿ ಮೂಲ್ಕಿ ಬೇಂಕ್,

ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೊಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಆವರ ಪ್ರಯೋಜನವನ್ನು ಸಾಧಿಸುತ್ತಿರುವುದು

The Moolky Bank Ltd.,

Moolky, S K.

ಸೊಡ್ಡ ಮರಗಳ ವ್ಯವಸಾಯ.

ಲೇಖಕರು. -ಸಿ. ವಿ ರಾವ್, M I H S., ಎಗ್ರಿ-ಹೊರ್ಟಿರಲ್ಚರಿಸ್ಟ್, ಬೆಂಗಳೂರು

ಕಣ್ಣು ಸಾಧಾರಣವಾಗಿ ನೆಲದೊಳಗೆ ಕುಸಿದು ಹೋಗುತ್ತದೆ. ತರುವಾಯ ಗಿಡಗಳನ್ನು ಹಾಕಬೇಕು ಹೀಗೆ ಗಿಡಗಳನ್ನು ಹಾಕುವುದಕ್ಕೆ ಮುಂಗಡ ಸುಮಾರು ಒಂದು ಹಳ್ಳವನ್ನು ಮಾಡಿ ಹಾಕಿ ಗಿಡ ಬದ್ರವಾಗಿ ನಿಡಿದು ಒಂದು ಕಾಯಿಂದ ಮಣ್ಣನ್ನು ಹಾಕಿ ಚೆನ್ನಾಗಿ ಮುಚ್ಚಬೇಕು ಹೀಗೆ ಮಾಡುವುದರಿಂದ ಗಿಡವು ಚೆನ್ನಾಗಿ ನೆಲದಲ್ಲಿ ಕೂಳಿತು ಬೇಗನೇ ಬೇರುಗಳು ಬಿಡುವುದಕ್ಕೆ ಸಾಧ್ಯವಾಗುತ್ತದೆ ಮುಖ್ಯವಾಗಿ ಗಿಡವನ್ನು ನಡುವಾಗ ಗಿಡದ ಜಲ್ಲಿ ಬೇರಿನ ಸುತ್ತಲೂ ನೀರಿನಲ್ಲಿ ನೆಲದ ಮರಳನ್ನು ಹಾಕಬೇಕು. ಸಾಧ್ಯವಾದ ಮಟ್ಟಿಗೂ ಗಿಡವನ್ನು ಆಳವಾಗಿ ಹೂಳಬಾರದು ಹೀಗೆ ಗಿಡವನ್ನು ಸಾಧ್ಯವಾದ ಮಟ್ಟಿಗೂ ನೆಟ್ಟಿಗೆ ಹೂಳಬೇಕು ಅಲ್ಲದೆ ಗಿಡದ ಪಕ್ಕಗಿಳಲ್ಲಿ ಸಣ್ಣ ದಬ್ಬೆಗಳನ್ನು ಕತ್ತರಿಸಿ, ಗಿಡವು ನೇರವಾಗಿ ನಿಲ್ಲುವ ಹಾಗೆ ಕಟ್ಟಬೇಕು ಇಪ್ಪೇ ಅಲ್ಲದೆ ಗಿಡದ ಬೇರಿನ ಸುತ್ತಲೂ ಚೆನ್ನಾಗಿ ಅಮಕಿ ಬಿಡಬೇಕು ಆದರೆ ಹಿಂದೆ ತಿಳಿಸಿದಂತೆ ಗಿಡಗಳಿಗೆ ನಿಲ್ಲುವಂತೆ ದಬ್ಬೆಗಳನ್ನು ಕಟ್ಟುವಾಗ ಬಾಳೆ ನಾರನ್ನು ಉಪಯೋಗಿಸಬೇಕು ಹೀಗೆ ಮಾಡುವುದರಿಂದ ಗಿಡದ ಎಳೆ ಆದಾದ ಸಿಪ್ಪೆ ಕತ್ತರಿಸಿ ಹೋಗಲಾರದು

ಬದ್ಯವಾದರೆ ಈ ನಾರನ್ನು ಕಟ್ಟುವಾಗ ಇವರ ಜೊತೆಯಲ್ಲಿ ಒಂದು ಸಣ್ಣ ತುಂಡು ಬಟ್ಟೆಯನ್ನು ಕಟ್ಟಿ ನೀರನ್ನು ಚೆನ್ನಾಗಿ ಹಾಕುತ್ತಿರಬೇಕು ಹೀಗೆ ಮಾಡುವುದರಿಂದ ಗಿಡವು ಒಳ್ಳೆ ಮಟ್ಟಿಗೆ ವೃದ್ಧಿ ಹೊಂದುವುದ. ಮಳೆಗಾಲವಲ್ಲದ ಕಾಲದಲ್ಲಿ ಈ ಗಿಡಗಳಿಗೆ ನಾರಕ್ಕೆ ನಾಲ್ಕು ಸಾರಿಯಾದರೂ ನೀರು ಕೊಡುತ್ತಿರಬೇಕು. ಆದರೆ ಹೆಚ್ಚು ನೀರು ಕೊಟ್ಟರೆ ಗಿಡವು ಬೆಳೆಯದ ಬಹಳ ಮಟ್ಟಿಗೆ ಗಿಡಗಳು ಸತ್ತು ಹೋಗುಗುವುವು. ಗಿಡವು ಒಂದು ಸ್ಥಿತಿಗೆ ಬರುವ ವರೆಗೂ ಬಹಳ ಜಾಗರೂಕತೆಯಿಂದ ಕಾದುಕೊಳ್ಳಬೇಕು ಏಕೆಂದರೆ ಆಸುಗಳು ಬಂದು ತಿಂದು ಹಾಕಿದರೆ ಬಹಳ ದಿನಗಳು ಬೆಳೆಯಲು ಬೇಕಾಗುವುವಲ್ಲದೆ ಬಹಳ ಮಟ್ಟಿಗೆ ಗಿಡದ ಬೆಳವಣಿಗೆ ಕುಟ್ಟು ಹೋಗುತ್ತದೆ ಇವುಗಳನ್ನೆಲ್ಲಾ ಚೆನ್ನಾಗಿ ಗಮನದಲ್ಲಿಟ್ಟು ಕಲಸ ಮಾಡಿದರೆ ನೀವು ಮಾಡಿರುವ ಕಷ್ಟಕ್ಕೂ ವೆಚ್ಚಕ್ಕೂ ನೋಸವಾಗಲಾರದು

ಸೂರ್ಯಕಾಂತಿ ಹೂವಿನ ವ್ಯವಸಾಯ

ಆಸುಗಳಿಗೆ ಹುಲ್ಲು ಹೇಗೆ ಅವಶ್ಯಕವಾದ ಪದಾರ್ಥವೊ ಅಷ್ಟೇ ಸೂರ್ಯಕಾಂತಿಯು ಕೂಡ ಎಂದು ಹೇಳಬೇಕಾಗಿಲ್ಲ

ವ್ಯವಸಾಯ:–ನೆಲವನ್ನು ಚೆನ್ನಾಗಿ ಎರಡು ಮೂರು ಸಾರಿ ಉತ್ತು ನಂತರ ಚೆನ್ನಾಗಿ ಕೂಳೆತ ಗೊಬ್ಬರ ಮತ್ತು ಅಷ್ಟೇ ಸಾರವತ್ತಾದ ಇತರ ಗೊಬ್ಬರವನ್ನು ಎಕರೆ ಒಂದಕ್ಕೆ ಸುಮಾರು 12 ಗಾಡಿ ಗೂ ಜ್ಜರ ಹಾಕಿ ನೆಲವನ್ನು ಚೆನ್ನಾಗಿ ಮಟ್ಟ ಮಾಡಿ 2 ಅಡಿಗೆ ಪಾತಿಯನ್ನು ಮಾಡಿಕೊಂಡು ಬೀಜಗಳನ್ನು ಬಿತ್ತಬೇಕು ಇದನ್ನು ಸಾಮಾನ್ಯವಾಗಿ ಮಳೆಗಾಲದಲ್ಲಿ ಮಾಡಬೇಕು ಒಂದು ವೇಳೆ ತೋಟಗಳಲ್ಲಿ ಜಲೆಯಬೇಕಾದರೆ ಹಿಂದೆ ಹೇಳಿದಂತೆ ತಾತಿಗಳು 9" 1' ಮಾಡಿ ಬೀಜವನ್ನು ಬಿತ್ತಬೇಕು ಹೀಗೆ ಮಾಡಬೇಕಾದರೆ ಮೊದಲನೆಯ ರೀತಿಗೆ ಸುಮಾರು ಬೀಜವರಿ 20. ಬೇಕಾಗುವುದೆಂದು ಹೇಳಬಹುದು. ಎರಡನೆಯ ರೀತಿಗೆ ಸುಮಾರು 10 ಬೇಕಾಗುವುದು.

ನೀರಾವರಿ ಮತ್ತು ಮುಧ್ಯನು ವ್ಯವಸಾಯ

ಒಂದು ಸಾರಿಯಾದರೂ ನೀರನ್ನು ಹಾಯಿಸಬೇಕು. (ಇದನ್ನು ತೋಟಗಳಲ್ಲಿ ಬೆಳೆವಾಗ)ಅಲ್ಲದ ಗಿಡಗಳನ್ನು ಕಳಗಳ ಹಾವಳಿಯಿಂದ ತಪ್ಪಿಸಬೇಕು ಗಿಡಗಳು 1½' ಎತ್ತರಕ್ಕೆ ಬೆಳೆದಾಗ ಗಿಡಗಳ ಸುತ್ತಲು ಅಗತೆ ಮಾಡಿ ಕಸಕಡ್ಡಿ ತೆಗೆದು ಹಾಕಿ ಬದಗಳನ್ನು ಸರಿಪಡಿಸಬೇಕು ಹೀಗೆ ಮಾಡುವುದರಿಂದ ಗಿಡಗಳು ಚೆನ್ನಾಗಿ ಬೆಳೆಯುತ್ತವೆ

ಕಟಾವು ಮತ್ತು ಉತ್ಪತ್ತಿ

ಗಿಡಗಳು ಸಾಧಾರಣವಾಗಿ 3ರಿಂದ 3½ ಅಡಿಗಳ ವರೆಗೂ ಬರುವುದು (ಬೀಜಗಳು ಹಾಕಿದ ದಿನದಿಂದ). ಆದರೆ ಬೀಜಗಳು ಚೆನ್ನಾಗಿ ಬಣಗಿದ ನಂತರ ಕತ್ತರಿಸಿ ಬೇರೆಯಾಗಿ ತೆಗೆದು ಇಟ್ಟುಕೊಂಡರೆ ಮುಂದೆ ಮಾಡಬೇಕಾದ ವ್ಯವಸಾಯಕ್ಕೆ ಅನುಕೂಲವಾಗುತ್ತದೆ ಎಕರೆ ಒಂದಕ್ಕೆ 6-0-0 1-0-0 ಬೀಜಗಳು ಸಿಕ್ಕುವುವೆಂದು ಹೇಳಬಹುದು.

ಉಪಯೋಗ–ಇದು ಎಳೆದಾಗಿರುವಾಗ ಆಸುಗಳಿಗೆ ಆಹೋಷ್ಟ. ಅಲ್ಲದೆ ಆಸುಗಳ ಹಾಲನ್ನು ಹೆಚ್ಚಾಗಿ ಮಾಡುವುದು ಇಷ್ಟೆ ಅಲ್ಲದೆ ಇದಂದ ಉತ್ತಮವಾದ ಎಣ್ಣೆಯನ್ನು ತೆಗೆಯಬಹುದು. ಅಲ್ಲದೆ ಇದನ್ನು ಇತರ ಎಣ್ಣೆಯಂತೆ ಉಪಯೋಗ ಮಾಡಬಹುದು ಇದು ಔಷಧಿಗಳಿಗೂ ಉಪಯೋಗವಾಗುವುದು. ಇದರಿಂದ ಸಾಬಾನು ತಯಾರಿಸಬಹುದು. ಇಷ್ಟೆ ಅಲ್ಲದೆ ಇದ. ಕೋಳಿಗಳಿಗೆ ಉತ್ತಮವಾದ ಆಹಾರವೆಂದು ಹೇಳಬಹುದು. ಆದ್ದರಿಂದ ಇಂಥ ಬೆಳೆಯನ್ನು ಬೆಳೆಯುವುದರಿಂದ ನೀವು ಜನಸಾಮಾನ್ಯಕ್ಕೆ ಒಂದು ವಿಧ ಮಂಗುವರಿಯಲು ಸಹಾಯಮಾಡಿದಂತೆ ಆಗುವುದು.

Sri Narayan Guru Bank, Ltd.,

(Incorporated in British India Liability of Members Limited)

Consent of the central government was obtained to the issue of Capital

The shares have been oversubscribed, hence no further shares of the Bank are available

Our 1945 Fixed Deposit Drive has just commenced several officers of the Bank have been deputed to approach investors They have been authorised to offer attaractive rates of interest, probably a little better than our usual rates Please take advantage of the offers If our Representatives do not come to you, please enquire at our following offices –

HAMPANKATTA, MANGALORE.

Branch at **Coimbatore**

Branch at **Udipi**

Branch at **Coondapoor**

Partake in our expansion scheme Repose confidence in a Bank of your place conducted by able men Await our announcement increasing the Authorised Capital to **Rs. 1,00,60,000** (A Crore)

You will shortly read the names of our Directors of all India fame

M A Suvarna Esq, B A (Hons), L Advocate
Organising Superintendent

Mangalore Jarappa,
President & Managing Director

B Narsappa,
Estat Superintendent

B Madhava Suvarna
Office Manager

James Rodrigues, Esq
Organiser

NOTICE

THE BOMBAY LIFE ASSURANCE CO, LTD

Notice having been given of the Loss of Policy No 99752 on the Life of Mrs P. Ammanna Bai, a duplicate policy will be issued unless objection is lodged with us within one month from this date

K Balasubrahmanyam
Manager & Actuary

BOMBAY 5-4-1945

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ಇದೀಗ ಮೂರನೇ ಸಂಪುಟಾರಂಭವಾಗಿದೆ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲಾರುಗಳೂ ಪ್ರಕಟವಾಗುತ್ತವೆ

ವಾರ್ಷಿಕ ಚಂದಾ ರೂ. 1–8–0 ಮಾತ್ರ

ಹೆಚ್ಚಿನ ವಿಚಾರಕ್ಕೆ ಬರೆಯಿರಿ

ಬಾಲಚಂದ್ರ, ಉಡುಪಿ.

ಉಡುಪಿ ತಾಲೂಕು ವರ್ಗದಾರರ ಸಂಘ.

ತಾ 7-4-1945ನೇ ಅಪರಾಹ್ನ ೨-30ಕ್ಕೆ ವಕೀಲ್ ಶ್ರೀ. ಕೆ. ಜೆ ಬಲ್ಲಾಳರ ಅಧ್ಯಕ್ಷತೆಯಲ್ಲಿ ಸೇರಿದ ಉಡುಪಿ ತಾಲೂಕು ವರ್ಗದಾರರ ಸಂಘದ ಸಭೆಯ ವರದಿ:—

ಬೇನಾಯ ಹುಟ್ಟುವಳಿಯ ಮೇಲೆ ಆದಾಯ ತೆರಿಗೆ ಹೇರುವದಕ್ಕಾಗಿ ಮದ್ರಾಸ್ ಸರಕಾರವು ಪ್ರಕಟಿಸಿರುವ ಕರಡು ಮಸೂದೆಯನ್ನು ಪರ್ಯಾಲೋಚಿಸಲಾಯಿತು. ಇತರ ಕಾರಣಗಳಂತೆಯೇ ಈ ಕೆಳಗಿನ ಕಾರಣಗಳಿಂದಾಗಿಯೂ ಈ ಮಸೂದೆಯು ಆಕ್ಷೇಪಾರ್ಹವಾದುದೆಂದು ಈ ಸಂಘವು ಸರ್ವಾನುಮತದಿಂದ ಅಭಿಪ್ರಾಯ ಪಡುತ್ತದೆ:—

1 ಈ ಪ್ರಾಂತ್ಯದ ಬೇನಾಯಗಾರರ ಮೇಲೆ ವಿಶೇಷತಃ ನೆಲ ಕಂದಾಯದಂತಹ ಅತಿ ಹೆಚ್ಚಿನ ತೆರಿಗೆ ಭಾರವು ಈಗಲೇ ಬಿದ್ದಿದೆ. ಮಾತ್ರವಲ್ಲದೆ ಬೇರೆ ಹಲವು ಅಪ್ರತ್ಯಕ್ಷ ಕಂದಾಯಗಳ ಭಾರವನ್ನೂ ಅವರು ಹೊರುತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ, ಈಗಿನ ತೆರಿಗೇ ಪದ್ಧತಿಯ ಕುಂದು ಕೊರತೆಗಳನ್ನು ನಿವಾರಿಸಿ, ಬೇನಾಯಗಾರರಿಗೆ ರಕ್ಷಣೆಯೀಯುವ ಬದಲಿಗೆ, ಹೊಸ ತೆರಿಗೆ ಹೇರುವ ಯೋಚನೆ ಮಾಡುವದು ಶುದ್ಧ ಅನ್ಯಾಯವೇ ಸರಿ. ಈ ರೀತಿ ನೆಲ ಕಂದಾಯ ಮತ್ತು ಹುಟ್ಟುವಳಿಯ ಮೇಲಿನ ಆದಾಯ ತೆರಿಗೆಯೆಂಬ ಡಬ್ಬಲ್ ಕಂದಾಯ ಹೊರಿಸುವದರಲ್ಲಿ ಯಾವ ನ್ಯಾಯವೂ ಇಲ್ಲ. ವ್ಯವಹಾರ್ಯವಾದ ಹಾಗೂ ಸರ್ವ ಸಮಾನವಾದ ರೀತಿಯಲ್ಲಿ ಆ ಕಂದಾಯ ಆಥವಾ ಈ ತೆರಿಗೆಯ ಪೈಕಿ ಯಾವುದಾದರೊಂದನ್ನು ಹೊರಿಸುವದಕ್ಕೊಂದು ಅರ್ಥವಿದೆ. ಆದರೆ ಆವೆರಡನ್ನೂ ಹೊರಿಸುದು ಚರಿತ್ರೆಯಲ್ಲೇ ಅಪೂರ್ವವಾದ ಒಂದು ದಬ್ಬಾಳಿಕೆಯೇ ಹೊರತು ಬೇರೇನೂ ಅಲ್ಲ.

2 ಸರಕಾರವು ಅಪೇಕ್ಷಿಸುತ್ತಿರುವಂತೆ, ಈ ವಿಶೇಷ ತೆರಿಗೆಯಿಂದಾಗಿ ಬಡ ಬೇನಾಯಗಾರರಿಗೆ ಕ್ರಮೇಣ ಪ್ರಯೋಜನ ದೊರೆಯಬೇಕಾದರೆ, ಅದು ತೆರಿಗೇ ಯೋಜನೆಯ ಒಂದು ಭಾಗವಾಗಿ ಜೋಡಣೆಗೊಳ್ಳಬೇಕಲ್ಲದೆ ಅದನ್ನು ಅನಿಶ್ಚಿತ ಭವಿಷತ್ತಾಲಕ್ಕೆ ಬಿಡುವದಲ್ಲ. ಇಲ್ಲವಾದರೆ 'ಬಡ ಬೇನಾಯಗಾರರಿಗೆ ರಕ್ಷಣೆ' ಎಂಬ ಆಶ್ವಾಸನೆಯೂ, ಗತಕಾಲದ ಹಲವು ಆಶ್ವಾಸನೆಗಳಂತೆ ಆಶಾ ಪ್ರಪಂಚದಲ್ಲಿ ಮಾತ್ರ ಉಳಿಯಬಹುದು.

3 ಈ ಯೋಜನೆಯು ಕಂದಾಯ ಪದ್ಧತಿಯ ಎಲ್ಲಾ ತತ್ವಗಳಿಗೂ ವಿರುದ್ಧವಿದೆ. ವ್ಯಯದ ಸಂಯಾದ ಅಂದಾಜೇ ಇಲ್ಲದಿರುವಾಗ, ಅತಿ ಹೆಚ್ಚಿನ ಉಳಿತಾಯ ವಿರುವ ಒಂದು ಸರಕಾರವು, ಕೇವಲ ಭವಿಷತ್ಕಾಲದ ಉಪಯೋಗಕ್ಕೆಂದು, ವರ್ತಮಾನ ಕಾಲದಲ್ಲೇ ಹೊಸ ತೆರಿಗೆ ಹೇರಲು ಎಂದೂ ಮುಂದೆ ಬರಕೂಡದು. ಹೇಗಿದ್ದರೂ ಇದು ಅತ್ಯಂತ ಕಷ್ಟಕರವಾದ ಮತ್ತು ಗೊಂದಲದಾಯಿಯಾದ ಸಮಸ್ಯೆಯಾಗಿರುವದರಿಂದ, ಈ ಕುರಿತು ಲಕ್ಷ್ಯಪೂರ್ಣ ಬಹಿರಂಗ ವಿಚಾರಣೆ ಮತ್ತು ಚರ್ಚೆ ನಡೆಯುವದು ಅತ್ಯಾವಶ್ಯವಿದೆ. ಇಂದಿನ ಕಾಲ ಮತ್ತು ಪದ್ಯದ ಅಡಳಿತೆಯು ಇದಕ್ಕೆ ಹೇಳಿಸಿದವುಗಳಾಗಿಲ್ಲ.

4 ಕೊನೆಯದಾಗಿ ಈ ಮಸೂದೆಯು ಕಾನೂನಾಗಿ ಹೋದಲ್ಲಿ ನೇರವಾಗಿ ಅತಿಹೆಚ್ಚಿನ ತೆರಿಗೆ ಬೀಳುವದು. ಮಾತ್ರವಲ್ಲದೆ ಈ ಕೆಳಗಿನ ದುರ್ಘಟನೆಗಳಿಗೂ ಅದು ಕಾರಣವಾಗುವದು. (1) ಜೋಡ್ಡ ಆಸ್ತಿಗಳೆಲ್ಲಾ ಚೂರುಚೂರಾಗುವವು. (2) ಉತ್ಪತ್ತಿಯ ಜಿಲೆಯು ಏರುವದು. (3) ಹಲವರು ತಮ್ಮ ಜೀವನ ಮಟ್ಟವನ್ನು ಸುಧಾರಿಸಿಕೊಳ್ಳಲು ಅಶಕ್ತರಾಗುವದಲ್ಲದೆ ಜೀವನ ನೆಚ್ಚುವು ಹೆಚ್ಚುವದು (4) ವೈಕ್ತಿಗತವಾದ ಅಧಮ ಸಾಮೂಹಿಕವಾದ ಬೇನಾಯೋದ್ಯಮವು ಸಾರ್ವತ್ರಿಕವಾಗಿ ಹಿಂದೆ ಬೀಳುವದು (5) ಬಡ ಬೇನಾಯಗಾರರು ಮತ್ತು ಧನಿಕ ಬೇನಾಯಗಾರರ ವರ್ಗಗಳಲ್ಲಿ ಸಂಪೂರ್ಣ ಅವಿಶ್ವಾಸ ಮತ್ತು ತಿಕ್ಕಾಟಗಳೇಳುವವು; ಇತ್ಯಾದಿ, ಇತ್ಯಾದಿ.

ಆದ್ದರಿಂದ ಈ ಮಸೂದೆಯನ್ನು ಮುಂತಂದಂತೆಯೇ ಹಿಂದೆಗೆಯಬೇಕೆಂದು ಸರಕಾರವನ್ನು ಪ್ರಾರ್ಥಿಸಿಕೊಳ್ಳುವರೆ ಈ ಸಂಘವು ನಿರ್ಧರಿಸುತ್ತದೆ.

ಸಂಬಂಧಪಟ್ಟ ಅಧಿಕಾರಿಗಳಿಗೆಲ್ಲಾ ಈ ತರಂಪಿನ ಪ್ರತಿಗಳನ್ನು ಕಳುಹಿಸಿಕೊಡುವ ನಿರ್ಧಾರವಾಗಿದೆ.

—ಕೆ. ಜೆ ಬಲ್ಲಾಳ್
ಅಧ್ಯಕ್ಷ
ಉಡುಪಿ ತಾಲೂಕು ವರ್ಗದಾರರ ಸಂಘ,
ಉಡುಪಿ

ಬಹುಮಾನದ ವಿತರಣೆ— ಜುಲಿಯಾ ಇನ್ಸ್ಟ್ರಾನ್ಸ್ ಕಂಪನಿಯ ಜೆ ಕೆನ್ನತ ಪೈ ಇವರು ಸಜ್ಜನ್ಯದವರು 1944ನೇ ಸಾಲಿನಲ್ಲಿ ಬಿಡುಗಡೆಯಾದ ಬಿಗಿಸ್ಟಾಕ್ಸ್ ಸಂಬಂಧ ಸಾಲಿನಲ್ಲಿ

ದಕ್ಷಿಣ ಕನ್ನಡ,
ಮಂಗಳೂರು

ಆಹಾರ ಮಂಬರಿಗೆ ತಂತಿ- ಕೇಂದ್ರ ಅಸೆಂಬ್ಲಿಯಲ್ಲಿ ಶ್ರೀ। ಜನರಾಜ ಮಹಿಳೆ ಅವರ ಪ್ರಶ್ನೆಯೊಂದನ್ನು ಉತ್ತರಿಸುತ್ತ ಜೆ ಕನ್ನಡಪತ್ರಿ ಆಡಿಕೆ ವೀಸಾಯಿಗಾರರಿಗೆ ಕೂಲಿಗಳ ಸಡಿಯನ್ನು ಆದರ ವರದಲ್ಲೇ ಇ ಬಿಸಿಕೊಳ್ಳಲು ಸಮ್ಮತಿ ಕೊಡಲಾಗಿದೆ ಎಂದಿತ್ತ ಉತ್ತರವನ್ನು ಇಂದಿಸಿ, ಜೆ. ಕನ್ನಡದಲ್ಲಿ ಯಾರೊಬ್ಬ ಆಡಿಕೆ ವೀಸಾಯಿಗಾರನಿಗೂ ಕೂಲಿಗಳ ಸಡಿಯನ್ನು ಸಂಗ್ರಹಿಸಿಟ್ಟುಕೊಳ್ಳಲು ಸಮ್ಮತಿ ಸಿಗಲಿಲ್ಲ, ಎಂದು ಆ ಜೆ ಸಂಘದ ಕಾರ್ಯದರ್ಶಿ ಶ್ರೀ। ಜೆ ಕೆ ಗಾಣಿಗ ಇಂದ ಭಟ್ಟರು ತಂತಿ ಕಳುಹಿಸಿದಾರೆ. ಶ್ರೀ। ಗಣೇಶ್ಯರವರ ಅಲೋಚನೆಯನ್ನು ಸಿ ಕೊಳ್ಳಿಸಿ, ಜೆ ಕನ್ನಡದಲ್ಲಿ ಇದುವರೆಗೆಯಿಂದ ಆಕ್ಕಿ ಭತ್ತ ಸಂಗ್ರಹಣೆ ಆಗುವುದಿಲ್ಲ, ಅಲ್ಲಿ ಕಡೆಗಳಲ್ಲೂ ಇದೇ ಪಾರದೆ ಹಸುಗ ನಿಗೆ ತ್ತಿದೆ ಎಂದೆ ಅಹಾರ ಸಚಿವರ ಹೇಳಿಕೆಯನ್ನೂ ಲ್ಲಗಳೆದು ತಂತಿ ಕಳುಹಿಸಿದ್ದಾರೆ

ಆಕ್ಕಿ ಮಿಲ್ಲು ಇದ್ದವರು- ಮಂಗಳೂರು ಹಸುಗೆ ಕ್ಷೇತ್ರವಲ್ಲರೂಪ ತಿಕ್ಕಿ ಸುವ ಮಿಲ್ಲು ಇದ್ದವರು ಈ ಕೆಳಗಿನ ಬಯಸುಗಳನ್ನು ಪಾಲಿಸತಕ್ಕದ್ದೆಂದು ಹಸುಗ ಅಧಿಕಾರಿಗಳು ಪ್ರಕಟಿಸುತ್ತಾರೆ ಸದಿಯೂಪ ಲೆಕ್ಕ ಪತ್ರಗಳನ್ನು ಅವರು ಇಟ್ಟುಕೊಳ್ಳತಕ್ಕದ್ದು ಆಕ್ಕಿ ತಯಾರಾಗಲು ಬಂದ ಭತ್ತದಿಲ್ಲ ಪ್ರಮಾಣ ಇತ್ಯಾದಿಗಳನ್ನು ಸರಿಯಾಗಿ ಪೋಲಿಸಬೇಕು. ಲೆಕ್ಕವನ್ನು ಎರಡು ಪಿಜಾಗಗಳಾಗಿ ಮಾಡಿ ಒಂದರಲ್ಲಿ ಹಸುಗೆ ಕ್ಷೇತ್ರಪೋಳಗಿನಿಂದ ಬಂದ ಭತ್ತವನ್ನೂ ಇನ್ನೊಂದರಲ್ಲಿ ಹೊರಗಿಂದ ಬಂದ ಭತ್ತವನ್ನೂ ತೋರಿಸಬಾಕು ವಿಶೇಷ, ಸರ್ಮಿಟ್, ಕಾಡ್ ಎಂದಾ ಲೈಸನ್ಸ್ ನ ಬ್ರ, ಭತ್ತ ತಂದೊಪ್ಪಿಸಿದವನ ವಿಳಾಸ ಮತ್ತು ಗಾತ್ರ, ಭತ್ತದ ಪ್ರಮಾಣ ಮುತ್ತು ಲಿಂದ ಸಿದ್ಧವಾದ ಆಕ್ಕಿಯ ಪ್ರಮಾಣ ಇವು ಸ್ಪನ್ನು ಕಾಣಸಬೇಕು.

ಹಸುಗ ಕ್ಷೇತ್ರವ ಹೊರಗಿನವರಲ್ಲಿ ಸುಲ್ಲಿಂಗಕ್ಕೆ ತಮ್ಮ ಭತ್ತವನ್ನು ರವಜ್ಞಾಗಿಸಿದ ಹಸುಗೆ ಲಿಖಿಸರಿಂದ ಸಮ್ಮತಿ ಪತ್ರ ಪಡಕೊಳ್ಳಬೇಕು ಸಿದ್ಧವಾದ ಆಕ್ಕಿಯನ್ನು ಸಿಸ್ಥಿನಿದ ಕೊಂಡೊಯ್ಯುವಾಗ ಆಕ್ಕಿಯು ಸರಿಯಾದ ಪ್ರಮಾಣದಲ್ಲಿನ ಪಿಲ್ಲಿನವರು ಪರ್ಮಿಟಿನ ಹಿಂಬದಿಯಲ್ಲಿ ಸಹಿಯಿಸಿರತಕ್ಕದ್ದು. ಈ ಪರ್ಮಿಟನ್ನು ಹಸುಗೆ ಕ್ಷೇತ್ರದ ಗಡಿ ದಾಟುವಷ್ಟರಲ್ಲಿ ಚೆಕ್‌ಪೋಸ್ಟಿನವರಿಗೆ ಕೊಡತಕ್ಕದ್ದು. ಹಸುಗೆ ಕ್ಷೇತ್ರದೊಳಗಿರುವ ತಮ್ಮ ಸ್ಥಿರ ಆಕ್ಕಿಯನ್ನು ಉಪಯೋಗಿಸಲು ಸಮ್ಮತಿ ಪತ್ರವಿದ್ದು ಮತ್ತು ಹಸುಗೆ ಕ್ಷೇತ್ರದ ಹೊರಗಿರುವ ತಮ್ಮ ಆಸ್ತಿಯಿಂದ ಸ್ವಂತ ಉಪಯೋಗಕ್ಕಾಗಿ ಭತ್ತವನ್ನು ತರಿಸಿ ಬಳಸಿಕೊಟ್ಟ ಆಕ್ಕಿ ಮಾಡಿಕೊಳ್ಳುವವರು, ಮೇಲ್ಕಂಡ ಪರ್ಮಿಟಿನ ಪ್ರಮಾಣಪತ್ರವನ್ನು ಬೆಳ್ಳಿಗೆ ತರಿಸಬಹುದು. ಈ ನಿಯಮಗಳನ್ನು ಸಿಷ್ಠರಿ ಸಿದವರಿಗೆ ಸಂಗ್ರಹಕ್ಕೆ ಸುಟ್ಟುಗೊಲು ಪಾಕಲಾದೀತು. ಗೋಧಿ ಬೀಸುವವರಿಗೂ ಮೇಲಿನ ನಿಯಮಗಳು ಅನ್ವಯಿಸುತ್ತವೆ ಎಂಬುದನ್ನು ಗಮನಿಸತಕ್ಕದ್ದು.

ಡಳ ಮತ್ತು ಮಲಬಾರು ಜಿಲ್ಲಾ- ಕೈಗಾರಿಕೆ ಆಧಿಕಾರಿಗಳು ಏಳಿಗೆ ತಿಳಿಸುತ್ತಾರೆ ಕರ್ನಾಟಕ ದೇಶದಲ್ಲಿ ಭಾರತದ ಕೈಗಾರಿಕೆಯ ಸಾಮಾನುಗಳ ವ್ಯಾಪಾರವನ್ನು ಮುಂದಿನ ತ್ತನ್ನದಕ್ಕಾಗಿ, ವಿಶೇಷಾಸಿಲ್ಲಿರುವ ಇಂಡೀ ಸರಕಾರದ ವ್ಯಾಪಾರ ಕಮಿಟಿಯವರ ಅಭಿಪ್ರಾಯ ನಲ್ಲಿ ಬಂದು ಕೈಗಾರಿಕೆಯ ವಸ್ತುಪ್ರದರ್ಶನ ಮಂದಿರವನ್ನು ತಯಾರಾಗುವುದೆ ಮೆ. ಕರ್ನಾಟಕ ಮತ್ತು ಮಲಬಾರಿನಲ್ಲಿ ತಯಾರಾಗುತ್ತಿರುವ ಸಾಮಾನು ಪತ್ತಿತರ ಕೈಗಾರಿಕೆಯ ಸಾಮಾನುಗಳನ್ನು ಪ್ರದರ್ಶನದಲ್ಲಿ ಪ್ರದರ್ಶನ ಮಾಡಲೇ ಕೆಂದಿರುವವರು, ಇವರಿಗೆ ಬರೆದುಕೊಳ್ಳಬೇಕು ಬಲ್ಲಾ ಇಂಡಸ್ಟ್ರಿಸ್ ಆಫೀಸರರು. ಇಜಾನಾ ಕೋಡ್, ಕಲ್ಲಿಕೋಟೆ

ಸತ್ಕಾರ- ಮಂಗಳೂರಿಗೆ ಆಗಮಿಸಿದ ಸಂಗೀತರತ್ನ ಉಸ್ತಾದ್ ಫಿಸ್ಸಾರ್ ಹುಸೇನ್ ಖಾನ್ (ಬಡೋದೆ ಆಸ್ಥಾನ ಸಂಗೀತ ವಿದ್ವಾನ್) ಇವರನ್ನು ತಾ. 2-4-45ನೇ ಸೋಮವಾರ ಸಾಯಂಕಾಲ 6ಕ್ಕೆ ಕರ್ನಾಟಕ ಥಿಯೇಟರ್ಸ್‌ನವರು ಆಹ್ವಾನಿಸಿ ಇಂಪಾ ಸತ್ಕಾರಿಸಿತ್ತರು

ಬಸ್‌ಸ್ಟೆಂಡ್- ಪಂಪನಕಟ್ಟೆಯಲ್ಲಿ ನಗರಕೆಯ್ಪುವ ಯಾಗು ಪ್ರಯಾಣಿಕರಿಗೆ ಅನುಕೂಲವಾಗುವ ಬಸ್‌ಸ್ಟೆಂಡ್ ಕಟ್ಟಿದವು ಆವಶ್ಯಕವಿತ್ತು. ಈಗ, ಸರಕಾರದವರು ಈ ಬಸ್‌ಸ್ಟೆಂಡ್ ಕಟ್ಟಿಸಲು ಆವಶ್ಯಕವಿರುವ ಸಿಮೆಂಟ್ ಮುತ್ತು ಕಬ್ಬಿಣವನ್ನು ಕೊಡಿಸುವುದಾಗಿ ತಿಳಿಸಿರುವರು

ಹೆಂಟ್ಲೆಂಡ್ ಪೇಟೆ ಮೈದಾನ್ ದುರುಸ್ತಿ- ಹೆಂಟ್ಲೆಂಡ್ ಪೇಟೆ ಮೈದಾನಿನಲ್ಲಿ ಕೊರಂಟಾರ್ಸ್ ಬಾಯ ಪ್ರಪೆಕ್ಷನ್ ಅನ್ನು ಅನುಕೂಲವಾದ ಕ್ರಿಕೆ ಆಟದ ಬಯವಾಗಿ ರತಿಸಲು ಮಂಗಳೂರು ಮುನಿಸಿಪಲ್ ಕೌನ್ಸಿಲಿನವರು 1500 ರೂಪಾಯಿಗಳನ್ನು ಮಂಜೂರು ಮಾಡಿರುವರು. ಸೆಂಟ್ರಲ್ ಮೈದಾನನ್ನು ಮಿಲಿಟರಿಯ ಬಗ್ಗೆ ರಂಜು ಪಾಸ್ತಾಪಿಡುವುದನ್ನು ತಪ್ಪಿಸಿ ಬೇರೊಂದು ಅನುಕೂಲ ಸ್ಥಳ ಕೊಡಿಸಲಾಗಲಿಲ್ಲ

ಸ್ಥಾಣಿದಯಾ ಸಂಘದ ಸ್ಥಾಪನೆ- ತಾ ೩೦ ಅಂದರೆ ನೆನ್ನೆ ಉಡಿಪಿನಲ್ಲಿ ಜಲ್ಲಾ ಮೆಜಿಸ್ಟ್ರೇಟ್ ಜನಾಬ್ ಕೆ ಗುಲಂಂ ಮಹಮ್ಮದ್ ಸಾಹೇಬ್ ಮಹಾಶಯರ ಅವರ ಅಧ್ಯಕ್ಷತೆಯಲ್ಲಿ ಗವರ್ನ್‌ಮೆಂಟ್ ಕಾಲೇಜಿನಲ್ಲಿ ಒಂದು ಸಭೆ ಜರಗಿತ್ತು. ಕನ್ನಾನೂರಿನ ಶ್ರೀ ಕೆಂಬರೂ ಅಲ್ಲಿಯ ಸ್ಪಾಣಿದಯಾ ಸಂಘದ ಗೌ ಕಾ ಆವ ಶ್ರೀ। ಎನ್ ರಾಮನ್ ನಾಯರ್ ಅವರು ಪ್ರಾಣಿಗಳ ಮೇಲೆ ದಯೆ ತೋರಿಸಬೇಕೆಂದೂ, ಆ ಬಗ್ಗೆ ಒಂದು ಸಂಘ ವು ಸ್ಥಾಪನೆಗೊಳ್ಳುವುದು ಉಗತ್ಯೆಂದೂ ರಸಕತ್ತಾದ ಭಾಷಣವಿತ್ತರು. ಇಂತಹ ಸಂಘ ವೊಂದು ಸ್ಥಾಪನೆಯಾಗಿ ಕಾರ್ಯಚತರ ಮಾಡುವುದು ಇಲ್ಲಿ ಅವಶ್ಯವೆಂದು ಏಕಕಂಠದಿಂದ ತೀರ್ಮಾನವಾಗಿ, ಈ ಕೆಳಗಿನ ಸುಹನೀಯರುಳ್ಳ ಒಂದು ಸಮಿತಿಯು ಸ್ಥಾಪನೆಯಾಯಿತು

1 ಪ ಕ ಜಲ್ಲಾ ಕಲಕ್ಟರರು (ಎಕ್ಸ್ ಒಫಿಶಿಯೋ) ಅಧ್ಯಕ್ಷರು 2 ಮಂಗಳೂರಿನ ವಿನ್ಯೂ ಡಿನಿಜಸಲ್ ಆಫೀಸರ 3 ಮಂಗಳೂರು ಮುನಿಸಿಪಲ್ ವೆಟರ್ನರ್ಮ್ಯಾನ್ 4 ಜಿಲ್ಲಾ ವೆಟರ್ನರಿ ಆಫೀಸರ, ಕಲ್ಲಿಕೋಟೆ (ಎಕ್ಸ್ ಒಫಿಶಿಯೋ) ನೈಸ ಪ್ರಸಿಡೆಂಟರು 5 ಶ್ರೀ ಡಿ ರಾಮಯ್ಯ ಹೆಗ್ಗಡೆ ಎಂ ಎಲ್ ಎ ಪುತ್ತೂರು 6 ಶ್ರೀ ಎಂ ಕೆ ಜೀವರಾಜ್ ಎಂ ಎ ಬಿ ಎಲ್ ಎಮ್ಮೆಲ್ಲೇಟಿ, ಗೌ ಕಾರ್ಯದರ್ಶಿ 7 ಶ್ರೀಮತಿ ಅದ್ದಾನಿ 8 ಶ್ರೀ ಕೆ ಎಸ್ ಹೆಗ್ಗಡೆ, ಬಿ ಎ, ಬಿ ಎಲ್ ಎ ಡ್ವೊಕೇಟ್ ಇವರಿಬ್ಬರೂ ಗೌ ಅಸಿ ಕಾರ್ಯದರ್ಶಿಗಳು 9 ರಾಮ್ ಸಾಹೇಬ್ ಪಿ ಅರ್ ಅರ ಖೂಜ, ವಕೀಲ, ಗೌ ಖಜಾನ್ಸ್. 10 ವೆಟರ್ನರಿ ಆಸಿ ಸರ್ಜನ್ ಮಂಗಳೂರು, ಗೌ ವೆಟರ್ನರಿ ಸರ್ಜನ್ 11 ಶ್ರೀ ಮತಿ ಕೆ ಶಾಂತಾಬಾಯಿ. ಈಶ್ವರಾನಂದ ಮುಖ್ಯಾಧ್ಯಾಪಿಕೆ ಮಂಗಳೂರು ಮಾಂಟೆಸ್ಸೋರಿ. 12 ಲಾ ಬಹದ್ದೂರ್ ಡಾ ಎಂ ಕೇಶವ ಶೆಟ್ಟಿ ಬಿ ಇ 13 ಶ್ರೀ। ಎಮ್ ನಂಕಟೇಶ ಸ್ಟೆ 14 ಡಾ ಎಚ್ ವಿ ಆಡಪ 15 ಮಿ ಟಿ ಸೋಜಾ, ವಕೀಲ. 16 ಜಾನ್ ಸಾ ಪೇಜ್ ಎಚ್ ಎಸ್ ಹುಸೇನ್ ಸಾಹೇಬ್ —ಇವರಾರು ಮಂದಿ ಚುನಾಯಿತರಾದ ಈ ಸಂಘದ ಇತರ ಸದಸ್ಯರು

ಈ ಸಂಸ್ಥೆಯ ಕೆಲ್ಸಾನ್ನೂರು ಸಂಘಟಿಸುವ ಅಲೋಚಿಸಿ ಕೆಲಸಗೊಡಬೇಕೆಂದೂ, ಸದ್ಯಕ್ಕೆ ಅಲ್ಲಿಯ ಸ್ಥಾನಿದಯಾ ಸಂಘದ ಸೀನಿಯರ್ ಇನ್‌ಸ್ಪೆಕ್ಟರ್ ಶ್ರೀ ಗೋವಿಂದ ಕೊಂಯಿತ್ತ ರಸಕ್ಷಪಾಯವನ್ನು 1 ವರ್ಷದ ವರೆಗೆ ಸಂಯಚಬೇಕೆಂದೂ ಇತ್ಯಾದಿ ರಠಾವುಗಳು ಮಂಜೂರಾದುವು.

ಉಡುಪಿ

ಶಾಲಾ ವರ್ಧಂತಿ- ಸ್ಥಳೀಯ ಸೈಂಟ್ ಸಿಸಿಲೀಸ್ ಕಾನ್ವೆಂಟ್ ಹೈಸ್ಕೂಲಿನ ಸ್ಕೂಲ್ ೧೯ ಸರೂಪಿಂಪವ ತಾ 4ರಲ್ಲಿ ನಿಂ ಡಿ ಸೊರಿಸ್ಸಾ ಡಿಸ್ಟಿಕ್ಟ್ ಸೂಪ್ರಿಂ ಎವರ ಅಧ್ಯಕ್ಷತೆಯಲ್ಲಿ ಜರಗಿದ ರಾಲೆಯ ಹಳೆ ವಿದ್ಯಾರ್ಥಿನಿ ಮಿಸೆಸ್ ಟಿ ಎ ಸೈಯನ ರು ಶಾಲಾ ವರದಿಯನ್ನು ಓದಿದ ನಂತರ ಸಿ ಸಸ್ ಡಿ ಸೊರಿಸ್ಸಾ ಆವರು ಬಹುಮಾನ ಆನ್ನು ವಿತರಿಸಿದರು. ವಿವಿಧ ವಿನೋದ ಕಾ ಕ್ಷೇಪಗಳಾದ ನಂತರ ಅಧ್ಯಕ್ಷರು ಭಾಷಣ ನೂಡುತ್ತಾ ರಾಲಯ ಶ್ರೇಯಕ್ಕಾಪರ ವರದಿಯ ನ್ನು ಪ್ರಶಂಸಿಸಿ ಸೂರ್ಯಿಯವರು ವಿದ್ಯಾ ಸ್ಥಾ ಪಾರ ಕಾರ್ಯದಲ್ಲಿ ಏತರಿಗೆ ಆಜೆರ್ಸ್ ಸ್ಥಾ ಯನಾಗಿದ್ದಾರಂದು ಹೇಳಿದರು

ಬೆಂಕಿ- ಸಣಿಯೂರು ವಾರ್ಡಿನ ವ್ಯಲಂ ಕ ರಂಬಲ್ಲಿ ಇಬ್ಬರು ಸೆಟ್ಟಿಗಾರರ ಗುಡಿಸಲು ಸುತಿಗೆಗಳಿಗೆ ಕಳವಾರ ಬೆಂಕಿ ತಗಲಿ ಅನುಕಾಷ್ಠ ಜನರ ಸಹಾಯಿಂದಲೆ ಬೆಂ ಕಯನ್ನು ಶಮನಿಸಿದರೂ ಒಳಗಿನ ವಸ್ತು ಗಳು ಬಹಳ ಪ್ರಮಾಣದಲ್ಲಿ ಬೆಂಕಿಗೆ ಆಹುತಿಯಾಗಿ ಬಂದು ಜಿ ಟಿ ದಿಗೆ ಇರಪು ಪದಕಲಿಂದರು

ನವಯುಗ ಎಂಟರ್ ಪ್ರೈಸಸ್ ಲಿಮಿಟೆಡ್- ಈ ಸಂಸ್ಥೆಯ ವರ್ಷಾದ್ಯ ಸಾಧಾರಣ ಸಭೆಯು ತಾ 8ನೆ ಅಡ್ಡಿದ್ದಾರ ಸಂಜೆ ವಕೀಲ ಶ್ರೀ। ಕೆ ಪಿ ಬಲ್ಲಾಳರವರ ಅಧ್ಯಕ್ಷತೆಯಲ್ಲಿ ಜರಗಿದು ರೆಪರಿಂದ 31ಕ್ಕೆ ಎಂ ತ್ಸವವಾದ ಗದ ವರುಷಕ್ಕೆ ಶಾಲುದಾರರಿಗೆ ಶೇ ಕಡಾ 6½ ರಂತೆ ಲಾಭಾಂಶ (Dividend) ಹಂಚಬೇಕೆಂದು ನಿರ್ಧಾರವಾಯಿತು.

ಹಿಂದೀ ಪ್ರೇಮಿಗಳ ಸಭೆ- ಯೂಂ ಮು ಕಳೆದ ರಸಿವಾರ ಮುನಿಸಿಪಲ್ ಮೈನ್ ಶಾಲೆಯಲ್ಲಿ ಜರಗಿ ಮೈಸೂರು ರಿಯಾಸತ್ ಹಿಂದಿ ಪ್ರಚಾರ ಸಮಿತಿಯ ಪ್ರೆಚಿಸಿಧಿ ಶ್ರೀ ಹಿರಣ್ಯಯ್ಯನವರು ಹಿಂದೀ ಪ್ರಚಾರ ಕಾರ್ಯವ ಕುರಿತು ಭಾಷಣ ನಿತ್ತರು.

ಕೂಡವೂರು- ಕಂಕಣಬಿಟ್ಟ ಮಹಾ ಲಿಂಗೇಶ್ವರ ದೇವಸ್ಥಾನದಲ್ಲಿ ತಾ 17ರಲ್ಲಿ ರಾತ್ರಿ ರಂಗಪೂಜೆ ಸೇವೆಯೂ ತತ್ಪೂರ್ವ ತಾ 15ರಲ್ಲಿ ಪಂಜಾರ್ಜಿ ದೈವದ ಕೋಲವೂ ಯಥಾ ರೀತಿ ನಡವುಲಿವೆಯಾಗಿದೆಂದ ಭಕ್ತಾದಿಗಳಿಗೆ ಸ್ವಾಗತವಿದೆಯೆಂದು ಆಡಳೆತ ಮೊಕ್ತೇಸರ ಕಂಬಳ ರುನ ಶ್ರೀ ಕೀನ ಶೆಟ್ಟಿ ರು ತಿಳಿಸುತ್ತಾರೆ

ಕಟ್ಟಿಂಗೆರೆ- ಕಟ್ಟಿಂಗರೆ ಪಕೀಲರ ನೇ ತೃತ್ವದಲ್ಲಿ ಇದೇ ತಾ 5 4 45ರಲ್ಲಿ ಸುಮಾರು 200 ಜನರು ಸೇರಿಕೊಂಡು ಆ ವಲಯದಲ್ಲಿ ಪಾವಳಿಯನ್ನುರಟುಮಾಡುತ್ತಾ ಸಾಪ ನರಭಕ್ಷಿ ಕುಗಾಗಿ ಇಡೀ ದಿನ ಬೇಟೆ ನಡಿಸಿದರೂ ಹು ಲಿಯು ಕಾಣಿಸಿಗಲಿಲ್ಲವೆಂದು ವರದಿಯಾಗಿದೆ ಕಳಪ ವಾರ ಶಾಲಿಗ ಬಲಿದಿದ್ದ ಹೊಲತಿಯು ಬಂದೆರಡು ದಿನಗಳಲ್ಲೇ ಕಾಡಿದಿದ್ದಾಳೆ ಆಧಿ ಕಾರಿಗಳು ಈ ಪಾವಳಿ ನಿಸಾರಿಗಗೆ ಕೊಡಲೇ ತೊಡಗುವರೆಂದು ನಿರೀಕ್ಷಿಸಲಾಗಿದೆ.

ಕಡಬ- ಇಲ್ಲಿಯ ವೇದಾಂತ ಸಂಘದ ಸ್ಥಾ ಪಕರಾದ ಶ್ರೀ ಆತ್ಮಾನಂದ ಸ್ವಾಮಿಜಿಯವರು ತಾ 24 3-45ನೇ ರಾತ್ರಿ ಘಂಟೆ 3ಕ್ಕೆ ಸಂಘದ ಪ್ರ ತ್ಯಕ್ಷದ ಕಾರ್ಯಾಲಯದಲ್ಲಿ ಸಮಾಧಿಮವ ನ್ಯೆದಿ ಬರು. ಅವರಿಗೆ ಸುಮಾರು 7 ತಿದಿವಸಗಳಿಂದ ಪ್ರಬ ಲವಾಗಿ ತಲೆ ಶೂಲೆಯೇ ಅವರ ಮೃತ್ಯುವಿಗೆ ಕಾ ರಣವಾಯಿತು. ಸ್ವಾಮಿಯರ ಕಳೆಬರವನ್ನು ಅವರ ಆಶ್ರಿತ ಕೈಂತ ಮುಕ್ತಿಂದ ಅನ್ತಿವಾರದ ಒಳಯಿಲ್ಲ ಭ ಜನೆ ಮೆರವಣಿಗೆಯಿಂದಿಗೆ ಶ್ರೀ। ರಾಮಕೃಷ್ಣ ಸ್ಪ ವನ, ಧಗವದ್ಗೀತಾಂಜಲಿ ಮೊದಲಾದ ಗ್ರಂಥಂದ ಜತೆಯಲ್ಲಿಟ್ಟು ಅಗ್ನಿ ದೇವನಿಗೆ ಸಮರ್ಪಿಸಲ್ಪಟ್ಟಿತು

ಮೂಲ್ಕಿ ನಾಲ್ಕು ಪಟ್ಟಣ ಮೊಗವೀರ ಪರಸ್ಪರ ಮರಣ ಸಹಾಯಕ ಸಂಘ, ಮುಂಬಯಿ- ಈ ಸಂಘದ ದ್ವಿತೀಯ ವಾರ್ಷಿಕ ಮಹಾ ಸಭೆಯು ತಾ 25-3-45ರಲ್ಲಿ ಮೊಗವೀರ ವೃತ್ತಿಸ್ಥಳಕ ವಂಡಳಿಯ ಸಭಾ ಭವನದಲ್ಲಿ ಸಂಘದ ಅಧ್ಯಕ್ಷರಾದ ಶ್ರೀಮಾನ್ ಬಪ್ಪ ನಾಡು ಚಾರಪ್ಪ ಟಿ ಸವರ್ಣರ ಅಧ್ಯಕ್ಷತೆಯಲ್ಲಿ ಸುಸಂಗವಾಗಿ ನೆರವೇರಿತು. ಸಂದೇಶ ಪತ್ರ ಓದಿದ ಬಳಿಕ ಸಂತಾಪ ಸೂಚನೆ ಗರವಾಗಿ ಎಂಟಾರು ನಿಮಿಷ ಮೌನ ವ್ರತ ಆಯವ್ಯಯ ಪಟ್ಟಿಯನ್ನೊಳಗೊಂಡಂತೆ ವಿ ಮಂಜೂರು ಮಾಡಿ, ಸಂಘದ ಕಾರ್ಯಗತವನ್ನು ವಿಮರ್ಶಿಸುವ ಪ್ರತಿಭಾವಿಷ್ಕಾರ ಕ್ಷಯಿಲ್ಲದ ಸಂಗತ್ತಿದ್ದ ಕಾರ್ಯಕರ್ತರಿಗೆ ಮತ್ತು ಕೋಶಾಧ್ಯಕ್ಷರಿಗೆ ಕೂಡಾ ಅಧ್ಯಕ್ಷರು ತಮ್ಮ ಸ್ವಂತ ಹಣ ವ್ಯಯ ಮಾಡಿ 2 ಚಿನ್ನದ ಪದಕಗಳನ್ನು ಬಹುಮಾನವಾಗಿ ಕೊಟ್ಟರು. ಸಂಘದ ಕಾರ್ಯದರ್ಶಿಗಳಿಗೆ ಸಂಘವಿದಂಪಟೆ ಬಂಗಾರದ ಪದಕವೆಯಿಂತೆ ವಂಬಾಯಿ ಮಾಡಲ್ಪಾತು ಆತ ಥಗಳು ಸುಸ್ವರವಾದ ಭಾವಣವಿತ್ತರು. ಸಂಘದ ಕೃವ ನಬಂದನೆ ಆವರಿ ಚಾರಿ ತರ್ಗೀತನೊಂದಿ ಗೆ ಓಡಿ ತಿಳಿದು ಸಾಡಿ ಸುವರೆ ಸರ್ಜರಿಸಲ್ಪಾತು.

ಸುರತ್ಕಲ್- ಇಲ್ಲಿಯ ವಿದ್ಯಾದಾಯಿನಿ ಸಂಸ್ಥೆಯ ಸ್ಕೂಲಿನ ವರ್ಧಂತ್ಸವ ತಾ 31-3 45ರಲ್ಲಿ ನಿಯೋಜಿತ ಅಧ್ಯಕ್ಷರಾದ ಶ್ರೀಮಾನ್ ಅರೂರು ಲಕ್ಷ್ಮೀನ ರಾಯಸರಾಯರು ಆಗಮಿಸಿದ ಕಾರದ ಶ್ರೀಮಾನ್ ಕೆ. ಆರ್. ಕಾರಂತ್, ಬಿ ಎ ಎಲ್ ಎಲ್. ಬಿ. ಎಂ ಎಲ್. ಎ. ಇವರ ಅಧ್ಯಕ್ಷತೆಯ ಪ್ರ ವಿದ್ಯಾಧನೆಯಂ ನಿವೇದನೆಯು, ವೀಲೆಯ ಗೃಹಿಣಿಯವನ್ನು ಶ್ರೀ। ಬಿ ಲಕ್ಷ್ಮೀನಾ ರಾಯಣ ರಾಯ ರು ಮಾಡಿದ ಮೇಲೆ ತಿಲೆಯ ಮು ಪ್ಯೋಪಾಧ್ಯಾಯರು ವರ್ಷಿಕ ವರದಿಯನ್ನು ಓ ದಿದರು ಬಳಿಕ, ರಂಜಿಯ ಇ ವಿದ್ಯಾಲೆಯಮತ್ತು ಪ್ಯುಲ್ಟಿಡಿ ಶಾಲೆಯ ವಿದ್ಯಾರ್ಥಿಗಳಿಗೆ ಬಹುಮಾನ ವೆನ್ನು ಪಂಚಲಾಯ ತು. ಸಭಿಕರ ಧ ಪಡವಾದ ನಂತರ ಅಧ್ಯಕ್ಷರ ತಿಲೆಯ ಬೆಳವಣಿಗೆಯ, ಶುಂ ತು ತನ್ನ ಸ್ವಂತ ಅನುಭವವನ್ನು ಉದಾಹರಿಸಿ ನರೆದ ಸಭಿಕರನ್ನು ಕೈಸ್ತಿಗೊಳಿಸಿದರು. ಕೊನೆಗೆ ವಿ ದ್ಯಾರ್ಥಿ ವಿದ್ಯಾರ್ಥಿನಿಯರ ವಿವಿಧ ವಿನೋದಾವಳಿ ಯೂ ಶ್ರೇಷ್ಠವೇನುವಾಗಿ ಮುಗಿದ ಮೇಲೆ ಈ ಸ ಮಾರಂಭವು ಕೊನೆಗೊಂಡಿತು.

The Prithvi Insurance Co., Ltd., Madras.

ANNOUNCEMENT

Glad to announce that a branch of our company will be opened on 26-4-'45 at Hampankatta, Mangalore

ದಿ ಪೃಥ್ವಿ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,

ಮದ್ರಾಸು.

ನಮ್ಮ ಕಂಪೆನಿಯ ಹೊಸ ಶಾಖೆಯು ತಾ 26-4-1945ರಲ್ಲು ಮಂಗಳೂರು ಹಂಪನಕಟ್ಟೆಯಲ್ಲಿ ತೆರೆಯಲ್ಪಡುವುದೆಂದು ತಿಳಿಸಲು ಸಂತೋಷಪಡುತ್ತೇವೆ

ಮಂಗಳೂರು ಶಾಖೆಗೆ— ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳು, ಕೊಡಗು, ಶಿವಮೊಗ್ಗಾ ಜಿಲ್ಲೆ ಇವು ಸೇರಿವೆ.

ವಿಮಾ ಇಳಿಸಿ ಏಜನ್ಸಿ ಬೇಕಾದರೂ ಕೂಡಲೇ ಬರಕೊಳ್ಳಿರಿ.

NANDIAPPA SHETTY HALNAD,
Branch Manager,
The Prithvi Insurance Company, Ltd.,
Hampankatta. MANGALORE.

ಯುವತೀ ಹೃದಯ

(೨ನೇ ಪುಟದಿಂದ ಮುಂದುವರಿದುದು.)

ನನ್ನ ಮುಂದೆ ನನ್ನ ದೇವತೆ ಜಯಂತಿಯ ದ್ವಾರೆ. ಅವಳ ಸಾನ್ನಿಧ್ಯದಲ್ಲಿ ಈ ವಿಷಾದಕ್ಕೆ ಎಡಯೇ ಇಲ್ಲವಲ್ಲ....."

"ಹುಂ, ಹಾಗೆ ಹೇಳು. ಲೇಖಕಸಿಗೆ ಮದಿರೆ ಆಥವಾ ಮದಿರಾಕ್ಷಿ ಈ ವಿಷಾದ ಅನಾಧ್ಯವೇ ಸರಿ. ನಿನಗೆ ಇದರಲ್ಲಿ ಮದಿರಾಕ್ಷಿಯನ್ನು ಬಿಟ್ಟು ಬರುವುದೇ ಕಠಿಣವಲ್ಲವೇ? ಇಂದು ರಾತ್ರಿ ಮಾತ್ರ ನೀನು ಕೇಗೆ ಮಲಗಿಕೊಳ್ಳುತ್ತೀಯೋ ತಿಳಿಯಲಾರೆ!"

ಮಿತ್ರನ ಈ ಮಾತಿನ ಸೊಲೆ ಶೇಖರನಿಗೆ ಅಭಿಮಾನ ಹುಟ್ಟಿತು ಮತ್ತು ಅಂದೇ ಪ್ರಥಮವಾಗಿ ಅವನು ಮದಿರಾ ಸೇವನೆಯನ್ನು ಮಾಡಿಬಿಟ್ಟ. ತಾನು ಮಾಡಿದುದು ಕೆಟ್ಟ ಕೆಲಸವೆಂದು ಅವನಿಗೆ ತಿಳಿಯಲಿಲ್ಲ. ಜಯಂತಿ ಏನು ಹೇಳಿಯಾಳು? ಆದರೆ ಅವಳು ಬರುವತನಕ ನಾನು ಮದ್ಯವನ್ನು ಸೇವಿಸಿದರೆ ಅವಳಿಗೆ ಹೇಗೆ ತಾನೇ ಗೊತ್ತಾಗುವುದು?

ಜಯಂತಿಯು ಹೋದಮೇಲೆ ಮದ್ಯವು ಹೇಗೆ ಶೇಖರನ ಆಯುಷ್ಯದಲ್ಲಿ ಪ್ರವೇಶಿಸಿತೋ ಹಾಗೆಯೇ ಮತ್ತೊಂದು ವ್ಯಕ್ತಿಯೂ ಪ್ರವೇಶಿಸಿತು. ಅದೇ ವ್ಯಕ್ತಿ ಕಸ್ತೂರಿ. ಅವನ ಎದುರುಮನೆಯ ರಂಗರಾಯರ ಒಬ್ಬ ಸುಶಿಕ್ಷಿತ ಹುಡುಗಿಯಾಗಿದ್ದಳು ಈ ಕಾಲದ ಯುವತಿಯರಿಗೆ ನಟರು, ಲೇಖಕರು, ಕವಿಗಳು, ಎಂದರೆ ಒಂಥ ಆಸ್ಥೆ. ಶೇಖರನ ಕಾದಂಬರಿಗಳ ಮೇಲೆ ಕಸ್ತೂರಿಗೆ ತುಂಬಾ ಪ್ರೀತಿ. ಜಯಂತಿಯು ಒಳ್ಳೇ ಭಾಗ್ಯಶಾಲಿನಿಯೆಂದು ಆಕೆಯು ನಾದ. ಜಯಂತಿಯ ಸ್ನಾನವು ತನಗೆ ಲಭಿಸಿದರೆ ಒಳಿತಾಗುತ್ತಿತ್ತೆಂದು ಅವಳು ಆಗಾಗ ಭಾವಿಸುತ್ತಿದ್ದಳು. ಆದರೆ ಜಯಂತಿಯೇ ಸರ್ವಸ್ವವಾಗಿರುವ ಶೇಖರನಿಗೆಲ್ಲಿ ಆ ಮನಸ್ಸು? ಈಗ ಜಯಂತಿಯ ಗೈರುಹಾಜರಿಯಿಂದ ಕಸ್ತೂರಿಯು ತುಂಬಾ ಲಾಭ ಮಾಡಿಕೊಂಡಳು. ಮೊದಲು ಕಸ್ತೂರಿಯು ಶೇಖರನ ಕೇಗೆ ಬರುವುದೆಂದರೆ ಅವನಿಗೆ ಅಷ್ಟಕ್ಕಷ್ಟು. ಇತ್ತೀಚೆಗೆ ಬ್ಬರೂ ಮಿತ್ರರಾಗಿದ್ದರು.

ಕಸ್ತೂರಿಯ ಸ್ನೇಹವು ಶೇಖರನಿಗೆ ತನ್ನ ಜೀವನದಲ್ಲಿ ದೊಡ್ಡ ಲಾಭವೇ ಆಯಿತು. ಕಸ್ತೂರಿಯ ಸಹವಾಸದಿಂದ ಅವನು ಹೊಟೇಲಿಗೆ ಹೋಗುವುದನ್ನು ನಿಲ್ಲಿಸಿದ. ಕಸ್ತೂರಿಗೆ ಅವಳ ತಂದೆಯಿಂದಲೂ ಅಡ್ಡಿಆತಂಕಗಳಿಂಲಿಲ್ಲ. ಅಂತೂ ಅವರಿಬ್ಬರೂ ಪ್ರೇಮಪೂರ್ಣ ಹೃದಯರಾಗಿದ್ದರು.

× × ×

ಯೋಚನೆಯಲ್ಲೇ ಆರಾಮ ಕುರ್ಚಿಯಲ್ಲಿದ್ದ ಕುಳಿತ ಶೇಖರನಿಗೆ, ತನ್ನ ತಲೆಯ ಮೇಲೆ ಮೃದುಸ್ಪರ್ಶವಾದಂತಾಯಿತು. ಆ ವನು ಕಣ್ಣನ್ನು ತೆರೆದು ನೋಡಿದನು. ಹಿಂದೆ ಕಸ್ತೂರಿಯು ನಿಂತು ನಗುತ್ತಿದ್ದಳು. ಅವಳು ಎಂದೂ ಕೈಗಳಿಂದ ಅವನ ತಲೆಯನ್ನು ಸವರುತ್ತಾ ಮುದ್ದಿಸಿದಳು. ಆ ಮುಹೂರ್ತದಲ್ಲಿ ಶೇಖರನಿಗೆ ಸ್ವರ್ಗಸುಖವೇ ದೊರೆಯಿತು. ಆದರೆ ಕ್ಷಣಾರ್ಧದಲ್ಲಿ ಅವಳಿಂದ ದೂರವಾದ. ಮತ್ತು ಅವಳ ಕೈಗಳನ್ನು ದೂಡಿದ.

ಅವನ ಈ ವರ್ತನೆಯಿಂದ ಕಸ್ತೂರಿಗೆ ಆಶ್ಚರ್ಯವೆನಿಸಿತು. "ನೀನ್ಯಾಕೆ ಹೀಗೆ ಮಾಡಿದಿರಿ?" ಎಂದು ಪ್ರಶ್ನಿಸುವಂತೆ ಅವಳ ದೃಷ್ಟಿ ಸೂಚಿಸುತ್ತಿತ್ತು.

ಅವನು ಕೇಳಿದ ಹೊತ್ತು "ಇಸ್ಸು ಎಲ್ಲಿಗೆ ಹೋಗಿದ್ದೆ ಕಸ್ತೂರಿ?" ಕುರ್ಚಿಯ ಮೇಲೆ ಕೈಗಳನ್ನು ಇಡುತ್ತಾ ಅವಳು ಹೇಳಿದಳು: "ಕೇಳಿಗೆ ಹೋಗಿದ್ದೆ ನಿನಗೆ ನನ್ನ ವರ್ತನೆ ಸರಿಯಾಗುವುದಿಲ್ಲವೇ ಶೇಖರ?" ಎನ್ನುತ್ತ ಅವಳು ಮೆಲ್ಲಮೆಲ್ಲನೆ ಮುಂದಿರಿಯತೊಡಗಿದಳು ಇದನ್ನು ತಿಳಿದು ಶೇಖರನೆಂದ- "ಬೇಡ ಕಸ್ತೂರಿ, ನೀನು ಅಲ್ಲಿಯೇ ಕುರ್ಚಿಯ ಮೇಲೆ ಕುಳಿತುಕೋ. ನಿನ್ನೊಡನೆ ಮಾತನಾಡುವುದಿದ- ಕೇಳು. ಈ ನೋಹ ನಿಜವಾದುದಲ್ಲ-ಇದು ಕಾಮದ ಕಣ್ಣು! ಅಲ್ಪದಿನದ ಬಾಳು. ನನ್ನ ಹೆಂಡತಿಯು ಮಲಿಬಂದ ಮೇಲೆ ಏನು ಮಾಡುವುದು? ಈ ಮತ್ಸರೀ ಪ್ರೇಮ ಬೇಡ.. ".

'ಶೇಖರ, ನೀನು ಎಷ್ಟು ದೊಡ್ಡ ಕಾದಂಬರಿಕಾರನಿದ್ದಿ! ನಿನ್ನ ಕಾದಂಬರಿಗಳು ನನ್ನನ್ನು ಮೋಹಿಸಿ ಮರುಳುಮಾಡಿವೆ ನನ್ನ ಪ್ರೇಮವನ್ನು ನಿನಗೆ ಯಾವ ಶಬ್ದಗಳಲ್ಲಿ ಹೇಳಿದೆ ನಿನಗೆ ಆ ವಿಚಾರಗಳು ಮನಸ್ಸಿಗೆ ರುಚಿಸಲಾರವೇ? ಶೇಖರ, ನನ್ನನ್ನು ನೀನು ಲಗ್ನವಾಗು. ನಿನಗಾಗಿ ನಾನು ಮನೆಮಾರು ಸರ್ವಸ್ವವನ್ನೂ ಬಿಡಬಲ್ಲೆನು! ನಂತರ.. ....."

ಶೇಖರನಿಗೆ ಆ ವಾಕ್ಯಗಳು ವಿಡಂಬನೆಯಾಗಿ ಕಂಡವು. ಅವಳಿಂದ ದೂರವಾಗುವುದೇ ಅವನಿಗೆ ಬೇಕಿತ್ತು. ಜವನು ಹೆಚ್ಚಿನ ವಿಚಾರಗಳಿಗೆ ಅವಕಾಶವೀಯದೆ- "ಕಸ್ತೂರಿ, ಈಗ ಕತ್ತಲಾಗಿದೆ. ದೀಪ ಹೊತ್ತಿಸು" ಎಂದನು. ಅವಳು ಮಾತ್ರ ದೀಪ ಹಚ್ಚಿಹೋಗದೆ ಶೇಖರನನ್ನು ತನ್ನ ಬಾಹುವಾಶದಿಂದ ಬಿಗಿದು ಅಪ್ಪಿಕೊಂಡಳು...

.....ಶೇಖರನು ಮನಸ್ಸುಮಾಡಿಲ್ಲಿ, ಆಕೆಯನ್ನು ಇದಿಗೆ ತಳ್ಳಿ ಎದ್ದು ನಿಂತ. ಮತ್ತು ದೀಪವನ್ನು ತಾನೇ ಹೊತ್ತಿಸಿ ಕೊರಡಿಯನ್ನು ಬೆಳಗಿಸಿದ. ಕುರ್ಚಿಯ ಬದಿಯಲ್ಲಿ ಕಸ್ತೂರಿಯು ಇನ್ನೂ ಹಾಗೆಯೇ ಕುಳಿತಿದ್ದಳು. ಅವಳ ಕಣ್ಣುಗಳಲ್ಲಿ ವಿಲಕ್ಷಣ ಉನ್ಮಾದವು ನಲಿದಾಡುತ್ತಲಿತ್ತು. ದೂರದಿಂದ ಶೇಖರನಿಗೆ ಏನೋ ಕೇಳಿದಂತೆ ಭಾಸವಾಗುತ್ತಿತ್ತು:-"ಇವಳು ಯಕ್ಷಿಣಿಯ ಕುಲನವಳು.....ಕಣ್ಣಿನ ಜಾಲದಿಂದಲೇ ಮಂಕುಗೊಳಿಸಿ ಬಲ್ಲಳು .....ಜೋಕೆ! ....."

ಅವನು ಇವೇ ಶಬ್ದದ ಆಧಾರ ತೆಗೆದು ಕೊಂಡು ಕಸ್ತೂರಿಗೆ ಹೇಳಿದನು:-"ಕಸ್ತೂರಿ, ನೀನು ಕೋಣೆಯ ಹೊರಗೆ ನಡಿ. ನಿನ್ನ ತಂದೆ ಏನು ಹೇಳಿಯಾರು? ಸಮಾಜ ಏನು ಹೇಳೀತು? ನಿನ್ನ ಮತ್ತು ನನ್ನ ಪ್ರೇಮ ಲಲಿತವಾಗಲಿಕ್ಕೆಲ್ಲ ನಿನಗೆ ನನ್ನ ಉತ್ತರವಿಷ್ಟೆ, ನೀನು ಹೊರಗೆ ನಡೆ....ಹೊರಗೆ .....ನಾನೇ ಹೊರಗೆ ಹೋಗುತ್ತೇನೆ--ಅಂದರೆ ತೀರಿತಲ್ಲ!" ಎನ್ನುತ್ತ ಸರಸರನೆ ಹೊರಗೆ ಹೋದ. "ನೋಡು ಇದರ ಪರಿಣಾಮ ಮಾತ್ರ ನೆಟ್ಟಗಾಗಲಿಕ್ಕಿಲ್ಲ..... ಶೇಖರ!" ಎಂದು ಕಸ್ತೂರಿ ಕಂಪಿತ ಕಂಠದಿಂದ ಹೇಳಿದುದು ಅವನಿಗೆ ಕೇಳಿಸಿತು.

ಶೇಖರನಿಗೆ ಆ ರಾತ್ರಿ ನಿದ್ದೆಯೇ ಬರಲಿಲ್ಲ, ಒಬ್ಬ ಮಿತ್ರನಲ್ಲಿಗೆ ಹೋಗಿ ರಾತ್ರಿಯನ್ನು ಕಳೆದ.

ಮರುದಿವಸ ಅವನು ತನ್ನ ಆಫೀಸಿಗೆ ಹೋದಾಗ ಟೇಬಲಿನ ಮೇಲೆ ಒಂದು ಸಣ್ಣ ಕಾಗದವಿರುವುದನ್ನು ಕಂಡ ಆದ ಸ್ಯಾನಿಟರಿಯನ್ ನಲ್ಲಿಯ ಡಾಕ್ಟರೊಂದು ಗಿದ್ದಿತು---

"ನಾಳೆ ಬೆಳಿಗ್ಗೆ ಹನ್ನೊಂದು ಗಂಟೆಗೆ ಜಯಂತಿಯು ಮನೆಗೆ ಬರುತ್ತಾಳೆ. ಸ್ವೇರೆ ನಿನ್ನ ಕಡೆಗೆ ಒಮ್ಮಿರಿ. ಅವಳ ಪ್ರಕೃತಿಯ ನೆಂಬಲಿ ಒಳ್ಳೇ ಬಾಗ್ಯತೆಯನ್ನು ತೆಗೆದು ಕೊಳ್ಳತಕ್ಕದ್ದು'.

ಆ ಪತ್ರವನ್ನು ಓದಿ ಶೇಖರನಿಗೆ ಬಹಳ ಆನಂದವಾಯಿತು. ಅನ್ನೇ ಆಕ್ಷಣದಿಂದ ಪೂರ್ಣಾಯಿತು. ಆಫೀಸಿನಿಂದ ಅವನು ರಜೆ ತೆಗೆದುಕೊಂಡು, ಕೂಡಲೇ ಮನೆಗೆ ಹೋದ.

ಕೊರಡಿಯೊಳಗೆ ಅವನು ಕಾಲಿಡುವಾಗ ಅಲ್ಲಿಯ ವ್ಯಕ್ತಿಯೇ ಬೇರೆ! ಅಲ್ಲಿ ಕಸ್ತೂರಿಯೇ ಕುಳಿತಿದ್ದಳು.

"ಇದೇನು? ಜಯಂತಿಯಲ್ಲಿಗೆ" ಅವನು ಪ್ರಶ್ನಿಸಿದ.

ಅವನ ಪ್ರಶ್ನೆಗೆ ಉತ್ತರವನ್ನು ಕೊಡುವ ಬದಲು ಅವಳು ಒಂದು ಕಾಗದವನ್ನು ಮುಂದಿಮಾಡಿದಳು ಮತ್ತು ಎದ್ದು ನಿಂತು "ಶೇಖರ! ಮಾಸಿ ನೋಡು. ನನ್ನ ತಪ್ಪನ್ನು ಮನ್ನಿಸು. ಜಯಂತಿಯು ಸ್ವೇಶನಿಗೆ ಹೋಗಿದ್ದಾಳೆ. ನಾನೂ ಹೋಗುತ್ತೇನೆ... .."

"ಎಲ್ಲಿಗೆ?" ಪತ್ರವನ್ನು ಒಡೆಯುತ್ತ ಶೇಖರ ಕೇಳಿದ.

"ಕಾಶರಗೋಡಿಗೆ.

"ಯಾಕೆ?"

"ನನ್ನ ತಂದೆಯವರಿಗೆ ಆಲ್ಲಿಗೆ ವರ್ಗವಾಗಿರುತ್ತದೆ. ನಾನು ಮಾಡಿದ ಮೋಸ್ಕಿ ತನವನ್ನು ನೀನು ಕ್ಷಮಿಸಬೇಕು" ಕಸ್ತೂರಿಯು ಗದ್ಗದ ಕಂಠದಿಂದ ಹೇಳುತ್ತಾ ಅವ ನಿಂದೆಯೆ ಹೊರಬಿದ್ದಳು.

ಆಗ ಆ ಪತ್ರವನ್ನೋದುತ್ತಿದ್ದ ಶೇಖರನಿಗೆ ಅವಳ ಮಾತಿನ ಕಡೆಗೆ ಲಕ್ಷ್ಯವಿರಲಿಲ್ಲ. ಅವನ ಮುಖವಿಡೀ ಕಪ್ಪಿಟ್ಟುಕೊಂಡಿದ್ದಿತು. ಜಯಂತಿ ಬರೆದಿದ್ದಿಳು:---

". .....ರೀಗೆ

ಅನಂತ ಸ್ಮರಣಾಮಗಳು.

ನಾನು ಇಂದು ಬೆಳಿಗ್ಗೆ ಮನೆಗೆ ಬಂಜಿದ್ದೆ. ನನ್ನ ಹಿಂದೆ ನಡೆದ ಎಲ್ಲ ಸಂಗತಿಗಳನ್ನೂ ನನಗೆ ಕಸ್ತೂರಿಯು ತಿಳಿಸಿದಳು. ಆ ಸಕ್ಕಾಗಿ ನಾನು ತಮ್ಮನ್ನು ಪ್ರಶ್ನಿಸುವುದಿಲ್ಲ. ನಾನು ಇನ್ನು ಬೇಲೆ ತಮ್ಮ ಜೀವನವನ್ನು ಸುಖಮಯ ವನ್ನಾಗಿ ಮಾಡಲಾರೆ. ನಿಸ್ಸಂದ ಆ ಸುಖ ತಮಗೆ ಲಭಿಸುವದ ಸಾಧ್ಯ. ಅದು ಕಸ್ತೂರಿಯಿಂದ ದೊರಕೀತು. ಆದ್ದರಿಂದ ನಾನು ತಂದೆ ಮನೆಗೆ ಹೋಗುತ್ತೇನೆ. ನನ್ನನ್ನು ಮರತುಬಿಡಿ.

---ಜಯಂತಿ.

ಕಸ್ತೂರಿಯು ಈಗ ಎದುರು ಇರುತ್ತಿದ್ದರೆ ಅವಳನ್ನು ಶೇಖರನು ಏನು ಮಾಡುತ್ತಿದ್ದನೋ! ಅವನು ಕೂಡಲೇ ರೈಲ್ವೇ ಆಫೀಸಿಗೆ ಓಡಿದ.

ಪ್ಲಾಟ್‌ಫಾರ್ಮಿನಲ್ಲಿ ಜನರ ನೂಕು ನುಗ್ಗಲು. ಶೇಖರನು ಸಂದಣಿಯೊಳಗೆ ಹೊಕ್ಕು ಹುಡುಕತೊಡಗಿದ. ಒಂದೆಡೆ ಜನರ ಗುಂಪಿನಲ್ಲಿ ಬದುತ್ತಿದ್ದ ಜಯಂತಿಯನ್ನು ನೋಡಿ, ಅವಳ ಕೈ ಹಿಡಿದು:-

